ಬುಧವಾರ, ಸೆಪ್ಟೆಂಬರ್ 17, 2025 | ₹ 7.00

prajavani.net | prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಆಗ್ರಹ
‘ದಿ ಬೆಂಗಾಲ್ ಫೈಲ್ಸ್’ ಚಲನಚಿತ್ರ ಪ್ರದರ್ಶನಕ್ಕೆ ಪಶ್ಚಿಮಬಂಗಾಳದ ಚಿತ್ರಮಂದಿರಗಳಲ್ಲಿ ಅವಕಾಶ ನೀಡುವಂತೆ ಆಗ್ರಹಿಸಿ ಮಂಗಳವಾರ ಪ್ರತಿಭಟನೆ ನಡೆಯಿತು

ಗೊಂಬೆಗಳ ಸೆಲ್ಫಿ
ನಾರಾಯಣಗುರು ಜಯಂತ್ಯುತ್ಸವ ಅಂಗವಾಗಿ ಕಲಬುರಗಿಯಲ್ಲಿ ಮಂಗಳವಾರ ನಡೆದ ಶೋಭಾಯಾತ್ರೆಯಲ್ಲಿ ಗೊಂಬೆ ಕುಣಿತದ ಕಲಾವಿದರು ಸೆಲ್ಫಿ ತೆಗೆದುಕೊಂಡರು

‘ವೀರಶೈವ–ಲಿಂಗಾಯತರ ಒಡೆಯುವ ಕುತಂತ್ರ’

ಬಿಜೆಪಿ ನಾಯಕರ ಸಭೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಆಕ್ರೋಶ

• ಕಾಂತರಾಜ ವರದಿ ಏಕೆ ಜಾರಿ ಮಾಡಲಿಲ್ಲ: ಮುಖಂಡರ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವ ಮೂಲಕ ವೀರಶೈವ–ಲಿಂಗಾಯತ ಸಮುದಾಯವನ್ನು ಒಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ ಎಂದು ಬಿಜೆಪಿಯ ಲಿಂಗಾಯತ ನಾಯಕರು ಆರೋಪಿಸಿದ್ದಾರೆ.

ನಗರದಲ್ಲಿ ಮಂಗಳವಾರ ನಡೆದ ವೀರಶೈವ–ಲಿಂಗಾಯತ ಸಮುದಾಯದ ಬಿಜೆಪಿ ನಾಯಕರ ಸಭೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ವಿರೋಧ ವ್ಯಕ್ತಪಡಿಸಿದ ನಾಯಕರು, ‘ಸಿದ್ದರಾಮಯ್ಯ ಅವರು ಈ ಹಿಂದೆ ಕಾಂತರಾಜ ವರದಿ ಏಕೆ ಮಾಡಿಸಿದ್ದರು. ಅದನ್ನು ಯಾಕೆ ಜಾರಿ ಮಾಡುತ್ತಿಲ್ಲ ಎನ್ನುವುದನ್ನು ಜನರಿಗೆ ತಿಳಿಸಬೇಕು. ಕಾಂತರಾಜ ವರದಿ ಜಾರಿ ಮಾಡದಿರಲು ಕಾರಣ ಏನು’ ಎಂದು ನಾಯಕರು ಪ್ರಶ್ನಿಸಿದರು.

ಸಂವಿಧಾನ ಮತ್ತು ಕಾನೂನಿನಲ್ಲಿ ಅವಕಾಶ ಇಲ್ಲದೇ ಇದ್ದರೂ ಸರ್ಕಾರ ಜಾತಿವಾರು ಸಮೀಕ್ಷೆ ನಡೆಸುತ್ತಿದೆ. ಈ ನಿರ್ಧಾರದ ಹಿಂದೆ ಕುತಂತ್ರ ಮತ್ತು ಷಡ್ಯಂತ್ರವೂ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ‘ಸಮಾಜದ ಯುವ ಪೀಳಿಗೆಗೆ ಮಾರ್ಗದರ್ಶನ ನೀಡಬೇಕಿದೆ. ಈ ವಿಚಾರದಲ್ಲಿ ಸರಿಯಾದ ಮಾರ್ಗದರ್ಶನ ಮಾಡದಿದ್ದರೆ ಅವರು ನಮ್ಮನ್ನು ಕ್ಷಮಿಸುವುದಿಲ್ಲ. ಸಮೀಕ್ಷೆಯ ಕಾಲಂಗಳಲ್ಲಿ ಏನೆಂದು ನಮೂದಿಸಬೇಕು ಎಂಬುದನ್ನು ಮಠಾಧೀಶರು ಮತ್ತು ಸಮಾಜದ ಮುಖಂಡರು ನಿರ್ಧರಿಸಲಿದ್ದು, ಅವರ ಸೂಚನೆ ಪಾಲಿಸಲು ಸಭೆ ನಿರ್ಧರಿಸಿದೆ’ ಎಂದು ಹೇಳಿದರು.

‘ವೀರಶೈವ ಸಮಾಜವನ್ನು ಒಡೆಯುವ ಕುತಂತ್ರ, ಷಡ್ಯಂತ್ರ ಗಣತಿಯ ಹಿಂದೆ ಇದೆ. ಕಾಲಂಗಳನ್ನು ಗಮನಿಸಿದರೆ ಹಿಂದೂ, ಇಸ್ಲಾಂ, ಕ್ರಿಶ್ಚಿಯನ್, ಜೈನ, ಸಿಖ್, ಬೌದ್ಧ, ಪಾರ್ಸಿ, ನಾಸ್ತಿಕರು, ಇತರೆ ಎಂಬ ವರ್ಗಗಳನ್ನು ಮಾಡಿದ್ದಾರೆ. ‘ಇತರೆ’ ಎಂಬುದು ಕೂಡ ಕಾನೂನು ಬಾಹಿರ. ಸಿದ್ದರಾಮಯ್ಯ ಅವರು ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ವೀರಶೈವ ಲಿಂಗಾಯತ ಪ್ರತ್ಯೇಕ ಧರ್ಮ ಎಂದು ಸಮಾಜ ಒಡೆಯುವ ದುಸ್ಸಾಹಸಕ್ಕೆ ಕೈ ಹಾಕಿದ್ದರು. ಆಗಲೂ ಕೈ ಸುಟ್ಟು ಕೊಂಡಿದ್ದರು’ ಎಂದು ಟೀಕಿಸಿದರು.

‘ಸಮಾಜದಲ್ಲಿನ ಗೊಂದಲ ಸರಿಪಡಿಸಲು, ಸಮಾಜವನ್ನು ಒಗ್ಗೂಡಿಸಲು, ಸಮಾಜವನ್ನು ಸಮರ್ಪಕ ದಿಕ್ಕಿನಲ್ಲಿ ಒಯ್ಯುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಲು ತೀರ್ಮಾನ ಮಾಡಲಾಗಿದೆ. ಕೆಲವು ಹಿರಿಯರು ವೀರಶೈವ ಮಹಾಸಭಾದ ಪ್ರಮುಖರ ಜೊತೆ ಚರ್ಚೆ ಮಾಡಬೇಕು. ಪಂಚ ಪೀಠಾಧೀಶ್ವರರು, ವಿರಕ್ತ ಮಠದ ಸ್ವಾಮೀಜಿಗಳ ಜೊತೆ ಚರ್ಚಿಸಿ, ಒಳಪಂಗಡ ಮರೆತು ಒಟ್ಟಾಗಿ, ಒಂದಾಗಿ ಸಮಾಜದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಮುಂದೆ ಸಾಗಲು ನಿರ್ಧರಿಸಲಾಗಿದೆ’ ಎಂದು ಹೇಳಿದರು.

ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಕೇಂದ್ರ ಸಚಿವ ವಿ. ಸೋಮಣ್ಣ, ಪ್ರಮುಖರಾದ ಪ್ರಭಾಕರ ಕೋರೆ, ವಿಜಯ ಸಂಕೇಶ್ವರ ಭಾಗವಹಿಸಿದ್ದರು. ಯಡಿಯೂರಪ್ಪ ಸೂಚನೆ ಮೇರೆಗೆ ಈ ಸಭೆ ಕರೆಯಲಾಗಿತ್ತು.

‘ಸಮೀಕ್ಷೆಯು ಗಣತಿ ಕಾಯ್ದೆಗೆ ವಿರುದ್ಧ’

‘ದೇಶದಲ್ಲಿ ಗಣತಿ ಕಾಯ್ದೆ ಇದೆ. ಅದರ ಪ್ರಕಾರ ಕೇಂದ್ರ ಸರ್ಕಾರ ಗಣತಿ ಮಾಡುತ್ತದೆ. ರಾಜ್ಯ ಸರ್ಕಾರ ಸಮೀಕ್ಷೆ ಮಾಡಬಹುದು. ಆದರೆ, ಇವರು ಮನೆ ಮನೆಗೆ ಹೋಗುವುದು ಗಣತಿ ಕಾಯ್ದೆಗೆ ವಿರುದ್ಧ ಇದೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ದೂರಿದರು.

ವೀರಶೈವ–ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಎಲ್ಲರೂ ಒಗ್ಗಟ್ಟಾಗಿರಬೇಕು. ಈಗ ಕಾಗಿನೆಲೆ ಪೀಠ ಇದೆ. ಮುಂದಿನ ದಿನಗಳಲ್ಲಿ ಕುರುಬ ಕ್ರಿಶ್ಚಿಯನ್ ಪೀಠ ಆರಂಭವಾಗುತ್ತದೆ. ಸಿದ್ದರಾಮಯ್ಯ ಯಾರನ್ನಾದರೂ ಪಾದ್ರಿಯನ್ನು ತಂದು ಕೂಡಿಸುತ್ತಾರೆ ಎಂದು ವ್ಯಂಗ್ಯವಾಡಿದರು.

‘ಒಂದೂವರೆ ಕೋಟಿ ಮನೆಗಳನ್ನು 15 ದಿನಗಳಲ್ಲಿ ಗಣತಿ ಮಾಡುತ್ತೇವೆ ಎನ್ನುತ್ತಾರೆ. ಇಷ್ಟು ಕಡಿಮೆ ಸಮಯದಲ್ಲಿ ಎಲ್ಲರನ್ನೂ ತಲುಪಲು ಸಾಧ್ಯವಿಲ್ಲ. ಮತ್ತೆ ಕಾಂತರಾಜ ವರದಿಯನ್ನು ಕಟ್ ಆ್ಯಂಡ್ ಪೇಸ್ಟ್ ಮಾಡುತ್ತಾರೆ. ರಾಜಕಿಯ ಉದ್ದೇಶಕ್ಕೆ ಸಮೀಕ್ಷೆ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರು ತಿದ್ದಿಕೊಳ್ಳದಿದ್ದರೆ ನಿಮ್ಮ ರಾಜಕೀಯ ಅಧಃಪತನಕ್ಕೆ ಕಾರಣವಾಗಲಿದೆ’ ಎಂದು ಎಚ್ಚರಿಸಿದರು.

ವೀರಶೈವ–ಲಿಂಗಾಯತ ಸಮುದಾಯ ಒಡೆಯಲು ಕಾಂಗ್ರೆಸ್ ಸರ್ಕಾರ ಮತ್ತೊಂದು ಸಮೀಕ್ಷೆಯ ಹೆಸರಿನಲ್ಲಿ ಹುನ್ನಾರ ನಡೆಸುತ್ತಿದೆ. ಸಮಾಜ ಒಡೆಯುವ ರಾಜಕೀಯ ಕುತಂತ್ರಗಳನ್ನು ಮೆಟ್ಟಿ ನಿಲ್ಲಲಾಗುವುದು

ಬಿ.ಎಸ್.ಯಡಿಯೂರಪ್ಪ,
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಬೆಂಗಳೂರಿನಲ್ಲಿ ಮಂಗಳವಾರ ‘ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ’ ನೇತೃತ್ವದಲ್ಲಿ ನಡೆದ ಸಭೆ ಬಳಿಕ ಶಾಸಕ ಸುನಿಲ್ ಕುಮಾರ್, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪಿ.ಸಿ. ಮೋಹನ್ ಅವರು ರಾಜ್ಯಪಾಲರಿಗೆ ಮನವಿ ಸಲ್ಲಿಸಿ ರಾಜಭವನದಿಂದ ಹೊರಬಂದ ದೃಶ್ಯ —ಪ್ರಜಾವಾಣಿ ಚಿತ್ರ

‘ಕ್ರಿಶ್ಚಿಯನ್ ಜಾತಿಗಳ ಅಗತ್ಯ ಇರಲಿಲ್ಲ’

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಕ್ರಿಶ್ಚಿಯನ್ನರ ಹಲವಾರು ಜಾತಿಗಳನ್ನು ಸೇರಿಸಿರುವುದು ಸರಿಯಲ್ಲ. ಇದು ಗೊಂದಲಕ್ಕೆ ಎಡೆ ಮಾಡಿಕೊಡಲಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ವತಿಯಿಂದ ಮಂಗಳವಾರ ನಡೆದ ದುಂಡು ಮೇಜಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಪತ್ರವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ನೀಡಿದ ಬಳಿಕ ಅವರು ಮಾತನಾಡಿದರು.

ಕ್ರಿಶ್ಚಿಯನ್ನರಲ್ಲಿ ಇಲ್ಲದ ಜಾತಿಗಳನ್ನು ಸಮೀಕ್ಷೆ ವೇಳೆ ಹೊರಗಿಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳದೆ ಇದ್ದಲ್ಲಿ ಕಾನೂನು ಮೊರೆ ಹೋಗಲಾಗುವುದು. ಜೊತೆಗೆ ಆಂದೋಲನ ನಡೆಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮನವಿ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ರಾಜ್ಯಪಾಲರು ತಿಳಿಸಿದ್ದಾರೆ ಎಂದು ಹೇಳಿದರು.

ಸಭೆಯ ನಿರ್ಣಯಗಳು

- ಮತಾಂತರಗೊಂಡವರಿಗೆ ಒಂದು ಉಪ ಜಾತಿ ಕೋಡ್ ನೀಡಿರುವುದನ್ನು ತಕ್ಷಣ ವಾಪಸ್ ಪಡೆಯಬೇಕು
- 47 ಹಿಂದೂ ಉಪ ಜಾತಿ ವಾಚಕ ಶಬ್ದ ಇರುವ ಕ್ರಿಶ್ಚಿಯನ್ ಪದವನ್ನು ಪಟ್ಟಿಯಿಂದ ಕೈ ಬಿಡಬೇಕು (ಲಿಂಗಾಯತ ಕ್ರಿಶ್ಚಿಯನ್, ವಿಶ್ವಕರ್ಮ ಕ್ರಿಶ್ಚಿಯನ್, ದೇವಾಂಗ ಕ್ರಿಶ್ಚಿಯನ್, ಈಡಿಗ ಕ್ರಿಶ್ಚಿಯನ್, ವಾಲ್ಮೀಕಿ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್ ಮತ್ತು ಇತರೆ)
- ತರಾತುರಿಯಲ್ಲಿ ಸಮೀಕ್ಷೆ ನಡೆಸುವುದು ಬೇಡ. ಈ ಬಗ್ಗೆ ಆಯೋಗ ಮರುಚಿಂತನೆ ನಡೆಸಿ ಬೇಸಿಗೆಯಲ್ಲಿ ಸಮೀಕ್ಷೆ ಮಾಡಲಿ

ಸುದ್ದಿ 2 ನಿಮಿಷ

‘ಈಡಿಗರ ಶ್ರೇಯೋಭಿವೃದ್ಧಿಗಾಗಿ ಜನವರಿ 6ರಿಂದ ಪಾದಯಾತ್ರೆ’

ಕಲಬುರಗಿ: ‘ಈಡಿಗ ಸಮುದಾಯದ ಪ್ರಗತಿಗಾಗಿ 16 ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ 2026ರ ಜ. 6ರಿಂದ ಫೆ. 14ರವರೆಗೆ 3ನೇ ಹಂತದ ಪಾದಯಾತ್ರೆ ನಡೆಸಲಾಗುವುದು’ ಎಂದು ಕರದಾಳ ನಾರಾಯಣಗುರು ಶಕ್ತಿಪೀಠದ ಪೀಠಾಧಿಪತಿ ಪ್ರಣವಾನಂದ ಸ್ವಾಮೀಜಿ ಹೇಳಿದರು.

ನಗರದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜಯಂತ್ಯುತ್ಸವ ಆಚರಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ‘ಈಡಿಗ ಸಮಾಜ ಬಹಳಷ್ಟು ಪೆಟ್ಟು ತಿಂದಿದೆ. ಸಮುದಾಯದವರ ಬವಣೆ ನೀಗಬೇಕಾದರೆ ಹೋರಾಟ ಅನಿವಾರ್ಯ’ ಎಂದರು.

‘ಸಮಾಜದ ಶ್ರೇಯೋಭಿವೃದ್ಧಿಗಾಗಿ ಈ ಹಿಂದೆ ಚಿಂಚೋಳಿಯಿಂದ ಕಲಬುರಗಿಗೆ ಹಾಗೂ ಮಂಗಳೂರಿನಿಂದ ಬೆಂಗಳೂರಿಗೆ ಎರಡು ಹಂತಗಳಲ್ಲಿ ಪಾದಯಾತ್ರೆ ಮಾಡಲಾಗಿತ್ತು. ಇದೀಗ ಕಲಬುರಗಿ ಜಿಲ್ಲೆಯ ಚಿತ್ತಾಪುರದ ಕರದಾಳ ಶಕ್ತಿಪೀಠದಿಂದ ಆರಂಭಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದವರೆಗೆ ಒಟ್ಟು 758 ಕಿ.ಮೀ ಪಾದಯಾತ್ರೆ ನಡೆಸಲು ಉದ್ದೇಶಿಸಲಾಗಿದೆ’ ಎಂದು ತಿಳಿಸಿದರು.

ಸಮೀಕ್ಷೆಯಲ್ಲಿ ಭಾಗವಹಿಸದಿರಲು ಆಶಾ ಕಾರ್ಯಕರ್ತೆಯರ ನಿರ್ಧಾರ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ನಡೆಸುವ ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆಯಲ್ಲಿ ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುವುದಿಲ್ಲ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ತಿಳಿಸಿದೆ.

‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಕೆಲಸಕ್ಕೆ ಗ್ರಾಮೀಣ ಆಶಾ ಕಾರ್ಯಕರ್ತೆಯರಿಗೆ ₹5 ಸಾವಿರ ಹಾಗೂ ನಗರ ಭಾಗದ ಆಶಾ ಕಾರ್ಯಕರ್ತೆಯರಿಗೆ ₹ 10 ಸಾವಿರ ಗೌರವ ಧನ ನಿಗದಿಪಡಿಸಿ ಆದೇಶಿಸಬೇಕು. ಇಲ್ಲದಿದ್ದರೆ ಸಮೀಕ್ಷೆಯ ಕೆಲಸದಿಂದ ಕೈಬಿಡಬೇಕು’ ಎಂದು ಸಂಘದ ಅಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ ಹಾಗೂ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಒತ್ತಾಯಿಸಿದ್ದಾರೆ.

‘ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಯ ಸಮೀಕ್ಷೆ ನಡೆಸಿದಾಗ ₹1 ಸಾವಿರ ಗೌರವ ಧನ ನಿಗದಿಪಡಿಸಿತ್ತು. ಆದರೆ ಇದುವರೆಗೂ ನೀಡಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯಲ್ಲಿ ಕಾರ್ಯನಿರ್ವಹಿಸಿದ ಆಶಾ ಕಾರ್ಯಕರ್ತೆಯರಿಗೆ ನಿಗದಿಯಾಗಿದ್ದ ₹10 ಸಾವಿರ ಗೌರವ ಧನವನ್ನೂ ಪಾವತಿಸಿಲ್ಲ. ಬಾಕಿ ಉಳಿಸಿಕೊಂಡಿರುವ ಗೌರವ ಧನವನ್ನು ಕೂಡಲೇ ಬಿಡುಗಡೆಗೊಳಿಸಬೇಕು’ ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಹರಿಹರ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಟೀಕೆ • ‘ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ಬರೆಸಿ’

‘ಧರ್ಮ: ವೀರಶೈವ ಮಹಾಸಭಾದಿಂದ ಗೊಂದಲ ಸೃಷ್ಟಿ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಜಾತಿ ಮತ್ತು ಧರ್ಮದ ಕಾಲಂನಲ್ಲಿ ‘ವೀರಶೈವ ಲಿಂಗಾಯತ’ ಎಂದು ಬರೆಯಿಸಿ ಎಂದು ಹೇಳುವ ಮೂಲಕ ವೀರಶೈವ ಮಹಾಸಭಾ ಗೊಂದಲ ಸೃಷ್ಟಿಸುತ್ತಿದೆ’ ಎಂದು ಹರಿಹರದ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು.

‘ಲಿಂಗಾಯತರು ಹಿಂದೂ ಧರ್ಮದ ಭಾಗ ಎಂದು ಪಂಚ ಪೀಠದವರು ಹೇಳುತ್ತಾರೆ. ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತ ಧರ್ಮ ಎಂಬುದಾಗಿ ಬರೆಸಲು ಹೇಳಿ ಗೊಂದಲ ಸೃಷ್ಟಿಸುತ್ತಿದ್ದಾರೆ’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಸಾಮಾಜಿಕ– ಶೈಕ್ಷಣಿಕ ಸಮೀಕ್ಷೆ ಸಂದರ್ಭದಲ್ಲಿ ಏನು ನಮೂದಿಸಬೇಕು ಎಂದು ಸೆ.17ರಂದು ನಿರ್ಧಾರ ತಗೆದುಕೊಳ್ಳುತ್ತೇವೆ. ಬೆಂಗಳೂರಿನಲ್ಲಿ ಸಭೆ ನಡೆಯಲಿದ್ದು, ಪಂಚಮಸಾಲಿ ಸಮುದಾಯದ ಮೂರೂ ಪೀಠಗಳ ಸ್ವಾಮೀಜಿಗಳು ಮತ್ತು ಪಂಚಮಸಾಲಿ ಮಠಗಳ 80ಕ್ಕೂ ಅಧಿಕ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕಳೆದ ಸಮೀಕ್ಷೆಯಲ್ಲಿ ಲಿಂಗಾಯತರ ಸಂಖ್ಯೆ ಕಡಿಮೆ ತೋರಿಸಲಾಗಿದೆ. ಈಗಲೂ ಹಲವು ಜಾತಿಗಳ ಹೆಸರು ತಪ್ಪಾಗಿ ನೀಡಿ ಹಿಂದುಳಿದ ವರ್ಗಗಳ ಆಯೋಗದಿಂದ ಮತ್ತೆ ಗೊಂದಲ ಸೃಷ್ಟಿ ಮಾಡಲಾಗುತ್ತಿದೆ. ಹಾಗಾಗಿ ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ಬರೆಸಬೇಕು’ ಎಂದರು.

‘ಬಸವ ಸಂಸ್ಕೃತಿ ಅಭಿಯಾನದಲ್ಲಿ ಸ್ವಾಮೀಜಿಗಳು ಬಸವಾದಿ ಶರಣರ ತತ್ವ ತಿಳಿಸಲಿ. ಹಿಂದೂ, ಗಣೇಶೋತ್ಸವ ಬೈಯುವುದು ಬೇಡ. ಹಿಂದೂ ಧರ್ಮದಲ್ಲಿ ನಮಗೆ ಎಲ್ಲ ಸಿಗುತ್ತಿದೆ. ಲಿಂಗಾಯತ ಧರ್ಮದ ಚಳವಳಿ ಮಾಡುವವರು ಕೇಂದ್ರ ಸರ್ಕಾರಕ್ಕೆ ಕೇಳಿಲ್ಲ’ ಎಂದರು.

‘ಲಿಂಗಾಯತರಲ್ಲಿ ಬಹುತೇಕರು ಲಿಂಗ ಪೂಜೆ ಬಿಟ್ಟಿದ್ದಾರೆ. ಅನೇಕರು ಮಾಂಸಾಹಾರ ಸೇವನೆ ಮಾಡುತ್ತಿದ್ದಾರೆ. ನಾವು ಲಿಂಗಪೂಜೆ, ಅಹಿಂಸಾ ತತ್ವ ಪಾಲಿಸುವಂತೆ ಹೇಳಬೇಕಿದೆ. ನಮಗೆ ಹಿಂದೂ ಧರ್ಮದಿಂದ ಒಳಿತಾಗಿದೆ’ ಎಂದು ಅವರು ಪ್ರತಿಪಾದಿಸಿದರು.

‘ನಾವು ತೃತೀಯ ಲಿಂಗಿಗಳಾಗಬೇಕಾ?’

‘ಪ್ರತ್ಯೇಕ ಧರ್ಮದ ಮಾನ್ಯತೆಗೆ ಮುನ್ನ ಜೈನರು, ಸಿಖ್ಖರು ಹಿಂದೂ ಜೈನ, ಹಿಂದೂ ಸಿಖ್ ಎಂದು ಬರೆಸುತ್ತಿದ್ದರು. ವೀರಶೈವ ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಮಾನ್ಯತೆ ಸಿಗುವುದಾದರೆ ಅಧಿಕೃತವಾಗಿ ಅದೇ ಧರ್ಮವನ್ನು ಬರೆಸೋಣ. ಈಗ ನಾವು ಹಿಂದೂಗಳು ಎಂಬ ಸ್ಪಷ್ಟತೆ ಇರುವುದರಿಂದ ಅದನ್ನೇ ಬರೆಸೋಣ’ ಎಂದು ವಚನಾನಂದ ಸ್ವಾಮೀಜಿ ಸಲಹೆ ನೀಡಿದರು.

ವಚನಾನಂದ ಸ್ವಾಮೀಜಿ

‘ಹಿಂದೂ ಅಥವಾ ಲಿಂಗಾಯತ ಎಂದು ಬರೆಯಿಸದಿದ್ದರೆ ಇತರೆ ಎಂದು ಬರೆಸಲು ಅವಕಾಶ ಇದೆ?’ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ರಾಜ್ಯ ಸರ್ಕಾರವೇ ಹೇಳಿದಂತೆ ಇದು ಧರ್ಮದ ಸಮೀಕ್ಷೆಯಲ್ಲ. ಇತರೆ ಎಂದು ಬರೆಸಿ ನಾವು ತೃತೀಯ ಲಿಂಗಿಗಳಾಗಬೇಕಾ?, ಇತರೆ ಎಂಬುದು ಯಾವುದರಲ್ಲಿ ಗಣನೆಗೆ ಬರಲಿದೆ? ಇತರೆ ಎಂದು ಬರೆಸಲು ಅವಕಾಶ ನೀಡಿರುವುದು ಹಿಂದೂಗಳನ್ನು ಒಡೆಯುವ ಷಡ್ಯಂತ್ರ’ ಎಂದು ಆರೋಪಿಸಿದರು.

‘ಯಾವುದೇ ವಿಷಯದಲ್ಲಿ ಸ್ಪಷ್ಟತೆ ಇರಬೇಕು. ತೊಂದರೆಗಳು ಇರಬಾರದು. ಯಾರು ಗೊಂದಲದಲ್ಲಿ ಇದ್ದಾರೋ ಅವರು ಗೊಂದಲ ಸೃಷ್ಟಿಸುತ್ತಿದ್ದಾರೆ. ಸ್ಪಷ್ಟತೆ ಉಳ್ಳವರು ಸಮಾಜಕ್ಕೆ ಸ್ಪಷ್ಟ ಸಂದೇಶ ನೀಡುತ್ತಿದ್ದಾರೆ’ ಎಂದರು.

‘ಸೇಡಿಗಾಗಿ ಸಮಾಜವನ್ನು ಬಲಿ ಕೊಡಬೇಡಿ’

ಹುಬ್ಬಳ್ಳಿ: ‘ಪಂಚ ಪೀಠಾಧೀಶರ ವಿರುದ್ಧ ಸೇಡು ತೀರಿಸಿಕೊಳ್ಳುವ ಭರದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಕಾರ್ಯದರ್ಶಿ ಎಸ್.ಎಂ. ಜಾಮದಾರ ಅವರು ಸಮಾಜವನ್ನು ಬಲಿ ಕೊಡಬಾರದು’ ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.



ದಿಂಗಾಲೇಶ್ವರ ಸ್ವಾಮೀಜಿ

‘ಸಮಾಜಕ್ಕೆ ಸಂಬಂಧಿಸಿ ಜಾಮದಾರ ಅವರು ಪಂಚಾಚಾರ್ಯರಿಗೆ ಸವಾಲು ಹಾಕಬೇಕೆ ಹೊರತು ನಮಗಲ್ಲ. ಸಮಾಜದ ಸಂಘಟನೆಗಷ್ಟೇ ಹುಬ್ಬಳ್ಳಿಯಲ್ಲಿ ವೀರಶೈವ–ಲಿಂಗಾಯತ ಏಕತಾ ಸಮಾವೇಶ ಹಮ್ಮಿಕೊಳ್ಳಲಾಗಿದೆ’ ಸುದ್ದಿಗಾರರಿಗೆ ತಿಳಿಸಿದರು.

‘ಪಂಚ ಪೀಠದವರಿಗಷ್ಟೇ ಅಲ್ಲ, ಎಲ್ಲ ಮಠಗಳಿಗೆ ಆಮಂತ್ರಿಸುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾಕ್ಕೆ ಕೋರಿದ್ದೇವೆ. ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಎಲ್ಲರೂ ಒಂದಾಗಲು ಕೆಲ ನಿಯಮ ಸಡಿಲಿಸಿಕೊಳ್ಳಬೇಕು. ಪ್ರತ್ಯೇಕ ಲಿಂಗಾಯತ ಧರ್ಮ ಕೇಳುತ್ತಿರುವವರು ಅದಕ್ಕೆ ಸಿದ್ಧರಿಲ್ಲ. ಅವರ ಷರತ್ತುಗಳು ಸಂಘಟನೆಗೆ ಪೂರಕವಾಗಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಗುರು–ವಿರಕ್ತ, ಬಸವಣ್ಣ–ರೇಣುಕ ಎಂಬ ಭಿನ್ನಾಭಿಪ್ರಾಯದಿಂದ ಸಮಾಜ ಹಾಳಾಗಿದೆ. ಕೊರಳಲ್ಲಿ ಲಿಂಗ ಕಟ್ಟಿಕೊಂಡು ಪೂಜೆ ಮಾಡುವ ಯಾವುದೇ ಸಮಾಜ, ಯಾವುದೇ ಸಂಪ್ರದಾಯದವರು ಈ ಸಮಾವೇಶದಲ್ಲಿ ಭಾಗವಹಿಸಬಹುದು’ ಎಂದರು.

‘ಜಾತಿ ಸಮೀಕ್ಷೆಯಲ್ಲಿ ಏನು ನಮೂದಿಸಬೇಕು ಎಂದು ವೀರಶೈವ ಲಿಂಗಾಯತ ಮಹಾಸಭಾ ನಿರ್ಣಯ ತೆಗೆದುಕೊಳ್ಳಲಿದೆ. ಮಹಾಸಭಾ ಯಾವುದೇ ಪಕ್ಷ, ಮುಖಂಡರ ಅಧೀನದಲ್ಲಿ ಇಲ್ಲ. ಎಲ್ಲರೂ ತಮ್ಮ ಅಭಿಪ್ರಾಯವನ್ನು ಮಹಾಸಭಾಗೆ ನೀಡಬೇಕು’ ಎಂದರು.

‘ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೊಡಿಸುವಂತೆ ಕೋರಲು ದಿಂಗಾಲೇಶ್ವರ ಸ್ವಾಮೀಜಿ ಮಠಕ್ಕೆ ಬಂದಿದ್ದರು’ ಎಂಬ ವಚನಾನಂದ ಸ್ವಾಮೀಜಿ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಟಿಕೆಟ್‌ಗಳನ್ನು ಅವರ ಮಠದಲ್ಲಿ ಮಾರಾಟಕ್ಕೆ ಇಟ್ಟಿದ್ದಾರೆಯೇ?’ ಎಂದು ಪ್ರಶ್ನಿಸಿದರು.

‘ಪಕ್ಷದ ಟಿಕೆಟ್ ಅನ್ನು ಅವರ ಬಳಿ ಕೇಳುವ ಪ್ರಸಂಗ ಯಾರಿಗೂ ಬರಲಿಕ್ಕಿಲ್ಲ. ಅವರ ವಿನಂತಿಯಂತೆ ಮಠಕ್ಕೆ ಹೋಗಿ ಪೂಜೆ, ಪ್ರಸಾದ ಮಾಡಿ ಬಂದಿದ್ದೆ. ಉಳಿದಿದ್ದು ಅವರ ವಿವೇಚನೆಗೆ ಬಿಟ್ಟಿದ್ದು. ಸದ್ಯಕ್ಕೆ ಆ ವಿಚಾರದ ಚರ್ಚೆ ಬೇಡ’ ಎಂದರು.

‘ಸಿ.ಎಂ. ಪರ ಕಾಗಿನೆಲೆ ಸ್ವಾಮೀಜಿ ಬೀದಿಗಿಳಿದರೆ ತಲೆದಂಡ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕಾಗಿನೆಲೆ ಪೀಠದ ಶ್ರೀಗಳು ಸಿದ್ದರಾಮಯ್ಯನವರ ಕಾಲಾಳಲ್ಲ, ಕಾಂಗ್ರೆಸ್‌ನ ಜೀತದಾಳೂ ಅಲ್ಲ. ಸಿ.ಎಂ ಪರ ವಕಾಲತ್ತು ವಹಿಸಿ ಬೀದಿಗಿಳಿದರೆ ಅವರ ತಲೆದಂಡ ಆಗುತ್ತದೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಎಚ್ಚರಿಕೆ ನೀಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಸಿದ್ದರಾಮಯ್ಯ ಅವರಿಗೂ ಮಠಕ್ಕೂ ಸಂಬಂಧವಿಲ್ಲ. ಅದು ಕುರುಬ ಸಮಾಜದ ಮಠ. ಪೀಠ ಮಾಡಿದ್ದು ಹಾಗೂ ಮೊದಲ ಪೀಠಾಧ್ಯಕ್ಷ ನಾನೇ’ ಎಂದು ಹೇಳಿದರು.

‘ರಾಜ್ಯ ಸರ್ಕಾರ ಕುರುಬರನ್ನು ಎಸ್.ಟಿ.ಗೆ ಸೇರಿಸುವ ಪ್ರಸ್ತಾಪವನ್ನು ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾಕ್ಕೆ ಕಳುಹಿಸಬೇಕಿತ್ತು. ನೇರ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು ಸರಿಯಲ್ಲ. ಉದ್ದೇಶಪೂರ್ವಕವಾಗಿ ಹೀಗೆ ಮಾಡಲಾಗಿದೆ’ ಎಂದು ಟೀಕಿಸಿದರು.

‘ತೆಲಂಗಾಣ, ಬಿಹಾರ ಮಾದರಿ ರಾಜ್ಯದಲ್ಲೂ ಹಿಂದುಳಿದ ವರ್ಗಗಳ ಮೀಸಲು ಪ್ರಮಾಣ ಹೆಚ್ಚಿಸಲಿ’ ಎಂದು ಅವರು ಸರ್ಕಾರಕ್ಕೆ ಒತ್ತಾಯಿಸಿದರು.

ತಮಟೆ ಹೊಡೆಯುವವನಿಗೂ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಗನಿಗೂ ಒಂದೇ ಮೀಸಲಾತಿ ಎಂದರೆ ಹೇಗೆ? ಉಳ್ಳವರು ತಮ್ಮದೇ ಸಮಾಜದ ಇತರರಿಗೆ ಬಿಟ್ಟುಕೊಡಬೇಕು

ಎಚ್.ವಿಶ್ವನಾಥ್,
ವಿಧಾನ ಪರಿಷತ್ ಸದಸ್ಯ

ಎಸ್‌ಟಿಗೆ ಕುರುಬರು: ಸಭೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡಕ್ಕೆ ಕುರುಬ ಸಮುದಾಯವನ್ನು ಸೇರಿಸುವ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವದ ಮೇಲೆ ಚರ್ಚೆ ನಡೆಸುವ ಸಂಬಂಧ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ನೇತೃತ್ವದಲ್ಲಿ ಮಂಗಳವಾರ ನಡೆಯಬೇಕಿದ್ದ ಸಭೆಯನ್ನು ಮುಂದೂಡಲಾಗಿದೆ.

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವ ಸಂಬಂಧ ರಾಜ್ಯ ಸರ್ಕಾರವು ಕಳೆದ ಜುಲೈ ತಿಂಗಳಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಎರಡು ಪ್ರಸ್ತಾವಗಳನ್ನು ಕಳುಹಿಸಿತ್ತು. ಆ ಪ್ರಸ್ತಾವಗಳ ಅಂಶಗಳಲ್ಲಿನ ಗೊಂದಲ ನಿವಾರಿಸುವಂತೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ರಾಜ್ಯದ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗೆ ಸೂಚನೆ ನೀಡಿತ್ತು. ಈ ಬಗ್ಗೆ ಚರ್ಚಿಸಲು ಮಂಗಳವಾರ ಸಭೆ ಕರೆಯಲಾಗಿತ್ತು.

ಆದರೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ನಿರ್ದೇಶಕರು, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕರು ಸಭೆಗೆ ಹಾಜರಾಗಲು ಸಾಧ್ಯವಾಗದ ಕಾರಣ ಮತ್ತು ಈ ವಿಷಯದ ಚರ್ಚೆಗೆ ಮತ್ತಷ್ಟು ದಾಖಲೆ ಮತ್ತು ವಿಷಯಗಳ ಅಗತ್ಯ ಇದ್ದುದರಿಂದ ಸಭೆಯನ್ನು ಮುಂದೂಡಲಾಗಿದೆ.

‘ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ಡಿ. ರಂದೀಪ್ ಅವರು ತಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಪ್ರಾಥಮಿಕ ಚರ್ಚೆಯನ್ನಷ್ಟೇ ನಡೆಸಿದ್ದಾರೆ. ಮತ್ತೊಮ್ಮೆ ದಿನಾಂಕ ನಿಗದಿ ಮಾಡಿ ಸಭೆ ನಡೆಸಲು ಕಾರ್ಯದರ್ಶಿ ಅವರು ನಿರ್ಧರಿಸಿದ್ದಾರೆ’ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಭೂ ರಕ್ಷಣೆಗಾಗಿ ಧರಣಿ

ಪ್ರಜಾವಾಣಿ ಚಿತ್ರ

ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ ಬೈರಮಂಗಲದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಮಂಗಳವಾರ ಪಾಲ್ಗೊಂಡಿದ್ದ ಜನ

‘ಹಳ್ಳಿಕಾರ ಎಂದೇ ನಮೂದಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿವಾರು ಸಮೀಕ್ಷೆಯ ವೇಳೆ ಜಾತಿ ಕಾಲಂನಲ್ಲಿ ‘ಹಳ್ಳಿಕಾರ’ ಹಾಗೂ ಕುಲಕಸುಬಿನ ಕಾಲಂನಲ್ಲಿ ‘ಪಶು ಸಂಗೋಪನೆ’ ಎಂದೇ ನಮೂದಿಸಬೇಕು’ ಎಂದು ಕರ್ನಾಟಕ ರಾಜ್ಯ ಹಳ್ಳಿಕಾರರ ಸಂಘದ ಉಪಾಧ್ಯಕ್ಷ ಕೆ.ಎಂ. ನಾಗರಾಜ್ ಕರೆ ನೀಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘1941ರ ಗಣತಿ ವೇಳೆ ಹಳ್ಳಿಕಾರ ಸಮುದಾಯವನ್ನು ರಾಜ್ಯದ 35ನೇ ಪ್ರತ್ಯೇಕ ಜಾತಿಯಾಗಿ ಪರಿಗಣಿಸಲಾಗಿದೆ. ಈಗ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಮೀಕ್ಷೆಯಲ್ಲಿ ಹಳ್ಳಿಕಾರ ಸಮುದಾಯದವರು ಧರ್ಮದ ಕಾಲಂನಲ್ಲಿ ಹಿಂದೂ ಹಾಗೂ ಜಾತಿ ಕಾಲಂನಲ್ಲಿ ಹಳ್ಳಿಕಾರ ಎಂದೇ ನಮೂದಿಸಬೇಕು. ಇದರಲ್ಲಿ ಯಾವುದೇ ಉಪ ಜಾತಿಯನ್ನು ನಮೂದಿಸಬಾರದು. ಇದಕ್ಕೆ ಸಂಬಂಧಿಸಿದಂತೆ ಇತರೆ ಯಾವುದೇ ಒತ್ತಾಯ ಹಾಗೂ ಗೊಂದಲಗಳಿಗೆ ಮಣಿಯಬಾರದು’ ಎಂದು ಹೇಳಿದರು.

‘ಹಳ್ಳಿಕಾರ ಸಮುದಾಯವು 50 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಬೆಂಗಳೂರು ನಗರ, ಮೈಸೂರು, ಮಂಡ್ಯ, ತುಮಕೂರು, ಚಿಕ್ಕಮಗಳೂರು, ಹಾಸನ ಭಾಗದಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ನಮ್ಮ ಸಮುದಾಯವನ್ನು ಬಲಾಢ್ಯ ಒಕ್ಕಲಿಗ ಸಮುದಾಯದ ಜೊತೆಗೆ ಸೇರಿಸಿರುವುದಕ್ಕೆ ವಿರೋಧವಿದೆ. ನಾವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಹಿಂದುಳಿದಿದ್ದು, ಇದುವರೆಗೆ ಜಿ.ಪಂ. ಸದಸ್ಯರೂ ಆಗಿಲ್ಲ. ಆದ್ದರಿಂದ ನಮ್ಮ ಸಮುದಾಯವನ್ನು ಪ್ರವರ್ಗ– 1ರಲ್ಲಿ ಸೇರಿಸಬೇಕು’ ಎಂದು ಕೋರಿದರು.

ಮುಡಾ ಪ್ರಕರಣ: ಇ.ಡಿ ವಶಕ್ಕೆ ದಿನೇಶ್

ಪ್ರಜಾವಾಣಿ ವಾರ್ತೆ

ಜಿ.ಟಿ.ದಿನೇಶ್ ಕುಮಾರ್

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದಲ್ಲಿ ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರ ವಿಚಾರಣೆ ನಡೆಸಿದ ಜಾರಿ ನಿರ್ದೇಶನಾಲಯವು, ಬಳಿಕ ಅವರನ್ನು ವಶಕ್ಕೆ ಪಡೆದುಕೊಂಡಿದೆ.

ಜಿ.ಟಿ.ದಿನೇಶ್ ಕುಮಾರ್ ಅವರ ಅವಧಿಯಲ್ಲಿ, ನಿವೇಶನಗಳ ಅಕ್ರಮ ಹಂಚಿಕೆ ಹೆಚ್ಚಿನ ಸಂಖ್ಯೆಯಲ್ಲಿ ನಡೆದಿದೆ ಎಂದು ಇ.ಡಿ ಹೇಳಿತ್ತು. ಹಾಗಾಗಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿತ್ತು. ದಾಖಲೆಗಳೊಂದಿಗೆ ಬಂದ ದಿನೇಶ್ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿ, ಹೇಳಿಕೆ ದಾಖಲು ಮಾಡಿಕೊಳ್ಳಲಾಯಿತು. ಬಳಿಕ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದುಕೊಂಡರು ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಂದ ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರಾತ್ಮಕವಾಗಿ 14 ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದ ತನಿಖೆ ಆರಂಭಿಸಿದ್ದ ಇ.ಡಿಯು, 1,000ಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದನ್ನು ಪತ್ತೆ ಮಾಡಿತ್ತು.

---

21 ಮೀಟರ್ ಎತ್ತರದ ಕಟ್ಟಡಗಳಿಗೆ ಜಿಲ್ಲಾ ಮಟ್ಟದಲ್ಲೇ ಅನುಮತಿ

ಅಗ್ನಿ ಸುರಕ್ಷತಾ ಪತ್ರ ಇನ್ನು ಸಲೀಸು

• ಕೆ.ಎಸ್.ಸುನಿಲ್

ಬೆಂಗಳೂರು: ವಸತಿ, ಶೈಕ್ಷಣಿಕ, ವಾಣಿಜ್ಯ, ಕೈಗಾರಿಕೆ, ಆಸ್ಪತ್ರೆ ಮತ್ತು ಗೋದಾಮು ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಸಮಾಪನ ಪತ್ರ ಪಡೆಯುವ ನಿಯಮವನ್ನು ಸರಳಗೊಳಿಸಲಾಗಿದೆ.

ಈ ಅಧಿಕಾರವನ್ನು ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನೀಡಿರುವುದರಿಂದ ಕಟ್ಟಡಗಳ ಮಾಲೀಕರು ರಾಜಧಾನಿಗೆ ಅಲೆದಾಡುವುದು ತಪ್ಪಲಿದೆ.

ಇನ್ನು ಮುಂದೆ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿಯು ತಮ್ಮ ವ್ಯಾಪ್ತಿಯಲ್ಲಿರುವ ಬಹುಮಹಡಿ ಕಟ್ಟಡವಲ್ಲದ, ಅಂದರೆ 21 ಮೀಟರ್‌ಗಿಂತ ಕಡಿಮೆ ಎತ್ತರ ಇರುವ ಕಟ್ಟಡಗಳ ಪರಿಶೀಲನೆ ನಡೆಸಿ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗೆ ವರದಿ ಸಲ್ಲಿಸುವರು. ಈ ವರದಿ ಪರಿಶೀಲನೆ ಬಳಿಕ, ಪ್ರಾದೇಶಿಕ ಅಗ್ನಿ ಶಾಮಕ ಅಧಿಕಾರಿ ಸಂಬಂಧಪಟ್ಟ ಕಟ್ಟಡದ ಮಾಲೀಕರಿಂದ ನಿಗದಿತ ಶುಲ್ಕ ಪಾವತಿಸಿಕೊಂಡು, ಅಗ್ನಿ ಸುರಕ್ಷತಾ ಪತ್ರ ನೀಡಲಿದ್ದಾರೆ. ಈ ಸಂಬಂಧ ಪೊಲೀಸ್ ಸಹಾಯಕ ಸೇವೆ ಮತ್ತು ಸಮನ್ವಯ ಒಳಾಡಳಿತ ಇಲಾಖೆ ಆದೇಶ ಹೊರಡಿಸಿದೆ.

ಕಟ್ಟಡಗಳ ಎತ್ತರ 21 ಮೀಟರ್‌ಗಿಂತ ಜಾಸ್ತಿ ಇದ್ದರೆ ಅತಿ ಎತ್ತರದ ಕಟ್ಟಡಗಳೆಂದು, 21 ಮೀಟರ್‌ಗಿಂತ ಒಳಗೆ ಇದ್ದರೆ ಕಡಿಮೆ ಎತ್ತರದ ಕಟ್ಟಡಗಳೆಂದು 2023ರ ಆದೇಶದಲ್ಲಿ ವ್ಯಾಖ್ಯಾನಿಸಲಾಗಿದೆ. 15 ಮೀಟರ್‌ಗಿಂತ ಎತ್ತರದ ಕಟ್ಟಡಗಳನ್ನು ಪೊಲೀಸ್ ಮಹಾ ನಿರ್ದೇಶಕರು ಹಾಗೂ 15 ಮೀಟರ್‌ಗಿಂತ ಕಡಿಮೆ ಎತ್ತರದ ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಪತ್ರವನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿ ವಿತರಿಸುವ ವ್ಯವಸ್ಥೆ ಇದೆ. ಈ ಆದೇಶವಿದ್ದರೂ 15ರಿಂದ 21 ಮೀಟರ್ ಎತ್ತರವಿರುವ ಎಲ್ಲಾ ರೀತಿಯ ಕಟ್ಟಡಗಳ ಅಗ್ನಿ ಸುರಕ್ಷತಾ ಪತ್ರಕ್ಕೆ ಕಟ್ಟಡಗಳ ಮಾಲೀಕರು ಪೊಲೀಸ್ ಮಹಾ ನಿರ್ದೇಶಕರನ್ನು ಸಂಪರ್ಕಿಸಬೇಕಾಗಿತ್ತು.

‘ಕಚೇರಿಗೆ ಅಲೆದಾಟ ತಪ್ಪಲಿದೆ’

‘ಈ ಪ್ರಕ್ರಿಯೆಯಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗಿತ್ತು. ಉದಾಹರಣೆಗೆ, ಸೊರಬ ತಾಲ್ಲೂಕಿನಲ್ಲಿ 15ರಿಂದ 21 ಮೀಟರ್ ಎತ್ತರವಿರುವ ಎಲ್ಲಾ ರೀತಿಯ ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಸಮಾಪನ ಪತ್ರ ಪಡೆಯಲು ಕೇಂದ್ರ ಕಚೇರಿಗೆ ತೆರಳಬೇಕಿತ್ತು. 15 ಮೀಟರ್‌ಗಿಂತ ಕಡಿಮೆ ಎತ್ತರವಿರುವ ಎಲ್ಲ ರೀತಿಯ ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಪತ್ರ ಪಡೆಯಲು ಮುಖ್ಯ ಅಗ್ನಿ ಶಾಮಕ ಅಧಿಕಾರಿ ಇರುವ ಮಂಗಳೂರಿಗೆ ತೆರಳಬೇಕಿತ್ತು. ಇದೇ ರೀತಿ ರಾಜ್ಯದ ಎಲ್ಲ ಜಿಲ್ಲೆಯ ಜನರು ಪತ್ರ ಪಡೆಯಲು ಕಷ್ಟಪಡುತ್ತಿದ್ದರು. ಇದಕ್ಕಾಗಿ ತಿಂಗಳಿಗೂ ಹೆಚ್ಚು ಕಾಲ ಕಚೇರಿಗೆ ಅಲೆದಾಡಬೇಕಿತ್ತು’ ಎಂದು ಅಗ್ನಿ ಶಾಮಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಈ ಸಮಸ್ಯೆ ಬಗ್ಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ ನೀಡಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ 21 ಮೀಟರ್‌ಗಿಂತ ಕಡಿಮೆ ಎತ್ತರವಿರುವ ಎಲ್ಲಾ ರೀತಿಯ ಕಟ್ಟಡಗಳನ್ನು ಪರಿಶೀಲನೆ ಮಾಡುವ ಅಧಿಕಾರವನ್ನು ಜಿಲ್ಲಾ ಅಗ್ನಿ ಶಾಮಕ ಅಧಿಕಾರಿಗೆ ಹಾಗೂ ಅಗ್ನಿ ಸುರಕ್ಷತಾ ಸಲಹಾ ಪತ್ರ ವಿತರಿಸುವ ಅಧಿಕಾರವನ್ನು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗೆ ನೀಡಲಾಗಿದೆ. ಇದರಿಂದ ಸಾರ್ವಜನಿಕರು ಆಯಾ ಜಿಲ್ಲೆಯಲ್ಲಿ ಪಡೆಯಬಹುದು’ ಎಂದು ಹೇಳಿದ್ದಾರೆ.

30,284 ಟನ್ ಕಬ್ಬಿಣದ ಅದಿರು ಅಕ್ರಮ ಸಾಗಾಟ ಪ್ರಕರಣ

ಮರು ತನಿಖೆ: ಆನಂದ್ ಸಿಂಗ್‌ಗೆ ಮತ್ತೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಲೇಕೇರಿ ಬಂದರಿಗೆ ಅಕ್ರಮವಾಗಿ ಅದಿರು ಸಾಗಾಟ ಮಾಡಿದ ಪ್ರಕರಣದ ಮರು ತನಿಖೆ ನಡೆಸಿ, ಎರಡು ತಿಂಗಳಲ್ಲಿ ವರದಿ ಸಲ್ಲಿಸುವಂತೆ ಲೋಕಾಯುಕ್ತ ನ್ಯಾಯಾಲಯವು ಲೋಕಾಯುಕ್ತ ಎಸ್‌ಐಟಿಯ ಎಡಿಜಿಪಿಗೆ ನಿರ್ದೇಶಿಸಿದೆ. ಇದರಿಂದ ಪ್ರಕರಣದಲ್ಲಿ ಖುಲಾಸೆಗೊಂಡಿದ್ದ ಮಾಜಿ ಸಚಿವ ಆನಂದ್ ಸಿಂಗ್‌ಗೆ ಮತ್ತೆ ಸಂಕಷ್ಟ ಎದುರಾಗಿದೆ.

2009ರ ಜನವರಿ 1ರಿಂದ 2010ರ ಮೇ 31ರ ಅವಧಿಯಲ್ಲಿ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ಗಣಿ ಯಾರ್ಡ್‌ಗಳಿಂದ ಬೇಲೇಕೇರಿ ಬಂದರಿಗೆ ಅಕ್ರಮವಾಗಿ 30,284 ಟನ್ ಕಬ್ಬಿಣದ ಅದಿರು ಸಾಗಾಟ ಪ್ರಕರಣಕ್ಕೆ ಸಂಬಂಧಿಸಿ ಕೋರ್ಟ್ ಸೆ.11ರಂದು ಈ ಆದೇಶ ನೀಡಿದೆ.

ಪ್ರಕರಣದಲ್ಲಿ ಎಸ್‌ಐಟಿಯ ಲೋಪಗಳನ್ನು ಗುರುತಿಸಿರುವ ನ್ಯಾಯಾಲಯ, ಆರೋಪಿ ಸ್ಥಾನದಲ್ಲಿರುವ ಎಸ್.ಬಿ.ಮಿನರಲ್ಸ್‌ನ ಸಹ ಪಾಲುದಾರರಾದ ಆನಂದ್ ಸಿಂಗ್ ಸೇರಿ ಇತರರನ್ನು ಕೈಬಿಟ್ಟ ಕ್ರಮವನ್ನು ಪ್ರಶ್ನಿಸಿದೆ.

‘ಸಂಡೂರಿನ ಜೈಸಿಂಗ್‌ಪುರ ಯಾರ್ಡ್‌ನಿಂದ ಬೇಲೇಕೇರಿ ಬಂದರಿಗೆ ಅಕ್ರಮವಾಗಿ ಸಾಗಾಟ ಮಾಡಿದ್ದ 12 ಸಾವಿರಕ್ಕೂ ಅಧಿಕ ಟನ್ ಅದಿರು ಸಾಗಾಟದಲ್ಲಿ ನಡೆದ ಅವ್ಯವಹಾರ, ವಂಚನೆಯಲ್ಲಿ ಮೆಸರ್ಸ್ ಎಸ್.ಬಿ.ಮಿನರಲ್ಸ್ ಶಾಮೀಲಾಗಿದೆ. ಆದರೆ, ತನಿಖೆ ನಡೆಸಿರುವ ಎಸ್‌ಐಟಿ, ಪ್ರಕರಣದಲ್ಲಿ ಬಿ.ಎಸ್. ಜಯರಾಜ್ ಸಿಂಗ್, ಕಂಪನಿಯನ್ನು ಆರೋಪಿಗಳನ್ನಾಗಿ ಪರಿಗಣಿಸಿದೆ. ಕಂಪನಿಯ ಸಹ ಪಾಲುದಾರರಾದ ಬಿ.ಪಿ. ಆನಂದ್ ಸಿಂಗ್ ಅಲಿಯಾಸ್ ಆನಂದ್ ಕುಮಾರ್ ಸಿಂಗ್ ಮತ್ತು ಅವರ ಸಹೋದರರ ಪಾತ್ರದ ಬಗ್ಗೆ ತನಿಖೆಯನ್ನೇ ನಡೆಸಿಲ್ಲ’ ಎಂದು ಆದೇಶದಲ್ಲಿ ತಿಳಿಸಿದೆ.

‘ಭಾರತೀಯ ಪಾಲುದಾರಿಕೆ ಕಾಯ್ದೆಯ ಕಲಂ 25ರ ಅನ್ವಯ ಯಾವುದೇ ಕಂಪನಿಯ ಪ್ರತಿ ವ್ಯವಹಾರ, ವಹಿವಾಟಿಗೂ ಎಲ್ಲಾ ಪಾಲುದಾರರು ಹೊಣೆಗಾರರು ಎಂದು ಸ್ಪಷ್ಟವಾಗಿ ತಿಳಿಸಿದೆ. ಆದರೆ, ಎಸ್‌ಐಟಿ ತನಿಖಾ ತಂಡವು ಎಸ್.ಬಿ.ಮಿನರಲ್ಸ್‌ನ ಸಹ ಪಾಲುದಾರರು ಅಕ್ರಮದಲ್ಲಿ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರೂ ಪೂರ್ಣ ಪ್ರಮಾಣದ ತನಿಖೆ ನಡೆಸದೇ, ಕೈ ಬಿಟ್ಟು ಲೋಪ ಎಸಗಿದೆ’ ಎಂದು ನ್ಯಾಯಾಲಯ ಆದೇಶದಲ್ಲಿ ಹೇಳಿದೆ.

ಮುಖ್ಯಾಂಶಗಳು

- ಪ್ರಕರಣದಲ್ಲಿ ಎಸ್‌ಐಟಿಯ ಲೋಪ ಗುರುತಿಸಿರುವ ನ್ಯಾಯಾಲಯ
- ಪ್ರತಿ ವ್ಯವಹಾರ, ವಹಿವಾಟಿಗೂ ಎಲ್ಲಾ ಪಾಲುದಾರರು ಹೊಣೆಗಾರರು

ಪ್ರಕರಣವೇನು?

2009ರ ಜನವರಿ 1ರಿಂದ 2010ರ ಮೇ 31ರ ಅವಧಿಯಲ್ಲಿ ಬೇಲೇಕೇರಿ ಬಂದರಿಗೆ 30,284 ಟನ್ ಕಬ್ಬಿಣದ ಅದಿರು ಅಕ್ರಮವಾಗಿ ಸಾಗಾಟ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದ ಸಂಬಂಧ ಎಸ್‌ಐಟಿ ತನಿಖೆ ನಡೆಸಿತ್ತು.

ಬಿ.ಎಸ್.ಜಯರಾಜ್ ಸಿಂಗ್, ಉದಯ್ ಜೆ.ದೇಸಾಯ್ ಸೇರಿ 19 ಆರೋಪಿಗಳು, ಎಸ್.ಬಿ. ಮಿನರಲ್ಸ್ ಸೇರಿ 5 ಪ್ರತ್ಯೇಕ ಕಂಪನಿಗಳ ವಿರುದ್ಧ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಈ ಪ್ರಕರಣದಲ್ಲಿ ತಮ್ಮ ವಿರುದ್ಧ ಹೊರಿಸಿರುವ ದೋಷಾರೋಪಗಳಿಂದ ಮುಕ್ತಗೊಳಿಸುವಂತೆ ಉದಯ್ ಜೆ.ದೇಸಾಯ್ ಸೇರಿ 21 ಮಂದಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾ ಮಾಡಿ, ಪ್ರಕರಣದ ಮರುತನಿಖೆಗೆ ಆದೇಶಿಸಿದೆ.

ಬಳ್ಳಾರಿಯ ವ್ಯಾಸನಕೆರೆ ಗಣಿಯಿಂದ ಬೇಲೇಕೇರಿಗೆ 16,987 ಟನ್ ಅದಿರು ಅಕ್ರಮವಾಗಿ ಸಾಗಾಟ ಮಾಡಿದ ಪ್ರಕರಣದಲ್ಲಿ ಆನಂದ್ ಸಿಂಗ್ ಸೇರಿ ಇತರೆ ಆರೋಪಿಗಳನ್ನು ಖುಲಾಸೆಗೊಳಿಸಿ, ಕಳೆದ ಮಾರ್ಚ್‌ನಲ್ಲಿ ವಿಶೇಷ ನ್ಯಾಯಾಲಯ ಆದೇಶಿಸಿತ್ತು.

ಬುಧವಾರ, ಸೆಪ್ಟೆಂಬರ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 258 | ಪುಟ 16

prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಾಲ್ಕನೇ ಚಿನ್ನ...
ಕೆನ್ಯಾದ ಫೇತ್ ಕಿಪ್ಯೆಗಾನ್ ಅವರು ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 1500 ಮೀ. ಓಟದಲ್ಲಿ ಮಂಗಳವಾರ ಚಿನ್ನ ಗೆದ್ದುಕೊಂಡರು. ಅವರು ನಾಲ್ಕನೇ ಬಾರಿಗೆ ಈ ಸಾಧನೆ ಮಾಡಿದರು

‘ಬೇಡಿಕೆ ಈಡೇರಿಸಿ’
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಬಿಕ್ಕಟ್ಟನ್ನು ಸರ್ಕಾರದ ಹಂತದಲ್ಲೇ ಪರಿಹರಿಸುವಂತೆ ಒತ್ತಾಯಿಸಿ ರಾಜ್ಯ ಸಮನ್ವಯ ಸಮಿತಿ ಸದಸ್ಯರು ಮೈಸೂರಿನಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು

ಸೆನ್ಸೆಕ್ಸ್ 82,380 | ನಿಫ್ಟಿ 25,239 | $/₹ 88.09 | ಚಿನ್ನ (Std. 10g) ₹1,16,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,37,200 (ಬೆಂಗಳೂರು)

50 ಕೆ.ಜಿ ಚಿನ್ನ, ₹8 ಕೋಟಿ ದರೋಡೆ

ಚಡಚಣ (ವಿಜಯಪುರ ಜಿಲ್ಲೆ): ಚಡಚಣ ಪಟ್ಟಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಿಂದ ಸುಮಾರು ₹8 ಕೋಟಿ ನಗದು, 50 ಕೆ.ಜಿ ಚಿನ್ನಾಭರಣ ದರೋಡೆ ಮಾಡಲಾಗಿದೆ.

ವಿವರ 5

ಅರಣ್ಯ ಪತ್ತೆಗೆ ಎಸ್‌ಐಟಿ

ಸುಪ್ರೀಂ ಕೋರ್ಟ್ ತೀರ್ಪು: ತನಿಖೆಗೆ ತಂಡ ರಚಿಸಿದ ಅರಣ್ಯ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯ ಸ್ವಾಧೀನದಲ್ಲಿದ್ದ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಿಗಾಗಿ ಮಂಜೂರು ಮಾಡಲಾಗಿದೆಯೇ ಎಂಬುದನ್ನು ಪತ್ತೆ ಹಚ್ಚಿ, ಅಂತಹ ಭೂಮಿಯನ್ನು ಮರುವಶಕ್ಕೆ ಪಡೆಯಲು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ವಿಶೇಷ ತನಿಖಾ ತಂಡಗಳನ್ನು (ಎಸ್‌ಐಟಿ) ರಚಿಸಲಾಗಿದೆ.

ಸುಪ್ರೀಂಕೋರ್ಟ್ ನೀಡಿದ ನಿರ್ದೇಶನದ ಬೆನ್ನಲ್ಲೇ ಅರಣ್ಯ ಇಲಾಖೆಯು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತ್ಯೇಕ ಎಸ್‌ಐಟಿ ರಚಿಸಿದೆ. ನಾಲ್ಕು ತಿಂಗಳಲ್ಲಿ ಈ ಕುರಿತ ವರದಿ ನೀಡಬೇಕೆಂದು ಜಿಲ್ಲಾ ಎಸ್‌ಐಟಿಗೆ ನಿರ್ದೇಶಿಸಲಾಗಿದೆ. 5

ಸಮಿತಿಯಲ್ಲಿ ಯಾರು?

ರಾಜ್ಯ ಮಟ್ಟದಲ್ಲಿ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿಶೇಷ ತನಿಖಾ ತಂಡದ ಮುಖ್ಯಸ್ಥರಾಗಿರುತ್ತಾರೆ. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಅರಣ್ಯ ಪಡೆಗಳ ಮುಖ್ಯಸ್ಥ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ) ಸದಸ್ಯರಾಗಿರಲಿದ್ದಾರೆ. ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ) ಸದಸ್ಯ ಕಾರ್ಯದರ್ಶಿಯಾಗಿರುವರು.

ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡದ ಮುಖ್ಯಸ್ಥರಾಗಿ ಜಿಲ್ಲಾಧಿಕಾರಿ, ಸದಸ್ಯ ಕಾರ್ಯದರ್ಶಿಯಾಗಿ ಪ್ರಾದೇಶಿಕ ಹಾಗೂ ವನ್ಯಜೀವಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸದಸ್ಯರಾಗಿ ಭೂ ದಾಖಲೆಗಳ ಇಲಾಖೆ ಉಪ ನಿರ್ದೇಶಕರು ಕಾರ್ಯನಿರ್ವಹಿಸಲಿದ್ದಾರೆ.

ರಾಜ್ಯ ತಂಡದ ಕೆಲಸವೇನು?

ರಾಜ್ಯ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಿ ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಗಳ ಪ್ರಗತಿಯನ್ನು ಪರಾಮರ್ಶಿಸಬೇಕು. ತನಿಖೆಗೆ ಪೂರಕವಾಗಿ ಮಾರ್ಗಸೂಚಿಗಳು ಇಲ್ಲವೇ ಸ್ಪಷ್ಟನೆಗಳನ್ನು ಒದಗಿಸಬೇಕು.

ಜಿಲ್ಲಾ ತನಿಖಾ ತಂಡಗಳು ನೀಡುವ ವರದಿಗಳನ್ನು ಕ್ರೋಡೀಕರಿಸಿ ಸರ್ಕಾರಕ್ಕೆ ವಿಸ್ತೃತ ವರದಿಯ ಸಲ್ಲಿಸಬೇಕು.

ಅರಣ್ಯ ಭೂಮಿಯನ್ನು ವ್ಯಕ್ತಿಗಳು ಇಲ್ಲವೇ ಸಂಸ್ಥೆಗಳಿಂದ ವಶಪಡಿಸಿಕೊಂಡು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸುಗಳನ್ನು ಮಾಡಬೇಕು. ಸಾರ್ವಜನಿಕ ಹಿತಾಸಕ್ತಿಯ ಸಮಸ್ಯೆ ಇಲ್ಲದ ಸನ್ನಿವೇಶದಲ್ಲಿ ಅರಣ್ಯ ಭೂಮಿ ಸ್ವಾಧೀನದಲ್ಲಿರುವ ವ್ಯಕ್ತಿ ಇಲ್ಲವೇ ಸಂಸ್ಥೆಯಿಂದ ದರ ನಿಗದಿಪಡಿಸಿ ಅವರಿಂದ ವಸೂಲಿ ಮಾಡಲು ಕಾರ್ಯವಿಧಾನಗಳನ್ನು ರೂಪಿಸಬೇಕು.

ಪರಿಹಾರ ದರ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 519.6 ಮೀಟರ್‌ನಿಂದ 524.256 ಮೀಟರ್‌ಗೆ ಎತ್ತರಿಸುವ ‘ಕೃಷ್ಣಾ ಮೇಲ್ದಂಡೆ ಯೋಜನೆ–3’ನೇ ಹಂತದ ಯೋಜನೆಗಾಗಿ ಮುಳುಗಡೆ ಆಗುವ ಮತ್ತು ನಾಲೆಗಾಗಿ ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಮಂಗಳವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಪರಿಹಾರದ ದರ ನಿಗದಿ ಮಾಡಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ

> ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಚುನಾವಣೆ ಪೂರ್ವದಲ್ಲಿ ನಾವು ಈ ಕುರಿತು ಭರವಸೆ ನೀಡಿದ್ದೆವು. ಆ ಪ್ರಕಾರವೇ ನಡೆದುಕೊಂಡಿದ್ದೇವೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

2023ರಿಂದ ನನೆಗುದಿಯಲ್ಲಿದ್ದ ದರ ನಿಗದಿ ವಿಚಾರ ಇದೀಗ ತಾರ್ಕಿಕ ಅಂತ್ಯವನ್ನು ತಲುಪಿದೆ. 5

ಯಾವ ಜಮೀನಿಗೆ ಎಷ್ಟು ಪರಿಹಾರ? (ಎಕರೆಗೆ)

	ನೀರಾವರಿ ಜಮೀನು	ಒಣ ಭೂಮಿ
ಮುಳುಗಡೆ ಜಮೀನು	₹40ಲಕ್ಷ	₹30ಲಕ್ಷ
ಕಾಲುವೆಗಾಗಿ ಜಮೀನು	₹30ಲಕ್ಷ	₹25ಲಕ್ಷ

1,33,867 ಎಕರೆ — ಯೋಜನೆಗೆ ಅಗತ್ಯವಿರುವ ಜಮೀನು

75,563 ಎಕರೆ — ಮುಳುಗಡೆ ಆಗುವ ಜಮೀನು

51,837 ಎಕರೆ — ಕಾಲುವೆ ನಿರ್ಮಾಣಕ್ಕೆ ಜಮೀನು

6,469 ಎಕರೆ — ರೈತರ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಗೆ

20 — ಮುಳುಗಡೆ ಆಗುವ ಗ್ರಾಮಗಳು, ಪಟ್ಟಣ ವಾರ್ಡ್‌ಗಳು

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಕೈ’ ಶಾಸಕ ನಂಜೇಗೌಡ ಆಯ್ಕೆ ಅಸಿಂಧು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆಯಲ್ಲಿ ಕೋಲಾರ ಜಿಲ್ಲೆಯ ಮಾಲೂರು ಕ್ಷೇತ್ರದಿಂದ ಗೆದ್ದಿರುವ ಕಾಂಗ್ರೆಸ್‌ನ ಕೆ.ವೈ.ನಂಜೇಗೌಡ ಅವರ ಆಯ್ಕೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

‘ಮತ ಎಣಿಕೆ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆದಿಲ್ಲ. ಭಾರಿ ಅಕ್ರಮ ಎಸಗಲಾಗಿದೆ’ ಎಂದು ಆರೋಪಿಸಿ ಪರಾಜಿತ ಅಭ್ಯರ್ಥಿ ಬಿಜೆಪಿಯ ಕೆ.ಎಸ್.ಮಂಜುನಾಥ್ ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿ, ಕಾಯ್ದಿರಿಸಲಾಗಿದ್ದ ತೀರ್ಪನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪ್ರಕಟಿಸಿದೆ.

‘ಈ ಕ್ಷೇತ್ರದ ಮತಗಳನ್ನು ನಾಲ್ಕು ವಾರಗಳಲ್ಲಿ ಪುನಃ ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಿ. ಅದರಲ್ಲಿ ಯಾರು ಹೆಚ್ಚು ಮತ ಗಳಿಸಿದವರು ಎಂದು ಕಂಡುಬರುತ್ತದೆಯೋ ಅಂಥವರನ್ನು ಆಯ್ಕೆಯಾದ ಅಭ್ಯರ್ಥಿ ಎಂದು ಘೋಷಿಸಿ’ ಎಂದು ನ್ಯಾಯಪೀಠ ಚುನಾವಣಾ ಆಯೋಗಕ್ಕೆ ಆದೇಶಿಸಿದೆ. 6

‘ಅಚ್ಚರಿ ಉಂಟು ಮಾಡಿದೆ’

ಕೋಲಾರ: ‘ಮತ ಮರು ಎಣಿಕೆಗೆ ತಕರಾರು ಇಲ್ಲ. ಆದರೆ, ನನ್ನ ಆಯ್ಕೆ ಅಸಿಂಧುಗೊಳಿಸಿ ಹೈಕೋರ್ಟ್ ಆದೇಶ ಮಾಡಿದ್ದು ಬೇಸರ ಮೂಡಿಸಿದೆ. ಈ ಆದೇಶ ಅಚ್ಚರಿ ಉಂಟು ಮಾಡಿದೆ’ ಎಂದು ಮಾಲೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಕ್ಷೇತ್ರದ ಮತದಾರರು ಯಾವುದೇ ಕಾರಣಕ್ಕೂ ಗಾಬರಿ ಆಗುವ ಅವಶ್ಯವಿಲ್ಲ. ಧೈರ್ಯವಾಗಿ ಹೋರಾಟ ಮಾಡುತ್ತೇನೆ’ ಎಂದರು.

‘ಶಾಸಕ ಆಗುವುದು ಮುಖ್ಯವಲ್ಲ’

‘ಕಳ್ಳಕಾಕರಿಗೆ ಶಿಕ್ಷೆ ಆಗಬೇಕು ಎಂಬುದು ನನ್ನ ಉದ್ದೇಶ. ಈ ಹಿಂದೆ ಶಾಸಕನಾಗಿ ಅಧಿಕಾರ ಅನುಭವಿಸಿದ್ದೇನೆ. ಆದರೆ, ಕೆಲವರು ಮತ ಎಣಿಕೆ ಯಲ್ಲೂ ಅಕ್ರಮ ಎಸಗುವ ಮೂಲಕ ಪ್ರಜಾ ಪ್ರಭುತ್ವದ ಕಗ್ಗೊಲೆ ಮಾಡಿದ್ದಾರೆ’ ಎಂದು ಮಾಲೂರು ಕ್ಷೇತ್ರದ ಮಾಜಿ ಶಾಸಕ ಕೆ.ಎಸ್.ಮಂಜುನಾಥಗೌಡ ಆರೋಪಿಸಿದರು.



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಮೋಜಿನ ಜೀವನಕ್ಕಾಗಿ ರಾತ್ರಿ ವೇಳೆ ಮನೆ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋಜಿನ ಜೀವನಕ್ಕಾಗಿ ರಾತ್ರಿ ವೇಳೆ ಮನೆಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಇಬ್ಬರು ರೌಡಿಶೀಟರ್‌ಗಳು ಸೇರಿ ಮೂವರನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅರಕೆರೆ ನಿವಾಸಿ ಅಬ್ರಹಾಂ ಅಲಿಯಾಸ್ ಅಭಿ(24), ಎಜಿಬಿ ಲೇಔಟ್ ನಿವಾಸಿ ನಿಖಿಲ್(25) ಮತ್ತು ಪದ್ಮನಾಭನಗರ ನಿವಾಸಿ ಧನುಷ್(26) ಬಂಧಿತರು.

ಆರೋಪಿಗಳಿಂದ ₹50 ಲಕ್ಷ ಮೌಲ್ಯದ 710 ಗ್ರಾಂ ಬೆಳ್ಳಿ ಸಾಮಗ್ರಿಗಳು, 423 ಗ್ರಾಂ ಚಿನ್ನಾಭರಣ, ಬೈಕ್ ಹಾಗೂ ಕೃತ್ಯಕ್ಕೆ ಬಳಸಿದ್ದ ಕಬ್ಬಿಣದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪೈಕಿ ಅಬ್ರಹಾಂ ಮತ್ತು ಧನುಷ್ ಸಿ.ಕೆ.ಅಚ್ಚುಕಟ್ಟು ಠಾಣೆಯ ರೌಡಿಶೀಟರ್‌ಗಳು. ಅಬ್ರಹಾಂ ಸುಮಾರು ಎಂಟು ವರ್ಷಗಳಿಂದ ಕಳ್ಳತನ ಕೃತ್ಯದಲ್ಲಿ ಭಾಗಿಯಾಗಿದ್ದ. ಮೂವರ ವಿರುದ್ಧವೂ ಕಳ್ಳತನ ಪ್ರಕರಣಗಳು ದಾಖಲಾಗಿದ್ದು, ಜೈಲಿಗೆ ಹೋಗಿದ್ದರು ಎಂದು ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಚಿನ್ನಾಭರಣ

ದೂರುದಾರ ಮರಿಯಪ್ಪನಪಾಳ್ಯದ ನಿವಾಸಿ ಟಿಕೆ ಕಾಂತರಾಜು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಮಧ್ಯ-ವೆಂಕಟಾಪುರಕ್ಕೆ ಹೋಗಿದ್ದರು. ಮರುದಿನ ವಾಪಸ್ ಮನೆಗೆ ಬಂದು ನೋಡಿದಾಗ ಕಳ್ಳತನ ನಡೆದಿರುವುದು ಗೊತ್ತಾಗಿತ್ತು. ಕೊಠಡಿಯ ಬೀರುವಿನಲ್ಲಿದ್ದ ಚಿನ್ನಾಭರಣ, ಬೆಳ್ಳಿ ವಸ್ತುಗಳು, ವಾಚ್, ನಗದು ಕಳ್ಳತನ ಆಗಿತ್ತು ಎಂದು ಪೊಲೀಸರು ಹೇಳಿದರು. 'ಜಾಮೀನು ಪಡೆಯಲು ಸ್ನೇಹಿತರ ಬಳಿ ಆರೋಪಿಗಳು ಸಾಲ ಪಡೆದುಕೊಂಡಿದ್ದರು. ಆ ಸಾಲ ತೀರಿಸಲು ಇನ್ನೂ ಹೆಚ್ಚು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದರು. ಬಂದ ಹಣದಿಂದ ಗೋವಾಕ್ಕೆ ತೆರಳಿ ಪಾರ್ಟಿ ಮಾಡುತ್ತಿದ್ದರು' ಎಂದು ಹೇಳಿದರು.

ಗುರುತಿನ ಚೀಟಿ, ಆಧಾರ್ ಮಾರ್ಪಾಡು

ಇಬ್ಬರ ಬಂಧನ • ಹೆಬ್ಬಗೋಡಿ ಠಾಣೆ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಗುರುತಿನ ಚೀಟಿ, ಅಂಕಪಟ್ಟಿ ಹಾಗೂ ಆಧಾರ್ ಕಾರ್ಡ್‌ಗಳನ್ನು ಮಾರ್ಪಡಿಸಿ ಕೊಡುತ್ತಿದ್ದ ಇಬ್ಬರು ಆರೋಪಿಗಳನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯರಂಡನಹಳ್ಳಿಯ ನಿವಾಸಿ ಜಿ.ಎಂ.ಯಶವಂತ್ (19) ಹಾಗೂ ಆನೇಕಲ್ ತಾಲ್ಲೂಕಿನ ಬೇಗಹಳ್ಳಿಯ ಜಿ.ರಘುವೀರ್ (25) ಬಂಧಿತರು.

ಬಂಧಿತರಿಂದ ಕಂಪ್ಯೂಟರ್, ಪ್ರಿಂಟರ್, ಲ್ಯಾಮಿನೇಷನ್, ಹಾರ್ಡ್ ಡಿಸ್ಕ್, ಎರಡು ಮೊಬೈಲ್ ಫೋನ್‌ಗಳು ಹಾಗೂ ₹2 ಸಾವಿರ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಯಶವಂತ್ ಪಿಯುಸಿ ಓದಿದ್ದ. ಜಿ.ರಘುವೀರ್ ಐಟಿಐ ಕಲಿತಿದ್ದ. ಆರೋಪಿಗಳಿಬ್ಬರೂ ಠಾಣಾ ವ್ಯಾಪ್ತಿಯಲ್ಲಿ ಸೈಬರ್ ಕೆಫೆ ನಡೆಸುತ್ತಿದ್ದರು. ಸೈಬರ್ ಕೆಫೆಗೆ ಬಂದವರಿಗೆ ದಾಖಲೆಗಳನ್ನು ಮಾರ್ಪಾಡು ಮಾಡಿಕೊಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಯಶವಂತ್

ರಘುವೀರ್

ಅಪರಾಧ ಸುದ್ದಿ

ಓಯೊನಲ್ಲಿ ಕೊಠಡಿ ಬೇಕಿದ್ದವರು ಸೈಬರ್ ಕೆಫೆಗೆ ಬಂದು ಆಧಾರ್ ಕಾರ್ಡ್ ಮಾರ್ಪಾಡು ಮಾಡಿಸಿಕೊಂಡು ಹೋಗುತ್ತಿದ್ದರು. ಖಾಸಗಿ ಕಂಪನಿಗಳಲ್ಲಿ ಕೆಲಸದ ಹುಡುಕಾಟ ನಡೆಸುತ್ತಿದ್ದವರಿಗೆ ಅಂಕಪಟ್ಟಿಯಲ್ಲಿ ಅಂಕಗಳನ್ನು ಮಾರ್ಪಾಡು ಮಾಡಿಕೊಡುತ್ತಿದ್ದರು. ಈ ರೀತಿ ನೂರಾರು ದಾಖಲೆಗಳನ್ನು ಆರೋಪಿಗಳು ಮಾರ್ಪಾಡು ಮಾಡಿಕೊಟ್ಟಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಒಂದು ದಾಖಲೆ ಪ್ರತಿಯನ್ನು ಮಾರ್ಪಾಡು ಮಾಡಲು ₹5 ಸಾವಿರದಿಂದ ₹10 ಸಾವಿರ ಪಡೆದುಕೊಳ್ಳುತ್ತಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಬಳಿ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯದ ವಿಶ್ವವಿದ್ಯಾಲಯಗಳು ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಸೇರಿ ಅನೇಕ ಸರ್ಕಾರಿ ಇಲಾಖೆಯ ಮುದ್ರೆಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

70 ವಾಚ್‌ಗಳ ಜಪ್ತಿ

ಬೆಂಗಳೂರು: ಕೆಲಸ ಮಾಡುತ್ತಿದ್ದ ಲಾಜಿಸ್ಟಿಕ್ ಕಂಪನಿಯಲ್ಲಿ ದುಬಾರಿ ಬೆಲೆಯ ವಾಚ್‌ಗಳನ್ನು ಕಳವು ಮಾಡಿ ಆನ್‌ಲೈನ್‌ನ ವಿವಿಧ ವೇದಿಕೆಗಳ ಮೂಲಕ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೇಗೂರಿನ ಹೊಂಗಸಂದ್ರ ನಿವಾಸಿ ಶೇಷಾದ್ರಿರೆಡ್ಡಿ (27) ಬಂಧಿತ.

ಶೇಷಾದ್ರಿರೆಡ್ಡಿ

ಆರೋಪಿಯಿಂದ ₹10 ಲಕ್ಷ ಮೌಲ್ಯದ ಫಾಸಿಲ್, ಅರ್ಮಾನಿ, ಮೈಕೆಲ್ ಕೋರ್ಸ್ ಸೇರಿ ವಿವಿಧ ಕಂಪನಿಗಳ 70 ವಾಚ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆಂಧ್ರಪ್ರದೇಶದ ಶೇಷಾದ್ರಿ ರೆಡ್ಡಿ ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಎಲೆಕ್ಟ್ರಾನಿಕ್ ಸಿಟಿಯ ಎರಡನೇ ಹಂತದಲ್ಲಿರುವ ಲಾಜಿಸ್ಟಿಕ್ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ.

ಡೆಲಿವರಿಗಾಗಿ ಕಂಪನಿಯಿಂದ ವಾಚ್ ಬಾಕ್ಸ್ ಸ್ವೀಕರಿಸುತ್ತಿದ್ದ ಆರೋಪಿ, ಡೆಲಿವರಿಗೆ ಕೊಂಡೊಯ್ಯುವ ಮಾರ್ಗ ಮಧ್ಯೆಯೇ ಕೆಲವು ವಾಚ್‌ಗಳನ್ನು ಕಳವು ಮಾಡುತ್ತಿದ್ದ. ರಾತ್ರಿ ಕೆಲಸ ಮುಗಿಸಿಕೊಂಡು ಹೋಗುವಾಗಲೂ ವಾಚ್ ಬಾಕ್ಸ್ ಕಳ್ಳತನ ಮಾಡಿಕೊಂಡು ಹೋಗುತ್ತಿದ್ದ. ಇತ್ತೀಚೆಗೆ ಲಾಜಿಸ್ಟಿಕ್ ಕಂಪನಿಯ ಪ್ರತಿನಿಧಿಗಳು ವಾಚ್ ಬಾಕ್ಸ್ ಪರಿಶೀಲಿಸಿದಾಗ ಲಕ್ಷಾಂತರ ರೂಪಾಯಿ ಮೌಲ್ಯದ ವಾಚ್‌ಗಳು ನಾಪತ್ತೆ ಆಗಿದ್ದವು.

ಆರೋಪಿಯಿಂದ ಜಪ್ತಿ ಮಾಡಿಕೊಂಡ ವಾಚ್‌ಗಳನ್ನು ಪರಿಶೀಲಿಸಿದ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್

ಇದೇ ವೇಳೆ ಆರೋಪಿ ಏಕಾಏಕಿ ನಾಪತ್ತೆಯಾಗಿದ್ದ. ಹೀಗಾಗಿ, ಆತನ ಮೇಲೆ ಅನುಮಾನಗೊಂಡು ಆರೋಪಿ ವಿರುದ್ಧ ಕಂಪನಿಯ ವ್ಯವಸ್ಥಾಪಕರು ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿ ಕಳವು ಮಾಡಿದ್ದ ವಾಚ್‌ಗಳನ್ನು ತನ್ನ ಸ್ನೇಹಿತರ ಮೂಲಕ ಒಎಲ್‌ಎಕ್ಸ್‌ಗಳಲ್ಲಿ ಹಾಕಿ ಮಾರಾಟ ಮಾಡುತ್ತಿದ್ದ. ಇನ್ನೂ ಕೆಲವರಿಗೆ ರಸ್ತೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದ. ಬಂದ ಹಣದಲ್ಲಿ ಸ್ನೇಹಿತರ ಜತೆ ಸೇರಿ ಮೋಜು-ಮಸ್ತಿ ಮಾಡುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ರೌಡಿ ಸೇರಿ ಏಳು ಮಂದಿ ಸೆರೆ

ಬೆಂಗಳೂರು: ಪಿಸ್ತೂಲ್ ಹಾಗೂ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಅಪರಾಧ ಕೃತ್ಯ ಎಸಗಲು ಹೊಂಚು ಹಾಕುತ್ತಿದ್ದ ರೌಡಿ ಸೇರಿ ಏಳು ಆರೋಪಿಗಳನ್ನು ಸಿಸಿಬಿಯ ಸಂಘಟಿತ ಅಪರಾಧ ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಮೌಲಾ

ಸದ್ದಾಂ

ಮೌಲಾ ಅಲಿಯಾಸ್ ಡಾಂಬರ್ ಮೌಲಾ (40) ಸೈಯದ್ ಇಸಾಕ್, ಅಪ್ಸರ್ ಬಾಷಾ, ಶಹಬಾಜ್, ಇಬ್ರಾಹಿಂ, ಪರಮಾನ್, ಸೈಯದ್ ಸದ್ದಾಂ ಬಂಧಿತರು. ಬಂಧಿತರಿಂದ ಪಿಸ್ತೂಲ್, ಮಾರಕಾಸ್ತ್ರ ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮೌಲಾ ವಿರುದ್ಧ ಶಿಡ್ಲಘಟ್ಟ ಪೊಲೀಸ್ ಠಾಣೆಯಲ್ಲಿ ರೌಡಿ ಪಟ್ಟಿ ತೆರೆಯಲಾಗಿದೆ ಎಂದು ಪೊಲೀಸರು ಹೇಳಿದರು. ಸೆ.10ರಂದು ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ಳಹಳ್ಳಿ ಕ್ರಾಸ್‌ನಲ್ಲಿ ಪಿಸ್ತೂಲ್ ಹಾಗೂ ಮಾರಕಾಸ್ತ್ರ ಹಿಡಿದು ಎದುರಾಳಿ ತಂಡದ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊಂಚು ಹಾಕುತ್ತಿದ್ದ ಸಂದರ್ಭದಲ್ಲಿ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ.

ಬೆಂಕಿ ಅವಘಡ: ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಬೇಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಕೃಷ್ಣ ಲೇಔಟ್‌ನ ಮೂರನೇ ಕ್ರಾಸ್‌ನ ಮನೆಯೊಂದರಲ್ಲಿ ಸೋಮವಾರ ರಾತ್ರಿ ಸಂಭವಿಸಿದ ಬೆಂಕಿ ಅವಘಡದಲ್ಲಿ ನಾಲ್ವರು ಗಾಯಗೊಂಡಿದ್ದು, ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗೋಪಿ (49), ಶೀಲಾ (44), ರಮ್ಯಾ (28) ಹಾಗೂ ಅಭಿಷೇಕ್ (18) ಗಾಯಗೊಂಡವರು.

ಮನೆಯಲ್ಲಿ ಅಳವಡಿಸಿದ್ದ ಮೀಟರ್ ಬೋರ್ಡ್‌ನಲ್ಲಿ ಉಂಟಾದ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿತ್ತು. ಮೀಟರ್ ಸಮೀಪದಲ್ಲೇ ನಿಲುಗಡೆ ಮಾಡಿದ್ದ ಎರಡು ಎಲೆಕ್ಟ್ರಿಕ್ ಸ್ಕೂಟರ್‌ಗಳು ಬೆಂಕಿಗೆ ಆಹುತಿಯಾಗಿವೆ ಎಂದು ಪೊಲೀಸರು ಹೇಳಿದರು.

ಹೊಯ್ಸಳ ಸಿಬ್ಬಂದಿಯ ಸಾಹಸ: ಮೀಟರ್ ಬೋರ್ಡ್ ಬಳಿ ಕಾಣಿಸಿಕೊಂಡಿದ್ದ ಬೆಂಕಿಯನ್ನು ಗಮನಿಸಿದ್ದ ಸ್ಥಳೀಯರು ಹೊಯ್ಸಳ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಎಎಸ್‌ಐ ಸತೀಶ್ ಹಾಗೂ ಸಿಬ್ಬಂದಿ ಮಂಜು ಸ್ಥಳಕ್ಕೆ ತೆರಳಿ ಕೆಳಮಹಡಿಯಲ್ಲಿ ಸಿಲುಕಿಕೊಂಡಿದ್ದ ನಾಲ್ವರನ್ನು ಹೊರಕ್ಕೆ ಕರೆತರಲು ಯಶಸ್ವಿಯಾದರು. ಹೊಗೆಯಿಂದ ಅಸ್ವಸ್ಥಗೊಂಡಿದ್ದ ನಾಲ್ವರಿಗೆ ಜಯಶ್ರೀ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಯಿತು ಎಂದು ಮೂಲಗಳು ತಿಳಿಸಿವೆ.

ಕಂಪನಿ ಹಣ ಹೂಡಿಕೆಗೆ ಬಳಕೆ: ಎಫ್‌ಐಆರ್

ಮಾಜಿ ಅಧಿಕಾರಿ ವಿರುದ್ಧ ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಪನಿಗೆ ಸೇರಿದ ₹250 ಕೋಟಿಯನ್ನು ದುರುಪಯೋಗ ಮಾಡಿಕೊಂಡಿರುವ ಆರೋಪದ ಮೇರೆಗೆ ಗೇಮ್ಸ್‌ಕ್ರಾಫ್ಟ್ ಟೆಕ್ನಾಲಜೀಸ್‌ನ ಹಣಕಾಸು ವಿಭಾಗದ ಮಾಜಿ ಅಧಿಕಾರಿ ವಿರುದ್ಧ ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗೇಮ್ಸ್‌ಕ್ರಾಫ್ಟ್ ಟೆಕ್ನಾಲಜೀಸ್‌ನ ಉಪಾಧ್ಯಕ್ಷ ಗುಲ್ಸಾನ್ ಯಾದವ್ ಅವರು ನೀಡಿದ ದೂರು ಆಧರಿಸಿ ಹೆಬ್ಬಾಳದ ನಿವಾಸಿ ರಮೇಶ್ ಬಾಬು (47) ಅವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಂಪನಿ ಹಣವನ್ನು ರಮೇಶ್ ಬಾಬು ಅವರು ಟ್ರೇಡಿಂಗ್ ಕಂಪನಿಗಳಲ್ಲಿ ಹೂಡಿಕೆ ಮಾಡಿಕೊಂಡು ಅವ್ಯವಹಾರ ನಡೆಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಗೇಮ್ಸ್‌ಕ್ರಾಫ್ಟ್ ಟೆಕ್ನಾಲಜೀಸ್ ಆನ್‌ಲೈನ್ ಗೇಮ್ಸ್‌ಗೆ ಸಂಬಂಧಿಸಿದ ಕಂಪನಿ ಆಗಿತ್ತು. ಕೇಂದ್ರ ಸರ್ಕಾರವು ಇತ್ತೀಚೆಗೆ ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಕಾಯ್ದೆ-2025 ಜಾರಿಗೆ ತಂದ ಮೇಲೆ ಕಂಪನಿ ತನ್ನ ಕಾರ್ಯ ಚಟುವಟಿಕೆ ಸ್ಥಗಿತಗೊಳಿಸಿತ್ತು.

ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್‌ಗಳಾದ 316(4), 318(4), 335, 344, 336(2) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ರಮೇಶ್ ಬಾಬು ಅವರು ಕಳೆದ ನಾಲ್ಕು ವರ್ಷದಿಂದ ಕಂಪನಿ ಹಣವನ್ನು ತಮ್ಮ ಹೆಸರಿನಲ್ಲಿ ಹೂಡಿಕೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಆರೋಪಿ ರಮೇಶ್ ಬಾಬು ಅವರು ನಾಲ್ಕು ತಿಂಗಳ ಹಿಂದೆಯೇ ವಿದೇಶಕ್ಕೆ ಪರಾರಿಯಾಗಿರುವ ಮಾಹಿತಿ ಸಿಕ್ಕಿದೆ. ಆರೋಪಿಗೆ ನೋಟಿಸ್ ಜಾರಿಗೊಳಿಸಿ, ಮುಂದಿನ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ದಾಖಲೆ ಕಳ್ಳತನ: ಆರು ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ವಕೀಲರ ಕಚೇರಿಗೆ ನುಗ್ಗಿ ದಾಖಲೆಗಳನ್ನು ಕಳ್ಳತನ ಮಾಡಿದ್ದ ಆರೋಪದ ಮೇರೆಗೆ ಆರು ಮಂದಿಯ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಕೀಲ ಪ್ರೇಮ್ ಪ್ರಸಾದ್ ಶೆಟ್ಟಿ ಅವರು ನೀಡಿದ ದೂರು ಆಧರಿಸಿ ಮುರಳೀಧರ್ ಕೊಟ್ಯಾನ್, ಅರುಣ್‌ಕುಮಾರ್ ಕೋಟ್ಯಾನ್, ಎಂ.ಸಂದೇಶ, ರವೀಂದ್ರ ಡಿ. ಕುಂದರ್, ಇಂದುಮತಿ ಹಾಗೂ ಕಾಜಲ್ ಭಾಟಿಯಾ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಗುಂಪು ಕಟ್ಟಿಕೊಂಡು ಕಚೇರಿಗೆ ಅತಿಕ್ರಮ ಪ್ರವೇಶ ಮಾಡಿ, ಅಲ್ಲಿದ್ದ ದಾಖಲೆಗಳು ಮತ್ತು ಇನ್ನಿತರ ವಸ್ತುಗಳನ್ನು ಕಳ್ಳತನ ಮಾಡಲಾಗಿದೆ ಎಂದು ಆರೋಪಿಸಿ ದೂರು ನೀಡಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಹೈಗ್ರೌಂಡ್ಸ್ ಠಾಣೆಯ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಟರ್ಮಿನಲ್-2 ವಿಸ್ತರಣೆ ಶೀಘ್ರ ಆರಂಭ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2 ವಿಸ್ತರಣೆ ಯೋಜನೆ ಮುಂದಿನ ವರ್ಷ ಆರಂಭಗೊಳ್ಳಲಿದೆ.

40 ಏಪ್ರನ್ ಸ್ಟ್ಯಾಂಡ್‌ಗಳನ್ನು (ವಿಮಾನ ನಿಲ್ಲಿಸಿ ನಿರ್ವಹಣೆ ಮಾಡುವ ಜಾಗ) ನಿರ್ಮಿಸುವುದರೊಂದಿಗೆ ಟರ್ಮಿನಲ್ 1 ಮತ್ತು 2ಅನ್ನು ನೇರವಾಗಿ ಸಂಪರ್ಕಿಸುವ 28,000 ಚದರ ಮೀಟರ್ ಉದ್ದದ ಪಾದಚಾರಿ ಮಾರ್ಗ ಕೂಡ ಸಿದ್ಧವಾಗಲಿದೆ ಎಂದು ಬಿಐಎಎಲ್ ವಕ್ತಾರರು ತಿಳಿಸಿದ್ದಾರೆ.

ಬಿ.ಎಂ.ಶ್ರೀ ಪ್ರತಿಷ್ಠಾನದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶ್ರೀನಿವಾಸ್ ಜಿ. ಕಪ್ಪಣ್ಣ ಅವರಿಗೆ 'ಸಾವಿತ್ರಮ್ಮ– ಪ್ರೊ.ಎಂ.ವಿ.ಸೀತಾರಾಮಯ್ಯ ಸಾಂಸ್ಕೃತಿಕ ಸಂಘಟಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಆರ್ ಲಕ್ಷ್ಮೀನಾರಾಯಣ, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್, ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಮತ್ತು ಅಧ್ಯಕ್ಷ ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಪದಾಧಿಕಾರಿಗಳ ಪದಗ್ರಹಣ ಸಮಾರಂಭ: ಆಯೋಜನೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಸ್ಥಳ: ಜಯದೇವ ವೀರಶೈವ ಭೌನ, ನೆಲಮಂಗಲ, ಬೆಳಿಗ್ಗೆ 10.30

ಮಾಧ್ಯಮ ಸಮ್ಮೇಳನ, ಪತ್ರಕರ್ತರ ಆರೋಗ್ಯ ನಿಧಿಯ ಉದ್ಘಾಟನೆ: ಕೆ.ವಿ. ಪ್ರಭಾಕರ್, ಎಸ್. ಮುನಿರಾಜು, ಎಸ್.ಆರ್. ವಿಶ್ವನಾಥ್, ಟಿ.ಎನ್. ಜವರಾಯಿಗೌಡ, ಆರ್. ಮಂಜುನಾಥ್, ಅಧ್ಯಕ್ಷತೆ: ಎಚ್.ಆರ್. ರವೀಶ್, ಅತಿಥಿಗಳು: ಆಯೇಷಾ ಖಾನಂ, ಪಿ. ತ್ಯಾಗರಾಜ್, ಲಕ್ಷ್ಮೀ ನಾರಾಯಣ, ಆಯೋಜನೆ: ದಾಸರಹಳ್ಳಿ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಪೀಣ್ಯ ಕೈಗಾರಿಕಾ ಸಂಘ, ಜಾಲಹಳ್ಳಿ ಕ್ರಾಸ್, ಪೀಣ್ಯ ಕೈಗಾರಿಕಾ ಪ್ರದೇಶ, ಬೆಳಿಗ್ಗೆ 11

ಕಾವೆಂಶ್ರೀ ಭಾವಯಾನ-ಗಾಯನ ಮತ್ತು ನೃತ್ಯ ಕಾರ್ಯಕ್ರಮ: ಅತಿಥಿಗಳು: ಡಿ. ಉಮಾಶಂಕರ್, ಆರ್. ಚಂದ್ರಶೇಖರ್, ಆಯೋಜನೆ: ಸಮೃದ್ಧಿ ಸಂಗೀತ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

ತಿಂಗಳ ನೆನಪು-ವೀರ ಕನ್ನಡಯೋಧ ಸ.ರ. ಸುದರ್ಶನ: ಅಧ್ಯಕ್ಷತೆ: ಮಾನಸ, ಭಾಗವಹಿಸುವವರು: ಟಿ.ಆರ್. ಅನಂತರಾಮು, ರಾ.ನಂ. ಚಂದ್ರಶೇಖರ, ಆರ್. ಶೇಷಶಾಸ್ತ್ರಿ, ಮ. ಚಂದ್ರಶೇಖರ, ಸ್ಮಿತಾರೆಡ್ಡಿ, ನುಡಿ ಸುದರ್ಶನ, ವ.ಚ. ಚನ್ನೇಗೌಡ, ಅಶ್ವತ್ಥನಾರಾಯಣ, ಬಿ.ವಿ. ರವಿಕುಮಾರ್, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನಾಚರಣೆ, ವಿವಿಧ ಪ್ರಶಸ್ತಿ ಪ್ರದಾನ: ಟಿ.ವಿ. ವೆಂಕಟಾಚಲಶಾಸ್ತ್ರಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪನ್ಯಾಸ: ಮಂಡಗದ್ದೆ ಶ್ರೀನಿವಾಸಯ್ಯ, ಉಪಸ್ಥಿತಿ: ವರದಾ ಶ್ರೀನಿವಾಸ್, ಪ್ರಸನ್ನ ಕರ್ಪೂರ್, ಪ್ರಶಸ್ತಿ ಸ್ವೀಕರಿಸುವವರು: ಬಿ.ಎಸ್. ಪ್ರಣತಾರ್ತಿಹರನ್, ಗಿರಿಜಾ ರಾಜ್ ಎಲ್., ಸಂಪಟೂರು ವಿಶ್ವನಾಥ್, ಶ್ರೀವತ್ಸ ಎಸ್. ವಟಿ, ವೇದಾ ಸಿ. ಬಿರಾದರ್, ನೇತ್ರಾವತಿ ಜಿ., ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ವಿಶ್ವಕರ್ಮ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಶಿವಸುಜ್ಞಾನತೀರ್ಥ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5 (ವೇದಿಕೆ ಕಾರ್ಯಕ್ರಮ 6ಕ್ಕೆ)

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂ.: 210/Halts/DBS Halt/2025/SBC Division
ದಿನಾಂಕ: 02.09.2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗೆ ಸಹಿ ಮಾಡಿದವರು, ಡಾಬಸ್‌ಪೇಟೆ (ಡಿಬಿಎಸ್) ರೈಲು ನಿಲ್ದಾಣ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿಗಳಿಂದ ಐದು (05) ವರ್ಷಗಳ ಅವಧಿಗೆ ಅಥವಾ ನಿಲ್ದಾಣವನ್ನು ಉನ್ನತೀಕರಣಗೊಳಿಸುವವರೆಗೆ ಯಾವುದು ಮೊದಲೇ ಅದರಂತೆ ಕಮಿಷನ್ ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್‌ಗಳನ್ನು ವಿತರಿಸುವ ಸಲುವಾಗಿ ಹಾಲ್ಟ್ ಏಜೆಂಟ್‌ಗಳ ನೇಮಕಾತಿಗಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸುತ್ತಾರೆ.

ಕ್ರ.ಸಂ.	ನಿಲ್ದಾಣದ ಹೆಸರು	ವಿಭಾಗ	ಕಾರ್ಯಾರಂಭಗೊಳಿಸುವ ದಿನಾಂಕ
1.	ಡಾಬಸ್‌ಪೇಟೆ (ಡಿಬಿಎಸ್)	ಯಶವಂತಪುರ	ದಿನಾಂಕವನ್ನು ಆಡಳಿತ ಮಂಡಳಿಯಿಂದ ಸೂಚಿಸಲಾಗುವುದು

ಅರ್ಜಿಗಳನ್ನು ಸಲ್ಲಿಸಬೇಕಾದ ದಿನಾಂಕ ಮತ್ತು ಸಮಯ:
06.10.2025 ರಂದು 10:00 ರಿಂದ 16:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಬೆಂಗಳೂರು

PUB/439/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು - 560 064
ವೆಬ್‌ಸೈಟ್: www.rwf.indianrailways.gov.in

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಯಾಂತ್ರಿಕ ಇಂಜಿನಿಯರ್ ಈ ಕೆಳಕಂಡ ಕೆಲಸಗಳಿಗಾಗಿ ಆನ್‌ಲೈನ್ ವೆಬ್‌ಸೈಟ್:http://www.ireps.gov.in(Works) ಮೂಲಕ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಸಂಖ್ಯೆ : ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಡಬ್ಲ್ಯೂಎಫ್‌ಪಿಎಸ್/2025–26/43. ದಿನಾಂಕ: 12/09/2025
ಕೆಲಸದ ವಿವರ: ನೀರಿನ ಪೈಪ್‌ಲೈನ್‌ಗಳ ಮಾರ್ಗ ಬದಲಾವಣೆ ಮತ್ತು ಡ್ರಾ ಫರ್ನೇಸ್‌ನ ಕೂಲಿಂಗ್ ಬ್ಲೋವರ್‌ನ ಸರ್ವೀಸ್ ಮತ್ತು ನಾರ್ಮಲೈಸಿಂಗ್ ಫರ್ನೇಸ್‌ನಲ್ಲಿ ಚಿಮಣಿಗಳಿಗೆ ಬಣ್ಣ ಬಳಿಯುವುದು. ಅಂದಾಜು ಮೌಲ್ಯ ರೂ. 418300/– ಇ.ಎಂ.ಡಿ: ರೂ. 8400/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 04/10/2025, 10.30 ಗಂಟೆಯವರೆಗೆ. ಪೂರ್ಣಗೊಳ್ಳುವ ಅವಧಿ: 06 ತಿಂಗಳು

ಇ–ಟೆಂಡರ್ ಸಂಖ್ಯೆ:ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಡಬ್ಲ್ಯೂಎಫ್‌ಪಿಎಸ್/2025–26/46ಆರ್‌ಟಿ. ದಿನಾಂಕ: 12/09/2025
ಕೆಲಸದ ವಿವರ: 2025–26ನೇ ಸಾಲಿನ ವೀಲ್ ಷಾಪ್ ಸಲಕರಣೆಗಳ ವಾರ್ಷಿಕ ನಿರ್ವಹಣೆ (ವೀಲ್‌ಗಳ ನಿರ್ವಹಣೆ ಅಂತಿಮ ಪ್ರಕ್ರಿಯೆ), ಗುಂಪು–9 ಶುಚಿಗೊಳಿಸುವ ಯಂತ್ರ–2, ಪೀನಿಂಗ್ ಯಂತ್ರ 1 ಮತ್ತು 2, ಡಬ್ಲ್ಯೂಎಫ್‌ಪಿಎಸ್ ಕನ್ವೇಯರ್‌ಗಳು.ಅಂದಾಜು ಮೌಲ್ಯ ರೂ. 23,57,478/– ಇ.ಎಂ.ಡಿ : ರೂ.47,100/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 03/10/2025, 10.30 ಗಂಟೆಯವರೆಗೆ. ಪೂರ್ಣಗೊಳ್ಳುವ ಅವಧಿ: 04 ತಿಂಗಳು

ಇ–ಟೆಂಡರ್ ಸಂಖ್ಯೆ:ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಂಎಂಆರ್/2025–26/48ಆರ್‌ಟಿ. ದಿ: 12/09/2025
ಕೆಲಸದ ವಿವರ: ಗುಂಪು–6ರ ಮೌಲ್ಡ್ ರೂಮ್ ಸಲಕರಣೆಗಳ ವಾರ್ಷಿಕ ನಿರ್ವಹಣೆ ಕಾಮಗಾರಿಗಳು, ಅಂದಾಜು ಮೌಲ್ಯ ರೂ. 4011678/– ಇ.ಎಂ.ಡಿ: ರೂ.80,200/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 03/10/2025, 10.30 ಗಂಟೆಯವರೆಗೆ. ಪೂರ್ಣಗೊಳ್ಳುವ ಅವಧಿ: 04 ತಿಂಗಳು DY. CME/W-II

ಇ–ಟೆಂಡರ್ ಸಂಖ್ಯೆ:ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಸ್‌ಎಂಎಸ್/2025–26/47.ದಿನಾಂಕ: 11/09/2025
ಕೆಲಸದ ವಿವರ: ಕುಲುಮೆಗೆ ಬೇಕಾಗುವ, ಚಾರ್ಜಿಂಗ್, ಸ್ಲಾಗ್ ಸ್ಲಾಟ್ ಕ್ಲಿಯರಿಂಗ್ ಮತ್ತು ಮೆಲ್ಟ್ ಶಾಪ್‌ನಲ್ಲಿರುವ ಕೇಂದ್ರಗಳಿಗೆ ಕೆಲಸಕ್ಕೆ ಬೇಕಾಗುವ ವಸ್ತುಗಳನ್ನು ವರ್ಗಾಯಿಸುವುದು, ಅಂದಾಜು ಮೌಲ್ಯ ರೂ. 7830384/– ಇ.ಎಂ.ಡಿ : ರೂ.1,56,600/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 03/10/2025, 10.30 ಗಂಟೆಯವರೆಗೆ. ಪೂರ್ಣಗೊಳ್ಳುವ ಅವಧಿ: 24 ತಿಂಗಳು DY. CME/Melting

ಇ–ಟೆಂಡರ್ ಸಂಖ್ಯೆ:ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಸ್‌ಎಂಎಸ್/2025–26/39.ದಿನಾಂಕ: 16/09/2025
ಕೆಲಸದ ವಿವರ: ಆರ್‌ಡಬ್ಲ್ಯೂಎಫ್ ನಿಂದ ಶೂನ್ಯ ಮೌಲ್ಯದ ತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿ. ಅಂದಾಜು ಮೌಲ್ಯ ರೂ.81,42,000/– ಇ.ಎಂ.ಡಿ : ರೂ.1,62,800/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 08/10/2025, 10.30 ಗಂಟೆಯವರೆಗೆ. ಪೂರ್ಣಗೊಳ್ಳುವ ಅವಧಿ: 24 ತಿಂಗಳು DY. CME/AM

ಈ ಟೆಂಡರ್ ಸೂಚನೆಗಳು ಮತ್ತು ಅರ್ಹತಾ ಮಾನದಂಡಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. www.rwf.indianrailways.gov.in

29ನೇ ವರ್ಷದ ಚಿರಸ್ಮರಣೆ

ಶ್ರೀ ಗುತ್ತಲಗೌಡರು
(ಮಾಜಿ ಅಧ್ಯಕ್ಷರು, ಒಕ್ಕಲಿಗರ ಸಂಘ)
ಜನನ: 13.01.1917 | ನಿಧನ: 17.09.1996

ನೀವು ನಮ್ಮನ್ನಗಲಿ 29 ವರ್ಷವಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುವ,
ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಕುಟುಂಬವರ್ಗದವರು

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಶಾಂತಿನಗರ ವಿಭಾಗ,
9ನೇ ಮಹಡಿ, ಪಿಯು ಕಟ್ಟಡ, ಬೆಂಗಳೂರು – 560 001

ಸಂಖ್ಯೆ: ಕಾಪಾಅ/ಶಾನ/ಇಒಐ–01/2025–26 ದಿನಾಂಕ: 16.09.2025

ಆಸಕ್ತಿ ವ್ಯಕ್ತಪಡಿಸುವಿಕೆ [ಇಒಐ]

ಹೊಸದಾಗಿ ರಚಿತವಾಗಿರುವ ನಾಲ್ಕು [4] ನಗರಪಾಲಿಕೆಗಳಿಗೆ [ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ] ಅಗತ್ಯ ಪೂರೈಕೆಗಳೊಂದಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಡಳಿತ ಕಚೇರಿ ಕಟ್ಟಡದ [ಜಿಬಿಎ] ವಿನ್ಯಾಸಕ್ಕಾಗಿ ಅರ್ಹ ವಾಸ್ತುಶಿಲ್ಪ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಲಾಗಿದೆ. ಸಂಸ್ಥೆಗಳು ಸಲ್ಲಿಸುವ ವಿನ್ಯಾಸಗಳು, ಸಮಗ್ರ ವಿಧಾನ, ಹಲವು–ಶಿಸ್ತುಬದ್ಧ ಚಟುವಟಿಕೆಗಳು ಮತ್ತು ಸಮರ್ಥನೀಯತೆಯನ್ನು ಹೊಂದಿರಬೇಕು. ಸಲ್ಲಿಸುವ ವಿನ್ಯಾಸಗಳು ಉದ್ದೇಶಿತ ಆಡಳಿತಾತ್ಮಕ ನಗರಸಭೆ ಕಟ್ಟಡಗಳು ಜಿಬಿಎ ವ್ಯಾಪ್ತಿ ಸಮಗ್ರತೆಯನ್ನು ಒಳಗೊಂಡಿರಬೇಕು. ವಿನ್ಯಾಸಗಳು ಕಡ್ಡಾಯವಾಗಿ ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು.

■ **ಸ್ಟೇಟ್–ಆಫ್–ದ–ಆರ್ಟ್ ವಿನ್ಯಾಸ** ■ ವಿಶೇಷ **ಮಾದರಿ ಮತ್ತು ಸ್ಥಳೀಯ ಸಂಸ್ಕೃತಿಯ** ಮಿಶ್ರಣದ ಸೊಬಗಿನಿಂದ ಕೂಡಿರಬೇಕು. ■ **ಜಲ ನಿರ್ವಹಣೆ, ತ್ಯಾಜ್ಯ ನಿರ್ವಹಣೆ, ಲ್ಯಾಂಡ್‌ಸ್ಕೇಪ್ ವಾಸ್ತುಶಿಲ್ಪ** ಮತ್ತು ಇಂಧನ ಸಾಮರ್ಥ್ಯಕ್ಕೆ ಒತ್ತು ನೀಡುವುದರೊಂದಿಗೆ ಪರಿಸರ ಸ್ನೇಹಿ ನಿಲುವನ್ನು ಹೊಂದಿರಬೇಕು.

ಆಸಕ್ತಿ ವ್ಯಕ್ತಪಡಿಸುವಿಕೆಯ ವಿವರಗಳು – ಆಸಕ್ತ ವಾಸ್ತುಶಿಲ್ಪಿಗಳು/ಸಂಸ್ಥೆಗಳ ವಿಸ್ತೃತ ಸ್ವ–ವಿವರಗಳನ್ನು ಈ ಕೆಳಕಂಡ ವಿವರಣೆಗಳೊಂದಿಗೆ ಸಲ್ಲಿಸುವುದು: (1) ಸಂಸ್ಥೆಯ ಪ್ರೊಫೈಲ್ (2) ನೋಂದಣಿ ಪ್ರಮಾಣಪತ್ರಗಳು [ಐ.ಐ.ಎ, ಸಿಒಎ, ಬೆಂಗಳೂರು ನಗರ ಪಾಲಿಕೆ] (3) ಮೇಲ್ಕಂಡಂತೆ ತದ್ರೂಪಿ ಕಾಮಗಾರಿಗಳನ್ನು ನಿರ್ವಹಿಸಿರುವ ಅನುಭವ (4) ಉದ್ದೇಶಿತ ರಚನಾತ್ಮಕ ತಂಡ (5) ಸಮರ್ಥತೆ ಮತ್ತು ವಿನ್ಯಾಸ ತತ್ವಗಳ ದೃಷ್ಟಿಕೋನ (6) ಅರ್ಜಿದಾರರ ವಿವರಗಳೊಂದಿಗೆ ಆಸಕ್ತಿ ಹೊಂದಿರುವ ಪತ್ರ (7) ತದ್ರೂಪಿ ವಿನ್ಯಾಸ ಕೆಲಸಗಳ ಸಮಗ್ರ ವರದಿ (8). ದೃಷ್ಟಿಕೋನ ಮತ್ತು ಕಾರ್ಯನಿರ್ವಹಣೆ ವಿಧಾನವನ್ನು ಬಿಂಬಿಸುವ ತಾಂತ್ರಿಕ ಪ್ರಸ್ತಾವನೆ (9) ಮಹಾಯೋಜನೆ (10) ವಾಸ್ತುಶಿಲ್ಪಗಳ ವಿನ್ಯಾಸ (11) ರಚನಾತ್ಮಕ ವಿನ್ಯಾಸಗಳು (12) ಪಿಹೆಚ್‌ಇ ವಿದ್ಯುತ್ ಲ್ಯಾಂಡ್‌ಸ್ಕೇಪ್ ಇತ್ಯಾದಿಗಳನ್ನು ಒಳಗೊಂಡಂತೆ ಮೂಲಭೂತ ಸೌಕರ್ಯಗಳ ವಿನ್ಯಾಸಗಳು.

ಆಯ್ಕೆ ಪ್ರಕ್ರಿಯೆ

1. ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಅನುಭವ, ಪರಿಕಲ್ಪನೆ/ಸೃಜನತೆ, ಹಿಂದಿನ ಕಾಮಗಾರಿಗಳು ಮತ್ತು ಉದ್ದೇಶಿತ ಕಾರ್ಯವಿಧಾನಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು. 2. ಅಂತಿಮ ಪೂರ್ವ ಅಭ್ಯರ್ಥಿಗಳನ್ನು ಪ್ರಾತ್ಯಕ್ಷಿತೆಗೆ ಆಹ್ವಾನಿಸಲಾಗುವುದು. 3. ಅಂತಿಮ ಆಯ್ಕೆಯ ನಂತರ ಅಭ್ಯರ್ಥಿ/ಸಂಸ್ಥೆಗಳಿಗೆ ತಿಳಿಸಲಾಗುವುದು.

ಅರ್ಹತಾ ಮಾನದಂಡಗಳು

ವಾಸ್ತುಶಿಲ್ಪಿಗಳು/ಸಂಸ್ಥೆಗಳು ಭಾರತೀಯ ವಾಸ್ತುಶಿಲ್ಪ ಸಂಸ್ಥೆಯ ಸದಸ್ಯರಾಗಿರಬೇಕು ಮತ್ತು ಬೆಂಗಳೂರು ನಗರಪಾಲಿಕೆಯಲ್ಲಿ ನೋಂದಣಿಯಾಗಿರಬೇಕು. ಮುಖ್ಯ ವಾಸ್ತುಶಿಲ್ಪಿ ಕನಿಷ್ಠ 15 ವರ್ಷಗಳ ಅನುಭವ ಹೊಂದಿರಬೇಕು ಮತ್ತು ಅನುಭವವನ್ನು ವಾಸ್ತುಶಿಲ್ಪ ಪರಿಷತ್ತಿನಲ್ಲಿ [ಸಿಒಎ] ನೋಂದಣಿಯಾದ ದಿನಾಂಕದಿಂದ ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಕೆಯ ದಿನಾಂಕದವರೆಗೆ ಪರಿಗಣಿಸಲಾಗುವುದು. ವಾಸ್ತುಶಿಲ್ಪಿಗಳು/ಸಂಸ್ಥೆಗಳು ಕಳೆದ 5 ವರ್ಷಗಳಲ್ಲಿ ಒಂದು ಕಟ್ಟಡದ ಕನಿಷ್ಠ ಮೊತ್ತ ರೂ. 25.00 ಕೋಟಿಗಳ ಯೋಜನೆಯ ವಿನ್ಯಾಸವನ್ನು ಮಾಡಿರತಕ್ಕದ್ದು.

ಉದ್ದೇಶಿತ ಕಟ್ಟಡದ ಅಂದಾಜು ಪ್ರದೇಶವು ಸುಮಾರು 50 ರಿಂದ 60 ಸಾವಿರ ಚದರ ಅಡಿಗಳಷ್ಟಿರುತ್ತದೆ. ಪರಿಸರ ಸಮರ್ಥತೆ, ನೀರು ಮತ್ತು ತ್ಯಾಜ್ಯ ನಿರ್ವಹಣೆ, ಲ್ಯಾಂಡ್‌ಸ್ಕೇಪ್ ವಿನ್ಯಾಸಗಳಲ್ಲಿ ನೈಪುಣ್ಯತೆ ಮತ್ತು ಇತರೆ ಪ್ರಚಲಿತ ಸಂಬಂಧಿತ ವಿದ್ಯಾಮಾನಗಳನ್ನು ಕಡ್ಡಾಯವಾಗಿ ಹೊಂದಿರಬೇಕು.

ವಾಸ್ತುಶಿಲ್ಪಿಗಳು/ಸಂಸ್ಥೆಗಳು, ಕಚೇರಿಯಲ್ಲಿ ಸಮಾಲೋಚಕ ಸೇವೆಗಳನ್ನು ಕಡ್ಡಾಯವಾಗಿ ಹೊಂದಿರಬೇಕು ಅಥವಾ ಸಮಾಲೋಚಕ ಅಭಿವೃದ್ಧಿ ಕೇಂದ್ರ (ಸಿಡಿಸಿ) ಅಡಿಯಲ್ಲಿ ನೋಂದಾಯಿತ, ಅರ್ಹರಾದ ಬಾಹ್ಯ ಸಮಾಲೋಚಕರನ್ನು ಹೊಂದಿರಬೇಕು.

ವೇಳಾಪಟ್ಟಿ:

■ ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **19–09–2025**ರ ಮಧ್ಯಾಹ್ನ **3:30** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ (ಸಿವಿಲರ್ ವಲಯ) ಬಿಸಿಸಿಸಿ, 18ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಕಟ್ಟಡ, ಬೆಂಗಳೂರು –560001 ಇಲ್ಲಿ ನಡೆಸಲಾಗುವುದು ■ ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಸಲು ಕೊನೆಯ ದಿನಾಂಕ: **23–09–2025** ಸಂಜೆ **4:00** ಗಂಟೆಯವರೆಗೆ ■ ಅಂತಿಮಪೂರ್ವ ಪಟ್ಟಿ ಮತ್ತು ಪ್ರಾತ್ಯಕ್ಷಿತೆಯನ್ನು ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಕೆಯ ಕೊನೆಯ ದಿನಾಂಕದ ನಂತರ 5 ದಿನಗಳೊಳಗಾಗಿ ನಡೆಸಲಾಗುವುದು.

ಸಂಪರ್ಕ ಮಾಹಿತಿ: ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬಿಸಿಸಿಸಿ, 9 ನೇ ಮಹಡಿ, ಪಿ ಯು ಕಟ್ಟಡ, ಎಂ ಜಿ ರಸ್ತೆ ಬೆಂಗಳೂರು.

ಷರತ್ತು ಮತ್ತು ನಿಬಂಧನೆಗಳು:

1. ಸಲ್ಲಿಕೆಯಾಗುವ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕುಗಳನ್ನು ಜಿಬಿಎ ಕಾಯ್ದಿರಿಸಿಕೊಂಡಿದೆ. 2. ಅಂತಿಮ ವಿನ್ಯಾಸದ ಎಲ್ಲಾ ಭೌತಿಕ ಆಸ್ತಿ ಹಕ್ಕಗಳು ಜಿಬಿಎ ಬಳಿಯಲ್ಲಿಯೇ ಇರುತ್ತದೆ. 3. ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಿದ್ದಪಡಿಸುವಾಗ ಅರ್ಜಿದಾರರು ಮಾಡುವ ಯಾವುದೇ ವೆಚ್ಚವನ್ನು ಪಾವತಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ

ದಾಖಲೆ ಕಳೆದಿದೆ

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ಟೌನ್, ಮನೆ ನಂ. 1227/5, ವಿ.ವಿ.ಪುರಂ ಈ ವಿಳಾಸದಲ್ಲಿ ವಾಸಿಯಾದ ಲೇಟ್ ನಂಜುರೆಡ್ಡಿರವರ ಮಗನಾದ ಸುಮಾರು 64 ವರ್ಷ ವಯಸ್ಸುಳ್ಳ ಎನ್.ಗಂಗರೆಡ್ಡಿ ಆದ ನಾನು ಈ ಮೂಲಕ ಸತ್ಯವಾಗಿ ಪ್ರಮಾಣೀಕರಿಸುವುದೇನೆಂದರೆ: ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿಯಾಗಿರುತ್ತೇನೆ. ನಾನು ತಾ॥ 13.7.2025 ರಂದು ಜಮೀನು ದಾಖಲೆ ರಿಜಿಸ್ಟರ್ ನಂ.GBD-1-04999-2010-11 ಸದರಿ ದಾಖಲೆ ಶ್ರೀ ಎ.ಕೃಷ್ಣರೆಡ್ಡಿರವರ ಹೆಸರಿನಲ್ಲಿದ್ದು, GBD-1-02362-2009-10 ಸದರಿ ದಾಖಲೆ ಶ್ರೀ ವೈ.ರಮೇಶ್ ರವರ ಹೆಸರಿನಲ್ಲಿದ್ದು GBD-1-004088-2007-08 ಸದರಿ ದಾಖಲೆ ಶ್ರೀಮತಿ ಅನಿತಾರವರ ಹೆಸರಿನಲ್ಲಿದ್ದು ಈ ಮೂರು ದಾಖಲೆಗಳು ಸದರಿ ನನ್ನ ಮಗಳ ಮಾವನವರಾದ ಶ್ರೀ ಎ.ಕೃಷ್ಣರೆಡ್ಡಿರವರಿಗೆ ಸಂಬಂಧಿಸಿದ ದಾಖಲೆಗಳಾಗಿದ್ದು ಆಕಸ್ಮಿಕವಾಗಿ ಗೌರಿಬಿದನೂರು ಬಸ್ ನಿಲ್ದಾಣದಲ್ಲಿ ಸದರಿ ದಾಖಲೆಗಳನ್ನು ಅವರಿಗೆ ನೀಡಲು ಅವರ ಊರಿಗೆ ಪ್ರಯಾಣ ಮಾಡಲು ಬಸ್ಸಿಗಾಗಿ ಕಾಯುತ್ತಿದ್ದಾಗ ಕಳೆದುಹೋಗಿರುತ್ತದೆ. ಆದ್ದರಿಂದ ಕಳೆದುಹೋಗಿರುವುದು ಸತ್ಯವಾಗಿರತ್ತದೆಂದು ವಕೀಲರು ಹಾಗೂ ನೋಟರಿ ಆದ ಎನ್.ಎಸ್.ಅಶೋಕ್ ಕುಮಾರ್ ರವರ ಮುಂದೆ ತಾ: 14.07.2025 ರಂದು ಪ್ರಮಾಣೀಕರಿಸುತ್ತೇನೆ.

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ ಮತ್ತು ಜಾಹೀರಾತು ಹಾಗೂ ವಿವಿಧ ಗುತ್ತಿಗೆಗಳಿಗಾಗಿ ಇ–ಹರಾಜು

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ದಿನಾಂಕಗಳಲ್ಲಿ ನಡೆಯುವ ಇ–ಹರಾಜುಗಳಿಗೆ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ.

1. ಊಟೋಪಹಾರ ಮತ್ತು ಎಂಪಿಎಸ್ ಮಳಿಗೆಗಳು : 18.09.2025, 19.09.2025, 22.09.2025, 23.09.2025, 24.09.2025, 25.09.2025, 26.09.2025, 30.09.2025, 03.10.2025, 06.10.2025, 07.10.2025
2. ಪಾರ್ಕಿಂಗ್ & ಪಾವತಿಸಿ ಮತ್ತು ಬಳಸಿ : 19.09.2025, 26.09.2025
3. ಪಾರ್ಸೆಲ್ : 18.09.2025, 19.09.2025, 22.09.2025
4. ಜಾಹೀರಾತು ಎಟಿಎಂ ಮತ್ತು ವಿವಿಧ : 19.09.2025, 22.09.2025, 25.09.2025, 26.09.2025, 29.09.2025, 30.09.2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಪಿಯುಬಿ/471/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26 ಬೆಂಗಳೂರು

South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 21–ಸಿಡಬ್ಲ್ಯುಎಂ–ಯುಬಿಎಲ್‌ಎಸ್–2025–26
ದಿನಾಂಕ : 10–09–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕ್ಯಾರೇಜ್ ದುರಸ್ತಿ ಕಾರ್ಯಾಗಾರ, ಹುಬ್ಬಳ್ಳಿಯಲ್ಲಿ ಬಳಕೆಯಾಗುವ ಅಳತೆಯ ಗೇಜ್‌ಗಳು / ಉಪಕರಣಗಳ ಕ್ಯಾಲಿಬ್ರೇಷನ್.	ರೂ. 18,03,757.89

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :
03–10–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಉಪ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು
ಪಿಯುಬಿ/469/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26 ಹುಬ್ಬಳ್ಳಿ

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

ಸಿಸಿಎಚ್33 33ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು, ಕರ್ನಾಟಕ ಇವರ ಸಮ್ಮುಖದಲ್ಲಿ
ಆರೋಪಿತ ವ್ಯಕ್ತಿಯ ಹಾಜರಾತಿಯ ಅವಶ್ಯಕತೆ ಕುರಿತಾದ ಘೋಷಣೆ
{ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 84ರ ಅಡಿಯಲ್ಲಿ}
ಎಸ್‌ಪಿಎಲ್.ಸಿ/1267/2019
/ಬಿಜೆಡ್‌ಯು 48/1/5/2019

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ (ಎನ್‌ಸಿಬಿ), ಭಾರತ ಸರ್ಕಾರ
ಪ್ರಸ್ತುತಪಡಿಸುವವರು ಐಒ, ಬೆಂಗಳೂರು ಜೋನಲ್ ಯೂನಿಟ್, 7–1/2, ಪ್ರಿಯಾಂಕ ವಿಲ್ಲಾಸ್, ಬಾಗಲೂರು ಮುಖ್ಯರಸ್ತೆ, ಬೆಂಗಳೂರು, ಕರ್ನಾಟಕ–560063
ವಿರುದ್ಧ
ಎ1 ಸಲ್ಮಾನ್ ಸಲೀಂ ಶೇಖ್

ಅದಾಗ್ಯೂ, ನನ್ನ ಎದುರು ಒಂದು ದೂರು ದಾಖಲಾಗಿದ್ದು, ಸದರಿ ದೂರಿನಲ್ಲಿ ಎ1 ಸಲ್ಮಾನ್ ಸಲೀಂ ಶೇಖ್, ವಯಸ್ಸು–0, ವಿಳಾಸ ರೂಮ್ ನಂ. 3 ಮದರ ಚಿಲಾ ಹಮಿ ಕಾಂಪೌಂಡ್ ಬಾಲು ಸ್ಟ್ರೀಟ್ ಬಜಾರ್ ಹಿಂಭಾಗ ಮಾಂಡ್ವಿ ಮುಂಬೈ ಅಲಿಸ್ ಮತ್ತೊಂದು ವಿಳಾಸ ಕೇರಾಫ್ ನಂ. 1/1ನೇ ಕ್ರಾಸ್, ಬನ್ನಿಮಂಟಪ ಟಿಪ್ಪು ಮಸೀದಿ ಸಮೀಪ, ಮೈಸೂರು ಎಂಬ ಆಸಾಮಿಯು ಎಂದು ಎನ್‌ಡಿಪಿಎಸ್ ಆಕ್ಟ್‌ನ ಸೆಕ್ಷನ್ 8(ಸಿ), 8(ಎ), 20(ಬಿ)(2)(ಬಿ), 23(ಬಿ), 28, 29ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ (ಅಪರಾಧ ಎಸಗಿರುವ ಗುಮಾನಿ ಮೇರೆಗೆ) ಪ್ರಕರಣ ದಾಖಲಾಗಿರುತ್ತದೆ ಮತ್ತು ಸದರಿ ಪ್ರಕರಣವು ಬಂಧನ ವಾರಂಟ್ ಹೊರಡಿಸುವ ಹಂತಕ್ಕೆ ತಲುಪಿದ್ದು, ಸದರಿ ಎ1 ಸಲ್ಮಾನ್ ಸಲೀಂ ಶೇಖ್ ಎಂಬ ಆಸಾಮಿಗೆ ಬಂಧನ ವಾರಂಟ್ ಹೊರಡಿಸಲಾಗಿದ್ದು, ಸದರಿ ವಾರಂಟ್ ಬಟವಾಡೆಗೊಳ್ಳದೆ ಮರಳಿ ಬಂದಿರುತ್ತವೆ ಹಾಗೂ ಇದರಿಂದಾಗಿ ಎ1 ಸಲ್ಮಾನ್ ಸಲೀಂ ಶೇಖ್ ಎಂಬ ಆಸಾಮಿ ತಲೆಮರೆಸಿಕೊಂಡಿದ್ದಾನೆ (ಅಥವಾ ಸದರಿ ವಾರಂಟ್ ಸ್ವೀಕರಿಸುವುದನ್ನು ತಡೆಗಟ್ಟಲು ಆತ ತನ್ನನ್ನು ತಾನು ಅಡಗಿಸಿಟ್ಟುಕೊಂಡಿದ್ದಾನೆ) ಎಂದು ಮನವರಿಕೆಯಾಗಿರುತ್ತದೆ;

ಆದ್ದರಿಂದ, ಎ1 ಸಲ್ಮಾನ್ ಸಲೀಂ ಶೇಖ್, ವಯಸ್ಸು–0, ವಿಳಾಸ ರೂಮ್ ನಂ. 3 ಮದರ ಚಿಲಾ ಹಮಿ ಕಾಂಪೌಂಡ್ ಬಾಲು ಸ್ಟ್ರೀಟ್ ಬಜಾರ್ ಹಿಂಭಾಗ ಮಾಂಡ್ವಿ ಮುಂಬೈ ಅಲಿಸ್ ಮತ್ತೊಂದು ವಿಳಾಸ ಕೇರಾಫ್ ನಂ. 1/1ನೇ ಕ್ರಾಸ್, ಬನ್ನಿಮಂಟಪ ಟಿಪ್ಪು ಮಸೀದಿ ಸಮೀಪ, ಮೈಸೂರು ಎಂಬ ಆಸಾಮಿಯು ದಿನಾಂಕ 05.11.2025 ರಂದು ಸದರಿ ನ್ಯಾಯಾಲಯಕ್ಕೆ ಹಾಜರಾಗಬೇಕಾದುದು ಅವಶ್ಯವಾಗಿದೆ ತಿಳಿಸಲಾಗಿದೆ.

ಆದೇಶದ ಮೇರೆಗೆ

ಸಿಸಿಎಚ್33 33ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ
ಬೆಂಗಳೂರು, ಕರ್ನಾಟಕ

CBC 19126/11/0073/2526

DIAGEO India

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಕರ್ನಾಟಕ, ಭಾರತ
ಫೋನ್: +91 80 2221 0705 | ಫ್ಯಾಕ್ಸ್: +91 80 2225 5253
ವೆಬ್‌ಸೈಟ್: www.diageoindia.com | ಇಮೇಲ್: investor.india@diageo.com

ಭೌತಿಕ ರೀತಿಯಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಪ್ರಮುಖ ಸೂಚನೆ

ಭೌತಿಕ ಷೇರುಗಳ ವರ್ಗಾವಣೆ ವಿನಂತಿಗಳನ್ನು ಮರು–ದಾಖಲಿಸಲು ವಿಶೇಷ ಅವಧಿ

2ನೇ ಜುಲೈ 2025ರ ದಿನಾಂಕದ SEBI ಸುತ್ತೋಲೆ ಸಂಖ್ಯೆ SEBI/HO/MIRSD/MIRSD-PoD/P/CIR/2025/97ರ ಪ್ರಕಾರ, ಭೌತಿಕ ಷೇರು ಪ್ರಮಾಣಪತ್ರದ ವರ್ಗಾವಣೆ ವಿನಂತಿಗಳ ಮರು–ಸಲ್ಲಿಸಲು 7ನೇ ಜುಲೈ, 2025 ರಿಂದ 6ನೇ ಜನವರಿ, 2026 ರವರೆಗೆ ಆರು (6) ತಿಂಗಳುಗಳ ವಿಶೇಷ ಅವಧಿ ತೆರೆಯಲಾಗಿದೆ ಎಂದು ಷೇರುದಾರರಿಗೆ ತಿಳಿಸಲಾಗಿದೆ.

ದಾಖಲೆಗಳು/ ಕಾರ್ಯವಿಧಾನ/ ಇತರ ನ್ಯೂನತೆಗಳಿಂದಾಗಿ ತಿರಸ್ಕರಿಸಲ್ಪಟ್ಟ, ಹಿಂತಿರುಗಿಸಲಾದ ಅಥವಾ ಹಾಜರುಪಡಿಸದ 1ನೇ ಏಪ್ರಿಲ್, 2019ರ ಮೊದಲು ಸಲ್ಲಿಸಲಾದ ವರ್ಗಾವಣೆ ಪತ್ರಗಳಿಗೆ ಮಾತ್ರ ಈ ಸೌಲಭ್ಯ ಲಭ್ಯವಿದೆ.

ದಯವಿಟ್ಟು ಗಮನಿಸಿ:

- ವರ್ಗಾವಣೆಗಳನ್ನು ಡಿಮ್ಯಾಟ್ ಮೋಡ್‌ನಲ್ಲಿ ಮಾತ್ರ ಪ್ರಕ್ರಿಯೆಗೊಳಿಸಲಾಗುತ್ತದೆ.
- ಷೇರುದಾರರು ಸಕ್ರಿಯ ಡಿಮ್ಯಾಟ್ ಖಾತೆಯನ್ನು ಹೊಂದಿರಬೇಕು ಮತ್ತು ಇತರ ಅಗತ್ಯ ದಾಖಲೆಗಳೊಂದಿಗೆ ಕ್ಲೈಂಟ್ ಮಾಸ್ಟರ್ ಪಟ್ಟಿ (CML) ಅನ್ನು ಸಲ್ಲಿಸಬೇಕು.
- ವಿನಂತಿಗಳನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸರಿಯಾಗಿ ಸಲ್ಲಿಸಬೇಕು.

ಹೆಚ್ಚಿನ ಸಹಾಯಕ್ಕಾಗಿ, ದಯವಿಟ್ಟು ನಮ್ಮ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಅನ್ನು ಸಂಪರ್ಕಿಸಿ, ಅಂದರೆ, ಮೆ. ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಇಮೇಲ್: bglsta@integratedindia.in, ದೂರವಾಣಿ: +91 80 2346 0815 - 818, ಸಂಖ್ಯೆ 30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003, ಕರ್ನಾಟಕ, ಭಾರತ.

ಇದು ಒಂದು ಬಾರಿ ಮಾತ್ರ ದೊರೆಯುವ ಅವಕಾಶವಾಗಿರುವದರಿಂದ, ಷೇರುದಾರರು ಕೂಡಲೇ ಕ್ರಮ ಕೈಗೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತದೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಪ್ರಗ್ಯಾ ಕೌಲ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 16ನೇ ಸೆಪ್ಟೆಂಬರ್ 2025



Prime Minister Narendra Modi

Service is the resolve,
India First the inspiration...75 years

ಯಾವಾಗ ಮಹಿಳೆಯರು ಆರೋಗ್ಯವಾಗಿದ್ದಾಗ,

ಕುಟುಂಬ ಮತ್ತು ದೇಶ ಎರಡು ಸಶಕ್ತವಾಗುತ್ತವೆ

ಸ್ವಸ್ಥ ನಾರಿ ಸಶಕ್ತ ಪರಿವಾರ

ಅಭಿಯಾನದ ಶುಭಾರಂಭ

17ನೇ ಸೆಪ್ಟಂಬರ್–2ನೇ ಅಕ್ಟೋಬರ್ 2025

ಮತ್ತು

ಪಿಎಂ ಮಿತ್ರ ಪಾರ್ಕ್, ಧಾರ್ ಶಿಲಾನ್ಯಾಸ ಕಾರ್ಯಕ್ರಮ

ಪ್ರಧಾನಮಂತ್ರಿ ನರೇಂದ್ರ ಮೋದಿ

ಇವರಿಂದ

ದೇಶಾದ್ಯಂತ ಆರೋಗ್ಯ ಶಿಬಿರಗಳ ಆಯೋಜನೆ

8ನೇ ರಾಷ್ಟ್ರೀಯ ಪೋಷಣೆ ಮಾಸಕ್ಕೆ ಚಾಲನೆ

ಪಿಎಂಎಂವಿವೈ ಅಡಿಯಲ್ಲಿ ಮೆಟರ್ನಿಟಿ ಪ್ರಯೋಜನೆಗಳ ವಿತರಣೆ

ಆದಿ ಸೇವಾ ಪರ್ವ ಉದ್ಘಾಟಣೆ

1 ಕೋಟಿ ಸಿಕಲ್ ಸೆಲ್ ಸ್ಕ್ರೀನಿಂಗ್ & ಸಮಾಲೋಚನಾ ಕಾರ್ಡ್‌ಗಳ ವಿತರಣೆ

ಸುಮನ ಸಖಿ ಚಾಟ್‌ಬಾಟ್‌ಗೆ ಚಾಲನೆ

"ಏಕ್ ಬಗಿಯಾ ಮಾ ಕೆ ನಾಮ್" ಅಭಿಯಾನದ ಅಡಿಯಲ್ಲಿ ಸ್ಯಾಪ್ಲಿಂಗ್ ವಿತರಣೆ

17 ಸೆಪ್ಟಂಬರ್ 2025 | ಧಾರ್, ಮಧ್ಯ ಪ್ರದೇಶ
ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ

ಅಭಿಯಾನದ ಚಟುವಟಿಕೆಗಳು

ಮಹಿಳೆಯರಿಗಾಗಿ ವೈದ್ಯಕೀಯ ತಪಾಸಣೆ ಮತ್ತು ಆರೋಗ್ಯ ಸೇವೆಗಳ ಪೂರೈಕೆ

- ಇಎನ್‌ಟಿ, ಕಣ್ಣು, ರಕ್ತದೊತ್ತಡ, ಬ್ಲಡ್ ಶುಗರ್ ಮತ್ತು ದಂತಗಳ ತಪಾಸಣೆ
- ಕ್ಯಾನ್ಸರ್ – ಒರಲ್/ಬ್ರೆಸ್ಟ್/ಸರ್ವಿಕಲ್
- ಗರ್ಭವತಿ ಮಹಿಳೆಗೆ ಆಂಟೆನಟಲ್ ತಪಾಸಣೆ
- ಲಸಿಕಾ ಸೇವೆಗಳು/ರಕ್ತಹೀನತೆ ಮೌಲ್ಯಮಾಪನ
- ಟೆಲೆಮಾನಸ್ ಸೌಲಭ್ಯಗಳು/ ಟ್ಯೂಬರ್‌ಕ್ಯುಲೋಸಿಸ್ ಪರೀಕ್ಷೆ
- ಸಿಕಲ್ ಸೆಲ್
- ವಿಶೇಷ ಸಮಾಲೋಚನೆ

ಆರೋಗ್ಯ ಆರೈಕೆ ಸೇವೆಗಳಿಗಾಗಿ ಸರಳ ಸಂಪರ್ಕ

- ತಾಯಿ ಮತ್ತು ಮಗುವಿಗೆ ಸುರಕ್ಷೆ (ಎಂಸಿಪಿ) ಕಾರ್ಡ್
- ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಗೆ ನೋಂದಣಿ
- ಆಯುಷ್ಮಾನ್ ವಯ್ ವಂದನಾ ಕಾರ್ಡ್
- ಸಿಕಲ್ ಸೆಲ್ ಕಾರ್ಡ್
- ಎಬಿಎಚ್‌ಎ ಐಡಿ ಕಾರ್ಡ್‌ಗೆ ನೋಂದಣಿ
- ಪೋಷನ್ ಟ್ರ್ಯಾಕರ್‌ನಲ್ಲಿ ಫಲಾನುಭವಿಗಳ ನೋಂದಣಿ

ಆರೋಗ್ಯಕರ ಜೀವನಶೈಲಿ ಮತ್ತು ಯೋಗಕ್ಷೇಮ ಅಂಶಗಳ ನಿರ್ವಹಣೆ

- 10% ಸಕ್ಕರೆ ಮತ್ತು ಖಾದ್ಯ ತೈಲ ಸೇವನೆ ಕಡಿತಗೊಳಿಸುವ ಮೂಲಕ ಸ್ಥೂಲಕಾಯ ತಡೆಗಟ್ಟುವುದು
- ಸ್ಥಳೀಯ ಮತ್ತು ಪ್ರಾದೇಶಿಕ ಆಹಾರಕ್ಕೆ ಉತ್ತೇಜನ
- ಬಾಲ್ಯ ಮತ್ತು ಶಿಶು ಪೂರ್ವ ಆರೈಕೆ ಹಾಗೂ ಯುವ ಮಕ್ಕಳ ಆಹಾರ ಪದ್ಧತಿಯಲ್ಲಿ ಕಾಳಜಿ
- ಪೋಷಕಾಂಶ ಮತ್ತು ಋತುಚಕ್ರ ನೈರ್ಮಲ್ಯತೆಗೆ ಉತ್ತೇಜನ
- ಟೇಕ್ ಹೋಮ್ ರೇಷನ್ ವಿತರಣೆ (ಟಿಎಚ್‌ಆರ್)

ನಾಗರಿಕರು ಇವುಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಬಹುದು

ರಕ್ತದಾನ ಶಿಬಿರ | ನಿಕ್ಷಯ ಮಿತ್ರ ಸ್ವಯಂ ನೋಂದಣಿ | ಅಂಗಾಂಗ ದಾನಿಗಳ ನೋಂದಣಿ

CBC 46101/13/0018/2526

ಈ ಸೇವೆಗಳನ್ನು ಪಡೆದುಕೊಳ್ಳಬಯಸುವ ಮಹಿಳೆಯರು ಮತ್ತು ಮಕ್ಕಳು ತಮ್ಮ ಸಮೀಪದ ಆಯುಷ್ಮಾನ್ ಆರೋಗ್ಯ ಮಂದಿರ, ಸಮುದಾಯ ಆರೋಗ್ಯ ಕೇಂದ್ರ, ಅಥವಾ ಅಂಗನವಾಡಿ ಕೇಂದ್ರಗಳನ್ನು ಸಂಪರ್ಕಿಸಬಹುದು.

#SwasthNariSashaktParivar

ಪಾಲಿಕೆಗಳಿಗೆ ತಲಾ ₹25 ಕೋಟಿ ಬಿಡುಗಡೆ

ಉಳಿಕೆ ಅನುದಾನ ಹಂಚುವ ಸಮಯದಲ್ಲಿ ಹೊಂದಾಣಿಕೆಯ ಷರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳಿಗೆ ತಲಾ ₹25 ಕೋಟಿ ಅನುದಾನವನ್ನು ಹಿಂದಿನ ಬಿಬಿಎಂಪಿ ಖಾತೆಯಿಂದ ಬಿಡುಗಡೆ ಮಾಡಲು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಜೆ.ಸಿ. ರಸ್ತೆಯ ಯೂನಿಯನ್ ಬ್ಯಾಂಕ್‌ನಲ್ಲಿರುವ ಬಿಬಿಎಂಪಿ ಖಾತೆಯಲ್ಲಿ 2025–26ನೇ ಸಾಲಿನಲ್ಲಿ ಸಂಗ್ರಹವಾಗಿರುವ ಆಸ್ತಿ ತೆರಿಗೆಯ ಮೊತ್ತ ₹300 ಕೋಟಿಯಲ್ಲಿ ಐದು ನಗರ ಪಾಲಿಕೆಗಳಿಗೆ ₹125 ಕೋಟಿಯನ್ನು ಷರತ್ತಿಗೆ ಒಳಪಡಿಸಿ ಬಿಡುಗಡೆ ಮಾಡಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ, ಬೆಂಗಳೂರು ಪೂರ್ವ ನಗರ ಪಾಲಿಕೆ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳಿಗೆ ಮುಂದಿನ ದಿನಗಳಲ್ಲಿ ಉಳಿಕೆ ಅನುದಾನವನ್ನು ಹಂಚುವ ಸಮಯದಲ್ಲಿ ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಹೊಂದಾಣಿಕೆ ಮಾಡಿಕೊಳ್ಳಬೇಕು. ನಗರ ಪಾಲಿಕೆಗಳ ಆಡಳಿತಾಧಿಕಾರಿಯವರ ಅನುಮೋದನೆ ಪಡೆದು, ನಿಯಮಾನುಸಾರ ಅನುದಾನ ವೆಚ್ಚ ಮಾಡಬೇಕು ಎಂಬ ಷರತ್ತು ವಿಧಿಸಲಾಗಿದೆ.

ಮುಖ್ಯಾಂಶಗಳು

- ಮುಂದಿನ ದಿನಗಳಲ್ಲಿ ಉಳಿಕೆ ಅನುದಾನ ಹಂಚಿಕೆ
- ಆಡಳಿತಾಧಿಕಾರಿಯ ಅನುಮೋದನೆ ಪಡೆದು, ನಿಯಮಾನುಸಾರ ವೆಚ್ಚ

'ಆರಂಭಿಕ ಹಂತಗಳಲ್ಲಿ ಪಾಲಿಕೆಗಳ ದೈನಂದಿನ ಆಡಳಿತಾತ್ಮಕ, ಇತರೆ ವೆಚ್ಚಗಳಿಗಾಗಿ ಅನುದಾನದ ಅಗತ್ಯವಿದೆ. ಪಾಲಿಕೆಗಳ ಬ್ಯಾಂಕ್ ಖಾತೆಗೆ ನೇರವಾಗಿ ತೆರಿಗೆ ಹಣ ಪಾವತಿಯಾಗುವ ವ್ಯವಸ್ಥೆ ಜಾರಿಯಾಗುವವರೆಗೂ ಬಿಬಿಎಂಪಿ ವತಿಯಿಂದ ಸಂಗ್ರಹವಾದ ಹಣ ಪ್ರಸ್ತುತ ಸರ್ಕಾರದ ಸುಪರ್ದಿಯಲ್ಲಿದೆ. ಈ ಹಣದಿಂದ ಐದು ನಗರ ಪಾಲಿಕೆಗಳಿಗೆ ತಲಾ ₹25 ಕೋಟಿ ಬಿಡುಗಡೆ ಮಾಡಬಹುದು' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಮುಖ್ಯ ಆಯುಕ್ತರ ಈ ಪ್ರಸ್ತಾವವನ್ನು ಪರಿಶೀಲಿಸಿ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ (ಜಿಬಿಜಿಎ) ಹಣ ಬಿಡುಗಡೆ ಮಾಡಲಾಗಿದೆ.

ಹೊಣೆಗಾರಿಕೆ: ಜಿಬಿಜಿಎ ಕಾಯ್ದೆಯಂತೆ ಬಿಬಿಎಂಪಿಯ ಎಲ್ಲ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಐದು ನಗರ ಪಾಲಿಕೆಗಳಿಗೆ ವಹಿಸುವವರೆಗೆ ಸರ್ಕಾರದ ಸುಪರ್ದಿಯಲ್ಲಿರಬೇಕು. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಹಂಚಿಕೆಯಲ್ಲಿ ಸರ್ಕಾರದ ನಿರ್ಣಯವೇ ಅಂತಿಮವಾಗಿರುತ್ತದೆ. ಪುನರ್ ರಚಿಸಿದ ನಗರ ಪಾಲಿಕೆಗಳಿಗೆ ವರ್ಗಾಯಿಸಲು ಸರ್ಕಾರ ಉಪಬಂಧಗಳನ್ನು ಮಾಡಬೇಕು. ಕಾಯ್ದೆಯ ಈ ಎಲ್ಲ ಅಂಶಗಳನ್ನೂ ಪರಿಗಣಿಸಿ, ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಲಾಗಿದೆ.

ಪ್ರಗತಿ ಕಾಮಗಾರಿಗಳಿಗೆ ಆದ್ಯತೆ ರಾಜೇಂದ್ರ ಚೋಳನ್

'ಬಿಬಿಎಂಪಿ ಇದ್ದಾಗ ಆರಂಭಗೊಂಡಿರುವ ಕಾಮಗಾರಿಗಳಿಗೆ ಆದ್ಯತೆ ನೀಡಲಾಗಿದ್ದು, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸಲು ಗುರಿ ಹೊಂದಲಾಗಿದೆ' ಎಂದು ಬಿಸಿಸಿ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

'ನಗರ ಪಾಲಿಕೆ ಸದ್ಯದ ಮಟ್ಟಿಗೆ ಕಾರ್ಯ ನಿರ್ವಹಿಸಲು ಯಾವುದೇ ಸಮಸ್ಯೆಗಳಿಲ್ಲ. ಇನ್ನೊಂದು ತಿಂಗಳಲ್ಲಿ ಎಲ್ಲ ರೀತಿಯ ಕಾಮಗಾರಿಗಳ ಕಡತಗಳು ಆಯಾ ನಗರ ಪಾಲಿಕೆಗಳಿಗೆ ವರ್ಗವಾಗಲಿದೆ. ವಾರ್ಡ್‌ವಾರು ಕಾಮಗಾರಿಗಳು, ಎರಡು ಪಾಲಿಕೆಗಳಿಗೆ ಅನ್ವಯವಾಗುವ ಕಾಮಗಾರಿಗಳ ಕಡತಗಳೂ ಶೀಘ್ರ ಹಂಚಿಕೆಯಾಗಲಿವೆ. ಇವುಗಳನ್ನು ಕ್ರಮಬದ್ಧಗೊಳಿಸಿ, ಕಾರ್ಯಾಚರಣೆ ನಡೆಸಲಾಗುತ್ತದೆ' ಎಂದರು.

'ಪೂರಕ ಬಜೆಟ್ ಬಗ್ಗೆ ಈಗಲೇ ಚಿಂತನೆ ನಡೆಸಿಲ್ಲ. ನಮ್ಮ ನಗರ ಪಾಲಿಕೆಗೆ ಬರುವ ಸಂಪೂರ್ಣ ಕಾಮಗಾರಿಗಳ ವಿವರ, ಸಂಗ್ರಹವಾಗುವ ತೆರಿಗೆ ಹಾಗೂ ಇತರೆ ಶುಲ್ಕಗಳನ್ನು ಪರಿಶೀಲಿಸಲಾಗುತ್ತದೆ. ನಂತರ ಅದರ ಬಗ್ಗೆ ಜಿಬಿಎ ಮುಖ್ಯ ಆಯುಕ್ತರೊಂದಿಗೆ ಚರ್ಚಿಸಿ, ಅಗತ್ಯ ಬಿದ್ದರೆ ಪೂರಕ ಬಜೆಟ್ ಮಂಡಿಸಲಾಗುತ್ತದೆ.ಇಲ್ಲದಿದ್ದರೆ, ಫೆಬ್ರುವರಿಯಲ್ಲಿ ಪೂರ್ಣ ಪ್ರಮಾಣದ ಬಜೆಟ್‌ಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಆ ವೇಳೆಗೆ ನಗರ ಪಾಲಿಕೆಯ ಕಾಮಗಾರಿಗಳ ಸಂಪೂರ್ಣ ಚಿತ್ರಣ ನಮ್ಮಲ್ಲಿರುತ್ತದೆ' ಎಂದು ಮಾಹಿತಿ ನೀಡಿದರು.

₹63 ಕೋಟಿ ಕಟ್ಟಡ ನಕ್ಷೆ ಶುಲ್ಕವೂ ವರ್ಗಾವಣೆ

ಬಿಬಿಎಂಪಿಯಿದ್ದಾಗ ಕಟ್ಟಡ ನಕ್ಷೆಗಾಗಿ ವಸೂಲಿ ಮಾಡಿದ್ದ ಶುಲ್ಕದಲ್ಲಿ ₹63.27 ಕೋಟಿಯನ್ನು ಐದು ನಗರ ಪಾಲಿಕೆಗಳಿಗೆ ಹಂಚಿ, ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ.

ನಗರ ಯೋಜನೆ ವಿಭಾಗದ ಆದಾಯವನ್ನು ನಗರ ಪಾಲಿಕೆಗಳಿಗೆ ಹಂಚುವ ನಿರ್ಧಾರ ಮೊದಲ ಹಂತವಾಗಿ ಈ ವರ್ಗಾವಣೆಯಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಗೆ ₹7.96 ಕೋಟಿ, ಪೂರ್ವ ನಗರ ಪಾಲಿಕೆಗೆ ₹15.85 ಕೋಟಿ, ಪಶ್ಚಿಮ ನಗರ ಪಾಲಿಕೆಗೆ ₹10.19 ಕೋಟಿ, ಉತ್ತರ ನಗರ ಪಾಲಿಕೆಗೆ ₹17.49 ಕೋಟಿ, ದಕ್ಷಿಣ ನಗರ ಪಾಲಿಕೆಗೆ ₹11.77 ಕೋಟಿ ಹಣವನ್ನು ಸೆ.16ರಂದು ವರ್ಗಾವಣೆ ಮಾಡಲಾಗಿದೆ.

ರಿಪೇರಿಯಾಗದ ನೀರಿನ ಘಟಕ!

• ಸಿ.ಜಿ. ಮೋಹನ್‌ ಕುಮಾರ್

ದಾಬಸ್ ಪೇಟೆ: ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸಬೇಕಾದ ಘಟಕ ಹಾಳಾಗಿ ಎರಡು ವರ್ಷವಾದರೂ ದುರಸ್ತಿಯಾಗಿಲ್ಲ.

ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ನರಸೀಪುರ ಗ್ರಾಮ ಪಂಚಾಯಿತಿಗೆ ಸೇರುವ ಹಾಲೇನಹಳ್ಳಿ ಗ್ರಾಮದ ಶುದ್ಧ ಕುಡಿಯುವ ನೀರಿನ ಘಟಕವೇ ಎರಡು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿಲ್ಲ.

100ಕ್ಕೂ ಹೆಚ್ಚು ಮನೆಗಳುಳ್ಳ ಈ ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯದ ಜನ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಹಾಲೇನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತಿರುವ ಸಾಲಹಟ್ಟಿ, ಜಾಜೂರು, ಲಕ್ಷ್ಮೀಪುರ, ಪಾಂಡವಪುರ ಹಾಗೂ ಸಣ್ಣಪುಟ್ಟ ಹಳ್ಳಿಗಳ ಜನರೂ ಕುಡಿಯುವ ನೀರಿಗೆ ಈ ಘಟಕವನ್ನು ಅವಲಂಬಿಸಿದ್ದಾರೆ.

ಮಾರುತಿ ಸುಜುಕಿ ಕಂಪನಿಯವರು ಕೆಲ ವರ್ಷಗಳ ಹಿಂದೆ ಈ ಘಟಕವನ್ನು ನಿರ್ಮಾಣ ಮಾಡಿದ್ದು, 'ವಾಟರ್ ಲೈಫ್ ಇಂಡಿಯಾ ಕಂಪನಿ' ನಿರ್ವಹಣೆ ಮಾಡುತ್ತಿತ್ತು. ಘಟಕ ಕಾರ್ಯ ನಿರ್ವಹಿಸಲು ಬಳಸಿಕೊಂಡಿರುವ ವಿದ್ಯುತ್ ಬಿಲ್ ಪಾವತಿ ಮಾಡದೇ ಇದ್ದದ್ದರಿಂದ ಬೆಸ್ಕಾಂ ಇಲಾಖೆ ಘಟಕಕ್ಕೆ ವಿದ್ಯುತ್ ಸಂಪರ್ಕ ಕಡಿತ ಮಾಡಿತ್ತು. ಬಿಲ್ ಪಾವತಿಸುವುದಾಗಿ ಬೆಸ್ಕಾಂ ಸಿಬ್ಬಂದಿಯಲ್ಲಿ ಮನವಿ ಮಾಡಿದ್ದರಿಂದ ಒಂದಷ್ಟು ತಿಂಗಳು ಘಟಕಕ್ಕೆ ವಿದ್ಯುತ್ ಸಂಪರ್ಕ ನೀಡಿದ್ದರು. ಮತ್ತೆ ವಿದ್ಯುತ್ ಬಿಲ್ ಪಾವತಿಸದಿದ್ದರಿಂದ ವಿದ್ಯುತ್ ಕಡಿತ ಮಾಡಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

'ಇದಕ್ಕೆ ಸಂಬಂಧಿಸಿದವರಲ್ಲಿ ಹಾಗೂ ಸ್ಥಳೀಯ ಪಂಚಾಯಿತಿಯಲ್ಲಿ ಈ ಬಗ್ಗೆ ಮನವಿ ಮಾಡಿ, ದೂರು ನೀಡಿದರೂ ಘಟಕ ಎರಡು ವರ್ಷದಿಂದ ರಿಪೇರಿ ಆಗಿಲ್ಲ' ಎಂದು ಗ್ರಾಮಸ್ಥ ರಾಜಣ್ಣ ದೂರಿದರು.

'ಘಟಕ ಕೆಟ್ಟಿರುವುದರಿಂದ ಜನರು ಅನಿವಾರ್ಯವಾಗಿ ದೂರದ ಊರುಗಳಿಗೆ ಹೋಗಿ ನೀರು ತರಬೇಕಿದೆ. ದ್ವಿಚಕ್ರ ವಾಹನ ಇರುವವರು ದೂರದ ಊರುಗಳಿಗೆ ಹೋಗಿ ನೀರು ತರುತ್ತಾರೆ. ವಯಸ್ಸಾದವರು, ವಾಹನ ಇಲ್ಲದವರ ಗತಿ ಏನು' ಎಂದು ಲಕ್ಷ್ಮಯ್ಯ ಪ್ರಶ್ನಿಸಿದರು.

'ಘಟಕ ಆರಂಭವಾದಾಗಿನಿಂದಲೂ ಆಗಾಗ ವಿದ್ಯುತ್ ಪಾವತಿ ಮಾಡದ್ದಕ್ಕೆ ಹಾಗೂ ಇತರ ಕಾರಣಗಳಿಂದ ಸ್ಥಗಿತಗೊಳ್ಳುತ್ತಲೇ ಇದೆ' ಎಂದು ಪವನ್ ಆರೋಪಿಸಿದರು.

ವಾಟರ್ ಲೈಫ್‌ನ ಶಿವಕುಮಾರ್ ಅವರನ್ನು ಈ ಸಂಬಂಧ ಪತ್ರಿಕೆ ಸಂಪರ್ಕಿಸಿದಾಗ, 'ಮತ್ತೆ ಕರೆ ಮಾಡುವುದಾಗಿ' ಹೇಳಿ ಕರೆ ಸ್ಥಗಿತಗೊಳಿಸಿದರು.

ತಾಲ್ಲೂಕು ಪಂಚಾಯಿತಿ ಇಒ, ಗ್ರಾಮ ಪಂಚಾಯಿತಿ ಪಿಡಿಒ ಅವರಿಂದ ಮಾಹಿತಿ ಪಡೆಯಲು ಸಂಪರ್ಕಿಸಿದಾಗ ಅವರು ಕರೆ ಸ್ವೀಕರಿಸಲಿಲ್ಲ. 'ಇದು ಪಂಚಾಯಿತಿ ವ್ಯಾಪ್ತಿಗೆ ಬರುವುದಿಲ್ಲ. ವಾಟರ್ ಲೈಫ್ ಕಂಪನಿ ನಿರ್ವಹಣೆ ಮಾಡುತ್ತಿದೆ. ವಿದ್ಯುತ್ ಬಿಲ್ ಪಾವತಿಸಿ ಘಟಕ ರಿಪೇರಿ ಮಾಡಿ ಪಂಚಾಯಿತಿಗೆ ನೀಡಿದರೆ ನಾವು ನಿರ್ವಹಿಸುತ್ತೇವೆ' ಎಂದು ನರಸೀಪುರ ಪಂಚಾಯಿತಿ ಅಧ್ಯಕ್ಷ ರಾಮಾಂಜನಯ್ಯ ಹೇಳಿದರು.

ನಗರ ಸ್ವಚ್ಛವಾಗಿಡಲು ಗುರಿ – ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನ ಪಾಲಿಕೆಗಳ ಆಯುಕ್ತರು, ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದು, ನಗರವನ್ನು ಸ್ವಚ್ಛವಾಗಿಡಲು ಗುರಿ ನೀಡಿದ್ದೇನೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಸ ಎಲ್ಲೆಂದರಲ್ಲಿ ಹಾಕುತ್ತಿದ್ದಾರೆ. ವಾಹನಗಳಲ್ಲಿ ಬಂದು ಕಸ ಎಸೆದು ಹೋಗುತ್ತಿದ್ದಾರೆ. ರಸ್ತೆಯಲ್ಲಿ ಕಸ ಬಿಸಾಡಿ ಹೋಗುವವರನ್ನು ಗುರುತಿಸಲು ಸೂಚನೆ ನೀಡಿದ್ದೇನೆ' ಎಂದು ತಿಳಿಸಿದರು.

'ಎಲ್ಲ ಗುಂಡಿಗಳನ್ನು ಮುಚ್ಚಲು ಸೂಚನೆ ಕೊಟ್ಟಿದ್ದೇನೆ. ಯಾವಾಗ ಮುಚ್ಚುತ್ತೀರೆಂದು ಲಿಖಿತವಾಗಿ ಕೊಡಬೇಕು ಎಂದೂ ನಿರ್ದೇಶನ ನೀಡಿದ್ದೇನೆ' ಎಂದು ಹೇಳಿದರು.

'ಅಲ್ಲದೆ, ಆಯುಕ್ತರು ಬೆಳಿಗ್ಗೆ ಎಲ್ಲೆಲ್ಲಿ ರೌಂಡ್ಸ್ ಹೋಗುತ್ತಾರೆಂದು ಮಾಹಿತಿ ನೀಡಲು ಸೂಚಿಸಿದ್ದೇನೆ' ಎಂದರು.

ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಶಾಸಕ ರಿಜ್ವಾನ್ ಅರ್ಷದ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಪಾಲಿಕೆಗಳ ಆಯುಕ್ತರು, ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಇದ್ದರು.

ಬಾಣಂತಿ ಸಾವು ಗೊಂದಲ

ಗೌರಿಬಿದನೂರು: ರಕ್ತಸ್ರಾವದಿಂದ ತಾಲ್ಲೂಕಿನ ಪುಲುಗಾನಹಳ್ಳಿ ಬಾಣಂತಿ ಭಾಗ್ಯಮ್ಮ (30) ಮೃತಪಟ್ಟಿದ್ದು, ಇದಕ್ಕೆ ರಕ್ತದ ಗುಂಪಿನ ಗೊಂದಲ ತಳುಕು ಹಾಕಿಕೊಂಡಿದೆ.

ಅಲೀಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಭಾಗ್ಯಮ್ಮ ಅವರ ರಕ್ತದ ಗುಂಪು 'ಬಿ +' ಎಂದು ವರದಿ ನೀಡಿದ್ದರು. ಗೌರಿಬಿದನೂರು ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸಿಜೇರಿಯನ್ ಮೂಲಕ ಅವರಿಗೆ ಹೆರಿಗೆಯಾಗಿತ್ತು.

ಶಸ್ತ್ರಚಿಕಿತ್ಸೆ ನಂತರ ರಕ್ತಸ್ರಾವ ಹೆಚ್ಚಾಗಿದೆ. ರಕ್ತ ನೀಡಲು ಪರೀಕ್ಷೆ ನಡೆಸಿದಾಗ 'ಬಿ–' ಗುಂಪು ಎಂದು ವರದಿ ಬಂದಿದೆ. ವೈದ್ಯರು ಇಲ್ಲಿ ರಕ್ತ ನೀಡಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಿದ್ದು ಅಲ್ಲಿ ಬಾಣಂತಿ ಮೃತಪಟ್ಟಿದ್ದಾರೆ.

ವಿಷ್ಣು ಜನ್ಮದಿನಾಚರಣೆ ಮನವಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿಮಾನ್ ಸ್ಟುಡಿಯೊ ಆವರಣದಲ್ಲಿ ಇದೇ 18ರಂದು ಇಡೀ ದಿನ ದಿವಂಗತ ನಟ ವಿಷ್ಣುವರ್ಧನ್ ಅವರ 75ನೇ ಜನ್ಮದಿನ ಆಚರಣೆ ನಿಮಿತ್ತ ಕಾರ್ಯಕ್ರಮ ನಡೆಸಲು ಅನುಮತಿ ನೀಡುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ನಿರ್ದೇಶಿಸಬೇಕು' ಎಂಬ ಅರ್ಜಿದಾರರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಸಂಬಂಧ ವಿಎಸ್‌ಎಸ್ ಅಭಿಮಾನ್ ಡಾ. ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್ ಹಾಗೂ ವಿಎಸ್‌ಎಸ್ ವಿಷ್ಣು ಸೇನಾ ಸಂಘಟನೆ ಅಧ್ಯಕ್ಷ ತಿಮ್ಮರಾಜು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಮನವಿಯನ್ನು ತಿರಸ್ಕರಿಸಿತು.

ಅರ್ಜಿಗೆ ಸಂಬಂಧಪಟ್ಟವರಿಗೆ ನೋಟಿಸ್ ಜಾರಿಗೊಳಿಸಲು ನಿರ್ದೇಶಿಸಿದ ನ್ಯಾಯಪೀಠವು ವಿಚಾರಣೆಯನ್ನು ನವೆಂಬರ್ 4ಕ್ಕೆ ಮುಂದೂಡಿದೆ.

ಅನಿಲ್ ಗೌಡ ಸಮನ್ಸ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಟ್ಟಿಂಗ್ ನಡೆಸುತ್ತಿದ್ದ ಆರೋಪ ಪ್ರಕರಣದಲ್ಲಿ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರ ಪ್ರಮುಖ ಪಾಲುದಾರ ಎಚ್.ಅನಿಲ್ ಗೌಡ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿರುವ ಸಮನ್ಸ್‌ಗೆ ಹೈಕೋರ್ಟ್ ತಡೆ ನೀಡಿದೆ ಮತ್ತು 'ಅನಿಲ್ ಗೌಡ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು' ಎಂಬ ಮಧ್ಯಂತರ ಆದೇಶವನ್ನು ವಿಸ್ತರಿಸಿದೆ.

ಕಾಂಗ್ರೆಸ್ ಮುಖಂಡ ಹನುಮಂತರಾಯಪ್ಪ ಅವರ ಪುತ್ರನೂ ಆದ ಎಚ್.ಅನಿಲ್ ಗೌಡ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸಚಿನ್ ಶಂಕರ ಮಗದುಂ ಅವರ ಏಕಸದಸ್ಯ ನ್ಯಾಯಪೀಠ ಮಂಗಳವಾರ ಆದೇಶವನ್ನು ಪ್ರಕಟಿಸಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE–560 003. Website: www.mesinstitutions.in

Invites applications for the following posts

Post: 1. Chief Executive Officer

Educational Qualification: Ph.D. in Arts / Commerce / Science / Technology. Proven track record in academic administration with leadership responsibilities. Age: Below 60 years.

Post: 2. Principal

Educational Qualification: Ph.D. degree in Arts, Commerce, Science, or allied disciplines, with a consistently good academic record.
Experience: At least 15 years of teaching/research experience in a recognized institution of higher education, with a minimum of 10 years in leadership/ administrative roles such as HoD, Vice-Principal, Dean, or equivalent.
Research & Academic Credentials: Significant publications in peer-reviewed journals, participation in national/international conferences, and experience in securing research grants will be an added advantage.
Age: Below 60 years at the time of application.

Post: 3. Placement Officer

Education Qualification: Postgraduate degree in Management / Commerce / Science / Arts or related field. 5–10 years of experience in placement coordination / career services. Age: Below 45 years. Strong communication, ICT and networking skills.
The remuneration for all the posts will be commensurate with qualifications, skillset & Experience.

- Applications for the post of **Chief Executive Officer** with CV and copies of certificates of their qualifications and experience etc., should reach the **Secretary**, MES at the above address on or before 24.09.2025 duly superscribing the envelope with "Application for the post of **CHIEF EXECUTIVE OFFICER**".
- Applications for the post of **Principal, Placement Officer** with CV and copies of certificates of their qualifications and experience etc., should reach the **Chief Executive**, MES at the above address on or before 24.09.2025 duly superscribing the envelope with "Application for the post of **PRINCIPAL / PLACEMENT OFFICER**".
- Candidates with experience are preferred.
- Decision of the selection committee is final.
- Resorting to any sort of influence will be deemed as a disqualification of the candidature.
- Download the application form from the MES website: https://mesinstitutions.in.

Advt. No. MES/19/ADM-1/2025 Dated: 07.09.2025
CHIEF EXECUTIVE

REQUIRES TRAINED/ Untrained Teacher for English & Social Studies. Contact immediately with certificates. Principal CAMLIN ENGLISH SCHOOL, 4th cross, near 7th Main Bus Stop, Hampinagar, Bangalore-560104. Phone: 080-23301363

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

SOUNDARYA GROUP OF INSTITUTIONS
Soundarya Nagar, Sidedahalli, Hesarghatta Road, Nagasandra Post, BENGALURU – 560073.

SOUNDARYA COLLEGE OF LAW
INVITES APPLICATIONS FOR HIRING PRINCIPAL
A renowned institution committed to Academic Excellence, fostering innovation and developing future leaders. We are seeking an experienced and visionary Principal to lead our college to new heights.
Qualifications : LLM with Ph.D
Experience : 7-10 years Teaching Experience, Administrative Experience preferred
Salary : As per Industries Norms

SOUNDARYA INSTITUTE OF MANAGEMENT AND SCIENCE
INVITES APPLICATIONS FOR BCA
BCA - Department of Computer Applications - Assistant & Associate Professors
Qualifications : MCA with Ph.D (Preffered)
Experience : 2-5 years Teaching Experience with strong research orientation and track record publications.
Salary : As per Industries Norms
careers@soundaryainstitutions.in
9606958098 / 9902068883
www.soundaryainstitutions.in

Accounts & Finance

REPUTED CONSTRUCTION COMPANY BANGALORE REQUIRES: B.com Graduate with 2 years experience in Accounts & Tally. Contact: 9448083424. Email: pgiriraju@yahoo.com

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

Marketing & Sales

A REPUTED Transformer manufacturing company at Nelamangala requires MARKETING ENGINEERS with qualification, DEE/BE-Electrical Decent salary depending upon experience. Fresh candidates can also apply. Contact: 9845087967 8660480075

WANTED MANAGERS, Sales Executives, Telecallers to work different parts of Bangalore earn 20,000-30,000: 8867627879

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

General

WANTED
A Leading Layout Real Estate developer is looking for Experienced/ Retired / Senior / Independent capacity & 100% Dedicated Revenue/Legal/Advocate/ Liaison candidates for Bangalore office.
Mail resumes to associates.blr10@gmail.com

PUBLIC NOTICE

PUBLIC NOTICE
Notice is hereby given that my client intends to purchase the property more fully described in the Schedule below from Mr. Deepak I. Kapahi, son of late Sri Iswardas Kapahi, who has represented himself to be the sole and absolute owner, having full rights of alienation.
Any person having any right, title, interest, claim or objection whatsoever in respect of the said property is hereby required to notify the undersigned with supporting documents within 07 (seven) days from the date of publication of this notice. Failing which, it shall be presumed that the property is free from all encumbrances, claims or objections, and my client shall proceed with the purchase accordingly.
SCHEDULE PROPERTY
Flat No. G-5, "SNS Manor", New BBMP No. 2/6, PID No. 3-12-98 (New PID No. 7844685917), Ground Floor, measuring 817 sq.ft. super built-up area, together with an absolute and equal share in the undivided land appurtenant to the apartment and proportionate share in all common areas, situated at #2, Brunton Road, Bangalore-560025.
Issued by:
S. V. Subramanyam (Advocate)
S.V.S. Law Firm,
#956, 24th Main, 38th Cross, 4th T Block, Jayanagar, Bangalore - 560041

RAJYA VOKKALIGARA SANGHA ®
BANGALORE INSTITUTE OF TECHNOLOGY
(An Autonomous Institution under VTU Belagavi, Approved by AICTE, New-Delhi)
K.R.ROAD, V.V. PURA, BENGALURU – 560 004
Phone: 080-26613237, 26615865 Website: bit-bangalore.edu.in
Ref: BIT/STORE/943/2025-2026 Date: 16/09/2025

Short Term E-Tender Notice

The Short term Tenders are invited through e-procurement portal from eligible tenderers, registered contractors*/ Companies/agencies/ suppliers by the Principal, BIT, Bangalore for the works detailed in the table below under standard tender document procedure formats (The tenderers who have executed similar nature of single work costing not less than 50% of this tender amount during 2021-24). Website: https://kppp.karnataka.gov.in

Sl. No	Name of work	Approx. Value of the works (in Lakhs)	EMD (Rs)	Cost of tender form (GST Included)	Period of completion
01	Hydraulic & Pneumatics Training Kits	20.00	50,000.00	2,000.00	15 days
02	TEKTRONIX Make 200Mhz 4 channel DSO, TEKTRONIX Make 50Mhz 2 channel DSO, Standard Accessories BNC to Crocodile Extra	20.00	50,000.00	2,000.00	15 days

Calendar of events:

Tender Documents available in E-Procurement website	From 17.09.2025 to 03.10.2025 up to 05.00 PM
Date and Time of Pre-Bid Meeting	24.09.2025 at 11.30 AM
Last date of receipt of tenders	03.10.2025 up to 05.00 PM
Opening of Tenders	06.10.2025 at 11.00 AM

01. Tender documents (Specifications, Term & Conditions) may be obtained from e-procurement website https://kppp.karnataka.gov.in
02. E.M.D Paid through E-Procurement following modes only, 1.Debit Card, 2.Credit Card, 3.NET Banking, 4.NEFT & 5.RTGS only.
03. Cost of Tender form Fee in the form of DD drawn in the name of "The Principal BIT" from any nationalized bank only. The DD soft copy should upload in E-Procurement portal and submit the hard copy of DD at tender opening date to BIT, in default of which the tender is liable to be rejected.
04. The Contractors / Agencies / Suppliers shall bear the GST on works contract and any corporation and any other Local Authority & royalty due to the Government of Karnataka at the prevailing rates. Sangha / BIT is not responsible for all taxes with respect to the work.
05. Tenders may be applied to all items or tenders for individual items also accepted.
06. Right to reject any or all the tenders without assigning any reason is reserved with the Sangha /BIT authority.
07. In the event of any holiday on the notified dates, the next working day will hold good.
08. For any enquiries contact Principal Office at V V Pura, K R Road Bengaluru-04 during office hours.

*Company/Authorized Dealers can only apply.

Principal BIT | Chairman BIT | Chairman Purchase Committee, RVS | Treasurer RVS | Joint Secretary RVS
General Secretary RVS | Vice President RVS | President RVS

PUBLIC NOTICE
Our client proposed to purchase the Property bearing Old No.9/1, Present No. 5, situated at 3rd Main (Uttaradi Mutt Road), Shankarapuram, Bengaluru BBMP Old K.G.Nagar Ward No. 49, Present Sunkenahalli Ward No. 142, PID No. 49-51-5, E.PID No. 6373458334 measuring East to West 53 feet or 16.15 mts North to south 35 feet or 10.67 mts bounded on East by 3rd Main(Uttaradi Mutt Road), West by Property allotted to the share of G.P.Kishore, North by Property No. 6 of Eswara Murthy, South by Property No. 4 from 1. Smt. SUDHA RAO, W/o Late Sadashiva Rao, 2. Smt. SADHANA BALAKRISHNA, D/o Late Sadhashiva Rao, 3. Smt VANITHA RAO, D/o Late Sadhasiva Rao, All Presently residing at No. 5, 3rd Main(Uttaradi Mutt Road), Shankarapuram, Bengaluru 560 004 Any person/persons having any right, title, interest or claim over the above said property or any part thereof may put forth their claim or submit their objection with documentary proof within FIFTEEN DAYS from the date of this publication before under signed within office hours. Failing which my clients will proceed to complete the above said agreement, as there is no objection from any body and my clients will not liable for any future consequences.
M.G.SURESH HOLLA,
M.S.SHISHIRA HOLLA
Advocates,
#201, GANA-GIRI, Cubbonpet Main Road, Bengaluru 560 002.
Phone 9448775201
Bengaluru
Dated: 16-07-2025

EDUCATIONAL

Training

HANDWRITING ANALYSIS by G.K. Hari- a Certified Handwriting Analyst. Book your free slot now- 9945788005, Bangalore.

REAL ESTATE SELLING

Commerical

Whitefield

3210SFT,& 1200Sft, Commercial Sites For Sale Near Varthur Sub-Register Office,Within BBMP Limits With 'E'Khatha Call:9353532040

House

Vishweshwariah Layout

HOUSE BUILT on BDA Site at 3rd block, SMV Layout is for Sale. Direct Owner: 9845300889/ 9731574999.

Sites

Nelamangala

SITES IN Pillahalli Near BGS School Nagaruru Nelamangala A Khatha Reasonable Rates Call 7760780309 8123259175

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

FOR_RENT, J.P.Nagar 24th_Main Road,`East facing Commercial 2400sft._Site Independent Ground Floor Building, Good Location for`Coffee Shop,Italian Foods, South Indian Hotel, for`Office Purpose, Suraj_Realtors- 9845232711

BUSINESS

Business to Business

Business

PROPERTY COLLATERALS/ JD's/ Take Overs/ Finance for big Projects, Problem solving. Dr.Swamy Naidu- Vamshadhara Projects And Services. 9342247637.

ADMISSION CORNER

IMPACT COLLEGE OF ENGINEERING & APPLIED SCIENCES
(Affiliated to VTU, Approved by AICTE, Govt. of Karnataka)
Admission Opportunity for CET Candidates
- IMPACT College of Engineering & Applied Sciences announces a limited number of additional seats available for admission under the merit quota.
- Allotments will be made strictly on CET ranking and merit.
- Candidates admitted under this quota will be charged the standard CET fee structure.
- Eligible students are invited to apply and be part of a college known for academic excellence, innovation, and industry-ready graduates.

B.E/B.Tech in (CET Code: E139)
- Artificial Intelligence & Machine Learning
- Automation & Robotics
- Computer Science Engineering
- Computer Science Engg with Data Science
- Computer Science Engg with Cyber Security
- Civil Engineering
- Electronics & Communication Engineering
- Mechanical Engineering

M.Tech - CSE, Thermal Engineering

IMPACT Institute of Management Studies
- BBA - (Aviation, Logistics, Logistic + Aviation)
- B.COM - (ACCA, CMA, Logistics)
- BCA - (Cloud Computing & Ethical Hacking, Digital Forensic & Cyber Security, Artificial Intelligence)
- B.Sc - Interior Design & Decoration

Masters in Business Administration (MBA) - BCU, VTU

WHY IMPACT ? ◆ Excellent faculty ◆ Safe green campus in the heart of Bengaluru ◆ Globally recognised certificates from top industry bodies ◆ Simulation & real life projects * Assured placements * Paid internships

ARCHITECTURE CET Code: E224 | ComedK: E166 ◆ B.Arch ◆ M.Arch (Digital Architecture)
IMP-25608
Call: +91 8050011866, 8880810015 Web: www.impact.ac.in
Impact Campus, Sahakaranagar Post, Kodigehalli, Bengaluru-560092

Business Offers

Finance

AVAIL MSME LOANS EASILY Business Owners can now Avail MSME Loans Upto 1 crore against GST/UDYAM Certificates UNSECURED LOANS Available for both Existing Businesses& Startups Contact-7204995189

PERSONAL

Change of Name

I, NAFEESA ERIAT, residing at Bengaluru-74, have changed my name as NAFEESA SAIFUDEEN, vide affidavit dated 16/09/2025 before Notary K.S. Bammappanavar, Bengaluru

I, NILESH_RAJENDRA PRASAD JOSHI S/o.Rajendra Prasad Joshi R/a#132,Sri Giri Nilaya,2nd A Main Road,2nd`Block, Rajajinagar, Bengaluru 560010 have`changed my_Name to NILESH_JOSHI vide`affidavit dated:15.9.2025 before`Notary Gangaraju.B.N. Bangalore.

CHANGE OF NAME
I, MANJUNATH LAXMAN VERNEKAR S/o Laxman Vernekar, R/a No. 10, Old No. 41, 1st Floor, 1st A Cross, Mount Joy Extension, Hanumanthanagar, Gavipuram Extension Post, Bengaluru-560 019. My full name is MANJUNATH LAXMAN VERNEKAR as per my Aadhar Card, PAN Card and other documents. I declare that MANJUNATH LAXMAN VERNEKAR and MANJUNATH VERNEKAR both the names are belongs to me only. Vide affidavit dated 15-09-2025 Sworn before Notary H.G. Venkataramu, Bengaluru.

I, JAYANNA have changed my name to JAYANNA BAYANAPPA vide affidavit dated: 16/9/2025 Before Notary Manohar Jeerige Bangalore.

CHANGE OF NAME
I, KOMALA GANESH, W/o B.V. Ganesh, residing at No. 242, 1st Main Road, Chamarajpet, Bangalore - 560018 have changed my name to KOMALA B.V.GANESH vide affidavit dated 15-09-2025 sworn before notary M.Prabhakar, Bangalore. Henceforth I shall be called as KOMALA B.V.GANESH only

CHANGE OF NAME
I, DEBAYANI DAS Residing at No. 3/5, 1st Floor Anthony Nicholas Street, Ashoknagar, Museum Road, Bengaluru-560025, have changed my name to DEBAJANI DAS vide affidavit dated 16.09.2025 before notary L.Gopalakrishna, Bengaluru.

Lost

NANJUNDESHWARA, R/A #.23/5, 2nd floor, Munibasappa building, Near Minerva Circle Bangalore-560004. Have Lost My Original vehicle documents, RC Number 275450, Vehicle Number CKQ-7477. IF Found Contact: Kamaraj Mounesh-9739056000.

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

ಚಿಟಿಕೆ ಸುದ್ದಿ

ಅಧ್ಯಕ್ಷರಾಗಿ ವಸುಂಧರಾ ಅವಿರೋಧ ಆಯ್ಕೆ

ಬೆಂಗಳೂರು: ಕರ್ನಾಟಕ ಪ್ರಕಾಶಕರ ಸಂಘದ 2025–26ನೇ ಸಾಲಿನ ಅವಧಿಗೆ ಅಧ್ಯಕ್ಷರಾಗಿ ಡಾ. ವಸುಂಧರಾ ಭೂಪತಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಸುಂಧರಾ ಭೂಪತಿ

ಉಪಾಧ್ಯಕ್ಷರಾಗಿ ಜಿ.ಎನ್. ಮೋಹನ್ ಮತ್ತು ಯು. ಪ್ರೇಮಚಂದ್ರ, ಪ್ರಧಾನ ಕಾರ್ಯ-ದರ್ಶಿಯಾಗಿ ಎನ್. ರವಿಕುಮಾರ್, ಜಂಟಿ ಕಾರ್ಯದರ್ಶಿಯಾಗಿ ನಿಂಗರಾಜ ಚಿತ್ತಣ್ಣನವರ, ಖಜಾಂಚಿಯಾಗಿ ರಾಜೇಂದ್ರ ಪ್ರಸಾದ್ ಆಯ್ಕೆಯಾ-ಗಿದ್ದಾರೆ. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹೇಮಾ ಪಟ್ಟಣಶೆಟ್ಟಿ, ಆರ್. ಪೂರ್ಣಿಮಾ, ವಸುಧೇಂದ್ರ, ಬಿ. ಎಸ್. ವಿದ್ಯಾರಣ್ಯ, ಕೆ. ರಾಜಕುಮಾರ್, ರವೀಂದ್ರನಾಥ ಸಿರವರ, ವಿಶಾಲಕ್ಷಿ ಶರ್ಮ ಆಯ್ಕೆಯಾಗಿದ್ದಾರೆ ಸಂಘದ ಪ್ರಕಟಣೆ ತಿಳಿಸಿದೆ.

ಸುರೇಶ್‌ಗೆ ಕಸಾಪ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಎ.ಆರ್.ನಾರಾಯಣ ಘಟ್ಟ ಮತ್ತು ಸರೋಜಮ್ಮ ಗಾಂಧಿ ಪುದುವಟ್ಟು ದತ್ತಿ ಪುರಸ್ಕಾರಕ್ಕೆ ಕರ್ನಾಟಕ ಸರ್ವೋದಯ ಮಹಾಮಂಡಲದ ಅಧ್ಯಕ್ಷ ಡಾ.ಎಚ್. ಎಸ್.ಸುರೇಶ್ ಅವರನ್ನು ಆಯ್ಕೆ ಮಾಡಲಾಗಿದೆ.

ರಾಷ್ಟ್ರೀಯ ವಿದ್ಯಾಲಯ ಸಂಸ್ಥೆಯಲ್ಲಿ 32 ವರ್ಷ ಸೇವೆ ಸಲ್ಲಿಸಿದ ಗಾಂಧಿವಾದಿ ಎ.ಆರ್.ನಾರಾಯಣ ಘಟ್ಟ ಅವರು ಗಾಂಧೀಜಿ ಜೀವನದ ಆದರ್ಶಗಳನ್ನು ಅಳವಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಿ ಬದುಕುತ್ತಿರುವ ನಿಸ್ವಾರ್ಥ ಸಾಧಕರಿಗೆ ನೀಡಲು ಈ ಪುರಸ್ಕಾರವನ್ನು ಸ್ಥಾಪಿಸಿದ್ದಾರೆ.

2025ನೇ ಸಾಲಿನ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಡಾ.ಎಚ್.ಎಸ್. ಸುರೇಶ್, ರಾಜ್ಯ ಸರ್ವೋದಯ ಮಹಾಮಂಡಲದ ಅಧ್ಯಕ್ಷರು ಹಾಗೂ ಬರಹಗಾರರು. ರಾಜ್ಯ ಜೂನಿಯರ್ ರೆಡ್ ಕ್ರಾಸ್ ಸಲಹೆಗಾರರಾಗಿ, ರಾಷ್ಟ್ರೀಯ ಸೇವಾ ಯೋಜನೆಯ ಪ್ರಾದೇಶಿಕ ಕೇಂದ್ರದ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿರುವ ಇವರು, ಗಾಂಧಿವಾದದ ಕುರಿತು ಮಹತ್ವದ ನಾಟಕಗಳನ್ನು ಬರೆದು ರಂಗಭೂಮಿಯ ಮೂಲಕ ಜಾಗೃತಿ ಉಂಟು ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುಂಕೇನಹಳ್ಳಿ ಮಾದರಿ ವಾರ್ಡ್‌ಗೆ ಯೋಜನೆ

ಕ್ರಿಯಾಯೋಜನೆ ಸಿದ್ಧಪಡಿಸಲು ಆಯುಕ್ತ ರಾಜೇಂದ್ರ ಚೋಳನ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಂಕೇನಹಳ್ಳಿ ವಾರ್ಡ್ ಅನ್ನು ಮಾದರಿ ವಾರ್ಡ್ ಆಗಿ ರೂಪಿಸಲು ಕ್ರಿಯಾಯೋಜನೆ ಸಿದ್ಧಪಡಿಸುವಂತೆ ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬಿಸಿಸಿಸಿ) ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜೇಂದ್ರ ಚೋಳನ್

ಗಾಂಧಿ ಬಜಾರ್ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಪಾದಚಾರಿ ಮಾರ್ಗಗಳಲ್ಲಿ ಒತ್ತುವರಿ ತೆರವು, ಬ್ಲಾಕ್ ಸ್ಪಾಟ್, ಅನಧಿಕೃತ ಕೇಬಲ್ ತೆರವು, ತ್ಯಾಜ್ಯ ನಿರ್ವಹಣೆ ಬಗ್ಗೆ ವ್ಯಾಪಾರಸ್ಥರಲ್ಲಿ ಅರಿವು ಮೂಡಿಸುವುದು, ಪಾದಚಾರಿ ವ್ಯಾಪಾರಿಗಳಿಗೆ ಸ್ಥಳ ನಿಗದಿಪಡಿಸು-ವುದು ಸೇರಿದಂತೆ ಕ್ರಿಯಾಯೋಜನೆ ಸಿದ್ಧಪಡಿಸಲು ಹೇಳಿದರು.

ಗಾಂಧಿಬಜಾರ್ ರಸ್ತೆಯಲ್ಲಿ ವಾರಕ್ಕೊಮ್ಮೆ ಸ್ಥಳೀಯರು ಮತ್ತು ವಿದ್ಯಾರ್ಥಿಗಳಿಗೆ ವಾಕಥಾನ್ ಹಾಗೂ ತಿಂಗಳಿಗೊಮ್ಮೆ ವಾಹನಗಳ ಸಂಚಾರ ನಿರ್ಬಂಧಿಸಿ, ಸಾಂಸ್ಕೃತಿಕ ಚಟುವಟಿಕ-ಗಳನ್ನು ಆಯೋಜಿಸಲು ರೂಪುರೇಷೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಾರ್ಕಿಂಗ್ ಕಟ್ಟಡ: ಗಾಂಧಿ ಬಜಾರ್‌ನಲ್ಲಿ 'ಸ್ಮಾರ್ಟ್ ಸಿಟಿ' ವತಿಯಿಂದ ಬಹು ಅಂತಸ್ತಿನ ಕಾರ್ ಪಾರ್ಕಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಅದನ್ನು ಶೀಘ್ರವೇ ಉದ್ಘಾಟಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್ ಉಪಸ್ಥಿತರಿದ್ದರು.

ಆಟೊಗಳಿಗೆ ಆರ್‌ಎಫ್‌ಐಡಿ: ಆಟೊ ಟಿಪ್ಪರ್‌ಗಳಿಗೆ ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್ (ಆರ್‌ಎಫ್‌ಐಡಿ) ಅಳವಡಿಸುವಂತೆ ಬೆಂಗಳೂರು ಉತ್ತರ ನಗರ ಪಾಲಿಕೆಯ (ಬಿಎನ್‌ಸಿಸಿ) ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ತ್ಯಾಜ್ಯ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಎಚ್‌ಬಿಆರ್ ಲೇಔಟ್‌ನ ಆಟೊ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್ ಮಸ್ಟರಿಂಗ್ ಪಾಯಿಂಟ್‌ಗೆ ಮಂಗಳವಾರ ಭೇಟಿ ನೀಡಿದ ಅವರು, ಒಟ್ಟು 31 ಆಟೊ ಟಿಪ್ಪರ್‌ಗಳಲ್ಲಿ 28 ಮಾತ್ರ ಇದ್ದಿದ್ದನ್ನು ಗಮನಿಸಿದರು. ಐದು ಕಾಂಪ್ಯಾಕ್ಟರ್‌ಗ-ಳಲ್ಲಿ ನಾಲ್ಕು ಮಾತ್ರ ಇದ್ದವು. ಯಾವುದೇ ವಾಹನಗಳಿಗೂ ಆರ್‌ಎಫ್‌ಐಡಿ ಇಲ್ಲದಿ-ರುವುದನ್ನು ಕಂಡು, ಅದರ ಬಗ್ಗೆ ಕ್ರಮ ಕೈಗೊಳ್ಳಲು ಹೇಳಿದರು.

ಮುಖ್ಯಾಂಶಗಳು

- ತ್ಯಾಜ್ಯ ನಿರ್ವಹಣೆ ಕುರಿತು ವ್ಯಾಪಾರಸ್ಥರಲ್ಲಿ ಅರಿವು
- ಪಾದಚಾರಿ ವ್ಯಾಪಾರಿಗಳಿಗೆ ಸ್ಥಳ ನಿಗದಿ
- ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಆಯುಕ್ತ

ಏಕ ಬಳಕೆ ಪ್ಲಾಸ್ಟಿಕ್: ₹62.57 ಲಕ್ಷ ದಂಡ ವಸೂಲಿ

ಜಿಬಿಎ ವ್ಯಾಪ್ತಿಯಲ್ಲಿ ಸೆ.3ರಿಂದ 16ರವರೆಗೆ ಒಟ್ಟು 30,421 ಕೆ.ಜಿ ಏಕ ಬಳಕೆಯ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದ್ದು, ₹62.57 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ತಿಳಿಸಿದರು.

361 ಸಗಟು ಮಾರಾಟಗಾರರು ಹಾಗೂ 5,220 ರೀಟೈಲ್ ಮಾರಾಟಗಾರರ ಮೇಲೆ ದಾಳಿ ನಡೆಸಲಾಗಿದೆ. ಸೆ.16ರಂದು ಒಂದೇ ದಿನ 3,630 ಕೆ.ಜಿ ಏಕ ಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡು, ₹11.25 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಜಯನಗರ, ಪದ್ಮನಾಭನಗರ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿಯಲ್ಲಿ ನಿಷೇಧಿತ ಏಕಬಳಕೆಯ ಪ್ಲಾಸ್ಟಿಕ್ ಮಳಿಗೆಗಳ ಮೇಲೆ ದಾಳಿ ನಡೆಸಿದ ಅಧಿಕಾರಿಗಳು 1,300.75 ಕೆ.ಜಿ ಪ್ಲಾಸ್ಟಿಕ್ ವಶಪಡಿಸಿಕೊಂಡು ₹2.95 ಲಕ್ಷ ದಂಡ ವಸೂಲಿ ಮಾಡಿದ್ದಾರೆ ಎಂದು ಅವರು ತಿಳಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಕಟ್ಟಿಗೇನಹಳ್ಳಿ ಉಪಕೇಂದ್ರ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಹೆಬ್ಬಾಳ ವಿಭಾಗದ ಸಿ-7 ಉಪ ವಿಭಾಗದಲ್ಲಿ ಬುಧವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 4.30ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಉತ್ತರ ಗೇಟ್ 1, 2,3, ರಾಯಭಾರ ಕಚೇರಿ, ಫಿಲಿಪ್ಸ್ ಕಂಪನಿ, ದ್ವಾರಕಾನಗರ, ಬಾಬಾನಗರ, ಕಟ್ಟಿಗೇನಹಳ್ಳಿ, ಬಾಗಲೂರು ಕ್ರಾಸ್, ಬಾಗಲೂರು ಮುಖ್ಯ ರಸ್ತೆ, ಮಣಿಪಾಲ ಕಾಲೇಜು, ಬಿಎಸ್‌ಎಫ್, ಪಿಡಿಎಂಎಸ್, ಬಾಗಲೂರು ಕ್ರಾಸ್ ವಿನಾಯಕನಗರ, ಸುತ್ತಮುತ್ತಲಿನ ಪ್ರದೇಶ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಸಾರಕ್ಕಿ ಉಪಕೇಂದ್ರ ವ್ಯಾಪ್ತಿಯಲ್ಲಿ ಸೆ.18ರಂದು (ಗುರುವಾರ) ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಶಾಕಂಬರಿ ನಗರ, ಪೈಪ್ ಲೈನ್ ರೋಡ್, ರಾಘವೇಂದ್ರ ಸ್ವಾಮಿ ಮಠ, ಜೆ.ಪಿ. ನಗರ ಮೊದಲನೇ ಹಂತ, 14ನೇ ಅಡ್ಡ ರಸ್ತೆ, ಸಲಾರ್‌ಪುರಿಯಾ ಅಪಾರ್ಟ್‌ಮೆಂಟ್, ನಾಗಾರ್ಜುನ ಅಪಾರ್ಟ್‌ಮೆಂಟ್, ಪುಟ್ಟೇನಹಳ್ಳಿ, ಜಯನಗರ 5, 7, 8ನೇ ಬ್ಲಾಕ್, ಐಟಿಐ ಲೇಔಟ್, ಎಸ್‌ಬಿಐ ಕಾಲೊನಿ, ಆರ್. ವಿ.ಡೆಂಟಲ್ ಕಾಲೇಜ್ ಸುತ್ತಮುತ್ತಲ ಪ್ರದೇಶಗಳು, 24ನೇ ಮೇನ್, ಎಲ್‌ಐಸಿ ಕಚೇರಿ ಹಿಂಭಾಗ, ಎಲ್‌ಐಸಿ ಕಾಲೊನಿ, ಕೆ.ಆರ್.ಲೇಔಟ್, ವೆಂಕಟಾದ್ರಿ ಲೇಔಟ್, ಜೆ.ಪಿ.ನಗರ 5ನೇ ಹಂತ, ಸಾಯಿ ನರ್ಸರಿ ರಸ್ತೆ, ಜೆ.ಪಿ.ನಗರ 6ನೇ ಹಂತ, 12, 15, ಮತ್ತು 16ನೇ ಕ್ರಾಸ್, ಆದರ್ಶ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬನ್ನೇರುಘಟ್ಟ ರೋಡ್, ಡಾಲರ್ಸ್ ಲೇಔಟ್, ಕಲ್ಯಾಣಿ ಮ್ಯಾಗ್ನಮ್ ಅಪಾರ್ಟ್‌ಮೆಂಟ್, ಕಲ್ಯಾಣಿ ಕೃಷ್ಣ ಮ್ಯಾಗ್ನಮ್ ಮತ್ತು ಸುತ್ತಮುತ್ತಲ ಪ್ರದೇಶಗಳು

ವಿವಿಧ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ 119ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಆವಲಹಳ್ಳಿ ಆರ್. ಚಂದ್ರಪ್ಪ, ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಪಿ.ಮಂಜುನಾಥ್ ಪಾಲ್ಗೊಂಡಿದ್ದರು

ಪೊಲೀಸರ ಭಾವಚಿತ್ರಕ್ಕೆ ಮಂಗಳಾರತಿ

ಅಮಾನತುಗೊಂಡ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪೆಡ್ಲರ್‌ಗಳ ಸ್ನೇಹ ಸಂಪಾದಿಸಿ ಅವರೊಂದಿಗೆ ಪಾರ್ಟಿ ನಡೆಸಿದ್ದ ಆರೋಪದ ಅಡಿ ಅಮಾನ-ತುಗೊಂಡಿರುವ ಚಾಮರಾಜಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಮಂಜಣ್ಣ ಸೇರಿ 11 ಮಂದಿ ಪೊಲೀಸರ ಭಾವಚಿತ್ರಕ್ಕೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ(ಕೆಆರ್‌ಎಸ್) ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಮಹಾಮಂಗಳಾರತಿ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಲಾಯಿತು.

ಡ್ರಗ್ಸ್ ಪೆಡ್ಲರ್‌ಗಳ ಜತೆಗೆ ಕೈಜೋಡಿಸಿದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವಿರುದ್ಧ ಧಿಕ್ಕಾರ ಕೂಗಿ, ಆಕ್ರೋಶ ಹೊರಹಾಕಲಾಯಿತು.

ಪಕ್ಷದ ರಾಜ್ಯ ಘಟಕದ ಕಾರ್ಯಾಧ್ಯಕ್ಷ ರಘು ಜಾಣಗೆರೆ ಮಾತನಾಡಿ, 'ಯುವ ಜನರನ್ನು ರಕ್ಷಿಸಬೇಕಾದ ಪೊಲೀಸರೇ ಡ್ರಗ್ಸ್ ಪೆಡ್ಲರ್‌ಗಳ ಜೊತೆ ಕೈಜೋಡಿಸಿ, ಅಮಾನತು ಆಗಿರುವ ಪ್ರಕರಣವು ತಲೆ-ತಗ್ಗಿಸುವಂತಹದ್ದು. ಅಮಾನತುಗೊಂ-ಡಿರುವ ಅಧಿಕಾರಿ ಹಾಗೂ ಪೊಲೀಸರ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು. ಅಲ್ಲದೇ ಸೇವೆಯಿಂದಲೂ ವಜಾ ಮಾಡಬೇಕು' ಎಂದು ಆಗ್ರಹಿಸಿದರು.

ಅಮಾನತುಗೊಂಡಿರುವ ಪೊಲೀಸರ ಭಾವಚಿತ್ರಕ್ಕೆ ಮಹಾಮಂಗಳಾರತಿ ಮಾಡುವ ಮೂಲಕ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

'ನಾನು ಈ ಠಾಣೆಗೆ ಬರಲು ಲಕ್ಷ ಹಣವನ್ನು ಜನಪ್ರತಿನಿಧಿಗೆ ಕೊಟ್ಟು ಬಂದಿದ್ದೇನೆ. ನಮ್ಮನ್ನು ಯಾರೂ, ಏನೂ ಮಾಡಲು ಸಾಧ್ಯವಿಲ್ಲ' ಎಂಬುದಾಗಿ ಕೆಲವು ಪೊಲೀಸ್ ಅಧಿಕಾರಿಗಳು ರಾಜಾರೋಷವಾಗಿ ಹೇಳುತ್ತಿದ್ದಾರೆ. ಇಂತಹ ಜನಪ್ರತಿನಿಧಿಗಳನ್ನು ರಾಜ್ಯ ಹೊಂದಿರುವುದು ದೌರ್ಭಾಗ್ಯ' ಎಂದು ಹೇಳಿದರು.

ರಾಜ್ಯ ಘಟಕದ ಉಪಾಧ್ಯಕ್ಷ ಎಸ್. ಮಂಜುನಾಥ ಮಾತನಾಡಿ, 'ಕೇವಲ ಚಾಮರಾಜಪೇಟೆ, ಜೆ.ಜೆ.ನಗರ ಠಾಣೆಯ ಪೊಲೀಸರ ಕೃತ್ಯ ಅಲ್ಲ. ನಗರದ ಬಹುತೇಕ ಪೊಲೀಸ್ ಠಾಣೆಗಳ ಪೊಲೀಸರು ಇಂತಹ ದಂಧೆಯಲ್ಲಿ ಶಾಮೀಲಾಗಿದ್ದಾರೆ' ಎಂದು ಆಪಾದಿಸಿದರು.

ರಾಜ್ಯ ಜಂಟಿ ಕಾರ್ಯದರ್ಶಿ ಎಲ್. ಜೀವನ್ ಮಾತನಾಡಿ, 'ಸರ್ಕಾರ ಡ್ರಗ್ಸ್ ದಂಧೆಕೋರರನ್ನು ಮಟ್ಟ ಹಾಕಬೇಕು' ಎಂದು ಆಗ್ರಹಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿಗ-ಳಾದ ಜೆ.ಪಿ.ರಘುನಂದನ, ಶ್ರೀನಿವಾಸ್, ಕಾರ್ಯನಿರ್ವಾಹಕ ಸಮಿತಿ ಸದಸ್ಯ ಮೋಹನ್ ಕುಮಾರ್, ಎಸ್‌ಸಿ–ಎಸ್‌ಟಿ ಘಟಕದ ರಾಜ್ಯ ಉಪಾಧ್ಯಕ್ಷ ಪ್ರಕಾಶ್, ಬೆಂಗಳೂರು ಪಶ್ಚಿಮ ಸಂಘಟನಾ ಜಿಲ್ಲಾ ಅಧ್ಯಕ್ಷ ಅಮಿತ್, ಉಪಾಧ್ಯಕ್ಷ ಶ್ರೀನಿವಾಸ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪಾರ್ಟಿ ಫೋಟೊ ಪತ್ತೆ

ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಬರುವ ಮಾತ್ರೆ ಮಾರಾಟ ಮಾಡಿದ್ದ ಆರೋಪದಲ್ಲಿ ಸಲ್ಮಾನ್, ನಯಾಜ್ ಉಲ್ಲಾ, ಸಲ್ಮಾನ್, ನಯಾಜ್ ಖಾನ್, ತಾಹೇರ್ ಪಟೇಲ್ ಎಂಬುವವರನ್ನು ಬಂಧಿಸಲಾಗಿತ್ತು. ಆರೋಪಿಗಳ ಬಳಿ ಒಂದು ಸಾವಿರ ಟೈಡಲ್ ಮಾತ್ರೆಗಳು ಪತ್ತೆ ಆಗಿದ್ದವು. ಆರೋಪಿಗಳ ಮೊಬೈಲ್ ವಶಕ್ಕೆ ಪಡೆದು ಪರಿಶೀಲನೆ ನಡೆಸಿದಾಗ ಪೊಲೀಸರ ಜೊತೆಗೆ ಆರೋಪಿಗಳು ಸಂಪರ್ಕದಲ್ಲಿ ಇರುವುದು, ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸಿರುವುದೂ ಪತ್ತೆ ಆಗಿತ್ತು. ಆರೋಪಿಗಳ ಜೊತೆಗೆ ಪೊಲೀಸರು ಪಾರ್ಟಿ ಮಾಡಿರುವ ಫೋಟೊಗಳು ಸಹ ಮೊಬೈಲ್‌ನಲ್ಲಿ ಸಿಕ್ಕಿದ್ದವು. ಇಲಾಖೆಯ ಆಂತರಿಕ ತನಿಖೆ ನಡೆಸಿದಾಗ ಪೊಲೀಸರು ಆರೋಪಿಗಳ ಜತೆಗೆ ಸ್ನೇಹ ಸಂಪಾದಿಸಿರುವುದು ಗೊತ್ತಾಗಿತ್ತು.

45 ಅಂಧ ಮಕ್ಕಳಿಗೆ ವಿಮಾನದಲ್ಲಿ ಪ್ರವಾಸ ಭಾಗ್ಯ

ಬೆಂಗಳೂರು: ದೀಪಾ ಅಕಾಡೆಮಿಯ 45 ಅಂಧ ಮಕ್ಕಳು ಇದೇ 17ರಂದು ಬೆಂಗಳೂರಿನ ಕೆಂಪೇಗೌಡ ಅಂತರರಾ-ಷ್ಟ್ರೀಯ ವಿಮಾನ ನಿಲ್ದಾಣದಿಂದ ಸೇಲಂಗೆ ವಿಮಾನದಲ್ಲಿ ಪ್ರವಾಸ ಕೈಗೊ-ಳ್ಳಲಿದ್ದಾರೆ ಎಂದು ಸ್ವೀಟ್‌ನೆಸ್ ಆಫ್ ಬ್ಲೈಂಡ್‌ನೆಸ್ (ಎಸ್‌ಒಬಿ) ಸಂಸ್ಥೆ ತಿಳಿಸಿದೆ.

'ಪ್ರವಾಸದಲ್ಲಿ ಮಕ್ಕಳೊಂದಿಗೆ ಎಂಟು ಮಂದಿ ಸ್ವಯಂ ಸೇವಕರು ತೆರಳಲಿದ್ದಾರೆ. 45 ಮಕ್ಕಳಿಗೆ ವಿಮಾನದಲ್ಲಿ ಇದು ಮೊದಲ ಪ್ರಯಾಣವಾಗಿದ್ದು, ಈ ಮಕ್ಕಳ ಬಹುದಿನಗಳ ಕನಸು ಈಗ ನನಸಾಗುತ್ತಿದೆ ಎಂದು ಸಂಸ್ಥೆಯ ನೇತೃತ್ವ ವಹಿಸಿರುವ ಪಿ. ಸತೀಶ್ ತಿಳಿಸಿದರು.

'ನಮ್ಮ ಸಂಸ್ಥೆಯ ಮೂಲಕ ಇದುವರೆಗೂ 3 ಸಾವಿರಕ್ಕೂ ಹೆಚ್ಚು ಅಂಧರನ್ನು ದೇಶದ ವಿವಿಧ ದೇವಸ್ಥಾನಗಳು, ಕ್ರಿಕೆಟ್ ಕ್ರೀಡಾಂಗಣ, ಜಲಪಾತಗಳು ಹಾಗೂ ತಾರಾಲಯಗಳಿಗೆ ಕರೆದುಕೊಂಡು ಹೋಗಲಾಗಿದೆ' ಎಂದು ಮಾಹಿತಿ ನೀಡಿದರು.

"ಪಿಎಂ ವಿಶ್ವಕರ್ಮ ಯೋಜನೆಯು ದೇಶಾದ್ಯಂತ ಕಾರ್ಮಿಕರು ಮತ್ತು ಶಿಲ್ಪಕಾರರ ಕೌಶಲ್ಯಗಳನ್ನು ಹೆಚ್ಚಿಸುವುದು ಅಷ್ಟೆ ಅಲ್ಲದೆ, ಅವರಿಂದ ತಯಾರಿಸಲ್ಪಡುವ ಉತ್ಪನ್ನಗಳಿಗೆ ವಿಶ್ವದಾದ್ಯಂತ ಹೊಸ ಮನ್ನಣೆ ಒದಗಿಸುತ್ತದೆ."

ಪ್ರಧಾನಮಂತ್ರಿ ನರೇಂದ್ರ ಮೋದಿ
ಸೇವೆಯೆ ಸಂಕಲ್ಪ, ರಾಷ್ಟ್ರ ಮೊದಲು ಎಂಬುದೇ ಪ್ರೇರಣೆ... 75 ವರ್ಷ

ಪಿಎಂ ವಿಶ್ವಕರ್ಮ
ಮತ್ತು
ಎಸ್‌ಸಿ-ಎಸ್‌ಟಿ ಹಬ್
ಮಹಾ ಸಮ್ಮೇಳನ, 2025

ಇವರ ಅಧ್ಯಕ್ಷತೆಯಲ್ಲಿ

ಶ್ರೀ ಜಿತನ್ ರಾಮ್ ಮಾಂಝಿ
ಕೇಂದ್ರ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಖಾತೆ ಸಚಿವರು

ಸುಶ್ರೀ ಶೋಭಾ ಕರಂದ್ಲಾಜೆ
ರಾಜ್ಯ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಖಾತೆ ಸಚಿವೆ

ಪಿಎಂ ವಿಶ್ವಕರ್ಮ

- 30 ಲಕ್ಷ ವಿಶ್ವಕರ್ಮರ ಯಶಸ್ವಿ ನೋಂದಣಿ
- 23 ಲಕ್ಷ ವಿಶ್ವಕರ್ಮರು ಕೌಶಲ್ಯ ತರಬೇತಿ ಪಡೆದಿದ್ದಾರೆ
- 5 ಲಕ್ಷ ವಿಶ್ವಕರ್ಮರಿಗೆ ರೂ. 4,166 ಕೋಟಿ ಮೌಲ್ಯದ ಸಾಲ ಮಂಜೂರಾತಿ
- 8 ಲಕ್ಷ ಟೂಲ್‌ಕಿಟ್ಸ್ ವಿತರಿಸಲಾಗಿದೆ

ರಾಷ್ಟ್ರೀಯ ಎಸ್‌ಸಿ–ಎಸ್‌ಟಿ ಹಬ್ ಯೋಜನೆ

- 1.5 ಲಕ್ಷಕ್ಕೂ ಅಧಿಕ ಎಸ್‌ಸಿ/ಎಸ್‌ಟಿ'ಗಳು ಫಲಾನುಭವ ಪಡೆದಿದ್ದಾರೆ
- ಎಸ್‌ಸಿ/ಎಸ್‌ಟಿ ಘಟಕಗಳಿಂದ ಸಾರ್ವಜನಿಕ ಖರೀದಿಯಲ್ಲಿ 36 ಪಟ್ಟು ಹೆಚ್ಚಳವಾಗಿದೆ

ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ (ಪಿಎಂಇಜಿಪಿ)

- 10 ಲಕ್ಷ ಘಟಕಗಳಿಗೆ ರೂ.28,333 ಕೋಟಿ ಮೌಲ್ಯದ ಸಬ್ಸಿಡಿ ಲಭಿಸಿದೆ
- 86 ಲಕ್ಷ ಉದ್ಯೋಗ ಸೃಷ್ಟಿಯಾಗಿವೆ

CBC 25113/15/0030/2526

ಸಮ್ಮಾನ | ಸಾಮರ್ಥ್ಯ | ಸಮೃದ್ಧಿ   17 ಸೆಪ್ಟೆಂಬರ್ 2025, ಬೆಳಗ್ಗೆ 10.30, ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್, ಬೋಧಗಯಾ, ಬಿಹಾರ್

ವಿಮಾನ ತಯಾರಿ ಬೆರಗು

• ಸುಕೃತ ಎಸ್.

ವಿಮಾನ ಏರುವುದು, ಬಾನಂಗಳದಲ್ಲಿ ತೇಲುವುದು, ಕಿಟಕಿ ಹತ್ತಿರ ಕೂತು ಮೇಲಿನಿಂದಲೇ ಮೋಡಗಳ ಸಂಚಾರ ನೋಡುವುದು, ಆಕಾಶ ಮತ್ತೂ ಎತ್ತರ ಇರಬಹುದೇ ಎಂದು ಕಿಟಕಿಯಿಂದ ಇಣುಕಿ ಮೇಲೆ ನೋಡುವುದು... ಮೊದಲ ಬಾರಿಗೆ ವಿಮಾನ ಏರಿದ ಭಯದ ನಡುವೆಯೂ ನಾನು–ನೀವು ಅನುಭವಿಸಿದ, ಕುತೂಹಲಿಸಿದ ವಿಚಾರಗಳೇ ಇವು.

ಬಾನಂಗಳದಲ್ಲಿ ಸದ್ದು ಮಾಡುತ್ತಿದ್ದಂತೆಯೇ, ಇದು ವಿಮಾನವೇ ಎಂದು ಆಟ ಬಿಟ್ಟು ಮನೆಯಂಗಳದಲ್ಲಿ ನಿಂತು ನಭಕ್ಕೇರಿದ ವಿಮಾನವನ್ನು, ಅದು ಕಣ್ಣದೂರ ದಾಟುವವರೆಗೂ ನೋಡಿ ನಾನೂ ಅದನ್ನೇರಬೇಕು ಅಂದುಕೊಂಡವರೂ ಹೌದು. ಲಾರಿ, ಬಸ್ಸು, ಕಾರು, ಆಟೊ– ಇವು ನಿತ್ಯದವು. ವಿಮಾನ ಏರುವುದು ಮಾತ್ರ ಎಲ್ಲರ ಕನಸು. ಬೇರೆ ವಾಹನಗಳಿಗಿಂತ ವಿಮಾನ ಹೇಗೆ ಭಿನ್ನವೋ ಅದರ ತಯಾರಿಕೆ ಕೂಡ ಭಿನ್ನವೇ. ಹಾಗಾದರೆ, ಅದು ಹೇಗೆ ಭಿನ್ನ? ಕೆಲವು ಮಾಹಿತಿ ಇಲ್ಲಿವೆ:

ವಿಮಾನ ತಯಾರಿಕೆಯು ಅತ್ಯಂತ ಗರಿಷ್ಠ ಮಟ್ಟದ ನಿಖರತೆ ಬೇಡುವ ಕೆಲಸ. ಇತರ ವಾಹನಗಳಿಗೂ ಇದು ಅಗತ್ಯವೇ ಸರಿ. ಆದರೆ, ಒಂದು ಸಣ್ಣ ತಪ್ಪು, ಅಲಕ್ಷ್ಯ ಕೂಡ ಒಟ್ಟಿಗೆ ನೂರಾರು ಜನರ ಪ್ರಾಣಕ್ಕೆ ಕುತ್ತು ತರಬಹುದು. ಇದೇ ಕಾರಣಕ್ಕೆ ವಿಮಾನ ತಯಾರಿಕೆಯು ಕಠಿಣವಾದ ಕೆಲಸ.

ಇದೊಂದು ಬಹಳ ನಾಜೂಕಿನ ಕೆಲಸ. ವಿಮಾನದ ಪ್ರತಿಯೊಂದು ಬಿಡಿಭಾಗವೂ ಒಂದೇ ಗುಣಮಟ್ಟದಲ್ಲಿ ಇರಬೇಕು. ಅದರ ಆಕಾರ, ಬಣ್ಣ, ಬಾಳಿಕೆ, ಬಿಡಿಭಾಗ ತಯಾರಿಕೆಗೆ ಬಳಸಿದ ಕಚ್ಚಾ ವಸ್ತುವಿನ ಗುಣಮಟ್ಟ... ಒಂದು ಬಿಡಿಭಾಗದಲ್ಲಿ ಒಂದು ರಂಧ್ರ ಇರುತ್ತದೆ ಎಂದುಕೊಳ್ಳಿ. ಆ ರಂಧ್ರದ ಅಳತೆಯಲ್ಲಿ ಕೂದಲೆಳೆಯ ಒಂದನೇ ನೂರರಷ್ಟೂ ವ್ಯತ್ಯಾಸ ಇರಕೂಡದು. ಬೇರೆ ವಾಹನ ತಯಾರಿಕೆಯಲ್ಲಿ ಇದು ಸ್ವಲ್ಪ ಆಚೆ–ಈಚೆಯಾದರೂ ನಡೆಯುತ್ತದೆ.

ಬಿಡಿಭಾಗಗಳ ವಿನ್ಯಾಸ, ಅದರ ಪರೀಕ್ಷೆ ಇವೆಲ್ಲವನ್ನೂ ವಿಮಾನ ತಯಾರಿಕಾ ಕಂಪನಿಗಳೇ ನಿರ್ಧರಿಸುತ್ತವೆ. ಆ ಕಂಪನಿಗಳು ರೂಪಿಸಿದ ನಿಯಮದಂತೆ ಬಿಡಿಭಾಗಗಳ ತಯಾರಿಕಾ ಕಂಪನಿಗಳು ತಯಾರಿಕೆ ಮಾಡುತ್ತವೆ. ಒಂದು ನಟ್ ಅಥವಾ ಬೋಲ್ಟ್ ಇರಲಿ, ಅದರ ಗುಣಮಟ್ಟ ಪರೀಕ್ಷೆಯ ವಿವರವನ್ನು ಬಿಡಿಭಾಗ ತಯಾರಿಕಾ ಕಂಪನಿಗಳು ಸುಮಾರು 40 ವರ್ಷ ಕಾಪಿಡಬೇಕು. ಒಂದು ಸಣ್ಣ ಅಪಘಾತವಾದರೂ ಸರಿ, ಯಾವ ಭಾಗ ಯಾರು ತಯಾರಿಸಿದ್ದು ಎನ್ನುವ ಮಾಹಿತಿ ವಿಮಾನ ತಯಾರಿಕಾ ಕಂಪನಿ ಬಳಿ ಇರಬೇಕು. ಒಂದೊಂದು ಬಿಡಿಭಾಗಕ್ಕೂ ಅದರ ಇಡೀ ಜಾತಕ ಇರುವ ಸಂಖ್ಯೆಯೊಂದನ್ನು ನೀಡಲಾಗುತ್ತದೆ.

ಇಲ್ಲಿ ಸ್ವಚ್ಛತೆಗೆ ಭಾರಿ ಆದ್ಯತೆ ನೀಡಲಾಗುತ್ತದೆ. ಯಾವುದೇ ಬಿಡಿಭಾಗದ ಮೇಲೆಯೂ ಒಂದು ಕೂದಲೆಳೆಯಷ್ಟೂ ಕಸ, ದೂಳು ಇರಬಾರದು. ಬಿಡಿಭಾಗಗಳ ತಯಾರಿಕೆ ಕಂಪನಿಗಳಿಗೆ ಭೇಟಿ ನೀಡಿದರೆ, ಇದು ಚೆನ್ನಾಗಿ ಅರಿವಿಗೆ ಬರುತ್ತದೆ. ಅಲ್ಲಿನ ಕಾರ್ಮಿಕರು ಕೂಡ ಬೂಟು, ತಲೆಗೊಂದು ಟೋಪಿ, ಕೈಗಳಿಗೆ ಗವಸು, ಕಣ್ಣುಗಳಿಗೆ ಕನ್ನಡಕಗಳನ್ನು ಹಾಕಿಕೊಂಡೇ ಇರುತ್ತಾರೆ. ಇಡೀ ತಯಾರಿಕಾ ಘಟಕವನ್ನೇ ಸ್ವಚ್ಛವಾಗಿ ಇಡಲಾಗುತ್ತದೆ.

ಗುಣಮಟ್ಟ ಪರೀಕ್ಷೆಯ ವಿಚಾರ ಕೂಡ ಅಷ್ಟೇ ಕುತೂಹಲಕಾರಿ. ವಿಮಾನ ತಯಾರಿಕಾ ಕಂಪನಿಗಳ ನಿಯಮಗಳ ಅನುಸಾರವೇ ಕೆಲಸಗಳು ನಡೆಯುತ್ತವೆ. ಗುಣಮಟ್ಟ ಪರೀಕ್ಷೆಯಲ್ಲೂ ಹೀಗೆಯೇ. ವಿಮಾನದ ರೆಕ್ಕೆ ಇರಬಹುದು, ಅದರ ಮೂತಿ ಇರಬಹುದು... ಎಲ್ಲಾ ಬಿಡಿ ಭಾಗಗಳಿಗೂ ಅದರ ಬಣ್ಣ ಬಾಳಿಕೆ ವಿಚಾರದಲ್ಲಿಯೂ ಒಂದೊಂದು ರೀತಿಯ ಪರೀಕ್ಷೆ ನಡೆಸಲಾಗುತ್ತದೆ.

ವಿಮಾನವೊಂದು ಅತೀವ ಉಷ್ಣತೆ ಮತ್ತು ವಿಪರೀತ ಚಳಿಯ ವಾತಾವರಣದಲ್ಲಿ ಕಾರ್ಯಾಚರಿಸುತ್ತದೆ. ಕಾರ್ಯಾಚರಣೆಯ ವೇಳೆ ವಿಮಾನದ ಕೆಲ ಬಿಡಿಭಾಗಗಳು 1,000 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಯಾಗಿದ್ದರೆ, ಕೆಲವು ಭಾಗಗಳು –70 ಡಿಗ್ರಿಯಷ್ಟು ತಂಪಾಗಿರುತ್ತವೆ. ವಿಮಾನದ ಹೊರಮೈ ಬಿಡಿಭಾಗಗಳು ಇಷ್ಟು ತೀವ್ರ ತಾಪಮಾನ ಮತ್ತು ತಾಪಮಾನದ ಈ ಏರುಪೇರನ್ನು ಏಕಕಾಲದಲ್ಲಿ ತಾಳಿಕೊಳ್ಳಬೇಕು. ಇದಕ್ಕಾಗಿಯೇ ಉತ್ಕೃಷ್ಟ ಗುಣಮಟ್ಟದ ಟೈಟಾನಿಯಂ ಲೋಹದಿಂದ ಕವಚಗಳನ್ನು ರೂಪಿಸಿರಲಾಗುತ್ತದೆ. ಅಲ್ಲದೆ, ತಯಾರಿಕೆಯ ನಂತರ ಹೊರಭಾಗಗದ ಬಿಡಿ ಭಾಗಗಳ ಮಾದರಿಯನ್ನು ಓವನ್ ರೀತಿಯ ಯಂತ್ರವೊಂದರಲ್ಲಿ ತಿಂಗಳುಗಟ್ಟಲೆ ಇಡಲಾಗುತ್ತದೆ. ಇನ್ನೊಂದು ತಿಂಗಳು ನೀರಿನಲ್ಲಿ ಮುಳುಗಿಸಿ ಇಡಲಾಗುತ್ತದೆ! ಇಷ್ಟೆಲ್ಲಾ ಕಠಿಣ ಪರೀಕ್ಷೆಯ ಬಳಿಕ ಬಿಡಿ ಭಾಗದ ಬಣ್ಣವೂ ಸೇರಿದಂತೆ ಯಾವುದಕ್ಕೂ ಹಾನಿಯಾಗಬಾರದು.

ಹೀಗೆ ಪ್ರತಿಯೊಂದು ಬಿಡಿ ಭಾಗವೂ ವಿವಿಧ ಪರೀಕ್ಷೆಗಳಿಗೆ ಒಳಪಟ್ಟು, ಕೊನೆಯಲ್ಲಿ ಒಂದೆಡೆ ಸೇರಿಕೊಂಡು ವಿಮಾನ ಹಾರಾಟಕ್ಕೆ ಸಿದ್ಧವಾಗುತ್ತದೆ. ಮತ್ತೆ ನಮ್ಮ ಕನಸಿಗೆ ರೆಕ್ಕೆ ಹಚ್ಚುತ್ತವೆ. ❖

ವಿಮಾನ ತಯಾರಿಕೆಗೆ ಎಷ್ಟು ಸಮಯ ಬೇಕು...

ಏರ್‌ಬಸ್, ಬೋಯಿಂಗ್; ಜಗತ್ತಿನ ಪ್ರಮುಖ ವಿಮಾನ ತಯಾರಿಕಾ ಕಂಪನಿಗಳು

₹810 ಕೋಟಿ– ₹830 ಕೋಟಿ; 180 ಸೀಟಿನ ಒಂದು ವಿಮಾನ ತಯಾರಿಕೆಗೆ ತಗುಲುವ ಅಂದಾಜು ವೆಚ್ಚ

60 ಲಕ್ಷ; ಬೋಯಿಂಗ್ 747 ವಿಮಾನದಲ್ಲಿ ಇರುವ ಬಿಡಿ ಭಾಗಗಳು (ಒಂದೊಂದು ಕಂಪನಿಯ ಒಂದೊಂದು ವಿನ್ಯಾಸ ವಿಮಾನದ ಬಿಡಿ ಭಾಗಗಳ ಸಂಖ್ಯೆ ಒಂದೊಂದು ರೀತಿ ಇರುತ್ತದೆ)

8-12 ತಿಂಗಳು; ಏರ್‌ಬಸ್‌ನ A380 ಮಾದರಿಯ ಒಂದು ವಿಮಾನ ತಯಾರಿಕೆಗೆ (ಬಿಡಿ ಭಾಗಗಳ ತಯಾರಿಕೆಯಿಂದ ಹಿಡಿದು, ವಿಮಾನ ಜೋಡಣೆವರೆಗೆ) ಬೇಕಾದ ಸಮಯ (ಒಂದು ಕಾರನ್ನು 20 ಗಂಟೆಯಲ್ಲಿ ಜೋಡಿಸಿ, ಚಲಾಯಿಸಲು ಸಿದ್ಧಪಡಿಸಬಹುದು)

0-12 ವರ್ಷ; ಹೊಸದಾದ ವಿನ್ಯಾಸ ರೂಪಿಸಿ, ವಿಮಾನ ತಯಾರಿಸಲು ಬೇಕಾದ ಸಮಯ

50-60 ಸಾವಿರ; ಒಂದು ವಿಮಾನ ತಯಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ (ಬಿಡಿ ಭಾಗಗಳ ತಯಾರಿಕೆ, ಅದರ ಕಚ್ಚಾ ವಸ್ತು ಸಂಗ್ರಹದಿಂದ, ವಿಮಾನ ಜೋಡಣೆವರೆಗೆ)

ಕಂಪನಿಯಿಂದ ಕಂಪನಿಗೆ, ವಿಮಾನದ ವಿನ್ಯಾಸದಿಂದ ವಿನ್ಯಾಸಕ್ಕೆ ಇಲ್ಲಿನ ಹಲವು ಅಂಕಿ–ಅಂಶಗಳು ವ್ಯತ್ಯಾಸಗೊಳ್ಳುತ್ತವೆ

ಒಂದು ವಿಮಾನ ತಯಾರಿಕೆಗೆ ಬೇಕಾದ ಸಾಕಷ್ಟು ಮೂಲಸೌಕರ್ಯಗಳು ಬೆಳಗಾವಿಯ ಘಟಕದಲ್ಲಿವೆ. ಏರ್‌ಬಸ್, ಬೋಯಿಂಗ್‌ಗೆ ಬಿಡಿ ಭಾಗಗಳನ್ನು ತಯಾರಿಕೆ ಮಾಡಿ ಕೊಡುತ್ತೇವೆ ಹೌದು. ಆದರೆ, ಪೂರ್ಣ ವಿಮಾನವನ್ನು ತಯಾರು ಮಾಡುವ ಕಂಪನಿಯನ್ನು ಭಾರತದಲ್ಲಿ ಹುಟ್ಟು ಹಾಕಲು ಅಗತ್ಯವಾದ ಬೇಡಿಕೆ ಇನ್ನೂ ಇಲ್ಲ. ದೇಶದಲ್ಲಿ ಈ ಕ್ಷೇತ್ರದಲ್ಲಿ ಅಭಿವೃದ್ಧಿ, ಹಣಕಾಸಿನ ಸಹಕಾರ ಅಗತ್ಯವಿದೆ

ಅರವಿಂದ ಮೆಳ್ಳಿಗೇರಿ, 'ಏಕಸ್' ಸ್ಥಾಪಕ

'ನಮ್ಮ ಬಿಡಿಭಾಗಗಳು ಇಲ್ಲದ ವಿಮಾನಗಳೇ ಇಲ್ಲ'

'ನೀವು ಜಗತ್ತಿನ ಯಾವ ಮೂಲೆಯಲ್ಲಾದರೂ ವಿಮಾನ ಹತ್ತಿ. ನಮ್ಮ ಕಂಪನಿಯ ಬಿಡಿಭಾಗಗಳು ಇಲ್ಲದ ವಿಮಾನಗಳೇ ಇಲ್ಲ' ಎನ್ನುವುದು ಬೆಳಗಾವಿಯ ಏಕಸ್ ಕಂಪನಿಯ ಹೆಮ್ಮೆಯ ಮಾತುಗಳು. ಪ್ರಮುಖವಾಗಿ ಇದೊಂದು ವಿಮಾನಗಳ ಬಿಡಿಭಾಗಗಳ ತಯಾರಿಕೆ ಕಂಪನಿ. ಅರವಿಂದ ಮೆಳ್ಳಿಗೇರಿ ಅವರು 2006ರಲ್ಲಿ ಇದನ್ನು ಆರಂಭಿಸಿದರು. ಬೆಳಗಾವಿ ನಗರದಿಂದ ತುಸು ದೂರದಲ್ಲಿ ಸುಮಾರು 250 ಎಕರೆ ವಿಸ್ತೀರ್ಣದಲ್ಲಿ ಈ ಕಂಪನಿ ಕಾರ್ಯನಿರ್ವಹಿಸುತ್ತಿದೆ.

ಏರ್‌ಬಸ್, ಬೋಯಿಂಗ್ ಕಂಪನಿಗಳಿಗೆ ಪ್ರಮುಖವಾಗಿ ಈ ಕಂಪನಿಯು ಬಿಡಿಭಾಗಗಳನ್ನು ತಯಾರಿಸಿ ಕೊಡುತ್ತದೆ. ಫ್ರಾನ್ಸ್‌ನ ಪ್ಯಾರಿಸ್, ಚೋಲೆ ನಗರಗಳಲ್ಲಿ ಮತ್ತು ಅಮೆರಿಕದ ಟೆಕ್ಸಾಸ್ ರಾಜ್ಯದಲ್ಲಿ ಈ ಕಂಪನಿಯ ತಯಾರಿಕಾ ಘಟಕಗಳಿವೆ. ಬೆಳಗಾವಿಯ ಘಟಕದಲ್ಲಿ ಸುಮಾರು 4 ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ವಿಮಾನ ತಯಾರಿಕಾ ಕ್ಷೇತ್ರದಲ್ಲಿ ದೇಶದಲ್ಲೇ ಇರುವ ಅತಿ ದೊಡ್ಡ ತಯಾರಿಕ ಘಟಕ ಇದಾಗಿದೆ. ವಿಮಾನದ ರೆಕ್ಕೆಗಳಿಂದ ಹಿಡಿದು, ನೆಟ್–ಬೋಲ್ಟ್ ವರೆಗೂ ಈ ಕಂಪನಿ ತಯಾರಿಸುತ್ತದೆ.

ಜಗತ್ತಿನ ಬೇರೆ ಬೇರೆ ಕಂಪನಿಗಳಿಗಾಗಿ ಆ ಕಂಪನಿಗಳ ಬ್ರ್ಯಾಂಡ್‌ನಲ್ಲಿಯೇ ಆಟಿಕೆಗಳನ್ನೂ ನಾನ್‌ಸ್ಟಿಕ್ ಪಾತ್ರೆಗಳನ್ನು ಇದೇ ಬೆಳಗಾವಿಯ ಘಟಕದಲ್ಲಿ ತಯಾರಿಕೆ ಮಾಡಲಾಗುತ್ತದೆ.

4ಜಿ–5ಜಿಗಳ 'ಕರೆ'ದಾಟ

• ಕೃಷ್ಣಭಟ್

ನಮ್ಮ ಕೆಲವು ಸೌಲಭ್ಯಗಳು ನಮ್ಮ ಬಳಿ ಇಲ್ಲದಿದ್ದಾಗಲೂ ಇದೆ ಎಂದು ಭಾವಿಸುವುದರಲ್ಲೇ ಖುಷಿ ಇರುತ್ತದೆ! ಈಗ ನೋಡಿ, ಸುಮಾರು ಒಂದು ವರ್ಷದಿಂದಲೂ 5ಜಿಯನ್ನು ಬಳಸುತ್ತಿದ್ದೇವೆ. ವಾಟ್ಸ್ಯಾಪ್‌ನಲ್ಲಿ ಮೆಸೇಜ್, ಫೋಟೊ ಸೆಂಡ್ ಬಟನ್ ಒತ್ತುತ್ತಿದ್ದ ಹಾಗೆಯೇ ಆ ಕಡೆ ಇದ್ದವನಿಗೆ ತಲುಪುತ್ತದೆ. ಯೂಟ್ಯೂಬ್ ತೆರೆದರೆ ಸಾಕು ಒಂದು ಚೂರೂ ಸ್ಕ್ರೀನ್ ಮೇಲೆ ಉಂಡೆ ಕಟ್ಟದೇ ಡೇಟಾ ಬರುತ್ತಿರುತ್ತದೆ. ಇನ್‌ಸ್ಟಾಗ್ರಾಮ್ ಕೂಡ ಅಷ್ಟೇ ಸ್ಪೀಡ್.

ಅದೇ ಖುಷಿಯಲ್ಲಿ ಯಾರಿಗಾದರೂ ಫೋನ್ ಮಾಡಿದರೆ ಕೂಡ ನಮಗೆ ಡೇಟಾ ಸಿಕ್ಕ ಸ್ಪೀಡಲ್ಲೇ ನಮ್ಮ ಕಾಲ್ ಡೇಟಾ ಕೂಡ ಹೋಗುತ್ತಿದೆ ಎಂದು ನಾವು ಅಂದುಕೊಳ್ಳುತ್ತಿದ್ದೇವೆ.

ಆದರೆ ವಾಸ್ತವ ಹಾಗಿಲ್ಲ. ನಾವು ಇನ್ನೂ 4ಜಿಯಲ್ಲೇ ಫೋನ್ ಮಾಡುತ್ತಿದ್ದೆವು. ಈಗ, ಅಂದರೆ ವರ್ಷಕ್ಕೂ ಹೆಚ್ಚು ಕಾಲ ಕಳೆದ ಮೇಲೆ ನಮಗೆ 'VoNR' ಸೌಲಭ್ಯ ಸಿಗುತ್ತಿದೆ. ಇದು ಬಹುತೇಕ ನೆಟ್‌ವರ್ಕ್ ಕಂಪನಿಗಳ ಮಟ್ಟದಲ್ಲೇ ನಡೆಯುವುದರಿಂದ ನಮಗೆ ಇದರ ಅರಿವಿಗೆ ಬರುವುದಿಲ್ಲ. ನಮಗೆ ಅರಿವಿಗೆ ಬರುವುದು ಯಾವಾಗ ಎಂದರೆ, ಫೋನ್ ಕಾಲ್‌ನಲ್ಲಿ ಇದ್ದಾಗ ನಮ್ಮ ಸ್ಮಾರ್ಟ್‌ಫೋನ್‌ನ ನೆಟ್‌ವರ್ಕ್ ಸ್ಟೇಟಸ್ ತೋರಿಸುವ ಜಾಗದಲ್ಲಿ 5G ಬದಲಿಗೆ 'LTE' ಎಂದು ಕಾಣಿಸುತ್ತದೆ. ತೀರಾ ಸೂಕ್ಷ್ಮವಾಗಿ ಗಮನಿಸಿದವರಿಗೆ ಇದು ಗೊತ್ತಾಗಿರಬಹುದು.

ಸಾಮಾನ್ಯವಾಗಿ ಡೇಟಾ ವೇಗ ಹೆಚ್ಚಾದ ವೇಗದಲ್ಲೇ ಕರೆ ಸೌಲಭ್ಯದ ತಂತ್ರಜ್ಞಾನವೂ ಬದಲಾಗುವುದಿಲ್ಲ. ಇದಕ್ಕೆ ಕಾರಣ ಇಷ್ಟೇ; ಇವೆರಡೂ ಬೇರೆ ಬೇರೆ ವಿಧಾನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ.

ಈ 4G ಡೇಟಾ ಬಳಕೆಗೆ ಬಂದ ಸುಮಾರು ಒಂದು ವರ್ಷಕ್ಕೂ ಹೆಚ್ಚು ತಡವಾಗಿ 'ವಾಯ್ಸ್ ಓವರ್ ಎಲ್‌ಟಿಇ' ಎಂಬ ತಂತ್ರಜ್ಞಾನ ಬಂದಿತ್ತು. ಇದರಿಂದ ನಾವು ಅಲ್ಲಿಯವರೆಗೆ ರೇಡಿಯೋ ಫ್ರೀಕ್ವೆನ್ಸಿಯಲ್ಲಿ ಫೋನ್ ಕರೆಗಳನ್ನು ಮಾಡುತ್ತಿದ್ದ ಕಾಲವನ್ನು ಹಿಂದೆ ಹಾಕಿ ಡೇಟಾ ಬಳಸಿ ಫೋನ್ ಮಾಡುವ ಕಾಲಕ್ಕೆ ದಾಪುಗಾಲು ಹಾಕಿದ್ದೆವು. ಆಗ ರೇಡಿಯೋ ಫ್ರೀಕ್ವೆನ್ಸಿಯಲ್ಲಿ ನಾವು ಮಾಡುತ್ತಿದ್ದ ಕರೆ ಗುಣಮಟ್ಟ ತೀರಾ ಕಡಿಮೆ ಇತ್ತು. VoLTE ಬರುತ್ತಿದ್ದ ಹಾಗೆಯೇ ಕರೆ ಗುಣಮಟ್ಟದಲ್ಲಿ ಅಗಾಧ ವ್ಯತ್ಯಾಸವಾಯಿತು. ಧ್ವನಿಯಲ್ಲಿ ಸ್ಪಷ್ಟತೆ ಬಂತು. ಅಲ್ಲಿಯವರೆಗೆ ನಾವು ರೇಡಿಯೋ ಫ್ರೀಕ್ವೆನ್ಸಿಯಲ್ಲಿ ಕರೆ ಮಾಡುತ್ತಿದ್ದುದರಿಂದ ಜನರ ಅಸಲಿ ಧ್ವನಿಗಿಂತ ವಿಭಿನ್ನವಾದ ಧ್ವನಿ ನಮಗೆ ಫೋನ್‌ನಲ್ಲಿ ಕೇಳಿಸುತ್ತಿತ್ತು. ಆದರೆ, VoLTE ಬಂದ ಮೇಲೆ ಹಾಗಾಗಲಿಲ್ಲ. ಅಲ್ಲಿ ಫ್ರೀಕ್ವೆನ್ಸಿಯ ಆಟ ಇರಲಿಲ್ಲ. ಅದು ನಮ್ಮ ಫೋನ್‌ನಲ್ಲೇ ನಾವು ಮಾತನಾಡಿದ್ದನ್ನು ಡೇಟಾ ರೂಪದಲ್ಲಿ ಸೆರೆಹಿಡಿದು ಅದನ್ನು ಡೇಟಾ ರೂಪದಲ್ಲೇ ಕಳುಹಿಸುತ್ತಿತ್ತು.

ಈಗಲೂ ನಾವು VoLTEಯಲ್ಲೇ ಕರೆ ಮಾಡುತ್ತಿದ್ದೇವೆ. ಈಗ 5G ಯಲ್ಲಿ ನಾವು ಕರೆ ಮಾಡಬೇಕು ಎಂದರೆ ಟೆಲಿಕಾಂ ಕಂಪನಿಗಳು ವಾಯ್ಸ್ ಓವರ್ ನ್ಯೂ ರೇಡಿಯೋ ಅಥವಾ ವಾಯ್ಸ್ ಓವರ್ 5G ಎಂಬ ತಂತ್ರಜ್ಞಾನವನ್ನು ತಮ್ಮ ನೆಟ್‌ವರ್ಕ್‌ನಲ್ಲಿ ಅಳವಡಿಸಬೇಕು. ಇಡೀ ನೆಟ್‌ವರ್ಕ್ ಈ ತಂತ್ರಜ್ಞಾನದಿಂದ ಅಪ್‌ಗ್ರೇಡ್ ಆಗಬೇಕು. ಆಗ ಮಾತ್ರ ನಾವು 5G ಪೂರ್ಣ ಪ್ರಯೋಜನ ಪಡೆಯಬಹುದು.

ಏನಿದು VoNR?

VoLTE ಇದ್ದ ಹಾಗೆಯೇ ಇದೊಂದು ಹೊಸ ತಂತ್ರಜ್ಞಾನ. ಇದರಲ್ಲಿ ವಾಯ್ಸ್ ಓವರ್ ಲಾಂಗ್ ಟರ್ಮ್ ಇವಾಲ್ಯುಶನ್‌ನಲ್ಲಿ ಇದ್ದ ಧ್ವನಿಯನ್ನು ಡೇಟಾಗೆ ಪರಿವರ್ತಿಸುವ ಕೊಡೆಕ್‌ಗಳು ಇದರಲ್ಲಿ ಹೊಸ ರೂಪ ತಾಳಿರುತ್ತವೆ.

ಈ ಕೊಡೆಕ್‌ಗಳು ಇನ್ನಷ್ಟು ಸ್ಪಷ್ಟ ಧ್ವನಿಯನ್ನು ಸಾಗಿಸುವುದಕ್ಕೆಂದು ಧ್ವನಿಯನ್ನು ಹೆಚ್ಚು ಡೇಟಾ ಇರುವ ಪ್ಯಾಕೆಟ್ ಆಗಿ ಸಿದ್ಧಪಡಿಸುತ್ತದೆ. ಆಗ ಧ್ವನಿ ಇನ್ನಷ್ಟು ಸ್ಪಷ್ಟವಾಗುತ್ತದೆ. ಅಲ್ಲದೆ, ಇದರ ಇನ್ನೊಂದು ಮುಖ್ಯ ಅನುಕೂಲವೆಂದರೆ ಕರೆ ಕನೆಕ್ಟ್ ಆಗುವ ಸಮಯ ಕಡಿಮೆಯಾಗುತ್ತದೆ. ಈಗಾಗಲೇ ರೇಡಿಯೋ ಫ್ರೀಕ್ವೆನ್ಸಿಗೆ ಹೋಲಿಸಿದರೆ VoLTE ಯಲ್ಲಿ ಈ ಅನುಕೂಲ ಸಿಕ್ಕಿದೆ. ಅದಕ್ಕಿಂತಲೂ ಇನ್ನೂ ಬೇಗ VoNRನಲ್ಲಿ ಕಾಲ್ ಕನೆಕ್ಟ್ ಆಗುತ್ತದೆ. ಅಂದರೆ, ನಾವು ಕರೆ ಬಟನ್ ಒತ್ತಿದ ನಂತರ ಆ ಕಡೆ ಇದ್ದವನ ಮೊಬೈಲ್ ರಿಂಗ್ ಆಗಲು ಶುರುವಾಗುವ ವರೆಗಿನ ಸಮಯ ಕಡಿಮೆಯಾಗುತ್ತದೆ. ಕರೆ ಬಟನ್ ಒತ್ತಿದ ತಕ್ಷಣವೇ ಆ ಕಡೆ ಇದ್ದವನಿಗೆ ರಿಂಗ್ ಆಗುತ್ತದೆ. ಈಗ ವಾಟ್ಸಾಪ್ ಕರೆ ಮಾಡುವಾಗ ಎಷ್ಟು ತಕ್ಷಣ ಕರೆ ಹೋಗುತ್ತದೆಯೋ ಅಷ್ಟೇ ಬೇಗ VoNR ನಲ್ಲೂ ನಾವು ಕರೆ ಮಾಡಬಹುದು. ಏಕೆಂದರೆ, 4Gಗೆ ಹೋಲಿಸಿದರೆ 5G ನೆಟ್‌ವರ್ಕ್ ಲ್ಯಾಟೆನ್ಸಿ ತುಂಬಾ ಕಡಿಮೆ ಇದೆ. ಇದರಲ್ಲಿ ಡೇಟಾ ತುಂಬಾ ಬೇಗ ಚಲಿಸುತ್ತದೆ.

ಕಾಲ್ ಡ್ರಾಪ್ ಸಮಸ್ಯೆಗೆ ಪರಿಹಾರ?

ಎಲ್ಲರ ಮೊದಲ ಪ್ರಶ್ನೆ ಬರುವುದೇ ಕರೆ ಡ್ರಾಪ್ ಆಗುವ ಸಮಸ್ಯೆ ಈ ಹೊಸ ತಂತ್ರಜ್ಞಾನದಲ್ಲಾದರೂ ಸರಿ ಹೋದೀತೇ ಎಂಬುದು. ಸದ್ಯದ ಮಟ್ಟಿಗೆ ಹೇಳುವುದಾದರೆ, ಈ ಸಮಸ್ಯೆ ಸಂಪೂರ್ಣ ನಿವಾರಣೆಯಾಗುವುದು ಅನುಮಾನ. ಏಕೆಂದರೆ, ಕರೆ ಮಾಡುತ್ತಿರುವಾಗ ನಾವು 5ಜಿಯಲ್ಲೇ ಇದ್ದಾಗ ಕಾಲ್ ಡ್ರಾಪ್ ಆಗದೇ ಇರಬಹುದು. ಆದರೆ, ಕರೆ ಮಾಡುತ್ತಿರುವಾಗ ನೆಟ್‌ವರ್ಕ್ 5ಜಿ ಇಂದ 4ಜಿ ಗೆ ಇಳಿದರೆ ಕಾಲ್ ಡ್ರಾಪ್ ಆಗುತ್ತದೆ. ಹೀಗಾಗಿ, ಈ ಕಾಲ್ ಡ್ರಾಪ್ ಸಮಸ್ಯೆಗೆ ಸದ್ಯಕ್ಕಂತೂ ಸಂಪೂರ್ಣ ಪರಿಹಾರ ಸಿಗುವ ಸಾಧ್ಯತೆ ಕಡಿಮೆ ಇದೆ. ಆದರೆ, ಕರೆಯ ಗುಣಮಟ್ಟದಲ್ಲಿ ಅಗಾಧ ವ್ಯತ್ಯಾಸವಾಗುವುದಂತೂ ಖಚಿತ.

ಸ್ಮಾರ್ಟ್‌ಫೋನ್‌ಗಳು ಈ ಹೊಸ VoNR ಗೆ ಸಪೋರ್ಟ್ ಮಾಡುತ್ತವೆಯೇ?

4G ಬಂದಾಗ ಬಹಳ ಫೋನ್‌ಗಳು VoLTE ಸಪೋರ್ಟ್ ಮಾಡುತ್ತಿರಲಿಲ್ಲ. ಅದಕ್ಕಾಗಿಯೇ ರಿಲಾಯನ್ಸ್ ಜಿಯೋ ಒಂದು ಆ್ಯಪ್ ಅನ್ನೂ ಕೂಡ ಸಿದ್ಧಪಡಿಸಿತ್ತು. ಆದರೆ, 5ಜಿಯಲ್ಲಿ ಈ ಸಮಸ್ಯೆ ಇಲ್ಲ. 2022ರ ನಂತರ ಬಂದ 5G ಸಪೋರ್ಟ್ ಮಾಡುವ ಬಹುತೇಕ ಎಲ್ಲ ಸ್ಮಾರ್ಟ್‌ಫೋನ್‌ಗಳೂ ಈ ಹೊಸ ತಂತ್ರಜ್ಞಾನವನ್ನು ಬೆಂಬಲಿಸುತ್ತವೆ. ಹೀಗಾಗಿ, ಯಾರಿಗೋ ಒಬ್ಬರಿಗೆ 5G ಯಲ್ಲಿ ಕಾಲ್ ಮಾಡಲು ಸಾಧ್ಯವಾಗುವುದಿಲ್ಲ ಎಂಬ ಸಮಸ್ಯೆ ಇರುವುದಿಲ್ಲ.

ಭಾರತದಲ್ಲಿ VoNR ಲಭ್ಯವಿದೆಯೇ?

ಇದಿಷ್ಟನ್ನೂ ಬರೆಯುವುದಕ್ಕೆ ಕಾರಣವೇ ಭಾರತದಲ್ಲಿ ಈಗ VoNR ಸೌಲಭ್ಯ ಸಿಗುವುದಕ್ಕೆ ಆರಂಭವಾಗಿದೆ. ಸದ್ಯಕ್ಕೆ ರಿಲಾಯನ್ಸ್ ಜಿಯೋ ಕೆಲವು ದಿನಗಳಿಂದ ಇಡೀ ದೇಶದಲ್ಲಿ VoNR ಸೌಲಭ್ಯವನ್ನು ಸಕ್ರಿಯಗೊಳಿಸಿದ್ದೇವೆ ಎಂದು ಹೇಳಿಕೊಂಡಿದೆ. ಅಷ್ಟೇ ಅಲ್ಲ, ರಿಲಾಯನ್ಸ್ ಜಿಯೋ ಇದನ್ನು ತನ್ನದೇ ತಂತ್ರಜ್ಞಾನವನ್ನು ಬಳಸಿ ಅಭಿವೃದ್ಧಿಪಡಿಸಿಕೊಂಡಿದೆ. ಅಂದರೆ, VoLTE ಯಲ್ಲಿ ಆಗುತ್ತಿದ್ದ ಹಾಗೆ ಇದಕ್ಕೆ ವಿದೇಶದ ತಂತ್ರಜ್ಞಾನ ಕಂಪನಿಗಳ ಸಹಾಯವನ್ನು ಪಡೆದುಕೊಂಡಿಲ್ಲ. ಆದರೆ, ಇನ್ನುಳಿದ ಟೆಲಿಕಾಂ ಕಂಪನಿಗಳಾದ ಏರ್‌ಟೆಲ್ ಮತ್ತು ವೊಡಾಫೋನ್ ಇದನ್ನು ಯಾವಾಗ ಜಾರಿ ಮಾಡುತ್ತೇವೆ ಎಂಬ ಬಗ್ಗೆ ತಿಳಿಸಿಲ್ಲ. ಹೀಗಾಗಿ, ಈ ಕಂಪನಿಯ ಗ್ರಾಹಕರಿಗೆ ಈ ಸೌಲಭ್ಯ ಸದ್ಯದಲ್ಲಿ ಸಿಗದೇ ಇರಬಹುದು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

2) ನರವ್ಯೂಹದ ಬಗ್ಗೆ ಬರೆಯಿರಿ

ಉತ್ತರ:– (.....ಹಿಂದಿನ ಸಂಚಿಕೆಯಿಂದ)



ಆದ್ದರಿಂದ ನರ ಅಂಗಾಂಶವು ನರಕೋಶ ಅಥವಾ ನ್ಯೂರಾನ್‌ಗಳಿಂದಾದ ಒಂದು ವ್ಯವಸ್ಥಿತ ಜಾಲದಿಂದ ಮಾಡಲ್ಪಟ್ಟಿದೆ ಈ ವ್ಯವಸ್ಥೆ ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಮಾಹಿತಿಯನ್ನು ವಿದ್ಯುತ್ ಆವೇಗಗಳ ಮೂಲಕ ಸಾಗಿಸುವ ವೈಶಿಷ್ಟ್ಯತೆಯನ್ನು ಪಡೆದಿದೆ

3) ಪರಾವರ್ತಿತ ಕ್ರಿಯೆಗಳಲ್ಲಿ ಏನಾಗುತ್ತದೆ?

ಉತ್ತರ:– 'ಪರಾವರ್ತನೆ'(reflex) ಎಂಬುದು ಪರಿಸರದಲ್ಲಿ ಉಂಟಾಗುವ ಯಾವುದೋ ಘಟನೆಗೆ ಪ್ರತಿಯಾಗಿ ವ್ಯಕ್ತವಾಗುವ ಹಠಾತ್ ಪ್ರತಿಕ್ರಿಯೆಯಾಗಿದೆ ಉದಾ. ಮಾನವನೊಬ್ಬ 'ವೇಗವಾಗಿ ಬರುತ್ತಿದ್ದ ಬಸ್ಸಿನ ಮಾರ್ಗದಿಂದ ತನಗರಿವಿಲ್ಲದೆ ಹೊರ ಜಿಗಿಯುತ್ತಾನೆ' ಅಥವಾ 'ಬೆಂಕಿಯ ಜ್ವಾಲೆಯಿಂದ ತನ್ನ ಕೈಯನ್ನು ತನಗರಿವಿಲ್ಲದೆ ಹಿಂತೆಗೆದುಕೊಳ್ಳುತ್ತಾನೆ'

ನಮ್ಮ ದೇಹದಲ್ಲಿನ ಆಲೋಚನಾ ಅಂಗಾಂಶವು ಸಂಕೀರ್ಣವಾಗಿ ಜೋಡಣೆಗೊಂಡ ನರಕೋಶಗಳ ದಟ್ಟವಾದ ಜಾಲಗಳನ್ನು ಹೊಂದಿದೆ.. ತಲೆಬುರುಡೆಯ ಒಳಗೆ ಮುಂಭಾಗದ ತುದಿಯಲ್ಲಿ ಕುಳಿತುಕೊಂಡಿರುವ ಇದು ದೇಹದ ಎಲ್ಲಾ ಭಾಗಗಳಿಂದ ಸಂಕೇತಗಳನ್ನು ಸ್ವೀಕರಿಸುತ್ತದೆ ಮತ್ತು ಅವುಗಳಿಗೆ ಪ್ರತಿಕ್ರಿಯಿಸುವ ಮೊದಲು ಅವುಗಳ ಬಗ್ಗೆ ಆಲೋಚಿಸುತ್ತದೆ. ಈ ಸಂಕೇತಗಳನ್ನು ಸ್ವೀಕರಿಸಬೇಕಾದರೆ, ತಲೆಬುರುಡೆಯಲ್ಲಿನ ಮಿದುಳಿನ ಆಲೋಚಿಸುವ ಭಾಗವು ದೇಹದ ವಿವಿಧ ಭಾಗಗಳಿಂದ ಬರುವ ನರಗಳಿಗೆ ನಿಸ್ಸಂಶಯವಾಗಿ ಸಂಪರ್ಕ ಹೊಂದಿರಲೇಬೇಕಾಗುತ್ತದೆ. ಅದೇ ರೀತಿ ಮಿದುಳಿನ ಈ ಭಾಗವು ಸ್ನಾಯುಗಳಿಗೆ ಚಲಿಸಲು ಸೂಚಿಸಬೇಕಾದರೆ, ನರಗಳು ಈ ಸಂಕೇತಗಳನ್ನು ದೇಹದ ವಿಭಿನ್ನ ಭಾಗಗಳಿಗೆ ಪುನಃ ಹಿಂದಿರುಗಿ ಒಯ್ಯಬೇಕಾಗುತ್ತದೆ. ಒಂದು ವೇಳೆ ನಾವು ಬಿಸಿ ವಸ್ತುವನ್ನು ಮುಟ್ಟಿದಾಗ ಶಾಖದ ಸಂವೇದನೆಯ ಬಗ್ಗೆ ಯೋಚಿಸುವುದಕ್ಕೆ ಬದಲಾಗಿ, ಒಂದು ವೇಳೆ ಸ್ನಾಯುಗಳನ್ನು ಸರಳ ರೀತಿಯಲ್ಲಿ ಚಲಿಸುವಂತೆ ಮಾಡುವ ನರಗಳಿಗೆ ಶಾಖವನ್ನು ಗುರುತಿಸುವ ನರಗಳನ್ನು ಸಂಪರ್ಕಿಸಿದರೆ, ಒಳಹರಿವು ಅಥವಾ ಸಂಕೇತಗಳನ್ನು ಗುರುತಿಸುವ ಪ್ರಕ್ರಿಯೆ ಮತ್ತು ಹೊರಹರಿವು ಪ್ರಕ್ರಿಯೆಯ ಮೂಲಕ ಅದಕ್ಕೆ ಪ್ರತಿಕ್ರಿಯಿಸುವುದನ್ನು ಬಹುಶಃ ತ್ವರಿತವಾಗಿ ಪೂರ್ಣಗೊಳಿಸಬಹುದು. ಇಂತಹ ಸಂಪರ್ಕವನ್ನು ಸಾಮಾನ್ಯವಾಗಿ 'ಪರಾವರ್ತಿತ ಚಾಪ' (reflex arc) ಎಂದು ಕರೆಯುತ್ತಾರೆ.

ಜ್ಞಾನವಾಹಿ ನರ ಮತ್ತು ಕ್ರಿಯಾವಾಹಿ ನರಗಳ ಮಧ್ಯೆ ಪರಾವರ್ತಿತ ಚಾಪದ ಸಂಪರ್ಕಗಳನ್ನು ಅವು ಮೊದಲಬಾರಿಗೆ ಸಂಗಮಿಸುವ ಬಿಂದುಗಳಲ್ಲಿ ಇರುತ್ತದೆ. ದೇಹದ ಎಲ್ಲಾ ಭಾಗಗಳಿಂದ ನರಗಳು ಮಿದುಳಿಗೆ ಹೋಗುವ ಮಾರ್ಗದಲ್ಲಿ ಗುಂಪುಗಳ ರೂಪದಲ್ಲಿ ಜೊತೆಯಾಗುತ್ತವೆ. ಮಾಹಿತಿ ಒಳಹರಿವು ಮಿದುಳನ್ನು ತಲುಪಲು ಹೋಗುತ್ತಿದ್ದರೂ ಸಹ ಪರಾವರ್ತಿತ ಚಾಪಗಳು ಮಿದುಳುಬಳ್ಳಿಯಲ್ಲಿ (spinal cord) ತಾನೇತಾನಾಗಿ ಉಂಟಾಗುತ್ತವೆ. ಮಿದುಳಿನ ಆಲೋಚನಾ ಪ್ರಕ್ರಿಯೆಯು ಸಾಕಷ್ಟು ವೇಗವಾಗಿಲ್ಲದಿರುವುದರಿಂದ ಪ್ರಾಣಿಗಳಲ್ಲಿ ಪರಾವರ್ತಿತ ಚಾಪಗಳು ಸಹಜವಾಗಿ ವಿಕಸನಗೊಂಡಿರುವುದನ್ನು ನೋಡುತ್ತೇವೆ. ವಾಸ್ತವವಾಗಿ ಅನೇಕ ಪ್ರಾಣಿಗಳು ಆಲೋಚನೆಗೆ ಅಗತ್ಯವಾದ ನರಕೋಶಗಳ ಸಂಕೀರ್ಣ ಜಾಲವನ್ನು ಹೊಂದಿಲ್ಲ ಅಥವಾ ಅತ್ಯಲ್ಪ ಪ್ರಮಾಣದಲ್ಲಿ ಹೊಂದಿವೆ. ಆದ್ದರಿಂದ, ನಿಜವಾದ ಆಲೋಚನಾ ಪ್ರಕ್ರಿಯೆಗಳ ಅನುಪಸ್ಥಿತಿಯಲ್ಲಿ ಪರಾವರ್ತಿತ ಚಾಪಗಳು ಕಾರ್ಯನಿರ್ವಹಿಸಿ ಪರಿಸ್ಥಿತಿಯನ್ನು ತಿಳಿಗೊಳಿಸುತ್ತವೆ

4) ನಡಿಗೆ ಮತ್ತು ಪರಾವರ್ತಿತ ಪ್ರತಿಕ್ರಿಯೆ ಇವುಗಳ ನಡುವಿನ ವ್ಯತ್ಯಾಸವೇನು?

ಉತ್ತರ:– ನಡಿಗೆ ಐಚ್ಛಿಕ ಕ್ರಿಯೆಯಾಗಿದ್ದು ನಮ್ಮ ಆಲೋಚನೆಗೆ ಒಳಪಟ್ಟು ಕಾರ್ಯನಿರ್ವಹಿಸುದು.

ಪರಾವರ್ತಿತ ಪ್ರತಿಕ್ರಿಯೆಯು ಆಲೋಚನೆಗಿಂತ ಮುಂಚೆ ತಾನೇ ತಾನಾಗಿ ಉಂಟಾಗುವ ತಕ್ಷಣದ ಕ್ರಿಯೆಯಾಗಿದೆ, ಇದು ನಮ್ಮ ಆಲೋಚನೆಗೆ ಬರದೇ ನಡೆಯುವ ಕ್ರಿಯೆ. ಉದಾ:– ಬೆಂಕಿ ಜ್ವಾಲೆಯನ್ನು ಮುಟ್ಟಿದಾಗ ಕೈಯನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳುವುದು.

5) ಸಂಸರ್ಗದಲ್ಲಿ ಎರಡು ನರಕೋಶಗಳ ಮಧ್ಯೆ ಏನಾಗುತ್ತದೆ?

ಉತ್ತರ:– ಒಂದು ನರಕೋಶದ ಆಕ್ಸಾನ್ ತುದಿಗೂ ಮತ್ತು ಇನ್ನೊಂದು ನರಕೋಶದ ಡೆಂಡ್ರೈಟ್ ತುದಿಗೂ ನಡುವೆ ಇರುವ ಸಣ್ಣ ಅವಕಾಶವನ್ನು ಸಂಸರ್ಗ ಎನ್ನುವರು, ಆಕ್ಸಾನ್ ತುದಿಯ ರಾಸಾಯನಿಕಗಳನ್ನು ಬಿಡುಗಡೆ ಮಾಡುವ ಮೂಲಕ ವಿದ್ಯುತ್ ಆವೇಗಗಳು ಸಂಸರ್ಗವನ್ನು ದಾಟಿ ಮುಂದಿನ ನರಕೋಶದ ಡೆಂಡ್ರೈಟ್‌ಗಳಿಗೆ ವರ್ಗವಾಗುವಂತೆ ಮಾಡುವುದು. ಹೀಗೆ ಅನೇಕ ನರಕೋಶಗಳ ಮೂಲಕ ಆವೇಗಗಳು ಅಂತಿಮವಾಗಿ ಸ್ನಾಯುಗಳಿಗೆ ಅಥವಾ ಗ್ರಂಥಿಗಳಿಗೆ ವಿಸ್ತರಿಸುವುದು.

5) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?

ಉತ್ತರ:– ಹಿಮ್ಮೆದುಳಿನ ಅನುಮಸ್ತಿಷ್ಕ ಭಾಗವು ದೇಹದ ಭಂಗಿ ಮತ್ತು ಸಮತೋಲನ ಕಾಪಾಡುವುದು.

6) ಪರಿವರ್ತಿತ ಚಾಪ ಕುರಿತ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

CHEMISTRY

The d- and f-Block Elements

56. Among Zn^{2+} and Co^{2+} which is not attracted by a magnet?

Ans: Zn^{2+} due to the absence of unpaired electrons.

57. Among zinc salts and cobalt salts which is attracted by a magnet?

Ans: Cobalt salts due to the presence of unpaired electrons.

58. Cu^{+} is diamagnetic and Cu^{2+} is paramagnetic. Why? or Cu(I) compounds are not attracted by magnetic but Cu(II) compounds are attracted by magnet. Why?

Ans: Cu^{+} or Cu(I) does not contain unpaired electrons. So it is diamagnetic.

Cu^{2+} or Cu(II) contains unpaired d-electrons. So it is paramagnetic.

59. Calculate the magnetic moment of Sc^{3+} (Z= 21).

Ans: $n = 21 - 3 - 18 = 0$

$$\therefore \mu = \sqrt{n(n+2)}\ \text{B.M.} = \sqrt{0(0+2)}\ \text{BM}$$

$\mu = 0$ BM

60. Calculate the magnetic moment of Ti^{3+} (Z=22).

Ans: $n = 22 - 3 - 18 = 1$

$$\therefore \mu = \sqrt{n(n+2)}\ \text{BM} = \sqrt{1(1+2)}\ \text{BM} = \sqrt{3}\ \text{BM}$$

$\mu = 1.73$ BM

61. Calculate the magnetic moment of a divalent ion in aqueous solution if its atomic number is 25

Ans: Given At. number = 25. (Mn)

Divalent ion = Mn^{2+}

$\because n$=atomic number of Mn– oxidation state– atomic number of Ar

$n = 25 - 2 - 18 = 5$

$$\therefore \mu = \sqrt{n(n+2)}\ \text{BM} = \sqrt{5(5+2)} = \sqrt{5(7)} = \sqrt{35}$$

= 5.92 BM

62. Calculate the 'spin only' magnetic moment of $M^{2+}_{(aq)}$ ion (Z=27).

Ans: $Z = 27 \Rightarrow [Ar]3d^7 4s^2$

$\because M^{2+} = [Ar]3d^7 : 3d^7$

↑↓	↑↓	↑↓	↑↓

i.e., 3 unpaired electrons

$\therefore n = 3$

$$\mu = \sqrt{n(n+2)} = \sqrt{3(3+2)} = \sqrt{15} = 3.87\ \text{BM}$$

$$= \sqrt{3(3+2)} = \sqrt{15} = 3.87\ \text{BM}$$

63. Explain the colour of transition metals ions.

Ans: The colour of a transition metal ions is due to

(i) The presence of unpaired electrons in the d-orbitals.

(ii) d-d transitions.

The unpaired d-electrons absorb colour form the visible region and undergo d–d transition and radiate complementary colours.

Example: Cu^{2+} absorbs red colour and emits blue colour. So the complementary colour to the red is blue.

64. Zn^{2+} salts are colourless. Why?

Ans: Due to the absence of unpaired electrons.

65. Cu^{2+} salts are colourled. Give reason.

Ans: Due to the presence of unpaired d-electrons.

66. Among zinc sals and cobalt salts which is coloured?

Ans: Cobalt salts.

67. Which of the following ion is coloured? Sc^{2+}, Zn^{2+} and Cr^{3+}

Ans: Cr^{3+} ion is coloured due to the presence of 3 unpaired d-electrons.

68. Cu(I) salts are colourless and Cu(II) salts are coloured. Why?

Ans: Cu(I) salts (Cu^{+}) do not contain unpaired d-electrons. So they are colourless.

Cu(II) salts (Cu^{2+}) contains unpaired d-electrons. So they are coloured.

69. Name a transition element in 3d series which is colourless in both atomic state and oxidation state.

Ans: Zinc (both Zn and Zn^{2+} are colourless).

70. Transition metals form large number of complex compounds. Give reasons.

Ans: This is due to (i) smaller size of transition metal ions.

(ii) larger ionic charges (or high polarizing power i.e., high charge by size ratio)

(iii) the availability of vacant-orbitals for bond formation.

72. Explain the catalytic properties of transition metals

Ans: The transition elements and their compounds behaves as catalysts due to –

(i) Variable oxidation states.

(ii) Large surface area for absorption of reactant molecules.

(iii) The presence of incompletely filled or partially filled d-orbitals.

(iv) Formation of intermediate compounds.

Examples: (1) Vanadium pentoxide is used as catalyst in contact process (Manufacture of H_2SO_4)

(Contd.....)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಕರಡಿ 'ವಸಿಕರನ್'ಗೆ ಕೃತಕ ಕಾಲು

ಈ ಶಸ್ತ್ರಚಿಕಿತ್ಸೆಗೆ ಒಳಗಾದ ದೇಶದ ಮೊಟ್ಟ ಮೊದಲ ಕರಡಿ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಕರಡಿ ರಕ್ಷಣಾ ಕೇಂದ್ರದಲ್ಲಿ 'ವಸಿಕರನ್' ಹೆಸರಿನ ಕರಡಿಗೆ ಮೂರು ದಿನಗಳಿಂದ ಕೈಗೊಳ್ಳಲಾಗಿದ್ದ ಕೃತಕ ಕಾಲು ಜೋಡಣೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ.

ಇದರಿಂದಾಗಿ ಕರಡಿಯು ಮತ್ತೆ ಮೊದಲಿನಂತೆ ಮರ ಏರುವುದು, ನೆಲ ಕೆರೆಯುವುದು ಸೇರಿದಂತೆ ಇನ್ನಿತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿದೆ.

ವಿಶ್ವದಲ್ಲೇ ಕರಡಿಗೆ ಕೃತಕ ಕಾಲು ಜೋಡಣೆ ಮಾಡಲಾದ ಮೊಟ್ಟಮೊದಲ ಪ್ರಕರಣ ಇದಾಗಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಮತ್ತು ಕರ್ನಾಟಕ ಅರಣ್ಯ ಇಲಾಖೆ ಸಹಯೋಗದಲ್ಲಿ ಈ ಶಸ್ತ್ರಚಿಕಿತ್ಸೆ ನಡೆದಿದೆ. ಬಳ್ಳಾರಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ 2019ರಲ್ಲಿ ಬೇಟೆಗಾರರ ಬಲೆಗೆ ಸಿಲುಕಿ ಜೀವನ್ಮರಣ ಹೋರಾಟದಲ್ಲಿದ್ದ 'ವಸಿಕರನ್'ನನ್ನು ಇಲ್ಲಿಗೆ ತರಲಾಗಿತ್ತು.

ಕರಡಿಯ ಹಿಂಬದಿ ಎಡಗಾಲು ಮುರಿದಿತ್ತು. ನಡೆಯಲು ಆಗುತ್ತಿರಲಿಲ್ಲ. ಯಶಸ್ವಿ ಚಿಕಿತ್ಸೆ ಬಳಿಕ ಆರೋಗ್ಯವೇನೋ ಸುಧಾರಣೆಯಾಗಿತ್ತು. ಜೊತೆಗೆ ಹಿಂದಿನ ಎಡಗಾಲು ಮುರಿದಿದ್ದರಿಂದಾಗಿ ಮೂರು ಕಾಲಿನಲ್ಲಿ ನಡೆಯುವ ಅಭ್ಯಾಸ ಮಾಡಿಕೊಂಡಿತ್ತು.

2025ರಲ್ಲಿ ಜನವರಿ ತಿಂಗಳಿನಲ್ಲಿ ಬನ್ನೇರುಘಟ್ಟ ಉದ್ಯಾನಕ್ಕೆ ಭೇಟಿ ನೀಡಿದ್ದ ಪ್ರಾಣಿಗಳ ಜಾಗತಿಕ ಮೂಳೆ ತಜ್ಞರಾದ ಅಮೆರಿಕದ ಡೆರ್ರಿಕ್ ಕಂಪನಾ 'ವಸಿಕರನ್' ನಡಿಗೆ ಗಮನಿಸಿದ್ದಾರೆ. ಬಳಿಕ 'ವಸಿಕರನ್' ಮಣ್ಣು ತೋಡುವ, ಮರ ಹತ್ತಲು, ಮೇವು ಸಂಗ್ರಹಕ್ಕೆ ಅನುವಾಗುವ ಕೃತಕ ಕಾಲನ್ನು ಸಿದ್ಧ ಪಡಿಸಿದರು.

ಮೂರು ದಿನಗಳಿಂದ ಕೃತಕ ಕಾಲಿನ ಅಚ್ಚು, ಪರೀಕ್ಷೆ, ಅದನ್ನು ಲಯಬದ್ಧಗೊಳಿಸುವ ಚಟುವಟಿಕೆ ಮಾಡಲಾಯಿತು. ಈ ಮೂಲಕ 'ವಸಿಕರನ್' ಕೃತಕ ಕಾಲು ಜೋಡಣೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಡೆರ್ರಿಕ್ ಕಂಪನಾ, 'ಕರ್ತವ್ಯದಲ್ಲಿ ನನಗೆ ಪ್ರತಿ ಪ್ರಾಣಿ ನನಗೆ ಹೊಸ ವಿಷಯ ಕಲಿಸುತ್ತದೆ. ಆದರೆ, ವಸಿಕರನ್ ಪ್ರಕರಣವಂತೂ ಅತ್ಯದ್ಭುತವಾದದ್ದು. ಇತರ ಪ್ರಾಣಿಗಳಂತೆಯೇ ಕರಡಿಗೆ ಕೃತಕ ಕಾಲು ಸಿದ್ಧಪಡಿಸುವುದು ದೊಡ್ಡ ಸವಾಲಾಗಿತ್ತು. ಆದರೆ, ವಸಿಕರನ್ ನಡಿಗೆಯನ್ನು ಕಂಡು ನಮ್ಮ ಶ್ರಮಕ್ಕೆ ಬೆಲೆ ಸಿಕ್ಕಂತಾಗಿದೆ' ಎಂದು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು
- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಕರಡಿ
- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಅರಣ್ಯ ಇಲಾಖೆ ಸಹಯೋಗ

ಪ್ರಾಣಿಗಳ ಕಲ್ಯಾಣಕ್ಕಾಗಿ ವಿಜ್ಞಾನ, ಹೊಸ ಶೋಧನೆ ಮತ್ತು ಸಂರಕ್ಷಣೆ ಮನೋಭಾವ ಹೇಗೆ ಒಗ್ಗೂಡಬಹುದು ಎಂಬುದಕ್ಕೆ ಈ ಬೆಳವಣಿಗೆಯೆ ಸಾಕ್ಷಿ
ಎ.ವಿ.ಸೂರ್ಯಸೇನ್,
ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ

ಶಸ್ತ್ರಚಿಕಿತ್ಸೆಗೂ ಮುನ್ನ ಕುಂಟುತ್ತಾ ನಡೆಯುತ್ತಿದ್ದ ವಸಿಕರನ್

ಪಶು ವೈದ್ಯರಿಗೆ ಮಹತ್ವದ್ದು

'ಕೃತಕ ಕಾಲು ಜೋಡಣೆ ವೈದ್ಯಕೀಯ ಕ್ಷೇತ್ರದಲ್ಲಿ ಮೈಲಿಗಲ್ಲಾಗಿದೆ. ಕೃತಕ ಕಾಲು ಜೋಡಣೆಯು ಕರಡಿ ನಡಿಗೆ ಭಂಗಿಯನ್ನು ಬದಲಿಸಿರುವುದಷ್ಟೇ ಅಲ್ಲದೆ ಅದರ ಭವಿಷ್ಯವನ್ನೂ ರಕ್ಷಿಸಿದೆ' ಎಂದು ವೈಲ್ಡ್‌ಲೈಫ್ ಎಸ್‌ಒಎಸ್ ಸಂಸ್ಥೆಯ ಹಿರಿಯ ಪಶು ವೈದ್ಯಾಧಿಕಾರಿ ಡಾ.ಅರುಣ್ ಶಾ ತಿಳಿಸಿದರು.

ಕರಡಿಗೆ ಕೃತಕ ಕಾಲು ಜೋಡಣೆ ವಿಚಾರ ಪಶುವೈದ್ಯರ ಪಾಲಿಗೆ ಮಹತ್ವದ್ದು. ಮೂರು ಕಾಲಿನಿಂದ ನಡೆಯುವುದನ್ನೇ ಅಭ್ಯಾಸ ಮಾಡಿಕೊಂಡಿದ್ದ. ಇದು ಮಂಡಿ ಮತ್ತು ಬೆನ್ನುಮೂಳೆ ಮೇಲೆ ಒತ್ತಡ ಬೀರುತ್ತಿದ್ದು, ಇದು ಆತಂಕ ಮೂಡಿಸಿತ್ತು ಎಂದು ಅವರು ಪ್ರತಿಕ್ರಿಯಿಸಿದರು.

ಕೃತಕ ಕಾಲು ಜೋಡಣೆ ಶಸ್ತ್ರಚಿಕಿತ್ಸೆ ಬಳಿಕ ವಸಿಕರನ್‌ನ ಮೊದಲ ನಡಿಗೆ ಸಾಮಾನ್ಯ ಎಂಬಂತಿತ್ತು. ಇದು ಆಶ್ಚರ್ಯವನ್ನುಂಟು ಮಾಡಿದೆ. ಕೃತಕ ಕಾಲು ಜೋಡಣೆ ವಸಿಕರನ್‌ಗೆ ಸಿಕ್ಕ ಎರಡನೇ ಅವಕಾಶ.
ಕಾರ್ತಿಕ್ ಸತ್ಯನಾರಾಯಣ,
ಸಹ ಸಂಸ್ಥಾಪಕ, ಸಿಇಒ, ವೈಲ್ಡ್‌ಲೈಫ್ ಎಸ್‌ಒಎಸ್


ಶಸ್ತ್ರಚಿಕಿತ್ಸೆಗೆ ಒಳಗಾದ ವಸಿಕರನ್

ಸಾಕ್ಷಿ ದೂರುದಾರನಿಗೆ ಜಾಮೀನಿಲ್ಲ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆಗೆ ಸಂಬಂಧಿಸಿ ಸಾಕ್ಷಿ ದೂರುದಾರ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಬೆಳ್ತಂಗಡಿಯ ಜೆಎಂಎಫ್‌ಸಿ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಪ್ರಕರಣದ ಸಾಕ್ಷಿ ದೂರುದಾರ, 'ತಾನು ಹೂತುಹಾಕಿದ್ದ ಮೃತದೇಹವೊಂದರ ಬುರುಡೆ' ಎಂದು ಹೇಳಿಕೊಂಡು, ಪೊಲೀಸರಿಗೆ ಮನುಷ್ಯನ ತಲೆಬುರುಡೆ ಒಪ್ಪಿಸಿದ್ದ. ಎಸ್‌ಐಟಿ ನಡೆಸಿದ್ದ ವಿಚಾರಣೆ ವೇಳೆ, 'ಆ ತಲೆಬುರುಡೆ ನಾನು ಹೂತು ಹಾಕಿದ್ದ ಮೃತ ದೇಹದ್ದಲ್ಲ' ಎಂದು ಆತ ಒಪ್ಪಿಕೊಂಡಿದ್ದ. ಆತನನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿ, ಆ.23ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 221ರ (ಪೊಲೀಸರಿಗೆ ಕಾನೂನು ಬದ್ಧವಾಗಿ ಮಾಹಿತಿ ನೀಡಬೇಕಾದ ವ್ಯಕ್ತಿ ಅದರಿಂದ ನುಣುಚಿಕೊಳ್ಳುವುದು) ಜೊತೆಗೆ ಹೆಚ್ಚುವರಿಯಾಗಿ ಸೆಕ್ಷನ್ 227 (ಸುಳ್ಳು ಸಾಕ್ಷ್ಯ ಒದಗಿಸಿರುವುದು), ಸೆಕ್ಷನ್ 228 (ಸುಳ್ಳು ಸಾಕ್ಷ್ಯ ಸೃಷ್ಟಿ), ಸೆಕ್ಷನ್ 229 (ಸುಳ್ಳು ಸಾಕ್ಷ್ಯ ಸೃಷ್ಟಿಗೆ ಶಿಕ್ಷೆ), ಸೆಕ್ಷನ್ 230 (ಮರಣದಂಡನೆಗೆ ಅರ್ಹವಾದ ಅಪರಾಧಕ್ಕೆ ಸುಳ್ಳು ಸಾಕ್ಷ್ಯ ಸೃಷ್ಟಿ), ಸೆಕ್ಷನ್ 231 (ಜೀವಾವಧಿ ಶಿಕ್ಷೆ ಕೊಡುವಂತಹ ಅಪರಾಧಕ್ಕೆ ಸಂಬಂಧಿಸಿ ಸುಳ್ಳು ಸಾಕ್ಷ್ಯ ಸೃಷ್ಟಿ), 236 (ಸುಳ್ಳು ಘೋಷಣೆ), ಸೆಕ್ಷನ್ 248 (ಸುಳ್ಳು ಆರೋಪ), ಸೆಕ್ಷನ್ 336 (ನಕಲಿ ದಾಖಲೆ ಸೃಷ್ಟಿ) ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಿದ್ದರು.

'ಇದೊಂದು ಗಂಭೀರ ಪ್ರಕರಣ. ಎಸ್‌ಐಟಿ ತನಿಖೆ ನಡೆಸುತ್ತಿದೆ. ಈ ಸಂದರ್ಭದಲ್ಲಿ ಜಾಮೀನು ಮಂಜೂರು ಮಾಡುವುದು ಸೂಕ್ತವಲ್ಲ' ಎಂದು ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಟಿ.ಎಚ್. ವಿಜಯೇಂದ್ರ ಆದೇಶದಲ್ಲಿ ತಿಳಿಸಿದ್ದಾರೆ.

ಸೆ. 6ರವರೆಗೆ ಎಸ್‌ಐಟಿ ವಶದಲ್ಲಿದ್ದ ಸಾಕ್ಷಿ ದೂರುದಾರ ಪ್ರಸ್ತುತ ಶಿವಮೊಗ್ಗದ ಜಿಲ್ಲಾ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾನೆ. ಆತನ ಪರ ವಾದಿಸಲು ವಕೀಲರು ಮುಂದೆ ಬಂದಿರಲಿಲ್ಲ. ವಕೀಲರ ನೆರವು ಪಡೆಯಲು ನ್ಯಾಯಾಲಯವೇ ವ್ಯವಸ್ಥೆ ಮಾಡಿತ್ತು.

ಧರ್ಮಸ್ಥಳ ಬೆಳವಣಿಗೆ: ಮುಂದುವರಿದ ತನಿಖೆ

ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆ ಕಾಡಿನಲ್ಲಿ ಮತ್ತಷ್ಟು ಮೃತದೇಹಗಳ ಅವಶೇಷಗಳು ಕಂಡುಬಂದಿದ್ದು, ಅಲ್ಲಿ ಶೋಧ ಕಾರ್ಯಕ್ಕೆ ಎಸ್‌ಐಟಿ ಅಧಿಕಾರಿಗಳು ತಯಾರಿ ನಡೆಸುತ್ತಿದ್ದಾರೆ. ಈ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳನ್ನು ಬೆಳ್ತಂಗಡಿಯ ಕಚೇರಿಗೆ ಮಂಗಳವಾರ ಕರೆಸಿಕೊಂಡು ಸಮಾಲೋಚನೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಯುಪಿಕೆ–3: ಪರಿಹಾರ ದರ ನಿಗದಿ

ಒಂದನೇ ಪುಟದಿಂದ...

ಸಚಿವ ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ವಿವರ ನೀಡಿದರು.

ಸಿದ್ದರಾಮಯ್ಯ ಮಾತನಾಡಿ, 'ಪರಿಹಾರ ನಿಗದಿ ಮಾಡುವ ವಿಚಾರವಾಗಿ ರೈತರು, ಹೋರಾಟ ನಿರತ ಸಂಘಟನೆಗಳ ಮುಖಂಡರು, ಶಾಸಕರು ಮತ್ತು ಸಚಿವರ ಜತೆ ಹಲವು ಸುತ್ತಿನ ಚರ್ಚೆ ನಡೆಸಿದ್ದೇವೆ. ಸಂಪುಟ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ನೀರಾವರಿ ಜಮೀನಿಗೆ ಎಕರೆಗೆ ₹40 ಲಕ್ಷ ಮತ್ತು ಒಣ ಭೂಮಿಗೆ ಎಕರೆಗೆ ₹30 ಲಕ್ಷ ಪರಿಹಾರ ನೀಡಲು ಒಪ್ಪಿಗೆ ನೀಡಲಾಗಿದೆ' ಎಂದರು.

ಅಲ್ಲದೇ, ಕಾಲುವೆಗಾಗಿ ಸುಮಾರು 51,837 ಎಕರೆ ಬೇಕಾಗುತ್ತದೆ. ಇದರಲ್ಲಿ 23,631 ಎಕರೆ ಭೂಮಿಯ ಸ್ವಾಧೀನ ಪ್ರಕ್ರಿಯೆ ನಡೆಸಿ, ಕಾಮಗಾರಿ ಕೈಗೊಳ್ಳಲಾಗಿದೆ. ಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದಂತೆ ನೀರಾವರಿ ಜಮೀನಿಗೆ ಎಕರೆಗೆ ₹30 ಲಕ್ಷ ಮತ್ತು ಒಣ ಭೂಮಿಗೆ ಎಕರೆಗೆ ₹25 ಲಕ್ಷ ದರ ನಿಗದಿ ಮಾಡಲು ತೀರ್ಮಾನಿಸಲಾಗಿದೆ. ಕಾಲುವೆ ನಿರ್ಮಾಣಕ್ಕಾಗಿ ಜಮೀನು ಕಳೆದುಕೊಂಡವರು ಯೋಜನೆಯ ಫಲಾನುಭವಿಗಳಾಗುತ್ತಾರೆ. ಆದ್ದರಿಂದ ಕಡಿಮೆ ದರ ನಿಗದಿ ಮಾಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಅಣೆಕಟ್ಟಿನ ಎತ್ತರ ಹೆಚ್ಚಿಸುವುದರಿಂದ ಹಿನ್ನೀರಿನಿಂದ ಸುಮಾರು 75 ಸಾವಿರ ಎಕರೆಗೂ ಹೆಚ್ಚು ಜಮೀನು ಮುಳುಗಡೆಯಾಗುತ್ತದೆ. 5.94 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಬಹುದು. ಇದರಿಂದ ಈ ಭಾಗದ ಜನರ ಜೀವನಮಟ್ಟವೂ ಸುಧಾರಣೆ ಆಗಲಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಾನೂನು ಸಚಿವ ಎಚ್‌.ಕೆ.ಪಾಟೀಲ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಅಬಕಾರಿ ಸಚಿವ ಆರ್‌.ಬಿ.ತಿಮ್ಮಾಪೂರ ಮತ್ತು ಜವಳಿ ಸಚಿವ ಶಿವಾನಂದ ಪಾಟೀಲ ಉಪಸ್ಥಿತರಿದ್ದರು.

ಪರಿಹಾರಕ್ಕೆ ಬೇಕು ₹70 ಸಾವಿರ ಕೋಟಿ

'ಪರಿಹಾರಕ್ಕೆ ಸುಮಾರು ₹70,000 ಕೋಟಿ ಬೇಕಾಗುತ್ತದೆ. ಜಮೀನು ಕಳೆದುಕೊಳ್ಳುವ ರೈತರಿಗೆ ಮೂರು ಆರ್ಥಿಕ ವರ್ಷದಲ್ಲಿ ಪರಿಹಾರದ ಮೊತ್ತವನ್ನು ಪಾವತಿಸಲಾವುದು' ಎಂದು ಸಿದ್ದರಾಮಯ್ಯ ಹೇಳಿದರು.

'ಪ್ರತಿ ವರ್ಷ ₹15 ಸಾವಿರ ಕೋಟಿಯಿಂದ ₹20 ಸಾವಿರ ಕೋಟಿ ಇದಕ್ಕಾಗಿಯೇ ನೀಡಲಾಗುವುದು. ಸರ್ಕಾರ ನಿಗದಿಪಡಿಸಿದ ದರವನ್ನು ಒಪ್ಪಿಕೊಂಡು ಭೂಸ್ವಾಧೀನಕ್ಕೆ ರೈತರ ಮನವೊಲಿಸುವುದಾಗಿ ಆ ಭಾಗದ ಸಚಿವರು, ಶಾಸಕರು ಮತ್ತು ರೈತ ಮುಖಂಡರು ತಿಳಿಸಿದ್ದಾರೆ.

ರಾಜ್ಯದ ಜನರಿಗೆ ಒಳಿತು ಮಾಡುವ ಈ ಯೋಜನೆಗೆ ರೈತರು ಭೂಮಿ ನೀಡಲು ಒಪ್ಪಿಗೆ ನೀಡುತ್ತಾರೆ ಎಂಬ ವಿಶ್ವಾಸವಿದೆ' ಎಂದು ಅವರು ಪ್ರತಿಪಾದಿಸಿದರು.

ಪುನರ್ವಸತಿಗೆ ಹೊಸ ನೀತಿ: ಡಿಕೆಶಿ

'ಈ ಯೋಜನೆಗೆ ಸಂಬಂಧಿಸಿದಂತೆ ಪುನರ್ವಸತಿಗಾಗಿ ಹೊಸ ನೀತಿ ರೂಪಿಸಲು ತೀರ್ಮಾನಿಸಿದ್ದೇವೆ' ಎಂದು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ತಿಳಿಸಿದರು.

'ಭೂಸ್ವಾಧೀನದ ವಿಚಾರವಾಗಿ ನ್ಯಾಯಾಲಯದಲ್ಲಿ ಅನೇಕ ಪ್ರಕರಣಗಳ ವಿಚಾರಣೆ ನಡೆಯುತ್ತಿವೆ. ಸುಮಾರು 20 ಸಾವಿರ ಪ್ರಕರಣಗಳು ನ್ಯಾಯಾಲಯದಲ್ಲಿವೆ. 2013ರ ಭೂಸ್ವಾಧೀನ ಕಾಯ್ದೆ ಅನ್ವಯ ಈ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ. ನ್ಯಾಯಾಲಯದಲ್ಲಿ ಪ್ರಕರಣವಿಲ್ಲದ ಜಮೀನುಗಳನ್ನು ರೈತರಿಂದ ನೇರವಾಗಿ ಖರೀದಿ ಮಾಡಲಾಗುವುದು' ಎಂದರು.

'2013ರ ಭೂ ಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆಯ ಸೆಕ್ಷನ್ 51ರ ಅಡಿ ಭೂಸ್ವಾಧೀನ, ಪುನರ್‌ವಸತಿ ಪ್ರಾಧಿಕಾರವನ್ನು ರಚಿಸಲು ಅವಕಾಶವಿದೆ. ಹೀಗಾಗಿ ರಾಜ್ಯ ಸರ್ಕಾರ ಇದೇ ಮೊದಲ ಬಾರಿಗೆ ಪ್ರಾಧಿಕಾರವನ್ನು ರಚಿಸಲಿದೆ. ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪ್ರಾಧಿಕಾರ ರಚನೆ ಆಗಲಿದೆ' ಎಂದು ಶಿವಕುಮಾರ್ ಹೇಳಿದರು.

ಚಿಟಿಕೆ ಸುದ್ದಿ

ಮನೆ ಬಾಗಿಲಿಗೆ ಸಿದ್ದರಾಮಯ್ಯ ಚಿತ್ರ ಕೆತ್ತನೆ

ಮಲ್ಲೇಶಪ್ಪ ತಿಪ್ಪೇಸ್ವಾಮಿ ಮತ್ತು ಪಾರ್ವತಿ ದಂಪತಿ ತಮ್ಮ ಮನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಚಿತ್ರವುಳ್ಳ ಬಾಗಿಲನ್ನು ಅಳವಡಿಸಿಕೊಂಡಿದ್ದಾರೆ

ಕೂಡ್ಲಿಗಿ: ತಾಲ್ಲೂಕಿನ ಕೆಂಚಮಲ್ಲನಹಳ್ಳಿ ಗ್ರಾಮದ ಮಲ್ಲೇಶಪ್ಪ ತಿಪ್ಪೇಸ್ವಾಮಿ ಹಾಗೂ ಪಾರ್ವತಿ ದಂಪತಿ ಮನೆಯ ಬಾಗಿಲಿನ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಚಿತ್ರವನ್ನು ಕೆತ್ತನೆ ಮಾಡಿದ್ದಾರೆ.

'ಗೃಹಲಕ್ಷ್ಮಿ ಯೋಜನೆಯಲ್ಲಿ ಪಾರ್ವತಮ್ಮ ಅವರಿಗೆ ₹ 30 ಸಾವಿರ ಸಂದಾಯವಾಗಿತ್ತು. ಅದನ್ನು ಯಾವುದಕ್ಕೂ ಬಳಸಿರಲಿಲ್ಲ. ಈಗ ಅದನ್ನು ಬಳಸಿ ಬಾಗಿಲಿಗೆ ಸಿದ್ದರಾಮಯ್ಯ ಚಿತ್ರ ಕೆತ್ತಿಸಲಾಗಿದೆ. ಇದಕ್ಕೆ ₹ 28 ಸಾವಿರ ಖರ್ಚಾಯಿತು. ಇದೆಲ್ಲವೂ ಸಿದ್ದರಾಮಯ್ಯ ಅವರ ಮೇಲಿನ ಅಭಿಮಾನದಿಂದ ಮಾಡಿದ್ದು' ಎಂದು ಮಲ್ಲೇಶಪ್ಪ ತಿಪ್ಪೇಸ್ವಾಮಿ ತಿಳಿಸಿದರು.

'ಹಳೇ ಬಾಗಿಲನ್ನು ತೆಗೆದು ಹಾಕಿ, ಸಿದ್ದರಾಮಯ್ಯ ಅವರ ಭಾವಚಿತ್ರವಿರುವ ಹೊಸ ಬಾಗಿಲು ಮನೆಗೆ ಅಳವಡಿಸಿದ್ದೇವೆ. ಊರಲ್ಲಿ ಹಬ್ಬವಿರುವ ಕಾರಣಕ್ಕೆ ಪೂಜೆ ಸಲ್ಲಿಸಿದೆವು' ಎಂದರು.

ಸಚಿವ ದಿನೇಶ್ ಗುಂಡೂರಾವ್‌ಗೆ ನೋಟಿಸ್

ಬೆಂಗಳೂರು: ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಅವರೊಂದಿಗೆ ನಡೆಸಿರುವ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಗ್ಯಸಚಿವ ದಿನೇಶ್ ಗುಂಡೂರಾವ್ ಅವರಿಗೆ ಲೋಕಾಯುಕ್ತ ಪೊಲೀಸರು ನೋಟಿಸ್ ಜಾರಿಗೊಳಿಸಿದ್ದಾರೆ.

ಅಕ್ರಮ ಆಸ್ತಿ ಸಂಪಾದನೆ ಪ್ರಕರಣ ಸಂಬಂಧ ಲೋಕಾಯುಕ್ತ ಪೊಲೀಸರು, ಜಮೀರ್ ಅಹಮದ್ ಖಾನ್ ಅವರ ಆದಾಯದ ಮೂಲಗಳನ್ನು ಶೋಧಿಸಿದಾಗ ಸಾಲ ನೀಡಿದವರ ಪಟ್ಟಿಯಲ್ಲಿ ದಿನೇಶ್ ಅವರ ಹೆಸರು ಉಲ್ಲೇಖವಾಗಿದೆ. ಹಾಗಾಗಿ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾಗುವಂತೆ ಪ್ರಕರಣದ ತನಿಖಾಧಿಕಾರಿ ಆಗಿರುವ ಲೋಕಾಯುಕ್ತ ಡಿವೈಎಸ್‌ಪಿ ಸತೀಶ್ ಕುಮಾರ್ ಅವರು ದಿನೇಶ್ ಅವರಿಗೆ ನೋಟಿಸ್ ನೀಡಿದ್ದಾರೆ.

ನೋಟಿಸ್ ಜಾರಿ ಬೆನ್ನಲ್ಲೇ ದಿನೇಶ್ ಅವರು ದಾಖಲೆ ಕ್ರೋಡೀಕರಿಸಲು ಕಾಲಾವಕಾಶ ಕೋರಿದ್ದಾರೆ ಎಂದು ತಿಳಿದುಬಂದಿದೆ.

ಮಂತ್ರಾಲಯ ₹3.50 ಕೋಟಿ ಕಾಣಿಕೆ ಸಂಗ್ರಹ

ರಾಯಚೂರು: ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸಿಬ್ಬಂದಿ ಮಂಗಳವಾರ ಹುಂಡಿ ತೆರೆದಿದ್ದು, 27 ದಿನಗಳಲ್ಲಿ ₹3.50 ಕೋಟಿ ಕಾಣಿಕೆ ಬಂದಿದೆ. ಭಕ್ತರಿಂದ ₹3,39,12,143 ನಗದು, ₹11,05,000 ಮೊತ್ತದ ನಾಣ್ಯಗಳು ಸೇರಿ ಒಟ್ಟು ₹3,50,17,143 ನಗದು ಕಾಣಿಕೆ ರೂಪದಲ್ಲಿ ಬಂದಿದೆ. 138 ಗ್ರಾಂ ಚಿನ್ನ ಹಾಗೂ 50 ಗ್ರಾಂ ಬೆಳ್ಳಿಯನ್ನು ಭಕ್ತರು ಕಾಣಿಕೆಯಾಗಿ ನೀಡಿದ್ದಾರೆ ಎಂದು ಮಠದ ಪ್ರಕಟಣೆ ತಿಳಿಸಿದೆ.

50 ಕೆ.ಜಿ ಚಿನ್ನ, ₹8 ಕೋಟಿ ದರೋಡೆ

ಪ್ರಜಾವಾಣಿ ವಾರ್ತೆ

ಚಡಚಣ (ವಿಜಯಪುರ ಜಿಲ್ಲೆ): ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಯ ಚಡಚಣ ಪಟ್ಟಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಿಂದ ಸುಮಾರು ₹8 ಕೋಟಿ ನಗದು, 50 ಕೆ.ಜಿ ಚಿನ್ನಾಭರಣ ದರೋಡೆ ಮಾಡಲಾಗಿದೆ.

ಮಂಗಳವಾರ ಸಂಜೆ 7 ಗಂಟೆಗೆ ನುಗ್ಗಿರುವ ಏಳೆಂಟು ಮುಸುಕುಧಾರಿ ದರೋಡೆಕೋರರು ಪಿಸ್ತೂಲ್, ಮಾರಕಾಸ್ತ್ರಗಳನ್ನು ತೋರಿಸಿ, ಸಿಬ್ಬಂದಿ ಕೈಕಾಲು ಕಟ್ಟಿ ಹಾಕಿ ಕೃತ್ಯ ಎಸಗಿದ್ದಾರೆ.

'₹8 ಕೋಟಿ ನಗದು, 50 ಕೆ.ಜಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ' ಎಂದು ಬ್ಯಾಂಕ್ ಸಿಬ್ಬಂದಿ, ಪೊಲೀಸರು ತಿಳಿಸಿದ್ದಾರೆ.

'ಚಡಚಣ ಪಟ್ಟಣದ ಪಂಢರಪುರ ಮುಖ್ಯರಸ್ತೆಯಲ್ಲಿರುವ ಎಸ್‌ಬಿಐ ಶಾಖೆಯ ಸಿಬ್ಬಂದಿ ಕೆಲಸ ಮುಗಿಸುತ್ತಿದ್ದಂತೆ ದರೋಡೆಕೋರರು ಮುಖ್ಯ ದ್ವಾರದ ಮೂಲಕ ಒಳಗಡೆ ನುಗ್ಗಿದ್ದಾರೆ.

'ನಾಡ ಪಿಸ್ತೂಲ್ ಮತ್ತು ಮಾರಕಾಸ್ತ್ರ ತೋರಿಸಿ, ಬ್ಯಾಂಕ್ ವ್ಯವಸ್ಥಾಪಕ ಮತ್ತು ಸಿಬ್ಬಂದಿಗೆ ಜೀವ ಬೆದರಿಕೆ ಹಾಕಿ, ದರೋಡೆ ಮಾಡಿದ್ದಾರೆ. ನಗದು, ಆಭರಣ ಹೇರಿಕೊಂಡು ಮಹಾರಾಷ್ಟ್ರ ಮಾರ್ಗದಲ್ಲಿ ಪರಾರಿಯಾಗಿದ್ದಾರೆ' ಎಂದು ಮಾಹಿತಿ ಆಧರಿಸಿ ಪೊಲೀಸರು ತಿಳಿಸಿದ್ದಾರೆ.

ಕಾರು ಅಪಘಾತ: ದರೋಡೆಕೋರರು ಪರಾರಿಯಾಗುವ ವೇಳೆ ಮಹಾರಾಷ್ಟ್ರದ ಹುಲಜಂತಿ ಬಳಿ ಕುರಿಗಳ ಹಿಂಡಿಗೆ ಡಿಕ್ಕಿ ಹೊಡೆದಿದ್ದಾರೆ. ಈ ವೇಳೆ ಜನರು ಅಡ್ಡಗಟ್ಟಿದಾಗ ಸ್ಥಳದಲ್ಲೇ ಕಾರು ಬಿಟ್ಟು ಆರೋಪಿಗಳು ಪರಾರಿಯಾಗಿದ್ದಾರೆ. ಬಳಿಕ ಜನರು ಕಾರಿನಲ್ಲಿ ಇದ್ದ ಬಂಗಾರ ಮತ್ತು ಹಣವನ್ನು ಕೈಗೆ ಸಿಕ್ಕಷ್ಟು ತೆಗೆದುಕೊಂಡು ಹೋಗಿದ್ದಾರೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಸಿನಿಮಾ ಟಿಕೆಟ್ ಕಾಯ್ದಿರಿಸಿದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಲ್ಟಿಪ್ಲೆಕ್ಸ್ ಸೇರಿ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿ ಎಲ್ಲಾ ಭಾಷೆಗಳ ಚಲನಚಿತ್ರಗಳ ಪ್ರದರ್ಶನಕ್ಕೆ ತೆರಿಗೆ ಹೊರತುಪಡಿಸಿ ಗರಿಷ್ಠ ₹200 ಮೊತ್ತದ ಏಕರೂಪ ದರ ನಿಗದಿಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ನಿಯಮಗಳಿಗೆ ತಡೆ ನೀಡಬೇಕು' ಎಂಬ ಮಧ್ಯಂತರ ಮನವಿಯ ಕುರಿತಾದ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಟಿಕೆಟ್ ದರ ನಿಗದಿಗೆ ಸಂಬಂಧಿಸಿದ 'ಕರ್ನಾಟಕ ಸಿನಿಮಾ, ನಿಯಂತ್ರಣ ಮತ್ತು ತಿದ್ದುಪಡಿ ನಿಯಮಗಳು-2025' ಅನ್ನು ಪ್ರಶ್ನಿಸಲಾದ ಅರ್ಜಿಗಳನ್ನು ನ್ಯಾಯಮೂರ್ತಿ ರವಿ ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಅರ್ಜಿದಾರರು ಹಾಗೂ ಸರ್ಕಾರದ ಪರ ವಕೀಲರ ಸುದೀರ್ಘ ವಾದ- ಪ್ರತಿವಾದ ಆಲಿಸಿದ ನ್ಯಾಯಪೀಠ ಇದೇ 23ಕ್ಕೆ ಆದೇಶ ಪ್ರಕಟಿಸುವುದಾಗಿ ತಿಳಿಸಿತು.

ಅರಣ್ಯ ಭೂಮಿ ಪತ್ತೆಗೆ ಎಸ್‌ಐಟಿ

ಒಂದನೇ ಪುಟದಿಂದ...

'ಕಂದಾಯ ಇಲಾಖೆ ಸ್ವಾಧೀನದಲ್ಲಿರುವ ಅರಣ್ಯ ಭೂಮಿಯನ್ನು ಖಾಸಗಿ ವ್ಯಕ್ತಿಗಳು ಇಲ್ಲವೇ ಸಂಸ್ಥೆಗಳಿಗೆ ಹಂಚಿಕೆ ಮಾಡಿದ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಕೆ ಮಾಡಲಾಗಿದೆಯೇ ಎನ್ನುವುದನ್ನು ವಿಶೇಷ ತನಿಖಾ ತಂಡಗಳು ಪತ್ತೆ ಮಾಡಬೇಕು. ಹೀಗೆ ಹಂಚಿಕೆ ಮಾಡಿದ ಭೂಮಿಯನ್ನು ರಾಜ್ಯ ಸರ್ಕಾರವು ವಾಪಸ್ ಪಡೆದು ಅರಣ್ಯ ಇಲಾಖೆಗೆ ಹಿಂದಿರುಗಿಸಬೇಕು. ಹಸ್ತಾಂತರಿಸಿದ ಭೂಮಿಯು ಸಾರ್ವಜನಿಕ ಹಿತಾಸಕ್ತಿಯ ವ್ಯಾಪ್ತಿಯೊಳಗೆ ಬಾರದಿದ್ದರೆ ಸ್ವಾಧೀನದಲ್ಲಿರುವ ವ್ಯಕ್ತಿ ಇಲ್ಲವೇ ಸಂಸ್ಥೆಯಿಂದ ನಿಗದಿತ ದರ ಸಂಗ್ರಹಿಸಿ ಅಂತಹ ಮೊತ್ತವನ್ನು ಅರಣ್ಯೀಕರಣ ಚಟುವಟಿಕೆಗಳಿಗೆ ಬಳಕೆ ಮಾಡಬೇಕು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು. ಈ ಕಾರಣದಿಂದಾಗಿ ಎಸ್‌ಐಟಿಗಳನ್ನು ರಚಿಸಲಾಗಿದೆ' ಎಂದು ಆದೇಶ ಉಲ್ಲೇಖಿಸಿದೆ.

ಟಿ.ಎನ್.ಗೋದವರ್ಮನ್ ತಿರುಮಲಪಾಡ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಮತ್ತಿತರರ ನಡುವಿನ

ರಿಟ್ ಪ್ರಕರಣ (ಸಂಖ್ಯೆ 202/1995) ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಮೇ 15ರಂದು ತೀರ್ಪು ನೀಡಿತ್ತು. ಮಹಾರಾಷ್ಟ್ರದ ಪುಣೆ ಜಿಲ್ಲೆಯ ಕೊಂಡ್ವಾ ಬುದ್ರುಕ್ ಎಂಬಲ್ಲಿ ಕೃಷಿ ಉದ್ದೇಶಕ್ಕೆ ಅರಣ್ಯ ಭೂಮಿ ಹಂಚಿಕೆ ಮಾಡಿ ನಂತರ ಮಾರಾಟ ಮಾಡಲು ಅನುಮತಿ ನೀಡಿದ್ದ ವಿಚಾರ ನ್ಯಾಯಾಲಯ ಮೆಟ್ಟಿಲೇರಿತ್ತು. ಕಂದಾಯ ಇಲಾಖೆ ಹಂಚಿಕೆ ಮಾಡಿದ ಅರಣ್ಯಭೂಮಿಯನ್ನು ಮಾರಾಟ ಮಾಡಲು ಅವಕಾಶ ನೀಡಿದ್ದರೆ ಅಂತಹ ಭೂಮಿಯನ್ನು ಮೂರು ತಿಂಗಳ ಒಳಗೆ ಹಿಂದಕ್ಕೆ ಪಡೆಯಬೇಕು ಎಂದು ಆದೇಶಿಸಿತ್ತು. ಅಲ್ಲದೇ ಇದೇ ಆದೇಶವನ್ನು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೂ ಅನ್ವಯಿಸಬೇಕು. ಇದಕ್ಕಾಗಿ ವಿಶೇಷ ತನಿಖಾ ತಂಡಗಳನ್ನು ರಚಿಸಬೇಕು ಎಂದು ಸೂಚಿಸಿತ್ತು.

'ಕರ್ನಾಟಕದಲ್ಲಿ ಈ ರೀತಿ 50,000 ರಿಂದ 60,000 ಎಕರೆಯಷ್ಟು ಅರಣ್ಯ ಭೂಮಿಯನ್ನು ಕಂದಾಯ ಇಲಾಖೆ ಹಂಚಿಕೆ ಮಾಡಿರುವ ಮಾಹಿತಿಯಿದ್ದು, ತನಿಖೆಯ ನಂತರ ನಿಖರ ವಿವರ ಸಿಗಲಿದೆ' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಜಿಲ್ಲಾ ತಂಡದ ಕಾರ್ಯ ಹೇಗೆ?

ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡವು ಆಯಾ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯು ಹಂಚಿಕೆ ಮಾಡಿರುವ ಅರಣ್ಯ ಭೂಮಿಯನ್ನು ಅರಣ್ಯವಲ್ಲದೇ ಯಾವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎನ್ನುವ ಕುರಿತು ದಾಖಲೆಗಳನ್ನು ಪರಿಶೀಲಿಸಿ, ತನಿಖೆ ನಡೆಸಬೇಕು.

ತಾಲ್ಲೂಕು, ಹೋಬಳಿ, ಗ್ರಾಮದ ಹೆಸರು, ಸರ್ವೆ ನಂಬರ್‌ಗಳೊಂದಿಗೆ ಭೂಮಿಯನ್ನು ಖಾಸಗಿ ವ್ಯಕ್ತಿ ಇಲ್ಲವೇ ಸಂಸ್ಥೆಗೆ ಯಾವ ಉದ್ದೇಶಕ್ಕೆ ಹಂಚಿಕೆ ಮಾಡಲಾಗಿದೆ. ಯಾವ ಉದ್ದೇಶಕ್ಕೆ ಈಗ ಬಳಕೆ ಮಾಡಲಾಗುತ್ತಿದೆ ಎಂಬುದನ್ನು ಪತ್ತೆಹಚ್ಚಬೇಕು. ಭೂಮಿ ಹಂಚಿಕೆ ವೇಳೆ ನೀಡಿರುವ ಆದೇಶದ ಪ್ರತಿಗಳನ್ನು ಸಂಬಂಧ ಪಟ್ಟವರಿಂದ ಪಡೆದುಕೊಳ್ಳಬೇಕು.

ಪ್ರತಿ ಜಿಲ್ಲೆಯಲ್ಲಿ ಹಂಚಿಕೆಯಾಗಿರುವ ಅರಣ್ಯ ಭೂಮಿ, ಉದ್ದೇಶದ ಮಾಹಿತಿಯನ್ನು ಸರ್ವೇ ನಂಬರ್ ಸಹಿತ ನಿಖರವಾಗಿ ದಾಖಲಿಸಿ ನಿಗದಿತ ನಮೂನೆಯಲ್ಲಿ ರಾಜ್ಯ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸಬೇಕು.

ರಾಜ್ಯ ವಿಶೇಷ ತನಿಖಾ ತಂಡ ರೂಪಿಸಿದ ಮಾರ್ಗಸೂಚಿ/ವಿವರಣೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು.

ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿದ್ದುಕೊಂಡು ವ್ಯಕ್ತಿ ಇಲ್ಲವೇ ಸಂಸ್ಥೆಗಳ ಸ್ವಾಧೀನದಲ್ಲಿರುವ ಅರಣ್ಯ ಭೂಮಿಯ ನಿಖರ ಮಾಹಿತಿ ಸಂಗ್ರಹಿಸಬೇಕು.

ಇಂತಹ ಭೂಮಿ ವಿಚಾರವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದರೆ ಅವುಗಳ ಮಾಹಿತಿಯನ್ನೂ ಒದಗಿಸಬೇಕು.

ಜಿಲ್ಲಾ ಮಟ್ಟದಲ್ಲಿ ಸಂಗ್ರಹಿಸುವ ಸಮಗ್ರ ಮಾಹಿತಿಯನ್ನು ನಾಲ್ಕು ತಿಂಗಳ ಒಳಗೆ ರಾಜ್ಯ ವಿಶೇಷ ತಂಡಕ್ಕೆ ಸಲ್ಲಿಸಬೇಕು.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_Ashok Leyland Dost GOODS
YOM – -
Reg No – KA52C0637
2) CB_EICHER_PRO_2110_E_BS_6_CAB_CHASSIS
YOM – -
Reg No – KA52C4220
3) CB_TATA LPT 3118 FULLY BUILT GOODS
YOM – 2015
Reg No – KA25AA3433
4) CB_Ashok Leyland Dost GOODS
YOM – 2024
Reg No – KA52C2989
5) MAHINDRA_AND_MAHINDRA - MAHINDRA BOLERO PICK-UP
YOM – -
Reg No – KA706947
6) CB_MM SUPRO MAXI TRUCK
YOM – 2024
Reg No – KA02AK0415
7) CB_ALU5525_TIP_TRAILER_CHASSIS
YOM – 2023
Reg No – KA28AA8916
8) MAHINDRA_AND_MAHINDRA - M_BOLERO_MAXI TRUCK_GOODS
YOM – -
Reg No – KA14C6679
9) CB_AL_BADA_DOST
YOM – 2023
Reg No – KA05AN3718
10) CB_T14 ULTRA DCR45 HSD
YOM – 2022
Reg No – KA705520
11) AL_DOST_GOODS
YOM – 2023
Reg No – KA09AA7164
12) CB_ASHOKLEYLAND_4825_CABIN_CHASSIS
YOM – 2023
Reg No – KA32AA6332
13) CB_TATA_LPT_1616_GOODS
YOM – -
Reg No – KA04AD5154
14) CB_TATA LPT 1412
YOM – 2019
Reg No – KA37B1960

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"
INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 17.09.2025
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Prashanthkumar S
Kotak Mahindra Bank Ltd.
Contact / 080 - 61564202

PSP Build to Last
PSP PROJECTS LTD
WALK IN INTERVIEW FOR PRECAST PROFESSIONAL
Interview Date: 21-09-2025, Sunday, Time: 9:00 am to 5:00 pm
"We have following vacancies for our Precast Factory in Sanand, Gujarat"
"Those who have Experience in Precast Industries will be Preferred"

Sr. No.	Position Code	Designation	Department	Experience	Qualification	No.of Positions
1	FB	Fabricator	Production	4+ Years	Basic/10th	112
2	WL	Welder	Production	4+ Years	Basic/10th	110
3	SF	Steel Fixer	Production	5+ Years	Basic/10th	148
4	CAR	Carpenter	Production	5+ Years	Basic/10th	45
5	MSN	Mason	Production	4+ Years	Basic/10th	30
6	RIG	Rigger	Production	4+ Years	Basic/10th	5

Interested candidates are advised to appear along with Hard Copy of their latest CV, 2 No's of passport size photos and Identity Proofs.
Venue: Icon Grand Hotel by Bhagini 68, Varthur Main Rd, Thubarahalli, Munnekollal, Bengaluru, Karnataka 560037
Email: hr.precast@pspprojects.com
For more Inquiry and Registration Contact No. +91 - 9948065113

ರಸ್ತೆಗಿಳಿದ ಐಷಾರಾಮಿ ಮಹೀಂದ್ರಾ BE6

ಭಾರತದ ಎಲೆಕ್ಟ್ರಿಕ್ ಕಾರುಗಳ ಪಿತಾಮಹ ಹಾಗೂ ಇವಿ ಮಾರುಕಟ್ಟೆಯ ನಾಯಕ ಎಂದೇ ಖ್ಯಾತಿಯುಳ್ಳ ಮಹೀಂದ್ರಾ ಕಂಪನಿಯ ನೂತನ Electric ಎಸ್‌ಯುವಿಗಳು ಮಾರುಕಟ್ಟೆಗೆ ದಾಂಗುಡಿವಿಡುತ್ತಿವೆ. ಐಷಾರಾಮಿ ಕಾರುಪ್ರಿಯರ ನಂಬಿಕೆ ಮತ್ತು ಉತ್ಸಾಹಕ್ಕೆ ಪಾತ್ರವಾಗುವಂತ ಶ್ರೇಣಿಯಲ್ಲಿ ಮಹೀಂದ್ರಾ BE 6, XEV 9E ಸರಣಿಯ eSUVಗಳು ರಸ್ತೆಗಿಳಿದಿವೆ.

ಕಾರು ಖರೀದಿಸುವ ಬಗ್ಗೆ ಯೋಚಿಸುತ್ತಿಲ್ಲವೇ? ಖಂಡಿತಾ ಈಗ ನೀವು ಯೋಚಿಸುತ್ತೀರಿ. ಯೋಚಿಸಲೇ ಬೇಕು... ಆ ರೀತಿ ಇದೆ ಮಹೀಂದ್ರ BE 6.

ಒಂದು ಒಳ್ಳೆಯ ಎಲ್ಲ ಸವಲತ್ತುಗಳುಗಳ್ಳ ಕಾರು ಇರಬೇಕು ಎಂದು ಬಯಸುವವರ ಅದರಲ್ಲೂ ಐಷಾರಾಮಿ ಕಾರುಗಳ ಬಗ್ಗೆ ಯೋಚಿಸುವವರು ಮಹೀಂದ್ರಾ BE 6 ಪ್ಯಾಕ್ ಟು ಅನ್ನು ನಿರ್ಲಕ್ಷಿಸುವುದು ಅಸಾಧ್ಯದ ಮಾತು. ಕೇವಲ ₹21.90 ಲಕ್ಷ ಬೆಲೆಯಲ್ಲಿ ಕಾರು ನಿಮ್ಮದಾಗಲಿದೆ. ಅಷ್ಟೂ ಹಣವನ್ನು ಒಂದೇ ಬಾರಿ ಕೊಡಬೇಕಲ್ಲ ಎಂಬ ಚಿಂತೆಯೂ ಬೇಡ. ₹ 39,545 ಸುಲಭ ಕಂತುಗಳ EMI ಯೋಜನೆಯಡಿ ನೀವು ಪ್ರೀಮಿಯಂ SUV ಕ್ಷೇತ್ರದ ಮಾಲೀಕರಾಗಬಹುದಾಗಿದೆ.

ಟಾಪ್ ಎಂಡ್ ವೈಶಿಷ್ಟ್ಯಗಳು: ರೇಸ್ ರೆಡಿ ಕಾಕ್‌ಪಿಟ್, ಪ್ರೀಮಿಯಂ ಲೆದರೆಟ್ ಇಂಟೀರಿಯರ್ಸ್, ಎಲ್‌ಇಡಿ ಲ್ಯಾಂಪ್‌ಗಳು, ಆರ್ 19 ವೀಲ್ಸ್, ಫಿಕ್ಸೆಡ್ ಗ್ಲಾಸ್ ಇನ್ಫಿನಿಟಿ ರೂಫ್, 5 ಸ್ಟಾರ್ ಭಾರತ್ ಎನ್‌ಸಿಎಪಿ ಸುರಕ್ಷತಾ ರೇಟಿಂಗ್, 59 ಕಿ.ವ್ಯಾ ಬ್ಯಾಟರಿ 400 ಕಿ.ಮೀ ವ್ಯಾಪ್ತಿಯನ್ನು ನೀಡುತ್ತದೆ. ಡಾಲ್ಬಿ ಅಟ್ಮಾಸ್‌ನೊಂದಿಗೆ 16 ಸ್ಪೀಕರ್ ಹರ್ಮನ್-ಕಾರ್ಡನ್ ಮತ್ತು ಲೆವೆಲ್ 2 ಎಡಿಎಎಸ್ ಸೇರಿರುವ ಅತ್ಯಾಧುನಿಕ ಅಂಶಗಳನ್ನು BE 6 ಹೊಂದಿದೆ.

ನೋಡಲು ಒಂದು ದಿಟ್ಟ ನಿಲುವು, ಗಂಭೀರತೆ ಹೊಂದಿರುವ ಸಿಲೂಯೆಟ್ ಬಿಇ6 ಕಾರಿನ 79kWh ಬ್ಯಾಟರಿಯು ಒಂದೇ ಚಾರ್ಜ್‌ನಲ್ಲಿ ಸುಮಾರು 500 ಕಿ.ಮೀ ವ್ಯಾಪ್ತಿ (ದೂರ)ಯನ್ನು ಕ್ರಮಿಸುತ್ತದೆ ಎಂಬುದು ಕಂಪನಿ ಮಾತು. ಅಂದರೆ ನೀವು (ಮಾಲೀಕರು) ಬ್ಯಾಟರಿಯನ್ನು ವಾರಕ್ಕೊಮ್ಮೆ ಮಾತ್ರ ಚಾರ್ಜ್ ಮಾಡಿದರೆ ಸಾಕು. ವಾರಾಂತ್ಯ ಕಳೆಯಲು ಇದಕ್ಕಿಂತ ಉತ್ತಮ ಕಾರಿಲ್ಲ. ಈಗಲೇ ಈ ಹೊಸ ಕಾರಿನೊಂದಿಗೆ ಯೋಜನೆ ರೂಪಿಸಬಹುದಾಗಿದೆ.

ಇಷ್ಟೇ ಅಲ್ಲದೆ, ಮತ್ತೊಂದು ವಿಶೇಷ ಅಂಶವೆಂದರೆ ಈ ಕಾರಿನ ಮಾಲೀಕರು ಬ್ಯಾಟರಿ ಬಗ್ಗೆ ಚಿಂತಿಸುವ ಅಗತ್ಯವೂ ಬರುವುದಿಲ್ಲ. ಕಾರಣ ನಿಮಗೆ ಜೀವಿತಾವಧಿಯ ಬ್ಯಾಟರಿ ಖಾತರಿಯೊಂದಿಗೆ ಕಾರು ನಿಮ್ಮ ಕೈಸೇರಲಿದೆ.

ಮಹೀಂದ್ರಾ XEV 9E

ಮಹೀಂದ್ರಾ XEV 9E ನಂತರ ಇತರ ಕಾರುಗಳು ನಿಮ್ಮ ಎರಡನೇ ಅತ್ಯುತ್ತಮ ಕಾರುಗಳಾಗಿ ಕಾಣುತ್ತಿದ್ದರೆ. ಅದು ಖಂಡಿತಾ ನಿಜ. ಕಾರಣ, ಒಮ್ಮೆ ನೀವು ಮಹೀಂದ್ರಾ ನೂತನ ಎಕ್ಸ್‌ಇವಿ 9ಇ ನೋಡಿದ ನಂತರ ಹಾಗೆ ಅನಿಸುವುದು ಸಹಜ. ಎಕ್ಸ್‌ಇವಿ 9ಇಯ ಆಧುನಿಕ ತಂತ್ರಜ್ಞಾನ ಹಾಗೂ ವಿನ್ಯಾಸ ಕೂಡ ಹಾಗೇ ಇದೆ. ಆದರೂ ಮಹೀಂದ್ರಾ XEV 9e ಪ್ಯಾಕ್ ತನ್ನತನವನ್ನು ಉಳಿಸಿಕೊಂಡು ಹೊರಬಂದಿದೆ. ನೋಡಲು ಸರಳವಾಗಿ ಕಂಡುಬರುತ್ತದೆ. ಆದರೆ, ಅದರ ಒಳಾಂಗಣ ವ್ಯವಸ್ಥೆಯಂತೂ ಅತ್ಯದ್ಭುತ. ಇಂತಹ ಅಮೋಘ ಕಾರು ಕೇವಲ ₹ 24.90 ಲಕ್ಷಕ್ಕೆ ಲಭ್ಯವಿದೆ. ಮಾಸಿಕ ₹45,716 ಕಂತು ಕಟ್ಟುವ ಮೂಲಕವೂ ಇದನ್ನು ತನ್ನದಾಗಿಸಿಕೊಳ್ಳಬಹುದಾಗಿದೆ. ಇದರ ಕಾರ್ಯಕ್ಷಮತೆ ಅಗಾಧ. ಹೊಳಪು ಕಣ್ಣಿಗೆ ರಾಚದೆ ಕ್ಲಾಸಿಕ್ ನೋಟವನ್ನು ನೀಡುತ್ತದೆ.

ಟಾಪ್ ಎಂಡ್ ವೈಶಿಷ್ಟ್ಯಗಳು: ಕೋಸ್ಟ್ ಟು ಕೋಸ್ಟ್ ಸ್ಕ್ರೀನ್, 16 ಸ್ಪೀಕರ್ ಹರ್ಮನ್-ಕಾರ್ಡನ್ ಆಡಿಯೋ ವಿತ್ ಡಾಲ್ಬಿ ಅಟ್ಮಾಸ್, ಪ್ರೀಮಿಯಂ ಲೆದರೆಟ್ ಇಂಟೀರಿಯರ್ಸ್, LED ಲ್ಯಾಂಪ್‌ಗಳು, R19 ವೀಲ್ಸ್, ಫಿಕ್ಸೆಡ್ ಗ್ಲಾಸ್ ಇನ್ಫಿನಿಟಿ ರೂಫ್, 5 ಸ್ಟಾರ್ ಭಾರತ್ NCAP ಸುರಕ್ಷತಾ ರೇಟಿಂಗ್, 59kWh ಬ್ಯಾಟರಿ 400 ಕಿಮೀ ವ್ಯಾಪ್ತಿಯನ್ನು ನೀಡುತ್ತದೆ.

ಸುಂದರ ಕೆತ್ತನೆಯ ಫ್ರೇಮ್ ಅಡಿಯಲ್ಲಿ 79 kWh ಬ್ಯಾಟರಿಯನ್ನು ಸುರಕ್ಷಿತವಾಗಿರಿಸಿದ್ದು, ಒಂದೇ ಚಾರ್ಜ್‌ನಲ್ಲಿ 500 ಕಿಮೀವರೆಗೆ ಚಲಿಸುವ ಶಕ್ತಿ ಹೊಂದಿದೆ. ಅಂದರೆ ಬ್ಯಾಟರಿ ವಾರಕ್ಕೊಮ್ಮೆ ಮಾತ್ರ ಚಾರ್ಜ್ ಮಾಡಿದರೆ ಸಾಕಾಗುತ್ತದೆ.

ಪ್ರವಾಸ ಪ್ರಿಯರಿಗೆ ನೆಮ್ಮದಿ ಮತ್ತು ತೃಪ್ತಿ ತರುವಲ್ಲಿ ಎಕ್‌ಇವಿ 9ಇ ಮುಂಚೂಣಿಗೆ ಬರಲಿದೆ. ನಿಮ್ಮ ಅದ್ಭುತ ರಸ್ತೆ ಪ್ರವಾಸ ಆನಂದ ತರುವುದಂತೂ ಖಂಡಿತ. ಬ್ಯಾಟರಿ ಬಗ್ಗೆ ಚಿಂತಿಸುವ ಅಗತ್ಯವಿರುವುದಿಲ್ಲ. ಜೀವಿತಾವಧಿಯ ಬ್ಯಾಟರಿ ಖಾತರಿಯೊಂದಿಗೆ ಕಾರು ನಿಮ್ಮದಾಗಲಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಚಿಟಿಕೆ ಸುದ್ದಿ

18,500 ಶಿಕ್ಷಕರ ನೇಮಕಾತಿ ಶೀಘ್ರ: ಮಧು ಬಂಗಾರಪ್ಪ

ಚಾಮರಾಜನಗರ: 'ಸರ್ಕಾರಿ, ಅನುದಾನಿತ ಶಾಲೆಗಳಿಗೆ 18,500 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಶೀಘ್ರ ಶುರುವಾಗಲಿದೆ' ಎಂದು ಶಾಲಾ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು.

ನಗರದಲ್ಲಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ 13,500 ಶಿಕ್ಷಕರ ನೇಮಕವಾಗಿದೆ ಎಂದು ಹೇಳಿದರು.

'ವಿವೇಕ' ಯೋಜನೆಯಡಿ 8,200 ಶಾಲಾ ಕೊಠಡಿ ನಿರ್ಮಿಸಿದ್ದು ಹೆಚ್ಚುವರಿ 3 ಸಾವಿರ ಕೊಠಡಿ ನಿರ್ಮಿಸಲಾಗುವುದು. ಹೊಸದಾಗಿ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ' ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ

ಬೆಂಗಳೂರು: ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು ಎಂಬ ಆ ಭಾಗದ ಜನರ ಬೇಡಿಕೆಗೆ ಪೂರಕವಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು ಈ ಸಚಿವಾಲಯದ ವ್ಯಾಪ್ತಿಗೆ ಬರಲಿವೆ. ಇದರ ಕೇಂದ್ರ ಕಚೇರಿ ಎಲ್ಲಿರಬೇಕು? ಮತ್ತಿತ್ತರ ಅಂಶಗಳನ್ನು ಮುಂದಿನ ದಿನಗಳಲ್ಲಿ ತೀರ್ಮಾನಿಸಲಾಗುವುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಾಲ್ಯವಿವಾಹ ತಪ್ಪಿಸಿಕೊಂಡ ವಿದ್ಯಾರ್ಥಿನಿ

ಮೊಳಕಾಲ್ಮುರು (ಚಿತ್ರದುರ್ಗ): ಪಿಯುಸಿ ವಿದ್ಯಾರ್ಥಿನಿಯೊಬ್ಬಳು, ತಾನು ಓದುತ್ತಿದ್ದ ಕಾಲೇಜಿನ ಪ್ರಾಂಶುಪಾಲರಿಗೆ ಮಂಗಳವಾರ, ತನ್ನ ಮದುವೆಗೆ ಸಿದ್ಧತೆ ನಡೆಯುತ್ತಿರುವ ಕುರಿತು ಪತ್ರ ಬರೆದು ಬಾಲ್ಯವಿವಾಹದಿಂದ ಪಾರಾಗಿದ್ದಾಳೆ.

ತಾಲ್ಲೂಕಿನ ಗ್ರಾಮವೊಂದರ ವಿದ್ಯಾರ್ಥಿನಿ, ಬೆಳಿಗ್ಗೆ ಪ್ರಾಂಶುಪಾಲರ ಕಚೇರಿಗೆ ತೆರಳಿ ಅವರಿಗೆ ಪತ್ರ ನೀಡಿದ್ದಳು. 'ಸಂಬಂಧಿಕರ ಮಗನೊಂದಿಗೆ ಇದೇ 22ರಂದು ಮದುವೆ ನಿಗದಿ ಆಗಿದೆ. ನನಗಿನ್ನೂ 18 ವರ್ಷ ತುಂಬಿಲ್ಲ. ಓದು ಬಿಟ್ಟು ಮದುವೆಯಾಗಲು ಇಷ್ಟವಿಲ್ಲ. ಸಹಾಯ ಮಾಡಿ' ಎಂದು ಕೋರಿದ್ದಳು. ಇದನ್ನು ಪೊಲೀಸ್ ಹಾಗೂ ಸಿಡಿಪಿಒ ಗಮನಕ್ಕೆ ತರಲಾಯಿತು.

'ಬಾಲಕಿ ಪಾಲಕರನ್ನು ಠಾಣೆಗೆ ಕರೆಸಿ 'ಬಾಲಕಿ ಇಚ್ಛೆಗೆ ವಿರುದ್ಧವಾಗಿ ವಿವಾಹ ಮಾಡುವುದೂ ಅಪರಾಧ' ಎಂದು ತಿಳಿವಳಿಕೆ ನೀಡಲಾಯಿತು'. ಈಗ ವಿವಾಹ ಮಾಡುವುದಿಲ್ಲ ಎಂದು ಮುಚ್ಚಳಿಕೆ ಬರೆಸಿಕೊಳ್ಳಲಾಯಿತು' ಎಂದು ಪಿಎಸ್ಐ ಮಹೇಶ್ ಹೊಸಪೇಟೆ ಹೇಳಿದರು.

ಪರಿಸರಕ್ಕೆ ಧಕ್ಕೆ: ಯೋಜನೆಗೆ ಆಕ್ಷೇಪ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕೈಬಿಡಲು ಒಕ್ಕೊರಲ ಆಗ್ರಹ

• ವೆಂಕಟೇಶ ಜಿ.ಎಚ್

ಶಿವಮೊಗ್ಗ ಜಿಲ್ಲೆಯ ಕಾರ್ಗಲ್‌ನಲ್ಲಿ ಮಂಗಳವಾರ ನಡೆದ ಸಾರ್ವಜನಿಕರ ಅಹವಾಲು ಸಭೆಯ ನೋಟ

ಕಾರ್ಗಲ್ (ಶಿವಮೊಗ್ಗ): ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ಸಂಬಂಧಿಸಿ ಜಿಲ್ಲಾಡಳಿತವು ಮಂಗಳವಾರ ಇಲ್ಲಿ ಆಯೋಜಿಸಿದ್ದ ಅಹವಾಲು ಆಲಿಕೆ ಸಭೆಯಲ್ಲಿ ಯೋಜನೆಗೆ ಸ್ಥಳೀಯರು, ಪರಿಸರವಾದಿಗಳಿಂದ ವ್ಯಾಪಕ ವಿರೋಧ ವ್ಯಕ್ತವಾಯಿತು.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ವಿವರಗಳನ್ನು ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿ) ಅಧಿಕಾರಿಗಳು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸಾರ್ವಜನಿಕರಿಗೆ ನೀಡಿದರು.

ಶರಾವತಿ ನದಿ ಕಣಿವೆಯಲ್ಲಿ ಸುರಂಗದಲ್ಲಿ ನೀರು ಹರಿಸಿ, 2,000 ಮೆಗಾವಾಟ್ ವಿದ್ಯುತ್ ಉತ್ಪಾದಿಸಿ, ಸಂಗ್ರಹಿಸಿಟ್ಟು ಬೇಡಿಕೆ ಹೆಚ್ಚಿದಾಗ ಪೂರೈಸುವ ₹ 10,500 ಕೋಟಿ ವೆಚ್ಚದ ಯೋಜನೆಯು ಇದಾಗಿದೆ.

ಸಭೆ ಮುಂದೂಡಲು ಆಗ್ರಹ: ಯೋಜನೆಯ ವಿಸ್ತೃತ ವರದಿ (ಡಿಪಿಆರ್)ಯನ್ನು ಕೆಪಿಸಿ ಈವರೆಗೆ ಬಹಿರಂಗಪಡಿಸಿಲ್ಲ. ಯೋಜನೆಯ ಅನುಷ್ಠಾನ ಕುರಿತಾದ ಮಾಹಿತಿ ಕನ್ನಡದಲ್ಲಿ ಲಭ್ಯವಿಲ್ಲ. ಅದನ್ನು ಒದಗಿಸಿದ 6 ತಿಂಗಳ ನಂತರ ಅಹವಾಲು ಆಲಿಕೆ ಸಭೆ ಕರೆಯಬೇಕಿದೆ. 'ಈ ವಿಚಾರದಲ್ಲಿ ಸ್ಥಳೀಯರನ್ನು ಕತ್ತಲೆಯಲ್ಲಿಟ್ಟು ಕೆಪಿಸಿ ಏಕಪಕ್ಷೀಯವಾಗಿ ವರ್ತಿಸಿದ್ದರಿಂದ ಸಭೆ ಮುಂದೂಡಬೇಕು ಎಂದು ಜನಸಂಗ್ರಾಮ ಪರಿಷತ್‌ನ ಜಿಲ್ಲಾ ಘಟಕದ ಅಧ್ಯಕ್ಷ ಅಖಿಲೇಶ್ ಚಿಪ್ಪಳಿ ಒತ್ತಾಯಿಸಿದ್ದಕ್ಕೆ ಸಭೆಯಲ್ಲಿದ್ದವರು ಬೆಂಬಲ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರು, '45 ದಿನ ಮೊದಲೇ ಸಾರ್ವಜನಿಕರಿಗೆ ಸಭೆ ಮಾಹಿತಿ ನೀಡಲಾಗಿದ್ದು, ಮುಂದೂಡಲಾಗದು. ಆಕ್ಷೇಪಣೆಗಳನ್ನು ಲಿಖಿತವಾಗಿ ಕೊಟ್ಟರೆ ಕೇಂದ್ರದ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಕಳುಹಿಸಿಕೊಡುವೆ' ಎಂದು ಹೇಳಿದರು.

'ಪಶ್ಚಿಮ ಘಟ್ಟದ ಧಾರಣಾ ಸಾಮರ್ಥ್ಯಕ್ಕೆ ಧಕ್ಕೆಯಾಗುವ ಯಾವುದೇ ಯೋಜನೆ ಜಾರಿ ವಿರುದ್ಧ ಹಿಂದೆಯೇ ಐಐಎಸ್‌ಸಿ ವಿಜ್ಞಾನಿಗಳು ವರದಿ ನೀಡಿದ್ದಾರೆ. ಅಳಿವಿನ ಅಂಚಿನಲ್ಲಿರುವ ಸಿಂಹ ಬಾಲದ ಸಿಂಗಳೀಕದ ಆವಾಸ ಸ್ಥಾನ ಬಾಧಿತವಾಗಲಿದೆ ಎಂದು ಯೋಜನೆಗೆ ಅರಣ್ಯ ಇಲಾಖೆ ಆಕ್ಷೇಪಿಸಿದೆ. ಎಲ್ಲ ಧಿಕ್ಕರಿಸಿ ಸರ್ಕಾರ ಜಾರಿಗೆ ಮುಂದಾಗಿದೆ ಎಂದು ರಾಜ್ಯ ಜೀವ ವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಆಕ್ಷೇಪಿಸಿದರು.

ಡಿಪಿಆರ್ ಬಹಿರಂಗೊಳಿಸದೇ, ಜನಾಭಿಪ್ರಾಯ ಸಂಗ್ರಹಕ್ಕೆ ಮುನ್ನವೇ ಮೆಗಾ ಎಂಜಿನಿಯರ್ಸ್ ಸಂಸ್ಥೆಗೆ ಟೆಂಡರ್ ಮೂಲಕ ಕಾಮಗಾರಿ ವಹಿಸಲಾಗಿದೆ. ಈಗಾಗಲೇ ₹ 8,000 ಕೋಟಿ ಬಿಡುಗಡೆ ಮಾಡಲಾಗಿದೆ ಎಂಬ ಮಾಹಿತಿ ಇದೆ. ಸರ್ಕಾರದ ಈ ನಡೆ ಅನುಮಾನಾಸ್ಪದ ಎಂದು ವನ್ಯಜೀವಿ ಕಾರ್ಯಕರ್ತ ಚಿಕ್ಕಮಗಳೂರಿನ ವೀರೇಶ್ ಹೇಳಿದರು.

'ಊರಿಗೆ ರಸ್ತೆ ಮಾಡಿಕೊಡುವಂತೆ 30 ವರ್ಷಗಳಿಂದ ಕೇಳುತ್ತಿದ್ದೇವೆ. ಅದಕ್ಕೆ ಕಿವಿಗೊಡದ ಕೆಪಿಸಿ ಏಕಾಏಕಿ ಯೋಜನೆ ಅನುಷ್ಠಾನ ಪ್ರದೇಶಕ್ಕೆ ಸಂಪರ್ಕ ಕಲ್ಪಿಸಲು ರಸ್ತೆ ನಿರ್ಮಿಸಲು ಮುಂದಾಗಿದೆ. ಈ ವಿಚಾರದಲ್ಲಿ ಸ್ಥಳೀಯರಾದ ನಮ್ಮನ್ನು ಕತ್ತಲೆಯಲ್ಲಿಡಲಾಗಿದೆ' ಎಂದು ತಳಕಳಲೆಯ ಸೂರಜ್ ಮುಪ್ಪಾನೆ ಆಕ್ಷೇಪಿಸಿದರು. ಅರಣ್ಯ ಇಲಾಖೆಯ ಶಿವಮೊಗ್ಗ ವನ್ಯಜೀವಿ ವಿಭಾಗದ ಡಿಸಿಎಫ್ ಪ್ರಸನ್ನ ಕೃಷ್ಣ ಪಟಗಾರ, ಮಾಲಿನ್ಯ ನಿಯಂತ್ರಣ ಮಂಡಳಿ ಹಿರಿಯ ಪರಿಸರ ಅಧಿಕಾರಿ ರಮೇಶ ನಾಯಕ್, ಜಿಲ್ಲಾ ಪರಿಸರ ಅಧಿಕಾರಿ ಶಿಲ್ಪಾ ಹಾಗೂ ಕೆಪಿಸಿ ಎಂಜಿನಿಯರ್ ವಿಜಯಕುಮಾರ್ ಇದ್ದರು.

> **ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಅನುಷ್ಠಾನ ತಡೆಯುವ ಅಧಿಕಾರ ನನಗೆ ಇಲ್ಲ. ಆದರೆ, ಜನಾಭಿಪ್ರಾಯ, ಆಕ್ಷೇಪಣೆಗಳನ್ನು ಕೇಂದ್ರದ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಕಳಿಸಿಕೊಡುವೆ**
> **ಗುರುದತ್ತ ಹೆಗಡೆ,** ಜಿಲ್ಲಾಧಿಕಾರಿ, ಶಿವಮೊಗ್ಗ

ರೂಢಿಗತ ಹೆಸರಿಗೆ ಆಗ್ರಹ; ಗದ್ದಲ

ಪಿಪಿಟಿ ಪ್ರದರ್ಶನದ ವೇಳೆ ಕೆಪಿಸಿ ಅಧಿಕಾರಿಗಳು ಯೋಜನಾ ಬಾಧಿತ ಪ್ರದೇಶದಲ್ಲಿರುವ ಸಸ್ತನಿ, ಸರೀಸೃಪ ಹಾಗೂ ಜಲಚರಗಳಿಗೆ ಸ್ಥಳೀಯವಾಗಿ ರೂಢಿಗತ ಹೆಸರು ಉಲ್ಲೇಖಿಸದೇ ವೈಜ್ಞಾನಿಕ ಹೆಸರನ್ನು ಬಳಸಿದ್ದು, ಸಭೆಯಲ್ಲಿ ಗದ್ದಲಕ್ಕೆ ಕಾರಣವಾಯಿತು.

ಜಿಲ್ಲಾಧಿಕಾರಿ ಸೂಚನೆಯ ನಂತರ ರೂಢಿಗತ ಹೆಸರನ್ನು ಉಲ್ಲೇಖಿಸಿ ಕೆಪಿಸಿ ಅಧಿಕಾರಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಅಹವಾಲು ಸಭೆಯಲ್ಲಿ ಆನ್‌ಲೈನ್ ಮೂಲಕ 14,090 ಹಾಗೂ ಲಿಖಿತವಾಗಿ 800ಕ್ಕೂ ಹೆಚ್ಚು ಆಕ್ಷೇಪಣೆಗಳು ಸಲ್ಲಿಕೆಯಾದವು.

ಮುಂದೆ ನಮಗೆ ಜಾಗವಿರುವುದಿಲ್ಲವೇನೊ?

'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ವ್ಯಾಪ್ತಿಯ ಪ್ರದೇಶದಲ್ಲಿ ನೆಲಸಿರುವವರಲ್ಲಿ ಹಕ್ಕುಪತ್ರ ಇರುವವರಿಗೆ ಪರಿಹಾರ ಕೊಡಲಾಗುವುದು ಎಂದು ಕೆಪಿಸಿಯವರು ಹೇಳುತ್ತಿದ್ದಾರೆ. ಅಜ್ಜ, ಮುತ್ತಜ್ಜನ ಕಾಲದಿಂದಲೂ ಅರಣ್ಯ ಪ್ರದೇಶದಲ್ಲಿ ವಾಸವಿದ್ದೇವೆ. ಶರಾವತಿ ಕಣಿವೆ ವ್ಯಾಪ್ತಿಯ ಹೆನ್ನಿ, ಅಂಜಕ್ಕಿ, ಸುಂಕಮನೆ, ಹರಕುಣೆ, ಮರಾಠಿಕೇರಿ, ಹಾರೆಕ್ಕೆ ಸುತ್ತಲೂ ವಾಸವಿರುವ ನಮ್ಮಂತೆಯೇ ನೂರಾರು ಮಂದಿಗೆ ಮನೆ, ಜಾಗಕ್ಕೆ ಹಕ್ಕುಪತ್ರ ಇಲ್ಲ. ಭವಿಷ್ಯ ಏನು? ಮುಂದೆ ನಮಗೆ ಜಾಗವಿರುವುದಿಲ್ಲವೇನೋ ಎಂಬ ಅಂಜಿಕೆ ಈಗಲೇ ಕಾಡುತ್ತಿದೆ' ಎಂದು ಸಾಗರ ತಾಲ್ಲೂಕಿನ ಹೆನ್ನಿಯ ದುರುಗಪ್ಪ ಹಾಗೂ ಹಾರೆಕ್ಕೆಯ ತಿಮ್ಮಪ್ಪ ಅಳಲು ತೋಡಿಕೊಂಡರು.

ಬಿಜೆಪಿಯಿಂದ ಆಕ್ಷೇಪಣೆ ಸಲ್ಲಿಕೆ

'ಉತ್ಪಾದನೆ ಆದ ವಿದ್ಯುತ್ತನ್ನು ಪಂಪ್‌ಹೌಸ್‌ಗೆ ಹೇಗೆ ಕೊಂಡೊಯ್ಯಲಾಗುತ್ತದೆ ಎಂಬುದರ ಮಾಹಿತಿ ಇಲ್ಲ. ಅಷ್ಟು ಪ್ರಮಾಣದ ವಿದ್ಯುತ್ ಸಾಗಣೆಗೆ ಈಗ ಅಸ್ತಿತ್ವದಲ್ಲಿರುವ ಸಾಗಣೆ ಮಾರ್ಗದಿಂದ ಸಾಧ್ಯವಿಲ್ಲ. ಹೊಸ ಸಾಗಣೆ ಮಾರ್ಗ ನಿರ್ಮಿಸಲು ಮತ್ತೆ ಎಷ್ಟು ಸಾವಿರ ಎಕರೆ ಅರಣ್ಯ ಪ್ರದೇಶ ನಾಶವಾಗುತ್ತದೆ. ಎಷ್ಟು ಹಣ ಖರ್ಚಾಗುತ್ತದೆ ಎಂಬ ಮಾಹಿತಿ ಬಹಿರಂಗ ಪಡಿಸಿಲ್ಲ. ಈ ವಿಚಾರದಲ್ಲಿ ಕೆಪಿಸಿ ಜನರನ್ನು ವಂಚಿಸುತ್ತಿದೆ. ಇದನ್ನು ನಾವು ವಿರೋಧಿಸುತ್ತೇವೆ' ಎಂದು ಬಿಜೆಪಿಯ ರಾಜ್ಯ ಘಟಕದ ಉಪಾಧ್ಯಕ್ಷ ಹರತಾಳು ಹಾಲಪ್ಪ ಜಿಲ್ಲಾಧಿಕಾರಿಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿದರು.

ಕೆಪಿಸಿ ಅಧಿಕಾರಿ ವಿಜಯಕುಮಾರ್, ಗೇರುಸೊಪ್ಪಾದಿಂದ ಈಗ ಅಸ್ತಿತ್ವದಲ್ಲಿರುವ ಮಾರ್ಗದಲ್ಲಿಯೇ ವಿದ್ಯುತ್ ಸಾಗಣೆಗೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

'ಸಭೆಗೆ ತಪ್ಪು ಮಾಹಿತಿ ನೀಡುತ್ತಿದ್ದೀರಿ. ಅದು ಕಾರ್ಯಸಾಧುವಲ್ಲ. ಯೋಜನೆಯ ಸಮಗ್ರ ಮಾಹಿತಿ ಕನ್ನಡಕ್ಕೆ ತರ್ಜುಮೆ ಮಾಡಿ ಕೊಡಿ ನಂತರ ಬಹಿರಂಗ ಚರ್ಚೆಗೆ ಬನ್ನಿ' ಎಂದು ಹಾಲಪ್ಪ ಸವಾಲು ಎಸೆದರು.

ಸುದ್ದಿ 2 ನಿಮಿಷ

ಬಫರ್ ಝೋನ್ ಕಡಿತ ಮರುಪರಿಶೀಲನೆಗೆ ಸಲಹೆ

ಬೆಂಗಳೂರು: 'ಕೆರೆಗಳ ಬಫರ್ ಝೋನ್ ಕಡಿತಗೊಳಿಸುವ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲಾಗುತ್ತದೆ' ಎಂದು ವಿಧಾನ ಪರಿಷತ್ ಮಾಜಿ ಸಭಾಪತಿ ಬಿ.ಕೆ. ಚಂದ್ರಶೇಖರ್ ಹೇಳಿದರು. ನಿವೃತ್ತ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಂತರ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದರು.

'ಎಲ್ಲ ಕೆರೆಗಳಿಗೆ 30 ಮೀಟರ್ ಬಫರ್ ಝೋನ್ ಅನ್ನು ನಿಗದಿಪಡಿಸಲಾಗಿದೆ. ಅದನ್ನು ಕಡಿತಗೊಳಿಸಿ ಒಂದೊಂದು ಕೆರೆಗೆ ಒಂದೊಂದು ರೀತಿಯ ವಿಸ್ತೀರ್ಣಕ್ಕೆ ಅನುಗುಣವಾಗಿ ನಿಗದಿಪಡಿಸಲು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಕೆಟಿಸಿಡಿಎ) ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಈ ಮಸೂದೆಯನ್ನು ರಾಜ್ಯಪಾಲರು ವಾಪಸ್ ಕಳುಹಿಸಿರುವುದು ಸ್ವಾಗತಾರ್ಹ' ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾಜಿ ವಿಶೇಷ ನಿರ್ದೇಶಕ ವಿ.ಎಸ್. ಪ್ರಕಾಶ್ ಹೇಳಿದರು.

'ಬಫರ್ ಝೋನ್ ಬಗ್ಗೆ ಅಧಿಕಾರಿಗಳ ಸಭೆಯಲ್ಲಿ ವ್ಯಕ್ತವಾದ ಸಲಹೆಗಳನ್ನು ರಾಜ್ಯಪಾಲ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಣ್ಣ ನೀರಾವರಿ ಸಚಿವರಿಗೆ ಮನವಿ ರೂಪದಲ್ಲಿ ನೀಡಲಾಗುತ್ತದೆ' ಎಂದು ತಿಳಿಸಿದರು.

ಅರಣ್ಯ ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕ ಎಂ.ಎಚ್. ಸ್ವಾಮಿನಾಥ್, ಬೆಂಗಳೂರು ಜಲಮಂಡಳಿ ಮಾಜಿ ಮುಖ್ಯ ಎಂಜಿನಿಯರ್ ಎಂ.ಎನ್. ತಿಪ್ಪೇಸ್ವಾಮಿ, ಜಲ ಸಂಪನ್ಮೂಲ ಇಲಾಖೆಯ ಮಾಜಿ ಕಾರ್ಯದರ್ಶಿ ಕ್ಯಾಪ್ಟನ್ ಎಸ್. ರಾಜಾರಾವ್ ಇದ್ದರು.

₹4.8 ಕೋಟಿ ವಶ: ಸುಧಾಕರ್ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: 2024ರ ಲೋಕಸಭೆ ಚುನಾವಣೆ ವೇಳೆ ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾದಾವರ ಗ್ರಾಮದಲ್ಲಿ ಗೋವಿಂದಪ್ಪ ಅವರ ಮನೆಯಲ್ಲಿ ಚುನಾವಣಾ ಅಧಿಕಾರಿಗಳು ಜಪ್ತಿ ಮಾಡಿದ ₹4.8 ಕೋಟಿ ಮೊತ್ತದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಬಳ್ಳಾಪುರ ಕ್ಷೇತ್ರದ ಸಂಸದ ಡಾ.ಕೆ.ಸುಧಾಕರ್ ವಿರುದ್ಧ ದಾಖಲಾಗಿದ್ದ ಎಫ್ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ, 'ನನ್ನ ವಿರುದ್ಧದ ದೋಷಾರೋಪ ಪಟ್ಟಿ ಹಾಗೂ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಡಾ.ಕೆ.ಸುಧಾಕರ್ ಹಾಗೂ ಗೋವಿಂದಪ್ಪ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಸುಧಾಕರ್ ಪರ ಪದಾಂಕಿತ ಹಿರಿಯ ವಕೀಲರುಗಳಾದದ ಬಿ.ವಿ.ಆಚಾರ್ಯ, ಬಿ.ಎಲ್.ಆಚಾರ್ಯ ಮತ್ತು ಗೋವಿಂದಪ್ಪ ಪರ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದ್ದರು.

ಧರ್ಮಸ್ಥಳ ಪ್ರಕರಣ; ಹೋರಾಟ ವಿಸ್ತರಣೆ

'ಕೊಂದವರು ಯಾರು' ಅಡಿ ಆಂದೋಲನ, ಸಂವಾದದಲ್ಲಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಸುತ್ತಮುತ್ತ ವರದಿಯಾಗಿರುವ ಅತ್ಯಾಚಾರ, ಕೊಲೆ, ಅನುಮಾನಾಸ್ಪದ ಸಾವು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಮಾಡಿ, ಕುಟುಂಬಗಳಿಗೆ ನ್ಯಾಯ ಒದಗಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ರಾಜ್ಯದಾದ್ಯಂತ ಹೋರಾಟವನ್ನು ವಿಸ್ತರಿಸಲು ನಿರ್ಧರಿಸಲಾಯಿತು.

ಮಂಗಳವಾರ ಇಲ್ಲಿ ನಡೆದ 'ಕೊಂದವರು ಯಾರು? ನೊಂದವರೊಂದಿಗೆ ನಾವು–ನೀವು' ಸಂವಾದ ಕಾರ್ಯಕ್ರಮದಲ್ಲಿ ಧರ್ಮಸ್ಥಳ ಪ್ರಕರಣಗಳ ತನಿಖೆ ವಿಚಾರವಾಗಿ ವಿಸ್ತೃತವಾಗಿ ಚರ್ಚಿಸಿ, ಐದು ನಿರ್ಣಯಗಳನ್ನು ಕೈಗೊಳ್ಳಲಾಯಿತು.

'ಧರ್ಮಸ್ಥಳ ಸುತ್ತಮುತ್ತ ನಾಲ್ಕು ದಶಕದಿಂದ ವೇದವಲ್ಲಿ, ಪದ್ಮಲತಾ, ಯಮುನಾ, ಸೌಜನ್ಯ ಸೇರಿದಂತೆ ಹಲವು ಕೊಲೆ ಪ್ರಕರಣಗಳು ವರದಿಯಾಗಿವೆ. ಹೋರಾಟಗಳು ನಡೆದರೂ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ನಿಂತಿಲ್ಲ. ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷೆ ಕೂಡ ನೀಡಿಲ್ಲ. ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದ ಮಹಿಳೆಯರ ನೊಂದ ಕುಟುಂಬಗಳಿಗೆ ನ್ಯಾಯ ಕೊಡಿಸಲು ಹೋರಾಟ ಮುಂದುವರಿಸಬೇಕು. ಇದನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಕ್ಕೂ ವಿಸ್ತರಿಸಬೇಕು' ಎಂದು ತೀರ್ಮಾನಿಸಲಾಯಿತು.

ಸಾಮಾಜಿಕ ಹೋರಾಟಗಾರ್ತಿ ಮಧುಭೂಷಣ್ ಮಾತನಾಡಿ, 'ಮಹಿಳೆಯರಿಗೆ ಸುಲಭವಾಗಿ ನ್ಯಾಯ ಸಿಗುವುದಿಲ್ಲ. ಪ್ರತಿರೋಧ ಹಾಗೂ ನಿರಂತರ ಪ್ರಯತ್ನ ಮಾತ್ರ ಫಲ ನೀಡಬಲ್ಲದು. ಇದಕ್ಕೆ ಗುಜರಾತ್‌ನ ಬಿಲ್ಕಿಸ್ ಬಾನೊ ಪ್ರಕರಣ ಉದಾಹರಣೆ. ಎಂದು ಹೇಳಿದರು.

ವಕೀಲ ಮೋಹಿತ್ ಕುಮಾರ್ ಮಾತನಾಡಿ, 'ಧರ್ಮಸ್ಥಳ ಸುತ್ತಮುತ್ತ ಹಲವಾರು ಅನುಮಾನಾಸ್ಪದ ಸಾವಿನ ಪ್ರಕರಣಗಳು ನಡೆದಿವೆ. ನ್ಯಾಯಕ್ಕಾಗಿ ಕಾನೂನು ಹೋರಾಟಗಳನ್ನೂ ನಡೆಸಲಾಗುತ್ತಿದೆ. ಸಂತೋಷರಾವ್ ಅವರಂತಹ ನಿರಪರಾಧಿಗಳಿಗೆ ಶಿಕ್ಷೆಯಾಗಿದೆ. ಕರ್ನಾಟಕದಲ್ಲಿ ಪೊಲೀಸ್ ತನಿಖೆಯ ಕ್ರಮ ಒಂದು ರೀತಿಯದಾಗಿದ್ದರೆ, ಬೆಳ್ತಂಗಡಿ ಮಾದರಿಯೇ ಬೇರೆ ಇದೆ' ಎಂದು ಹೇಳಿದರು. ವಕೀಲೆ ಪೂರ್ಣಾ ರವಿಶಂಕರ್ ಮಾತನಾಡಿದರು.

ಗಾಂಧಿ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಮುನ್ನ ಮಧುಭೂಷಣ್, ಮಲ್ಲಿಗೆ ಸಿರಿಮನೆ, ಚಂಪಾವತಿ, ಆರ್. ಸುನಂದಮ್ಮ, ಕೆ.ಎಸ್. ವಿಮಲಾ, ಎ.ಜ್ಯೋತಿ, ದು. ಸರಸ್ವತಿ, ಅಕ್ಕೈ ಪದ್ಮಶಾಲಿ ಅವರು ಭಿತ್ತಿಪತ್ರ ಹಿಡಿದು ಘೋಷಣೆ ಕೂಗಿದರು –ಪ್ರಜಾವಾಣಿ ಚಿತ್ರ

> **ಹೆಣ್ಣು ಮಕ್ಕಳ ಸುರಕ್ಷತೆ ವಿಚಾರದಲ್ಲಿ ಸರ್ಕಾರವು ಗಂಭೀರವಾಗಿ ಯೋಚಿಸುತ್ತಿಲ್ಲ. ಕಾಡು ಹಂದಿ ಸಾಯಿಸಿದವರನ್ನು ಬಂಧಿಸಲಾಗುತ್ತದೆ. ಮಹಿಳೆಯರ ಕೊಲೆಗಾರರನ್ನು ಬಂಧಿಸಲ್ಲ ಎಂದರೆ ಹೇಗೆ?**
> **ಆರ್.ಸುನಂದಮ್ಮ,** ಹಿರಿಯ ಲೇಖಕಿ

ಆರ್‌ವಿಎಸ್‌ಎಫ್ ಕೇಂದ್ರದಲ್ಲೇ ವಾಹನ ನಾಶ

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ ಇಲಾಖೆ, ನಿಗಮ, ಮಂಡಳಿ, ನಗರಸಭೆ, ಸರ್ಕಾರದ ಇತರೆ ಅಧೀನದ ಸಂಸ್ಥೆಗಳಿಗೆ ಸೇರಿರುವ ನೋಂದಣಿಯಾಗಿ 15 ವರ್ಷವಾದ ವಾಹನಗಳನ್ನು ನೋಂದಾಯಿತ ವಾಹನ ಸ್ಕ್ರ್ಯಾಪಿಂಗ್ ಸೌಲಭ್ಯ (ಆರ್‌ವಿಎಸ್‌ಎಫ್) ಕೇಂದ್ರಗಳಲ್ಲಿಯೇ ಕಡ್ಡಾಯವಾಗಿ ನಾಶಪಡಿಸಲು ಸಾರಿಗೆ ಇಲಾಖೆ ಆದೇಶಿಸಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮೋದಿ ಹುಟ್ಟುಹಬ್ಬ: ಶುಭ ಕೋರಿದ ಡೊನಾಲ್ಡ್ ಟ್ರಂಪ್

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಕರೆ ಮಾಡಿ 75ನೇ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದ್ದಾರೆ.

ಇದು ಭಾರತದ ಜತೆಗಿನ ಸಂಬಂಧವನ್ನು ಪುನರ್ ಸ್ಥಾಪಿಸುವ ಅಮೆರಿಕದ ಪ್ರಯತ್ನದ ಭಾಗವಾಗಿದೆ.

'ಫೋನ್ ಕರೆ ಮಾಡಿ ನನ್ನ 75ನೇ ಹುಟ್ಟುಹಬ್ಬಕ್ಕೆ ಶುಭಾಶಯ ತಿಳಿಸಿದ್ದಕ್ಕಾಗಿ ನನ್ನ ಗೆಳೆಯ, ಅಧ್ಯಕ್ಷ ಟ್ರಂಪ್ ಅವರಿಗೆ ಧನ್ಯವಾದಗಳು' ಎಂದು ಮೋದಿ ಅವರು ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ ಹೇಳಿದ್ದಾರೆ.

'ಕೈ' ಶಾಸಕ ನಂಜೇಗೌಡ ಆಯ್ಕೆ ಅಸಿಂಧು

ಒಂದನೇ ಪುಟದಿಂದ...

ಇದೇ ವೇಳೆ ನಂಜೇಗೌಡ ಪರ ವಕೀಲರು ಮಾಡಿದ, 'ಈ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಅಲ್ಲಿಯವರೆಗೂ ಆದೇಶಕ್ಕೆ ತಡೆ ನೀಡಬೇಕು' ಎಂಬ ಮನವಿಯನ್ನು ಪುರಸ್ಕರಿಸಿರುವ ನ್ಯಾಯಪೀಠ, ತನ್ನ ಆದೇಶಕ್ಕೆ 30 ದಿನ ತಡೆ ನೀಡಿದೆ.

'ಮತ ಎಣಿಕೆ ಪ್ರಕ್ರಿಯೆ ಸಂದರ್ಭದಲ್ಲಿ ಬಳಸಲಾದ ವಿವಿ ಪ್ಯಾಟ್ ಪೇಪರ್ ಟ್ರಯಲ್ ಅನ್ನು ಇವಿಎಂ ಜೊತೆಗೆ ಹೊಂದಾಣಿಕೆ ಮಾಡುವ ಚಿತ್ರೀಕರಣದ ದೃಶ್ಯಾವಳಿಯನ್ನು ಕೋರ್ಟ್‌ಗೆ ಸಲ್ಲಿಸಿ ಎಂದು ಅಂದಿನ ಜಿಲ್ಲಾಧಿಕಾರಿಗೆ (ಜಿಲ್ಲಾ ಚುನಾವಣಾಧಿಕಾರಿ) ಆದೇಶಿಸಲಾಗಿತ್ತು. ಆದರೆ, ಅವರು ಈ ಆದೇಶವನ್ನು ಪಾಲನೆ ಮಾಡಿಲ್ಲ. ಹಾಗಾಗಿ, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ತೀರ್ಪಿನ ಪ್ರತಿಯನ್ನು ಕೇಂದ್ರ ಚುನಾವಣಾ ಆಯೋಗದ ಕಾರ್ಯದರ್ಶಿಗೆ ತ್ವರಿತಗತಿ ಅಂಚೆ ಮೂಲಕ ರವಾನಿಸಬೇಕು' ಎಂದು ನ್ಯಾಯಪೀಠ ಕೇಂದ್ರ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

'ಎಣಿಕೆ ಪ್ರಕ್ರಿಯೆಯಲ್ಲಿ ಕಂಡು ಬಂದಿರುವ ವ್ಯತ್ಯಾಸಗಳ ಬಗ್ಗೆ ಅರ್ಜಿದಾರರು ಸಾಕಷ್ಟು ವಿವರಗಳನ್ನು ನ್ಯಾಯಾಲಯಕ್ಕೆ ಒದಗಿಸಿದ್ದಾರೆ. ಅರ್ಜಿದಾರರ ಎಣಿಕೆ ಏಜೆಂಟರ ಸಹಿಗಳು ಕಂಡುಬರದ ಫಾರಂ-17ಸಿ ಭಾಗ-2ರ ದಾಖಲೆಗಳನ್ನು ಪ್ರಸ್ತುತಪಡಿಸಿದ್ದಾರೆ. ಕೆಲವು ದಾಖಲೆಗಳಲ್ಲಿ, ಅರ್ಜಿದಾರರ ಎಣಿಕೆ ಏಜೆಂಟ್ ಆಗಿ ಸಹಿ ಮಾಡಿರುವ ಕಾಲ್ಪನಿಕ ವ್ಯಕ್ತಿಯ ಎರಡು ಸಹಿಗಳಿವೆ' ಎಂಬ ಅಂಶವನ್ನು ನ್ಯಾಯಪೀಠ ತೀರ್ಪಿನಲ್ಲಿ ಕಾಣಿಸಿದೆ.

'ಮರು ಎಣಿಕೆ ಅರ್ಜಿಗೆ ಸಂಬಂಧಿಸಿದಂತೆ ಚುನಾವಣಾ ಅಧಿಕಾರಿ ಹೊರಡಿಸಿದ ಆದೇಶದ ಪ್ರತಿಯನ್ನು ಪುನಃ ಟೈಪ್ ಮಾಡಿ, 2024ರ ಮೇ 15ರಂದು ವೇಣುಗೋಪಾಲ್ (ಮಂಜುನಾಥ್ ಗೌಡ ಅವರ ಪರ ಚುನಾವಣಾ ಏಜೆಂಟ್) ಅವರಿಗೆ ಹಸ್ತಾಂತರಿಸಲಾಗಿದೆ ಎಂದು ಚುನಾವಣಾಧಿಕಾರಿ ಮತ್ತು ಇತರ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಆದರೆ, ಆ ಮೂಲ ಆದೇಶವು ಚುನಾವಣಾಧಿಕಾರಿಯ ಬಳಿ ಲಭ್ಯವಿಲ್ಲ. ಕೋರ್ಟ್‌ಗೆ ಹಾಜರುಪಡಿಸಿದ ಸ್ಟ್ರಾಂಗ್ ರೂಮಿನ ದಾಖಲೆಗಳೊಂದಿಗೂ ಅದು ಕಂಡುಬಂದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿವೇಕ್ ರೆಡ್ಡಿ, ಜಯಕುಮಾರ್ ಎಸ್.ಪಾಟೀಲ್ ಹಾಗೂ ಹೈಕೋರ್ಟ್ ವಕೀಲರಾದ ಎ.ವಿ.ಶ್ರೀಹರಿ ವಾದ ಮಂಡಿಸಿದ್ದರು.

ಮನವಿ ಏನಿತ್ತು?

'ಚುನಾವಣೆಗೆ ಸಂಬಂಧಿಸಿದ ಎಲ್ಲಾ ಹೆಚ್ಚಿನ ಸಾಮಗ್ರಿಗಳು, ಎಲೆಕ್ಟ್ರಾನಿಕ್ ಡೇಟಾ ಮತ್ತು ಎಲೆಕ್ಟ್ರಾನಿಕ್ ಮತದಾನ ಯಂತ್ರಗಳು (ಇವಿಎಂ) ಮತ್ತು ಅಂಚೆ ಮತಪತ್ರಗಳನ್ನು ನ್ಯಾಯಾಲಯದ ಕಸ್ಟಡಿಗೆ ಒಪ್ಪಿಸಲು ನಿರ್ದೇಶಿಸಬೇಕು. ಅರ್ಜಿದಾರನಾದ ನನ್ನನ್ನು (ಕೆ.ಎಸ್.ಮಂಜುನಾಥ್ ಗೌಡ) ಕರ್ನಾಟಕ ಶಾಸಕಾಂಗ ಸಭೆಯ 149ರ ಸಂಖ್ಯೆಯ ಮಾಲೂರು ವಿಧಾನಸಭಾ ಕ್ಷೇತ್ರಕ್ಕೆ ಆಯ್ಕೆಯಾದ ಅಭ್ಯರ್ಥಿ ಎಂದು ಘೋಷಿಸಲು ಆದೇಶಿಬೇಕು' ಎಂದು ಮನವಿ ಮಾಡಿದ್ದರು.

ಅರ್ಜಿಯಲ್ಲಿ ಏನಿತ್ತು?

'ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಲ್ಲಾ 15 ಸ್ಪರ್ಧಿಗಳ ಏಜೆಂಟರುಗಳಿಗೆ ಮತ ಎಣಿಕೆ ಕೇಂದ್ರದಲ್ಲಿ ಸಮರ್ಪಕ ವ್ಯವಸ್ಥೆ ಮಾಡಿರಲಿಲ್ಲ. ಮತಗಳ ಎಣಿಕೆ ಒಂದೇ ಕೊಠಡಿಯಲ್ಲಿ ನಡೆಯಬೇಕಿತ್ತು. ಆದರೆ, ಎರಡು ಪ್ರತ್ಯೇಕ ಕೊಠಡಿಗಳಲ್ಲಿ ನಡೆದಿದೆ. ಈ ಮೂಲಕ ಜನಪ್ರತಿನಿಧಿಗಳ ಕಾಯ್ದೆ-1951 ಮತ್ತು ಚುನಾವಣಾ ಆಯೋಗ ಪ್ರಕಟಿಸಿದ್ದ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಆದ್ದರಿಂದ, ನಂಜೇಗೌಡ ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಣೆ ಮಾಡಿದ ಚುನಾವಣಾ ಆಯೋಗದ ಕ್ರಮವನ್ನು ರದ್ದುಪಡಿಸಬೇಕು. ಮತಗಳ ಮರು ಎಣಿಕೆಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಕರ್ನಾಟಕ ಲೋಕಸೇವಾ ಆಯೋಗ
ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ: KPSCKA/18/2025-RCT-2/239643/2225 ದಿನಾಂಕ: 16–09–2025

ಪತ್ರಿಕಾ ಪ್ರಕಟಣೆ

ಆಯೋಗದ ಅಧಿಸೂಚನೆ ಸಂ: ಪಿಎಸ್‌ಸಿ 504 ಆರ್‌ಟಿಬಿ–2/2023–24/3495, ದಿ: 15–03–2024 ರಲ್ಲಿ ಅಧಿಸೂಚಿಸಲಾದ ಪದವಿ ಪೂರ್ವ ಮಟ್ಟದ ವಿವಿಧ ಇಲಾಖೆಗಳಲ್ಲಿನ ಹೈದ್ರಾಬಾದ್ ಕರ್ನಾಟಕ ವೃಂದದ ವಿವಿಧ ಗ್ರೂಪ್ 'ಸಿ' ಹುದ್ದೆಗಳಿಗೆ ನಡೆಸಲಾಗುತ್ತಿರುವ ದಿನಾಂಕ: 18–09–2025ರ ಕನ್ನಡ ಭಾಷಾ ಪರೀಕ್ಷೆ ಮತ್ತು 19–09–2025ರ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರವೇಶ ಪತ್ರಗಳನ್ನು ದಿ: 16–09–2025 ರಿಂದ ಆಯೋಗದ ಅಂತರ್ಜಾಲ https://kpsc.kar.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಸದರಿ ಪರೀಕ್ಷೆಯ ವೇಳಾಪಟ್ಟಿಯು ಆಯೋಗದ ಅಂತರ್ಜಾಲದಲ್ಲಿ ಲಭ್ಯವಿರುತ್ತದೆ ಎಂದು ಈ ಮೂಲಕ ತಿಳಿಸಿದೆ.

ಸಹಿ/–
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.

ವಾ.ಸಾ.ಸಂ.ಇ/ವಾಪ್ರ/2836/ಅಕಾರ್/2025-26

ಕರ್ನಾಟಕ ಸರ್ಕಾರ – ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ ಕಛೇರಿ, ಹಾಸನ.
email:-sadhsshsn@gmail.com Phone: 08172-269995
ಸಂ.ಹಿಸತೋನಿ:ರಾವ:ಹಾ:ತಾಸ:14:2025–26 ದಿ: 15.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಜಿಲ್ಲಾಡಳಿತ ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯದ ಜಾತ್ರಾ ಮಹೋತ್ಸವ 2025 ರ ಅಂಗವಾಗಿ ದೇವಾಲಯದ ಆವರಣದಲ್ಲಿ ವಿವಿಧ ಬಗೆಯ ಉತ್ತಮ ಗುಣಮಟ್ಟದ ಹೂವಿನ ಕಲಾಕೃತಿಗಳು ಹಾಗೂ ಹೂವಿನ ಕುಂಡಗಳ ಜೋಡಣೆ ಕಾಮಗಾರಿ ನಿರ್ವಹಿಸಲು ಇ–ಟೆಂಡರ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 15.09.2025 ರಿಂದ ಟೆಂಡರ್ ಪ್ರಾರಂಭಿಸಲಾಗಲಿದ್ದು, ದಿನಾಂಕ: 23.09.2025 ರಂದು ಅಪರಾಹ್ನ 02.00 ಗಂಟೆಗೆ ಟೆಂಡರ್ ಅನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ತಾಂತ್ರಿಕ ಬಿಡನ್ನು ದಿನಾಂಕ: 24.09.2025 ರಂದು ಅಪರಾಹ್ನ 03.00 ಗಂಟೆಗೆ ತೆರೆಯಲಾಗುವುದು, ತಾಂತ್ರಿಕ ಬಿಡಿನಲ್ಲಿ ಅನರ್ಹರಾದ ಟೆಂಡರ್‌ದಾರರ ಆರ್ಥಿಕ ಬಿಡನ್ನು ತೆರೆಯಲಾಗುವುದಿಲ್ಲ. ಹರಾಜು ನಿಬಂಧನೆ, ನಿಯಮಾವಳಿ ಹಾಗೂ ಹೆಚ್ಚಿನ ವಿವರಗಳಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ರಾಜ್ಯವಲಯ, ಹಾಸನ ಕಛೇರಿ ಅಥವಾ ದೂರವಾಣಿ ಸಂಖ್ಯೆ: 9742084849 ನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರಾಜ್ಯವಲಯ, ಹಾಸನ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಹಾ/25-26/573

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.81/2950 ದಿನಾಂಕ: 15–09–2025

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿಯಲ್ಲಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999 ನಿಯಮ 2000 ರನ್ವಯ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆಲಸದ ಹೆಸರು: **ವಿತಾವಿ "ಜ್ಞಾನ ಸಂಗಮ" ಆವರಣ, ಬೆಳಗಾವಿಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಊಟೋಪಚಾರವನ್ನು ಗುತ್ತಿಗೆ ಆಧಾರದ ಮೇಲೆ ಪೂರೈಸುವ ಟೆಂಡರ್ ಸರಾಸರಿ ವಾರ್ಷಿಕ ಮೊತ್ತ ರೂ. 4,75,71,541/–** (ತೆರಿಗೆ ರಹಿತ) ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯ ಮೂಲಕ ಕೆಟರರ್ಸ್‌ಗಳಿಂದ ಆಮಂತ್ರಿಸಲಾಗಿದೆ. ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **15–09–2025** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/1029/ಅಡ್ವರ್ಟೋರ್/2025–26

ಕರ್ನಾಟಕ ರಾಜ್ಯ ಉಗ್ರಾಣ ನಿಗಮ
"ಉಗ್ರಾಣ ಭವನ" ನಂ.43 ಪ್ರೀಂ ರೋಸ್ ರಸ್ತೆ, ಬೆಂಗಳೂರು – 560025
ದೂ: 080–29533679 ಫ್ಯಾಕ್ಸ್ : 080–29533676
ಇ-ಮೇಲ್: aokswc@gmail.com, ವೆಬ್‌ಸೈಟ್: www.karnatakawarehousing.in

ಸಂಖ್ಯೆ:ಕರಾಉನಿ/ಆಡಳಿತ/ಟೆಂಡರ್/2025–26/1219 ದಿನಾಂಕ: 16–09–2025

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ನಿಗಮದ **ಹುಬ್ಬಳ್ಳಿ ವಿಭಾಗದ ಪ್ರಾದೇಶಿಕ ವ್ಯವಸ್ಥಾಪಕರ ಕಛೇರಿ ಹಾಗೂ ಉಗ್ರಾಣ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ನೇಮಿಸಿಕೊಳ್ಳಲು** ಅರ್ಹ ಏಜೆನ್ಸಿಗಳಿಂದ ಅಲ್ಪಾವಧಿಯ ಮರು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಘಟನೆಗಳ ಕ್ಯಾಲೆಂಡರ್: (1) ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: **17–09–2025 ಬೆಳಿಗ್ಗೆ 11:00 ಕ್ಕೆ.** (2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **19–09–2025ರ ಬೆಳಿಗ್ಗೆ 11:30ಕ್ಕೆ.** (3) ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಅಂತಿಮ ದಿನಾಂಕ: **24–09–2025ರ ಮಧ್ಯಾಹ್ನ 12:15ಕ್ಕೆ.** (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **25–09–2025ರ ಮಧ್ಯಾಹ್ನ 12:30ಕ್ಕೆ.** (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **26–09–2025ರ ಮಧ್ಯಾಹ್ನ 12:45ಕ್ಕೆ.**

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: **www.kppp.karnataka.gov.in** ಅಥವಾ ಸಹಾಯವಾಣಿ: +91–8046010000 / +91–8068948777 ಸಂಪರ್ಕಿಸಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

DIPR/CP/YC/2834/2025-26

ನೀಟ್: 2ನೇ ಸುತ್ತಿನ ವೈದ್ಯಕೀಯ ಕೌನ್ಸೆಲಿಂಗ್

ಆಯ್ಕೆ ಬದಲಾವಣೆಗೆ ಎರಡು ದಿನ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಪದವಿ ಕೋರ್ಸ್‌ಗಳ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗುತ್ತಿದ್ದು, ಅಭ್ಯರ್ಥಿಗಳಿಗೆ ಆಯ್ಕೆಗಳನ್ನು ಅದಲು-ಬದಲು ಮಾಡಲು, ತೆಗೆದು ಹಾಕಲು ಸೆ.18ರವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಸೀಟ್ ಮ್ಯಾಟ್ರಿಕ್ಸ್‌ಗೆ ಹೊಸದಾಗಿ 400 ವೈದ್ಯಕೀಯ ಸೀಟುಗಳು ಸೇರ್ಪಡೆಯಾಗಿವೆ. ಅಲ್ಲದೆ ಮೈಸೂರಿನ ಫಾರೂಕಿ ವೈದ್ಯಕೀಯ ಕಾಲೇಜು ಹೊಸದಾಗಿ ಆರಂಭವಾಗುತ್ತಿರುವ ಕಾರಣ ಆಯ್ಕೆಗಳ ಬದಲಿಗೆ ಮತ್ತೊಮ್ಮೆ ಅವಕಾಶ ನೀಡಲಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಫಾರೂಕಿ ವೈದ್ಯಕೀಯ ಕಾಲೇಜು ಹೊಸದಾಗಿರುವ ಕಾರಣ ಆ ಕಾಲೇಜಿಗೆ ಹೊಸದಾಗಿ ಆಯ್ಕೆಗಳನ್ನು ದಾಖಲಿಸಲು ಅವಕಾಶ ಇರುತ್ತದೆ. ಉಳಿದಂತೆ ಬೇರೆ ಕಾಲೇಜುಗಳಿಗೆ ಆಯ್ಕೆಗಳನ್ನು ಈ ಹಂತದಲ್ಲಿ ದಾಖಲಿಸಲು ಅವಕಾಶ ಇರುವುದಿಲ್ಲ ಎಂದು ಅವರು ವಿವರಿಸಿದ್ದಾರೆ.

ಅಭ್ಯರ್ಥಿಗಳು ತಮ್ಮ ಪೋಷಕರ ಜತೆ ಚರ್ಚೆ ನಡೆಸಿ, ತಮಗೆ ಸೂಕ್ತವಾದ ಹಾಗೂ ಶುಲ್ಕ ಕಟ್ಟಲು ಸಾಧ್ಯವಾಗುವಂತಹ ಕಾಲೇಜುಗಳನ್ನು, ಆಯ್ಕೆಗಳ ದಾಖಲು ಮಾಡುವ ಸಂದರ್ಭದಲ್ಲಿ ಪರಿಗಣಿಸಲು ಅವರು ಸಲಹೆ ನೀಡಿದ್ದಾರೆ.

ಮಂಗಳೂರಿನ ಶ್ರೀನಿವಾಸ ವೈದ್ಯಕೀಯ ಕಾಲೇಜಿನಲ್ಲಿ ₹12 ಲಕ್ಷದ ಸೀಟು ₹22 ಲಕ್ಷ ಆಗಿದೆ ಎಂದು ಕೆಲವರು ಈ ಹಿಂದೆ ದೂರಿದ್ದರು. ಅಂತಹವರು ಈ ಕಾಲೇಜು ಸೇರಿದಂತೆ ದುಬಾರಿ ಶುಲ್ಕ ಅನ್ನಿಸುವ ಕಾಲೇಜುಗಳನ್ನು ಕೈಬಿಟ್ಟು, ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಆಯ್ಕೆಗಳನ್ನು ದಾಖಲಿಸಬೇಕು ಎಂದು ಹೇಳಿದ್ದಾರೆ. ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ನಂತರ ಕಡ್ಡಾಯವಾಗಿ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು. ಹೀಗಾಗಿ ಪ್ರವೇಶ ಪಡೆಯಲು ಆಸಕ್ತಿ ಇರುವ ಕಾಲೇಜುಗಳನ್ನು ಮಾತ್ರ 'ಆಪ್ಷನ್ಸ್' ಪಟ್ಟಿಯಲ್ಲಿ ಇರುವ ಹಾಗೆ ನೋಡಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

ಹಿಂದಿನ ಸುತ್ತಿನಲ್ಲಿ ಎಂಜಿನಿಯರಿಂಗ್ ಇತ್ಯಾದಿ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿ ಪ್ರವೇಶ ಪಡೆದವರಿಗೂ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಅವಕಾಶ ನೀಡಲಾಗುವುದು. ಅಂತಹವರು ಠೇವಣಿ ಪಾವತಿಸಿ ಪುನಃ ಆಯ್ಕೆಗಳನ್ನು ಮರುವಿಂಗಡಣೆ ಮಾಡಿಕೊಳ್ಳಬಹುದು ಎಂದು ಅವರು ಹೇಳಿದರು.

351 ಮಂದಿಗೆ ಪ್ರವೇಶ ನಿರ್ಬಂಧ

ಎಂಜಿನಿಯರಿಂಗ್ ಅಂತಿಮ (ಮೂರನೇ) ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ, ಕಾಲೇಜಿಗೆ ವರದಿ ಮಾಡಿಕೊಳ್ಳದ 351 ಮಂದಿ, ಕಾಮೆಡ್-ಕೆ ಮತ್ತು ಆಡಳಿತ ಮಂಡಳಿ ಕೋಟಾದಲ್ಲಿ ಸೀಟು ಪಡೆದಿದ್ದರೂ ಅಂತಹವರ ಪ್ರವೇಶಕ್ಕೆ ಅನುಮೋದನೆ ನೀಡಬಾರದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಸಚಿವರಿಗೆ ಪತ್ರ ಬರೆದಿದ್ದಾರೆ.

ಮೂರನೇ ಸುತ್ತು ಅಂತಿಮವಾಗಿದ್ದರಿಂದ ಸೀಟು ಹಂಚಿಕೆ ನಂತರ ಕಡ್ಡಾಯವಾಗಿ ಪ್ರವೇಶ ಪಡೆಯಬೇಕಿತ್ತು. ಈ ಕುರಿತು ಹಲವು ಬಾರಿ ಹೇಳಿದ ನಂತರವೂ ಮೂರನೇ ಸುತ್ತಿನಲ್ಲಿ ಭಾಗವಹಿಸಿ, ಸೀಟು ಸಿಕ್ಕಿದ ನಂತರ ಕಾಲೇಜಿಗೆ ಹೋಗದೇ ಇರುವುದು ನಿಯಮಬಾಹಿರ. ಹೀಗಾಗಿ ಇಂತಹ ಅಭ್ಯರ್ಥಿಗಳು ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದರೂ ಅವರ ಪ್ರವೇಶಕ್ಕೆ ಅನುಮೋದನೆ ನೀಡಬಾರದು ಎಂದು ಅವರು ಕೋರಿದ್ದಾರೆ.

ಈ ಸಂಬಂಧ ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕರಿಗೂ ಪ್ರಸನ್ನ ಅವರು ಪತ್ರ ಬರೆದಿದ್ದಾರೆ.

ಉತ್ತರಾಖಂಡ ಮೇಘಸ್ಫೋಟ: 15 ಸಾವು

ಭಾರಿ ಮಳೆ, ಹಲವರು ನಾಪತ್ತೆ • ರಸ್ತೆ, ಸೇತುವೆ ಹಾಗೂ ಅಂಗಡಿಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಾಖಂಡದ ಹಲವೆಡೆ ಮಂಗಳವಾರ ಮುಂಜಾನೆ ಸಂಭವಿಸಿದ ಮೇಘಸ್ಫೋಟ ಮತ್ತು ಭಾರಿ ಮಳೆಯಿಂದಾಗಿ 15 ಮಂದಿ ಮೃತಪಟ್ಟಿದ್ದು, 16 ಮಂದಿ ನಾಪತ್ತೆಯಾಗಿದ್ದಾರೆ.

ಸೋಮವಾರ ರಾತ್ರಿಯಿಂದ ಸುರಿದ ನಿರಂತರ ಮಳೆಯಿಂದಾಗಿ ಗರ್ವಾಲ್ ಪ್ರದೇಶದಲ್ಲಿ ಭಾರಿ ಹಾನಿಯಾಗಿದೆ. ಹಲವಾರು ರಸ್ತೆ, ಸೇತುವೆ, ಹೋಟೆಲ್ ಮತ್ತು ಅಂಗಡಿಗಳು ತೀವ್ರವಾಗಿ ಹಾನಿಗೊಂಡಿವೆ.

ಡೆಹ್ರಾಡೂನ್ ಸಮೀಪದ ಪ್ರವಾಸಿತಾಣ ಸಹಸ್ರಧಾರದಲ್ಲಿ ಮೇಘಸ್ಫೋಟವಾಗಿದೆ. ಇದರಿಂದಾಗಿ ಸಮೀಪದ ಕರ್ಲಿಗಡ್ ಮತ್ತು ಮಜಿಯಾರ್ ಗ್ರಾಮಗಳಲ್ಲಿ ಭೂಕುಸಿತ ಸಂಭವಿಸಿದ್ದು, ಹಲವು ಮಂದಿ ಅವಶೇಷಗಳಡಿ ಸಿಲುಕಿದ್ದಾರೆ.

ಟ್ರ್ಯಾಕ್ಟರ್ ಟ್ರಾಲಿಯೊಂದು ನದಿಯಲ್ಲಿ ಮುಳುಗಿದ ಪರಿಣಾಮ ಅದರಲ್ಲಿದ್ದ ಐವರು ಕಾರ್ಮಿಕರು ಮೃತಪಟ್ಟಿದ್ದಾರೆ. ಎಂಟು ಕಾರ್ಮಿಕರು ನಾಪತ್ತೆಯಾಗಿದ್ದಾರೆ. ಚಕ್ರತಾಳಿ ರಸ್ತೆಯಲ್ಲಿ ಸ್ಕೂಟರ್ ಮೇಲೆ ಬಂಡೆ ಉರುಳಿಬಿದ್ದಿದ್ದರಿಂದ ಯುವಕರೊಬ್ಬರು ಮೃತಪಟ್ಟಿದ್ದಾರೆ. ರಾಜ್‌ಪುರ ರಸ್ತೆಯಲ್ಲಿ ಭೂಕುಸಿತ ಸಂಭವಿಸಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಟೋನ್ಸ್ ನದಿ ಪ್ರವಾಹದಿಂದಾಗಿ ಹಲವಾರು ಕಾರ್ಮಿಕರು ಕೊಚ್ಚಿ ಹೋಗಿದ್ದಾರೆ. ಮೂರು ಮೃತದೇಹಗಳು ಪತ್ತೆಯಾಗಿವೆ. ಮನೆಯ ಕೊಠಡಿಯ ಗೋಡೆ ಕುಸಿದು ವಿದ್ಯಾರ್ಥಿಯೊಬ್ಬರು ಮೃತಪಟ್ಟಿದ್ದಾರೆ.

ಡೆಹ್ರಾಡೂನ್-ಮುಸೂರಿ ರಸ್ತೆಯಲ್ಲಿ ಹಲವೆಡೆ ಭೂಕುಸಿತವಾಗಿದ್ದು, ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ಸೇತುವೆ ಕೊಚ್ಚಿಹೋದ ಕಾರಣ ಡೆಹ್ರಾಡೂನ್-ಪಒಂಟಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತವಾಗಿದೆ.

‘ಯೆಲ್ಲೊ ಅಲರ್ಟ್’: ಚಮೋಲಿ, ಚಂಪಾವತ್, ಉದಮ್‌ಸಿಂಗ್ ನಗರ, ಬಾಗೇಶ್ವರ್, ನೈನಿತಾಲ್ ಮತ್ತು ಡೆಹ್ರಾಡೂನ್ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಸೆ.21ರವರೆಗೆ ರಾಜ್ಯದಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹರಿದ್ವಾರದಲ್ಲೂ ಭಾರಿ ಮಳೆಯಾಗಿದೆ. ಬಂಡೆಗಳು ಉರುಳಿ ಬಿದ್ದಿರುವ ಕಾರಣ ಬದರೀನಾಥ ಹೆದ್ದಾರಿಯಲ್ಲಿಯೂ ಸಂಚಾರ ಸ್ಥಗಿತವಾಗಿದೆ.

ಮಹಾರಾಷ್ಟ್ರ: 3 ಸಾವು

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿಯೂ ಭಾರಿ ಮಳೆಯಾಗಿದ್ದು, ಪ್ರತ್ಯೇಕ ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದಾರೆ.

120 ಮಂದಿಯನ್ನು ಸ್ಥಳಾಂತರಿಸಲಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಇಲಾಖೆ ತಿಳಿಸಿದೆ.

ಮರಾಠವಾಡದ 5 ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿದಿದ್ದು, ಮಂಗಳವಾರ ಮುಂಜಾನೆವರೆಗೆ ಭೀಡ್ ಜಿಲ್ಲೆಯಲ್ಲಿ 143.7 ಮಿ.ಮೀ, ನಾಂದೇಡ್‌ನಲ್ಲಿ 131.6 ಮತ್ತು ಜಲ್ನಾದಲ್ಲಿ 121.4 ಮಿ.ಮೀ ಮಳೆಯಾಗಿದೆ.

ಭೀಡ್, ಅಹಲ್ಯಾನಗರದಲ್ಲಿ ತೀವ್ರ ಹಾನಿ ಸಂಭವಿಸಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಜನಜೀವನ ಅಸ್ತವ್ಯಸ್ತಗೊಂಡಿದೆ.

ಡೆಹ್ರಾಡೂನ್‌ನಲ್ಲಿ ಭಾರಿ ಮಳೆಯಿಂದಾಗಿ ರಸ್ತೆ ಕೊಚ್ಚಿ ಹೋಗಿರುವುದು — ಪಿಟಿಐ ಚಿತ್ರ

ತತ್ತರಿಸಿದ ಹಿಮಾಚಲ: 3 ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿಯೂ ಮಳೆಯಿಂದಾಗಿ ಭೂಕುಸಿತ ಮತ್ತು ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ.

ಮನೆಯೊಂದು ಕುಸಿದುಬಿದ್ದ ಪರಿಣಾಮ ಮೂವರು ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಮಂಡಿ ಜಿಲ್ಲೆಯಲ್ಲಿ ಹಲವು ಬಸ್ ಮತ್ತು ಇತರ ವಾಹನಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ಒಬ್ಬರು ನಾಪತ್ತೆಯಾಗಿದ್ದಾರೆ.

ಸಾರ್ವಜನಿಕ ಮೂಲಸೌಕರ್ಯ ಮತ್ತು ಖಾಸಗಿ ಆಸ್ತಿಗಳಿಗೆ ಭಾರಿ ಪ್ರಮಾಣದ ಹಾನಿಯಾಗಿದೆ. ಬಸ್ ನಿಲ್ದಾಣವೊಂದು ಮುಳುಗಿದ್ದು, 20 ಬಸ್, ಗ್ಯಾರೇಜ್ ಮತ್ತು ಅಂಗಡಿಗಳಿಗೆ ಹಾನಿಯಾಗಿದೆ.

ರಾಷ್ಟ್ರೀಯ ಹೆದ್ದಾರಿಗಳು ಸೇರಿದಂತೆ 650 ರಸ್ತೆಗಳಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. 1250 ವಿದ್ಯುತ್ ಘಟಕಗಳು, 160 ನೀರು ಸರಬರಾಜು ಘಟಕಗಳಿಗೆ ಹಾನಿಯಾಗಿದೆ.

ಭಕ್ತರ ಎಣಿಕೆ: ಇಸ್ರೊ ನೆರವು ಪಡೆಯಲು ಟಿಟಿಡಿ ನಿರ್ಧಾರ

ತಿರುಪತಿ(ಆಂಧ್ರಪ್ರದೇಶ)(ಪಿಟಿಐ): ಮುಂಬರುವ ‘ಶ್ರೀವಾರಿ ಸಾಲಕಟ್ಲ ಬ್ರಹ್ಮೋತ್ಸವ’ ಸಂದರ್ಭದಲ್ಲಿ ಭೇಟಿ ನೀಡುವ ಭಕ್ತರ ಸಂಖ್ಯೆಯನ್ನು ಉಪಗ್ರಹ ಬಳಸಿ ಎಣಿಕೆ ಮಾಡುವುದಕ್ಕಾಗಿ ಇಸ್ರೊ ನೆರವು ಪಡೆಯಲಾಗುತ್ತದೆ ಎಂದು ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಅಧ್ಯಕ್ಷ ಬಿ.ಆರ್.ನಾಯ್ಡು ಮಂಗಳವಾರ ತಿಳಿಸಿದ್ದಾರೆ.

ಭಕ್ತರ ಸಂಖ್ಯೆ ಎಣಿಕೆಗೆ ಅನುಕೂಲವಾಗಲು ಹೆಚ್ಚುವರಿ ಸಿ.ಸಿ. ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು, ಜನಜಂಗುಳಿಯಲ್ಲಿ ಚಿಕ್ಕಮಕ್ಕಳು ಕಳೆದುಹೋಗುವುದನ್ನು ತಪ್ಪಿಸಲು ‘ಜಿಯೊ-ಟ್ಯಾಗ್’ಗಳನ್ನು ಬಳಸಲಾಗುವುದು ಹಾಗೂ ನಿರಂತರ ವಿದ್ಯುತ್ ಪೂರೈಕೆಗೂ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಇಲ್ಲಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ನಾಯ್ಡು ತಿಳಿಸಿದ್ದಾರೆ.

ಈ ವರ್ಷದ ಬ್ರಹ್ಮೋತ್ಸವ ವಿಧಿಗಳು ಸೆ.24ರಿಂದ ಅಕ್ಟೋಬರ್ 2ರ ವರೆಗೆ ನಡೆಯಲಿವೆ. ಈ ವೇಳೆ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ವೆಂಕಟೇಶ್ವರ ದೇವಸ್ಥಾನಕ್ಕೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿ, ‘ಪೆದ್ದ ಶೇಷ ವಾಹನ’ ಉತ್ಸವದಲ್ಲಿ ಪಾಲ್ಗೊಳ್ಳುವರು.

25ರಂದು 5ನೇ ಯಾತ್ರಿಗಳ ಸೌಲಭ್ಯಗಳ ಸಂಕೀರ್ಣ ‘ವೆಂಕಟಾದ್ರಿ ನಿಲಯಂ’ ಅನ್ನು ಮುಖ್ಯಮಂತ್ರಿ ನಾಯ್ಡು ಅವರು ಉದ್ಘಾಟಿಸುವರು. 2026ರ ಕ್ಯಾಲೆಂಡರ್ ಹಾಗೂ ಡೈರಿಗಳನ್ನು ಕೂಡ ಬಿಡುಗಡೆ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಮತಾಂತರ ವಿರೋಧಿ ಕಾನೂನು ರಾಜ್ಯಗಳಿಗೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಮತಾಂತರ ವಿರೋಧಿ ಕಾನೂನುಗಳಿಗೆ ತಡೆ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತು ನಿಲುವು ತಿಳಿಸುವಂತೆ ಸುಪ್ರೀಂ ಕೋರ್ಟ್ ಹಲವು ರಾಜ್ಯಗಳಿಗೆ ಮಂಗಳವಾರ ನೋಟಿಸ್ ಜಾರಿಗೊಳಿಸಿದೆ.

ರಾಜ್ಯಗಳಿಂದ ಪ್ರತಿಕ್ರಿಯೆ ಬಂದ ಬಳಿಕ ಈ ಅರ್ಜಿಯಲ್ಲಿನ ಕೋರಿಕೆಯನ್ನು ಪರಿಗಣಿಸುವುದಾಗಿ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು ತಿಳಿಸಿತು. ರಾಜ್ಯಗಳಿಗೆ ಪ್ರತಿಕ್ರಿಯೆಗಳನ್ನು ಸಲ್ಲಿಸಲು ನಾಲ್ಕು ವಾರಗಳ ಕಾಲಾವಕಾಶ ನೀಡಿದ ಪೀಠವು, ನಂತರದ ಎರಡು ವಾರಗಳಲ್ಲಿ ಅರ್ಜಿದಾರರು ಪ್ರತ್ಯುತ್ತರ ಸಲ್ಲಿಸಬಹುದು ಎಂದು ತಿಳಿಸಿ ವಿಚಾರಣೆಯನ್ನು ಆರು ವಾರಗಳವರೆಗೆ ಮುಂದೂಡಿತು. ಉತ್ತರ ಪ್ರದೇಶ, ಮಧ್ಯಪ್ರದೇಶ, ಕರ್ನಾಟಕ, ಹಿಮಾಚಲ ಪ್ರದೇಶ, ಉತ್ತರಾಖಂಡ, ಗುಜರಾತ್, ಹರಿಯಾಣ ರಾಜ್ಯಗಳಲ್ಲಿ ಜಾರಿಗೆ ಬಂದಿರುವ ಮತಾಂತರ ವಿರೋಧಿ ಕಾನೂನುಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತು ಪೀಠ ವಿಚಾರಣೆ ನಡೆಸುತ್ತಿದೆ.

‘ಮೃತರ ಕುಟುಂಬದವರನ್ನು ಸಾಕ್ಷಿಗಳನ್ನಾಗಿ ಮಾಡಲಾಗಿತ್ತೇ?’

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: 2008ರ ಮಾಲೇಗಾಂವ್ ಸ್ಫೋಟ ಪ್ರಕರಣದ ಆರೋಪಿಗಳನ್ನು ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆ ನಡೆಸಿದ ಬಾಂಬೆ ಹೈಕೋರ್ಟ್, ‘ಎನ್‌ಐಎ ಕೋರ್ಟ್, ಸಂತ್ರಸ್ತರ ಕುಟುಂಬದವರನ್ನು ಸಾಕ್ಷಿಗಳಾಗಿ ಪರಿಗಣಿಸಿ, ಅವರನ್ನು ಪರೀಕ್ಷೆಗೆ ಒಳಪಡಿಸಿದ್ದರ ಕುರಿತ ವಿವರಗಳನ್ನು ಸಲ್ಲಿಸುವಂತೆ’ ಮಂಗಳವಾರ ಸೂಚಿಸಿದೆ.

ಪ್ರಕರಣದ ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ, ಸ್ಫೋಟದಲ್ಲಿ ಮೃತಪಟ್ಟ 6 ಜನರ ಕುಟುಂಬಗಳ ಸದಸ್ಯರು ಸಲ್ಲಿಸಿದ್ದ ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯನ್ಯಾಯಮೂರ್ತಿ ಶ್ರೀ ಚಂದ್ರಶೇಖರ ಹಾಗೂ ನ್ಯಾಯಮೂರ್ತಿ ಗೌತಮ ಅಂಖಡ ಅವರು ಇದ್ದ ನ್ಯಾಯಪೀಠ ನಡೆಸಿತು.

ಸಂತ್ರಸ್ತರ ಕುಟುಂಬದ ಸದಸ್ಯರು ಜಮಿಯಾತ್ ಉಲೇಮಾ ಮಹಾರಾಷ್ಟ್ರ (ಅರ್ಷದ್ ಮದನಿ) ಕಾನೂನು ನೆರವು ಸಮಿತಿ ಮೂಲಕ ಮೇಲ್ಮನವಿ ಸಲ್ಲಿಸಿದ್ದಾರೆ. ಪೀಠ, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

‘ಮೊದಲನೇ ಮೇಲ್ಮನವಿದಾರನ (ನಿಸಾರ್ ಅಹ್ಮದ್) ಪುತ್ರ ಬಾಂಬ್ ಸ್ಫೋಟದಲ್ಲಿ ಮೃತಪಟ್ಟಿದ್ದಾರೆ. ಆದರೆ, ಪ್ರಕರಣದ ವಿಚಾರಣೆ ವೇಳೆ ನಿಸಾರ್ ಅಹ್ಮದ್ ಅವರನ್ನು ಸಾಕ್ಷಿಯನ್ನಾಗಿ ಮಾಡಿರಲಿಲ್ಲ. ಪ್ರಕರಣ ಕುರಿತ ವಿವರಗಳನ್ನು ಅವರು ಬುಧವಾರ ಸಲ್ಲಿಸುವರು’ ಎಂದು ನಿಸಾರ್ ಅಹ್ಮದ್ ಪರ ವಕೀಲರು ಪೀಠಕ್ಕೆ ತಿಳಿಸಿದರು.

‘ಕಾಣಿಕೆಯಿಂದ ಕಲ್ಯಾಣ ಮಂಟಪ ನಿರ್ಮಾಣ ಸಲ್ಲ’

ನವದೆಹಲಿ(ಪಿಟಿಐ): ದೇವಸ್ಥಾನಗಳಿಗೆ ಭಕ್ತರು ನೀಡುವ ಕಾಣಿಕೆಯು ಕಲ್ಯಾಣ ಮಂಟಪ ಗಳನ್ನು ನಿರ್ಮಿಸುವ ಉದ್ದೇಶಕ್ಕೆ ಅಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಈ ಕುರಿತ ಮೇಲ್ಮನವಿಯ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಹಾಗೂ ಸಂದೀಪ ಮೆಹ್ತಾ ಅವರಿದ್ದ ನ್ಯಾಯಪೀಠ, ‘ಕಲ್ಯಾಣ ಮಂಟಪಗಳನ್ನು ನಿರ್ಮಿಸಬೇಕು ಎಂಬ ಉದ್ದೇಶದಿಂದ ಭಕ್ತರು ಕಾಣಿಕೆ ನೀಡುವುದಿಲ್ಲ. ಭಕ್ತರು ನೀಡುವ ಹಣವನ್ನು ದೇಗುಲಗಳ ಸುಧಾರಣೆಗೆ ಬಳಕೆ ಮಾಡಬೇಕು’ ಎಂದು ಹೇಳಿದೆ.

ತಮಿಳುನಾಡಿನ ಐದು ದೇವಸ್ಥಾನಗಳ ನಿಧಿಯನ್ನು ಬಳಸಿ, ಕಲ್ಯಾಣ ಮಂಟಪಗಳನ್ನು ನಿರ್ಮಿಸಲು ಅನುಮತಿ ನೀಡಿ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ವಜಾಗೊಳಿಸಿ ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠವು ಆಗಸ್ಟ್ 19ರಂದು ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಪೀಠವು, ಮದುರೈ ಪೀಠದ ಆದೇಶಕ್ಕೆ ತಡೆ ನೀಡಲು ನಿರಾಕರಿಸಿ ತೀರ್ಪು ನೀಡುವ ವೇಳೆ ಈ ಮಾತು ಹೇಳಿದೆ.

ದೇವಸ್ಥಾನಗಳಲ್ಲಿ ಸಂಗ್ರಹವಾಗುವ ಕಾಣಿಕೆ ಬಳಸಿ ಕಲ್ಯಾಣ ಮಂಟಪಗಳನ್ನು ನಿರ್ಮಿಸಿ, ಅವುಗಳನ್ನು ಬಾಡಿಗೆಗೆ ಕೊಡಬೇಕು ಎಂಬ ಸರ್ಕಾರದ ನಿರ್ಧಾರವು ‘ಧಾರ್ಮಿಕ ಉದ್ದೇಶ’ಗಳ ವ್ಯಾಪ್ತಿಗೆ ಬರುವುದಿಲ್ಲ. ಈ ಹಣವನ್ನು ಸಾರ್ವಜನಿಕ ಅಥವಾ ಸರ್ಕಾರದ ನಿಧಿ ಎಂಬುದಾಗಿ ಪರಿಗಣಿಸ ಬಾರದು’ ಎಂದೂ ಮದುರೈ ಪೀಠ ಹೇಳಿತ್ತು.

ವಿಚಾರಣೆ ವೇಳೆ, ‘ದೇವಸ್ಥಾನ ಆವರಣದಲ್ಲಿ ನಿರ್ಮಿಸಿರುವ ಕಲ್ಯಾಣ ಮಂಟಪದಲ್ಲಿ ಒಂದು ಮದುವೆ ಸಮಾರಂಭವಿತ್ತು ಎಂದು ಭಾವಿಸೋಣ. ಅಲ್ಲಿ, ಎಲ್ಲ ರೀತಿಯ ಅಶ್ಲೀಲ ಹಾಡುಗಳನ್ನು ಹಾಡಲಾಗುತ್ತದೆ. ಈ ರೀತಿ ಮಾಡುವುದರಿಂದ ದೇವಸ್ಥಾನದ ಜಾಗದ ಬಳಕೆಯ ಉದ್ದೇಶ ಈಡೇರಿದಂತಾಗಲಿದೆಯೇ’ ಎಂದು ಪ್ರಶ್ನಿಸಿದೆ.

‘ಕಲ್ಯಾಣ ಮಂಟಪಗಳನ್ನು ನಿರ್ಮಿಸಬೇಕು ಎನ್ನುವ ಸರ್ಕಾರದ ನಿರ್ಧಾರ ಸರಿಯೋ?, ತಪ್ಪಿದೆಯೋ ಎಂಬುದೇ ನಮ್ಮ ಮುಂದಿರುವ ವಿಚಾರ. ಹೀಗಾಗಿ, ಈ ಹಂತದಲ್ಲಿ ನಾವು ಯಾವುದೇ ತಡೆಯಾಜ್ಞೆ ನೀಡುವುದಿಲ್ಲ’ ಎಂದ ಪೀಠ, ವಿಚಾರಣೆಯನ್ನು ನವೆಂಬರ್ 19ಕ್ಕೆ ಮುಂದೂಡಿತು.

‘ಪಿಒಎಸ್‌ಎಚ್’ ಕಾಯ್ದೆ ವ್ಯಾಪ್ತಿಗೆ ರಾಜಕೀಯ ಪಕ್ಷಗಳು: ಅರ್ಜಿ ವಜಾ

ನೋಂದಾಯಿತ ರಾಜಕೀಯ ಪಕ್ಷಗಳನ್ನು ‘ಉದ್ಯೋಗ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ(ತಡೆಗಟ್ಟುವುದು, ನಿಷೇಧ ಹಾಗೂ ಪರಿಹಾರ) ಕಾಯ್ದೆ–2013’ರ (ಪಿಒಎಸ್‌ಎಚ್ ಕಾಯ್ದೆ) ವ್ಯಾಪ್ತಿಗೆ ತರಬೇಕು ಎಂದು ಕೋರಿ ಸಲ್ಲಿಸಲಾದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

‘ರಾಜಕೀಯ ಪಕ್ಷಗಳನ್ನು ಪಿಒಎಸ್‌ಎಚ್ ಕಾಯ್ದೆ ವ್ಯಾಪ್ತಿಗೆ ತರುವುದರಿಂದ ಹೊಸ ಸಮಸ್ಯೆಗಳು ಉದ್ಭವಿಸುತ್ತವೆ. ದುರ್ಬಳಕೆ ಹಾಗೂ ಬ್ಲ್ಯಾಕ್‌ಮೇಲ್ ಮಾಡುವುದಕ್ಕೆ ಈ ಕಾಯ್ದೆ ಒಂದು ಸಾಧನವಾಗಲಿದೆ’ ಎಂದು ತ್ರಿ ಸದಸ್ಯರು ಇದ್ದ ನ್ಯಾಯಪೀಠ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಕೆ.ವಿನೋದಚಂದ್ರನ್ ಹಾಗೂ ಎ.ಎಸ್.ಚಂದೂರ್ಕರ್ ಇದ್ದಾರೆ.

ರಾಜಕೀಯ ಪಕ್ಷಗಳಲ್ಲಿ ಉದ್ಯೋಗದಾತ ಮತ್ತು ನೌಕರ ಎಂಬ ಸಂಬಂಧವೇ ಇರುವುದಿಲ್ಲ. ಹೀಗಾಗಿ, ಆಂತರಿಕ ದೂರು ಸಮಿತಿಗಳನ್ನು (ಐಸಿಸಿ) ರಚಿಸಬೇಕು ಎಂಬುದು ರಾಜಕೀಯ ಪಕ್ಷಗಳಿಗೆ ಕಡ್ಡಾಯವಾಗುದಿಲ್ಲ ಎಂದು ಕೇರಳ ಹೈಕೋರ್ಟ್ 2022ರಲ್ಲಿ ತೀರ್ಪು ನೀಡಿತ್ತು. ಈ ತೀರ್ಪು ಪ್ರಶ್ನಿಸಿ ಯೋಗಮಾಯಾ ಎಂ.ಜಿ. ಅವರು ಹಿರಿಯ ವಕೀಲೆ ಶೋಭಾ ಗುಪ್ತಾ ಮೂಲಕ ಮೇಲ್ಮನವಿ ಸಲ್ಲಿಸಿದ್ದರು.

‘ಎಲ್ಲ ರಾಜಕೀಯ ಪಕ್ಷಗಳು ಮಹಿಳಾ ಸದಸ್ಯರನ್ನು ಹೊಂದಿವೆ. ಸಿಪಿಎಂ ಮಾತ್ರ ಆಂತರಿಕ ದೂರು ಸಮಿತಿ ಹೊಂದಿದೆ’ ಎಂದು ಯೋಗಮಾಯಾ ಅವರು ಅರ್ಜಿಯಲ್ಲಿ ವಿವರಿಸಿದ್ದರು.

ವಿಚಾರಣೆ ವೇಳೆ, ‘ರಾಜಕೀಯಗಳು ಕೂಡ ಉದ್ಯೋಗ ಸ್ಥಳಗಳು ಎಂದು ನೀವು ಹೇಗೆ ಸಮೀಕರಿಸುತ್ತೀರಿ’ ಎಂದು ಪೀಠವು ಅರ್ಜಿದಾರರನ್ನು ಪ್ರಶ್ನಿಸಿದೆ.

‘ಒಬ್ಬ ವ್ಯಕ್ತಿ ಒಂದು ರಾಜಕೀಯ ಪಕ್ಷ ಸೇರಿದಾಗ, ಅದು ಉದ್ಯೋಗ ಎಂದು ಪರಿಗಣಿಸ ಲಾಗುವುದಿಲ್ಲ. ಸ್ವ ಇಚ್ಛೆಯಿಂದ ಜನರು ರಾಜಕೀಯ ಪಕ್ಷಗಳನ್ನು ಸೇರುತ್ತಾರೆ ಹಾಗೂ ಇಲ್ಲಿ ಯಾವುದೇ ಗೌರವ ಸಂಭಾವನೆಯೂ ಇರುವುದಿಲ್ಲ’ ಎಂದ ಪೀಠ, ‘ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳ ವಿರುದ್ಧದ ಕಾಯ್ದೆಯು ರಾಜಕೀಯ ಪಕ್ಷಗಳನ್ನು ಒಳಗೊಳ್ಳುವುದು ಹೇಗೆ ಸಾಧ್ಯ’ ಎಂದೂ ಪ್ರಶ್ನಿಸಿದೆ. ಇಂಥಹುದೇ ನಿವೇದನೆಯ ಪಿಐಎಲ್ ಅನ್ನು ಈ ಹಿಂದೆಯೂ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

COFFEE BOARD
Ministry of Commerce and Industry, (Government of India)
Central Coffee Research Institute Coffee Research Station
e-mail: drcri2022@gmail.com | Website:: www.coffeeboard.gov.in
No.: CB/CCRI/Centenary/Tender/2025-26/1051 Date: 12.09.2025

Tender for Selection of Event Management Agency (EMA) to provide end-to-end services for organizing “Centenary Celebration of CCRI- 2025” (through e-Tender)

Coffee Board is a statutory organization under the Ministry of Commerce & Industry located in Bengaluru, Karnataka. Coffee Board invites Proposals for selection of Event Management Agency to provide End-to-End Services for organizing the Centenary Celebration of CCRI - 2025 tentatively scheduled to be held from 6th to 8th November 2025 at Central Coffee Research Institute (CCRI), Coffee Research Station-577117, Balehonnur, Chikkamagaluru District, Karnataka.

Tender Document containing details of event, scope of work along with the schedules and other terms and conditions may be downloaded from the https://eprocure.gov.in or www.coffeeboard.gov.in The last date for submission of Tenders in e-portal is 06.10.2025 at 03:00 p.m.

Coffee Board reserves the right to accept (or) reject any or all proposals without assigning any reason, whatsoever.

Sd/-
Director of Research Central Coffee Research Institute Coffee Research Station

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ, ಬೆಳಗಾವಿ
ಕು.ಸಂ: ಲೋ.ಇ/ಬೆವಿ/ತಾಂಸ/ಸ.ಇಂ/ಗುತ್ತಿಗೆ/2025–26/3487, ದಿನಾಂಕ: 16.09.2025.
ಉಲ್ಲೇಖ: ಲೋ.ಇ./ಬೆವಿ/ತಾಂಸ/ಸ. ಇಂ/ಗುತ್ತಿಗೆ/2024–25/3214, ದಿನಾಂಕ: 01.09.2025

CORRIGENDUM-01 (KPPP)

ಈ ಕಛೇರಿಯಿಂದ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಉಲ್ಲೇಖದಡಿ ಕರೆಯಲಾದ ಐಟಂವಾರು ಟೆಂಡರಿನ ಭಾಗ– 1 & 2 ಈ ಅಧಿಸೂಚನೆಯ ಕಾಮಗಾರಿಗಳ ಕ್ರಸಂ. 23, 26, ಮತ್ತು 57 ಈ ಕೆಳಗಿನಂತೆ ಓದಿಕೊಳ್ಳುವುದು.

ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ **22–09–2025 ರ ಸಂಜೆ 4.30 ಘಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ **23–09–2025 ರ ಸಂಜೆ 4:45 ಘಂಟೆ** ನಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ **24–09–2025 ರ ಬೆಳಗ್ಗೆ 11.00 ಘಂಟೆ** ನಂತರ. ಈ ಟೆಂಡರ್‌ನ ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್ ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ 16.09.2025ರ ನಂತರ ಪಡೆಯಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
DIPR/RO No-1032/2025-26 ಲೋಕೋಪಯೋಗಿ ಇಲಾಖೆ ವಿಭಾಗ, ಬೆಳಗಾವಿ.

ನಗರಸಭಾ ಕಾರ್ಯಾಲಯ ಹೊಸಪೇಟೆ.
No: CMC HPT/WS/15th finance/STP/2025-26
Dated: 12-09-2025

ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ.) ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಮುಖಾಂತರ)

2022–23ನೇ ಸಾಲಿನ 15ನೇ ಹಣಕಾಸು ಆಯೋಗದ ನಿರ್ಬಂಧಿತ ಅನುದಾನದ ಯೋಜನೆಯಡಿಯಲ್ಲಿ ಈ ಕೆಳಗಿನ ಕೆಲಸಕ್ಕಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:29–09–2025 ಸಂಜೆ 5.00 ಗಂಟೆ ವರೆಗೆ** (2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:30–09–2025 ಸಂಜೆ 5.30 ಗಂಟೆ** (3) ಆರ್ಥಿಕ ಬಿಡ್ ತೆರೆಯುವ **ದಿನಾಂಕ:01–10–2025 ಸಂಜೆ 5.30 ಗಂಟೆ,** ಸ್ಥಳ ನಗರಸಭೆ, ಹೊಸಪೇಟೆ. 1) DMA/2025-26/WT/WORK_INDENT 48283 ಕಾಯ್ದಿರಿಸಿದ ಮೊತ್ತ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): **84.00 ಲಕ್ಷ**, ಇ.ಎಂ.ಡಿ(90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ): **142360.00** ಟೆಂಡರ್ ಪ್ರೋಸೆಸ್ಸಿಂಗ್ ಫೀ ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂದನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/245

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ತುಮಕೂರು
ಸಂ.ಜಿಆತು: ಸ್ವಚ್ಛತೆ/05/ 2024 –25 ದಿನಾಂಕ:10.09.2025

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆಸ್ಪತ್ರೆ, ತುಮಕೂರು ಇಲ್ಲಿಗೆ ನಾನ್ ಕ್ಲಿನಿಕಲ್ ಸಿಬ್ಬಂದಿ, ಗ್ರೂಪ್ ಡಿ ನೌಕರರು ಹಾಗೂ ಆಸ್ಪತ್ರೆಯ ನರ್ಸಿಂಗ್ ಶಾಲೆ ಮತ್ತು ಕಾಲೇಜಿಗೆ ಅಗತ್ಯ ಸಿಬ್ಬಂದಿಯನ್ನು 2025–26ನೇ ಸಾಲಿಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಸಂಬಂಧ, ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ–ಲಕೋಟೆ ಪದ್ಧತಿ ಅನ್ವಯ ಕರ್ನಾಟಕ ಪಾರದರ್ಶಕ ನಿಯಮ 1999–2000 ರಂತೆ ಮರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಹ ಅಧಿಕೃತ ಸಂಸ್ಥೆದಾರರು ಖಾಲಿ ಟೆಂಡರ್ ಫಾರಂಗಳನ್ನು **ದಿನಾಂಕ: 10.09.2025 ರಿಂದ 11.10.2025 ಅಪರಾಹ್ನ 4–30 ಗಂಟೆ** ಒಳಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದ್ವಿ–ಲಕೋಟೆ ಪದ್ಧತಿಯಂತೆ ಸಲ್ಲಿಸುವುದು.

ಅರ್ಹ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **ದಿನಾಂಕ: 11.10.2025 ರಂದು 4.30** ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. (ಅಪ್‌ಲೋಡ್),

- ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 14.10.2025 ಅಪರಾಹ್ನ 12.00 ಗಂಟೆ,
- ಆರ್ಥಿಕ ಲಕೋಟೆ ತೆರೆಯುವ ದಿನಾಂಕ: 15.10.2025 ಅಪರಾಹ್ನ 12.00 ಗಂಟೆಗೆ,

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **http//.kppp.karnataka.gov.in** ರ ಮೂಲಕ ಅಥವಾ ಆಸ್ಪತ್ರೆ ಆಡಳಿತ ಕಛೇರಿಯ ಕರ್ತವ್ಯದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು,
ಜಿಲ್ಲಾ ಆಸ್ಪತ್ರೆ ತುಮಕೂರು
DIPR/TUM/RO-121/25-26/Oysters

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:29:2025–26 ದಿನಾಂಕ:12–09–2025

ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)

ಅಮೃತ್ 2.0 ನಿಧಿ.–07 ಕಾಮಗಾರಿಗಳು, ಒಟ್ಟು 7 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಕ್ರಮ ಸಂ 01 ರಿಂದ 07 ರ ಕಾಮಗಾರಿಗಳಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 18–09–2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 04–10–2025 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 04–10–2025 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 06–10–2025 ಸಮಯ : 17.05

ವಾಸಾಇ/ದಾವಣಗೆರೆ/353/ ಕೆಎಸ್‌ಎಂಸಿಎ/2025–26
ಸಹಿ/–ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು –570010
ದೂರವಾಣಿ: 0821–2424673/74 ಇಮೇಲ್: commr_amh@yahoo.in
ಟೆಂಡರ್ ಅಧಿಸೂಚನೆ ಸಂಖ್ಯೆ:ಆ.ಪು.ಸಂ.ಪ/ಸಂ.ವಿ/ಟೆಂ–18/2025–26 ದಿನಾಂಕ: 12.09.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಕೆಡಬ್ಲ್ಯೂ ರೀತ್ಯಾ ಪುರಾತನ ಸ್ಮಾರಕಗಳ/ದೇವಾಲಯದ ಸಂರಕ್ಷಣೆ ಕಾಮಗಾರಿ–02 ಹಾಗೂ ಸೇವಾ ಟೆಂಡರ್–01 DAMH/2025-26/SE004 (CALL-05) & DAMH/2025-26:OW/WORK_INDENT-124 (Call-4) & 136, ಟೆಂಡರ್‌ಗಿಟ್ಟ ಮೊತ್ತ ರೂ.14.67 ಲಕ್ಷಗಳು ಹಾಗೂ ಗರಿಷ್ಠ ರೂ.136.00 ಲಕ್ಷಗಳು ಈ ಕಾಮಗಾರಿಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ಡ್ ಟೆಂಡರ್ ಡ್ಯಾಕುಮೆಂಟ್‌ನಲ್ಲಿನ ಷರತ್ತಿಗಳಿಗೆ ಅನುಗುಣವಾಗಿ ಕರೆಯಲಾಗಿದ್ದು, ಇ–ಪ್ರೊಕ್ಯೂರ್ಮೆಂಟ್ ಮೂಲಕ ನಿಗಧಿಪಡಿಸಿರುವ ವರ್ಗಗಳ ಅನುಸಾರ ಈ ಕಾಮಗಾರಿಗಳ ಟೆಂಡರ್‌ಗೆ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪೋರ್ಟಲ್ **http://www.kppp.karnataka.gov.in** ನಲ್ಲಿ ಪಡೆಯಬಹುದು.

ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	22.09.2025, 17.00 ಗಂಟೆ
ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	26.09.2025, 16.00 ಗಂಟೆ
ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	29.09.2025, 16.30 ಗಂಟೆ
ಟೆಂಡರ್ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	03.10.2025, 11.00 ಗಂಟೆ

ಸಹಿ/– ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
DIPR/MYS/KAVITA/967/2025-26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023.
ದೂ: 080–29557023, ಇ–ಮೇಲ್: **cekhsdrp@gmail.com**
ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ–2/ಸಇಂ–1&8/ಟಿಎನ್‌ಡಿ/15th Finance & PM-ABHIM /2025–26/ 2054 ದಿನಾಂಕ:16.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎರಡನೇ ಕರೆ)

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ 15th Finance & PM-ABHIM ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ **ರೂ. 3164.00 ಲಕ್ಷಗಳಿಗೆ** ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPP Portal) ಮೂಲಕ ದ್ವಿಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕೆಪಿಪಿ–ಪೋರ್ಟಲ್ ಅನ್ನು ಪರಿಶೀಲಿಸುವುದು. **ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು:** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **03.10.2025 ರಂದು 16.00 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **04.10.2025 ರಂದು 16.01 ಗಂಟೆಗೆ.** ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(Through Karnataka Public Procurement Portal) www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2.ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.

ಟೆಂಡರ್‌ಗೆ ಆಹ್ವಾನ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಕರ್ನಾಟಕ ಸರ್ಕಾರವು ಶಿವಮೊಗ್ಗದ ಸೋಗಾನೆ ಗ್ರಾಮದ ಸನಿಹದಲ್ಲಿರುವ 758 ಎಕರೆ ಪ್ರದೇಶದಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣವನ್ನು ನಿರ್ಮಿಸಿದೆ. ಕೆಎಸ್‌ಐಐಡಿಸಿಎಲ್ ಇವರು, ಶಿವಮೊಗ್ಗ ಜಿಲ್ಲೆಯ ಸೋಗಾನೆ ಗ್ರಾಮದಲ್ಲಿರುವ ಶಿವಮೊಗ್ಗ ವಿಮಾನನಿಲ್ದಾಣದ ಕಾರ್ಯಾಚರಣೆ ಪ್ರದೇಶದಲ್ಲಿ **“ಹೊಸ ಡಿವಿಒಆರ್ ಕಟ್ಟಡದ ನಿರ್ಮಾಣ, ಸಂಬಂಧಿತ ಸೌಲಭ್ಯಗಳು ಮತ್ತು ಪೂರಕ ಕಾಮಗಾರಿಗಳನ್ನು ಕೈಗೊಳ್ಳಲು”** ಕೆಪಿಡಬ್ಲ್ಯೂಡಿ/ಎನ್‌ಹೆಚ್/ಎನ್‌ಹೆಚ್‌ಎಐ/ಸಿಪಿಡಬ್ಲ್ಯೂಡಿ/ ಅಥವಾ ಕೇಂದ್ರ/ರಾಜ್ಯ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಐಟಂದರದ ಆಧಾರದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್(ದ್ವಿ ಲಕೋಟೆ ವ್ಯವಸ್ಥೆ) ಆಹ್ವಾನಿಸಿರುವರು.

ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **(https://kppp.karnataka.gov.in)** ಮೂಲಕ ಪಡೆಯಬಹುದು. ಟೆಂಡರ್‌ನ ಅಂದಾಜು ಮೊತ್ತ : **ರೂ. 5.00 ಕೋಟಿಗಳು.** ಇಎಂಡಿ: **ರೂ. 5.00 ಲಕ್ಷಗಳು. ಪ್ರಮುಖ ದಿನಾಂಕಗಳು:** ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **17.09.2025 ನಂತರ.** ಬಿಡ್ ಪೂರ್ವ ಸಭೆ: **25.09.2025, ಬೆಳಗ್ಗೆ 11.30 ಗಂಟೆಗೆ.** ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **16.10.2025 ಸಂಜೆ 5.30 ಗಂಟೆ ವರೆಗೆ**

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಮತ್ತು ವೆಬ್‌ಸೈಟ್‌ನಿಂದ ಪಡೆಯಬಹುದು. ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಿದ್ದಲ್ಲಿ , ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಯಾವುದೇ ವಿಚಾರಣೆ/ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಿ : ಎಜಿಎಂ (ಐಪಿಡಿ) 080–22258131 ಇ–ಮೇಲ್: bic3@ksiidc.com / info@ksiidc.com

ಸಹಿ/– ಪ್ರಧಾನ ವ್ಯವಸ್ಥಾಪಕರು,
ಕೆಎಸ್‌ಐಐಡಿಸಿ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇ:ಗ್ರಾಕುನೀ&ನೈ:ವಿ.ಮಂ:PWM:2025–26
ದಿನಾಂಕ:15.09.2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:07/2025–26 (ದ್ವಿ–ಲಕೋಟೆ ಪದ್ದತಿ) (2ನೇ ಕರೆ) – (Kppp portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಸ್ವಚ್ಛ ಭಾರತ ಮಿಷನ್(ಗ್ರಾಮೀಣ) ಯೋಜನೆಯಡಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಾಗಿ ನಿರ್ಮಿಸಿರುವ ಸ್ವಚ್ಛ ಸಂಕೀರ್ಣ ಘಟಕಗಳಿಗೆ ಯಂತ್ರೋಪಕರಣಗಳನ್ನು ಅಳವಡಿಸಲು ಅರ್ಹ ಉತ್ಪಾದಕರು/ವಿತರಕರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:23.09.2025 ಸಂಜೆ:5:00 ಗಂಟೆಗೆ, ಪೂರ್ವಭಾವಿ ಸಭೆ ದಿನಾಂಕ:18.09.2025 ಬೆಳಿಗ್ಗೆ:11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ), ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24.09.2025 ಸಂಜೆ:5:05 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.09.2025, ಬೆಳಿಗ್ಗೆ:11:00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ :08232–222363.

ಸಹಿ/–ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/443/2025–26

ಕೃಷಿ ವಿಶ್ವವಿದ್ಯಾನಿಲಯ
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65
ಸಂಖ್ಯೆ.ಆಅ/ಟಿ.ಎನ್/12/2025–26, ದಿನಾಂಕ : 11–9–2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಲೆಕ್ಕ ಪರಿಶೋಧನಾ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ.–5ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ನೋಂದಣಿ ಪಡೆದ ನುರಿತ ಮತ್ತು ಪರಿಣಿತವುಳ್ಳ ಚಾರ್ಟೆಡ್ ಅಕೌಂಟೆಟ್ಸ್‌ರವರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ **(1) Auditing the accounts of all projects / schemes sponsored by various Agencies, (2) e-filling of TDS of UAS(B) account (Salary Section, Works, Contingency and Budget Section) ಕೆಲಸವನ್ನು 2 ವರ್ಷ ನಿರ್ವಹಿಸಲು ಟೆಂಡರ್ ಕರೆಯಲಾಗಿದೆ.** ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕೆಲಸದ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಈ ಟೆಂಡರ್ ದ್ವಿಲಕೋಟೆ ಪದ್ಧತಿಯಲ್ಲಿದ್ದು, ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡನ್ನು ಒಳಗೊಂಡಿರುತ್ತದೆ. ಲೆಕ್ಕ ಪರಿಶೋಧನಾ ಸಂಸ್ಥೆಯವರು ಮುಂದೆ ತಿಳಿಸಿದ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಬೇಕಾಗುತ್ತದೆ. (1) ಕಂಪನಿ ನೋಂದಣಿ ಪ್ರಮಾಣ ಪತ್ರ, (2) ಜಿ.ಎಸ್.ಟಿ. ಪ್ರಮಾಣ ಪತ್ರ, (3) ವೃತ್ತಿ ಅನುಭವದ ಪ್ರಮಾಣ ಪತ್ರ, (4) ಇದೇ ರೀತಿಯ ಕೆಲಸಗಳನ್ನು ನಿರ್ವಹಿಸಿರುವ ಬಗ್ಗೆ ಪ್ರಮಾಣ ಪತ್ರ, (5) 3 ವರ್ಷಗಳ ವಹಿವಾಟಿನ ಪ್ರಮಾಣ ಪತ್ರ, (6) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ.

ಪ್ರಿ–ಬಿಡ್ ಮೀಟಿಂಗ್ **ದಿನಾಂಕ: 22–9–2025ರಂದು ಬೆಳಗ್ಗೆ 10.30ಕ್ಕೆ** ನಡೆಸಲಾಗುವುದು. ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.kppp.karnataka.gov.in ಇಂದ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 24–9–2025 ರಂದು ಅಪರಾಹ್ನ 4 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ : 26–9–2025ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹಣಕಾಸಿನ ಬಿಡ್ಡನ್ನು **ದಿನಾಂಕ : 29–9–2025 ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ.080–23332765 ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ– **support@eprochelpdesk.com** ಅಥವಾ **8046010000** ಮತ್ತು **8068948777**.

ಸಹಿ/–
ಆಸ್ತಿ ಅಧಿಕಾರಿ
ವಾ.ಸಾ.ಸಂ.ಇ/ವಾಪ್ರ/2823/ಆಕಾರ್/2025–26

ಪ್ರಜಾವಾಣಿ ಬುಧವಾರ • ಸೆಪ್ಟೆಂಬರ್ 17, 2025

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಗುಂಡಿಗಿಂತಲೂ ಮತಪೆಟ್ಟಿಗೆಯೇ ಶಕ್ತಿಯುತವಾದುದು.

–ಅಬ್ರಹಾಂ ಲಿಂಕನ್

ಸಂಪಾದಕೀಯ

ವಕ್ಫ್ ಕಾಯ್ದೆಗೆ ಭಾಗಶಃ ತಡೆ ಕಳವಳಗಳಿಗೆ ಕೋರ್ಟ್ ಸ್ಪಂದನ

ವಕ್ಫ್ (ತಿದ್ದುಪಡಿ) ಕಾಯ್ದೆಯ ಕೆಲವು ವಿವಾದಿತ ಅಂಶಗಳಿಗೆ ತಡೆ ನೀಡುವ ಮೂಲಕ ಸುಪ್ರೀಂ ಕೋರ್ಟ್ ಒಳ್ಳೆಯ ಕೆಲಸ ಮಾಡಿದೆ. ಈ ವಿವಾದಿತ ಅಂಶಗಳು ವಕ್ಫ್ ಆಸ್ತಿಗಳ ದುರ್ಬಳಕೆ, ಒತ್ತುವರಿಯನ್ನು ತಡೆಯಲು ನೆರವಾಗುತ್ತವೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆದರೆ, ದೇಶದ ಮುಸ್ಲಿಂ ಸಮುದಾಯವು ಈ ಅಂಶಗಳನ್ನು ತನ್ನ ಧಾರ್ಮಿಕ ಹಕ್ಕಿನ ಉಲ್ಲಂಘನೆಯನ್ನಾಗಿ, ವಕ್ಫ್ ಆಸ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸರ್ಕಾರ ನಡೆಸಿದ ಪ್ರಯತ್ನವನ್ನಾಗಿ ಕಂಡಿತ್ತು. ಇಡೀ ಕಾಯ್ದೆಗೆ ಕೋರ್ಟ್ ತಡೆಯಾಜ್ಞೆ ನೀಡಿಲ್ಲ; ಕಾಯ್ದೆಯ ಕೆಲವು ಅಂಶಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಅಸಾಂವಿಧಾನಿಕ ಅಥವಾ ಕಾನೂನುಬಾಹಿರ ಎಂಬಂತೆ ಕಾಣುವ ಅಂಶಗಳಿಗೆ ಮಾತ್ರ ನ್ಯಾಯಾಲಯಗಳು ತಡೆ ನೀಡುತ್ತವೆ.

ಆಸ್ತಿಯೊಂದು ವಕ್ಫ್‌ಗೆ ಸೇರಿದ್ದೋ ಅಥವಾ ಅದು ಸರ್ಕಾರಕ್ಕೆ ಸೇರಿದ್ದೋ ಎಂಬುದನ್ನು ಜಿಲ್ಲಾಧಿಕಾರಿಯು ಏಕಪಕ್ಷೀಯವಾಗಿ ತೀರ್ಮಾನಿಸಬಹುದು ಎಂಬ ಅಂಶವನ್ನು ಸುಪ್ರೀಂ ಕೋರ್ಟ್ ಈಗ ಅಮಾನತಿನಲ್ಲಿ ಇರಿಸಿದೆ. ತೀರ್ಮಾನವೊಂದಕ್ಕೆ ಬರುವ ಮೊದಲು ಆಸ್ತಿಯನ್ನು ವಕ್ಫ್ ಎಂದು ಪರಿಗಣಿಸದೆ ಇರಲು ಅವಕಾಶ ಕಲ್ಪಿಸುವ ಅಂಶಕ್ಕೆ ಕೂಡ ತಡೆ ನೀಡಲಾಗಿದೆ. ಏಕೆಂದರೆ, ವ್ಯಾಜ್ಯವು ಇತ್ಯರ್ಥ ಆಗುವವರೆಗೆ ಯಾವುದೇ ಆಸ್ತಿಗೆ ಸಂಬಂಧಿಸಿದಂತೆ ಮೂರನೆಯ ವ್ಯಕ್ತಿಗೆ ಹಕ್ಕು ನೀಡಲು ಅವಕಾಶ ಕಲ್ಪಿಸಲಾಗದು. ಈ ಎಲ್ಲ ಅಂಶಗಳು ಜಾರಿಗೆ ಬಂದಿದ್ದರೆ ಮುಸ್ಲಿಮರು ವಕ್ಫ್ ಆಸ್ತಿ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುವಂತೆ ಆಗುತ್ತಿತ್ತು. ವಕ್ಫ್ ಆಸ್ತಿಗಳ ಮೇಲಿನ ನಿಯಂತ್ರಣ ಹಾಗೂ ಮಾಲೀಕತ್ವವು ಆ ಸಮುದಾಯದ ಹಕ್ಕು. ಸರ್ಕಾರಿ ಅಧಿಕಾರಿಗಳಿಗೆ ಹಾಗೂ ಮುಸ್ಲಿಮೇತರರಿಗೆ ವಕ್ಫ್ ಆಸ್ತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಅಧಿಕಾರ ಕೊಟ್ಟಿದ್ದರೆ ಸಮುದಾಯದ ಹಕ್ಕುಗಳು ದುರ್ಬಲಗೊಳ್ಳುತ್ತಿದ್ದವು. ಆಸ್ತಿಯೊಂದನ್ನು ಜಿಲ್ಲಾಧಿಕಾರಿಯು ಸರ್ಕಾರಿ ಆಸ್ತಿ ಎಂದು ಗುರುತಿಸಿದರೆ ಅದು ವಕ್ಫ್ ಎಂಬ ಸ್ಥಾನವನ್ನು ಕಳೆದುಕೊಳ್ಳುತ್ತದೆ ಎಂದು ಈಗ ಅಮಾನತಾಗಿರುವ ಅಂಶವೊಂದು ಹೇಳಿತ್ತು. ಇದು ಕೋರ್ಟ್ ಹೇಳಿರುವಂತೆ ಅಧಿಕಾರ ವ್ಯಾಪ್ತಿಯನ್ನು ಪ್ರತ್ಯೇಕಿಸುವ ತತ್ತ್ವದ ಉಲ್ಲಂಘನೆಯಾಗುತ್ತಿತ್ತು. ಆಸ್ತಿಯ ಮಾಲೀಕತ್ವ ಯಾರದ್ದು ಎಂಬುದನ್ನು ನ್ಯಾಯಾಂಗ ಅಥವಾ ಅರೆನ್ಯಾಯಿಕ ಅಧಿಕಾರ ಹೊಂದಿರುವವರು ಮಾತ್ರ ತೀರ್ಮಾನಿಸಲು ಅವಕಾಶ ಇದೆ. ಕೇಂದ್ರ ವಕ್ಫ್ ಪರಿಷತ್ತಿನ 22 ಸದಸ್ಯರ ಪೈಕಿ ಮುಸ್ಲಿಮೇತರರ ಸಂಖ್ಯೆಯನ್ನು ಕೋರ್ಟ್ ನಾಲ್ಕಕ್ಕೆ ಮಿತಿಗೊಳಿಸಿದೆ. ರಾಜ್ಯ ವಕ್ಫ್ ಮಂಡಳಿಗಳ 11 ಸದಸ್ಯರಲ್ಲಿ ಮುಸ್ಲಿಮೇತರರ ಸಂಖ್ಯೆಯನ್ನು ಮೂರಕ್ಕೆ ಮಿತಿಗೊಳಿಸಿದೆ. ನ್ಯಾಯಾಲಯಕ್ಕೆ ವಿವರ ನೀಡಿರುವಂತೆ, ಕೋರ್ಟ್ ಒಪ್ಪಿಕೊಂಡಿರುವಂತೆ, ಇತರ ಧರ್ಮಗಳಿಗೆ ಸೇರಿದ ಪ್ರಮುಖ ಸಂಸ್ಥೆಗಳಲ್ಲಿ ಆ ಧರ್ಮಗಳಿಗೆ ಸೇರಿದ ಜನರೇ ಮಹತ್ವದ ಹುದ್ದೆಗಳಲ್ಲಿ ಇರುತ್ತಾರೆ. ವಕ್ಫ್ ಹಾಗೂ ಮುಸ್ಲಿಮರಿಗೆ ಸಂಬಂಧಿಸಿದ ಸಂಸ್ಥೆಗಳಲ್ಲಿ ಇದು ಭಿನ್ನವಾಗಿರಬೇಕು ಎಂದು ಹೇಳಲು ಆಧಾರಗಳಿಲ್ಲ. ಕನಿಷ್ಠ ಐದು ವರ್ಷಗಳಿಂದ ಇಸ್ಲಾಂ ಧರ್ಮ ಅನುಸರಿಸುತ್ತಿರುವ ವ್ಯಕ್ತಿ ಮಾತ್ರ ವಕ್ಫ್‌ಗೆ ದಾನ ಮಾಡಬಹುದು ಎಂಬ ಅಂಶಕ್ಕೆ ಕೂಡ ಕೋರ್ಟ್ ತಡೆ ನೀಡಿದೆ. ರಾಜ್ಯ ಸರ್ಕಾರಗಳು ಈ ವಿಚಾರವಾಗಿ ಸ್ಪಷ್ಟ ನಿಯಮ ರೂಪಿಸುವವರೆಗೆ ಈ ತಡೆಯು ಜಾರಿಯಲ್ಲಿ ಇರುತ್ತದೆ. ಅರ್ಜಿಗಳ ವಿಚಾರಣೆ ಪೂರ್ಣಗೊಳ್ಳುವವರೆಗೆ ಸಂಬಂಧಪಟ್ಟ ಎಲ್ಲರ ಹಿತವನ್ನು ಕಾಯಲು ಹಾಗೂ ಸಮತೋಲನವೊಂದನ್ನು ಸಾಧಿಸಲು ಈ ಕ್ರಮ ಕೈಗೊಂಡಿರುವುದಾಗಿ ಕೋರ್ಟ್ ಹೇಳಿದೆ.

ಬಳಕೆಯ ಕಾರಣದಿಂದಾಗಿ ವಕ್ಫ್ ಎಂಬ ಪರಿಕಲ್ಪನೆಯನ್ನು, ಅಂದರೆ ಆಸ್ತಿಯೊಂದನ್ನು ಬಹುಕಾಲದಿಂದ ಧಾರ್ಮಿಕ ಅಥವಾ ದತ್ತಿ ಕಾರ್ಯಕ್ಕೆ ಬಳಕೆ ಮಾಡುತ್ತಿದ್ದರೆ ಅದನ್ನು ವಕ್ಫ್ ಎಂದು ಪರಿಗಣಿಸುವುದನ್ನು ತೆಗೆದುಹಾಕಿದ ಅಂಶಕ್ಕೆ ಕೋರ್ಟ್ ತಡೆ ನೀಡಿಲ್ಲ. ಈ ಅಂಶವು ಮೇಲ್ನೋಟಕ್ಕೆ ಅಸಾಂವಿಧಾನಿಕವಾಗಿ ಕೋರ್ಟ್‌ಗೆ ಕಂಡಿಲ್ಲ. ಕಾಯ್ದೆಯಲ್ಲಿ ತೀರಾ ವಿವಾದಾಸ್ಪದ ಆಗಿದ್ದ ಕೆಲವು ಅಂಶಗಳು ಈಗ ಜಾರಿಗೆ ಬರುವುದಿಲ್ಲ ಎಂದು ಅರ್ಜಿದಾರರು ತೃಪ್ತಿ ವ್ಯಕ್ತಪಡಿಸಿದ್ದಾರೆ. ಕಾನೂನಿನ ವಿಚಾರವಾಗಿ ಎತ್ತಿದ್ದ ಕೆಲವು ಗಂಭೀರ ಕಳವಳಗಳಿಗೆ ಸ್ಪಂದಿಸುವ ಕೆಲಸವನ್ನು ಕೋರ್ಟ್ ಮಾಡಿದೆ. ಕಾಯ್ದೆಯ ಕೆಲವು ಅಂಶಗಳನ್ನು ಮುಸ್ಲಿಂ ಸಮುದಾಯದ ಜೊತೆ ಸಮಾಲೋಚನೆ ನಡೆಸದೆಯೇ ರೂಪಿಸಿದ್ದರಿಂದಾಗಿ, ವಿರೋಧ ಪಕ್ಷಗಳ ದೃಷ್ಟಿಕೋನಕ್ಕೆ ಬೆಲೆ ಕೊಡದೆ ಸಂಸತ್ತಿನಲ್ಲಿ ಬಲವಂತದಿಂದ ಅಂಗೀಕಾರ ಪಡೆದಿದ್ದರಿಂದಾಗಿ ಈ ಕಳವಳಗಳು ಮೂಡಿದ್ದವು.

ವಕ್ಫ್ (ತಿದ್ದುಪಡಿ) ಕಾಯ್ದೆಯ ಕೆಲವು ವಿವಾದಿತ ಅಂಶಗಳ ಕುರಿತ ಕಳವಳವನ್ನು ನಿವಾರಿಸುವ ಮಹತ್ವದ ಕೆಲಸವನ್ನು ಸುಪ್ರೀಂ ಕೋರ್ಟ್ ಮಾಡಿದೆ.

ಹಿಂದಿ: ಹೆಚ್ಚುಗಾರಿಕೆ ಏಕೆ?

ಭಾರತ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ತಂದು, ಸಂವಿಧಾನದ ಪರಿಚ್ಛೇದ 8ರಲ್ಲಿ ಗುರುತಿಸಲಾಗಿರುವ ಎಲ್ಲ ಭಾಷೆಗಳನ್ನೂ ಒಕ್ಕೂಟ ಸರ್ಕಾರದ ಆಡಳಿತ ಭಾಷೆಗಳನ್ನಾಗಿ ಘೋಷಿಸಬೇಕು. ಹಿಂದಿ ಮತ್ತು ಇಂಗ್ಲಿಷ್ ನುಡಿಗಳಿಗೆ ನೀಡಿರುವ ಆಡಳಿತ ಭಾಷೆಯ ಸ್ಥಾನಮಾನವನ್ನು ಕನ್ನಡವೂ ಸೇರಿದಂತೆ ದೇಶದ ಎಲ್ಲ ನುಡಿಗಳಿಗೂ ವಿಸ್ತರಿಸಬೇಕು.

ಟಿ.ಎ. ನಾರಾಯಣಗೌಡ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ, 'ಎಕ್ಸ್'ನಿಂದ

ಕಿಡಿನುಡಿ

ಕುರುಬರನ್ನು ಎಸ್.ಟಿ.ಗೆ ಸೇರಿಸುವಂತೆ ನಾವೆಲ್ಲ 350 ಕಿ.ಮೀ. ಪಾದಯಾತ್ರೆ ಮಾಡಿದಾಗ ಅದನ್ನು ಸಿದ್ದರಾಮಯ್ಯ ಟೀಕಿಸಿದ್ದರು. ಈಗ ಕಾಗಿನೆಲೆ ಪೀಠದ ಶ್ರೀಗಳನ್ನು ಛೂ ಬಿಡುತ್ತಾರೆ. ಸಂಕಷ್ಟದಿಂದ ಪಾರಾಗಲು ಕುರುಬರನ್ನು ಗುರಾಣಿಯಾಗಿ ಬಳಸಲು ಹೊರಟಿದ್ದಾರೆ.

ಎಚ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಭಾನುವಾರ, 17-9-2000

• **'ನಾಪತ್ತೆ'ಯಾಗಿದ್ದ ಶಾಸಕ ಪ್ರತ್ಯಕ್ಷ**

ಬೆಂಗಳೂರು, ಸೆಪ್ಟೆಂಬರ್ 16– ನಾಪತ್ತೆಯಾಗಿದ್ದ ಭದ್ರಾವತಿ ಶಾಸಕ ಎಂ.ಜೆ. ಅಪ್ಪಾಜಿ (47) ಅವರು ಮೈಸೂರಿನಲ್ಲಿದ್ದು, ಇಂದು ನಗರಕ್ಕೆ ಹಿಂತಿರುಗಿದ್ದಾರೆ.

'ತಾವು ಖಾಸಗಿ ಕಾರ್ಯ ನಿಮಿತ್ತ ಮೈಸೂರಿನ ಸ್ನೇಹಿತರ ಮನೆಗೆ ತೆರಳಿದ್ದಾಗಿ' ಸುದ್ದಿಗಾರರಿಗೆ ತಿಳಿಸಿದರು.

'ಮೈಸೂರಿನಿಂದ ಭದ್ರಾವತಿಯ ಮನೆಯನ್ನು ಸಂಪರ್ಕಿಸಲು ಯತ್ನಿಸಿದ್ದೆ. ನಂತರ ವಿಐಎಸ್‌ಎಲ್‌ನ ಅಧಿಕಾರಿ-ಯೊಬ್ಬರನ್ನು ಸಂಪರ್ಕಿಸಿ ತಾವು ಸೆ. 15ರಂದು ಭದ್ರಾವತಿಗೆ ಬರುವುದಾಗಿ ಮನೆಗೆ ತಿಳಿಸುವಂತೆ ಹೇಳಿದ್ದೆ. ಮನೆಯವರು ಅಧಿಕಾರಿಯ ಮಾತನ್ನು ನಂಬದ ಕಾರಣ ಅವಾಂತರಕ್ಕೆ ಎಡೆ ಮಾಡಿಕೊಟ್ಟಿತು' ಎಂದು ವಿವರಿಸಿದರು.

• **ಸಿಡ್ನಿ ಒಲಿಂಪಿಕ್ಸ್: ಮೊದಲ ದಿನ ಭಾರತಕ್ಕೆ ನಿರಾಸೆ**

ಸಿಡ್ನಿ, ಸೆಪ್ಟೆಂಬರ್ 16– ಭಾರತ ತಂಡದವರು ಇಪ್ಪತ್ತೇಳನೇ ಒಲಿಂಪಿಕ್ಸ್‌ನ ಮೊದಲ ದಿನ ನಿರಾಶಾದಾಯಕ ಫಲಿತಾಂಶ ನೀಡಿದರು. ಆದರೆ, ಆತಿಥೇಯ ಆಸ್ಟ್ರೇಲಿಯಾವು ಈಜಿನಲ್ಲಿ ಅಮೆರಿಕವನ್ನು ಹಿಂದಿಕ್ಕಿ ಪೂರ್ಣ ಮೇಲುಗೈ ಸಾಧಿಸಿತು.

ಭಾರತದ ಅಂಜಲಿ ವೇದ್‌ಪಾಠಕ್ ಹತ್ತು ಮೀಟರ್ಸ್ ಏರ್ ರೈಫಲ್ ಸ್ಪರ್ಧೆಯ ಮಹಿಳಾ ವಿಭಾಗದಲ್ಲಿ ಫೈನಲ್ ತಲುಪಿದರಾದರೂ ಅಂತಿಮವಾಗಿ ಕೊನೆಯ ಸ್ಥಾನಕ್ಕಿಳಿದರು.

75 ವರ್ಷಗಳ ಹಿಂದೆ

ಭಾನುವಾರ, 17-9-1950

• **ವಿದ್ಯಾರ್ಥಿಗಳ ಸಭೆ, ಮೆರವಣಿಗೆಗೆ ನಿಷೇಧ**

ಗ್ವಾಲಿಯರ್, ಸೆಪ್ಟೆಂಬರ್ 16– ವಿದ್ಯಾರ್ಥಿಗಳ ಸಭೆ ಹಾಗೂ ಮೆರವಣಿಗೆಗೆ ನಿಷೇಧ ಹೇರಿರುವ ಸರ್ಕಾರದ ನಡೆ ಖಂಡಿಸಿ, ನಗರದಲ್ಲಿ ಇಂದು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಇಲ್ಲಿನ ನ್ಯಾಯ ಚೌಕದ ಬಳಿ ಜಮಾವಣೆಗೊಂಡು ಘೋಷಣೆ ಕೂಗಿದ ವಿದ್ಯಾರ್ಥಿಗಳ ಗುಂಪು ಚದುರಿಸಲು ಪೊಲೀಸರು ಟಿಯರ್ ಗ್ಯಾಸ್ ಪ್ರಯೋಗಿಸಿದರು.

ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ಪ್ರತ್ಯೇಕ ಗುಂಪುಗಳಾಗಿ ವಿಭಜನೆಗೊಂಡು, ವಿವಿಧ ಸ್ಥಳಗಳಲ್ಲಿ ಪ್ರತಿಭಟನೆ ನಡೆಸಿದರು.

ಹುಲಿಗಳ ಸಂಖ್ಯೆ ಮತ್ತು ಸಂಘರ್ಷ

ವಿಶ್ಲೇಷಣೆ

ಸಂಜಯ್ ಗುಬ್ಬಿ

> ಸಾಕುಪ್ರಾಣಿಗಳ ಬಗೆಗಿನ ದೃಷ್ಟಿಕೋನದಿಂದ ಕಾಡುಪ್ರಾಣಿಗಳನ್ನು ನೋಡುವುದು ಅಪಾಯಕರ. ಕಾಡುಪ್ರಾಣಿಗಳ ಸಂರಕ್ಷಣೆಯ ಕುರಿತ ಭಾವುಕತೆ ಹಾಗೂ ವನ್ಯಜೀವಿ ಆವಾಸಸ್ಥಾನಗಳನ್ನು ಅವೈಜ್ಞಾನಿಕವಾಗಿ ನಿರ್ವಹಿಸುತ್ತಿರುವುದು ಮನುಷ್ಯ ಹಾಗೂ ವನ್ಯಮೃಗಗಳ ನಡುವಣ ಸಂಘರ್ಷಕ್ಕೆ ಮುಖ್ಯ ಕಾರಣಗಳಲ್ಲೊಂದಾಗಿದೆ.

ಹುಲಿಗಳ ಬಗ್ಗೆ ನಾಲ್ಕು ಕಳವಳಕಾರಿ ಸುದ್ದಿಗಳು ಇತ್ತೀಚೆಗೆ ಪ್ರಕಟಗೊಂಡಿವೆ. ಮೂರು ಸುದ್ದಿಗಳು ಬಂಡೀಪುರ ಹುಲಿ ಯೋಜನೆಗೆ ಸಂಬಂಧಿಸಿದವು. ಇನ್ನೊಂದು, ನಾಗರಹೊಳೆ ಹುಲಿ ಯೋಜನೆಗೆ ಸಂಬಂಧಿಸಿದ್ದು. ಅವುಗಳಲ್ಲಿ ಎರಡು ಸುದ್ದಿಗಳಿಗೆ ಪಾರಿಸರಿಕ ಕೊಂಡಿಯಿದ್ದರೆ, ಇನ್ನೆರಡು ಸುದ್ದಿಗಳು ಸಾಮಾಜಿಕ ದೃಷ್ಟಿಕೋನವನ್ನು ಹೊಂದಿವೆ.

ಮೊದಲನೆಯದು: ಬಂಡೀಪುರದ ಸಫಾರಿ ಪ್ರದೇಶದಲ್ಲಿ ಹೆಣ್ಣು ಹುಲಿಯೊಂದು ನೈಸರ್ಗಿಕ ಕಾರಣಗಳಿಂದ ಗಾಯಗೊಂಡು ಕುಂಟುತ್ತಿರುವ ದೃಶ್ಯ. ಇದು, ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗಿ ಕೆಲವು ವನ್ಯಜೀವಿ ಆಸಕ್ತರು ಆ ಹುಲಿಗೆ ಚಿಕಿತ್ಸೆ ನೀಡಲು ಮತ್ತು ಅದರ ಮರಿಗಳಿಗೆ ಕೃತಕವಾಗಿ ಆಹಾರವನ್ನೊದಗಿಸಲು ಅರಣ್ಯ ಇಲಾಖೆಯ ಮೇಲೆ ಒತ್ತಡ ಹೇರಿದ ಪರಿಣಾಮ, ಇಲಾಖೆ ಏನೇನೊ ಕಸರತ್ತು ಮಾಡಿತು.

ಎರಡನೆಯದು: ಮೈಸೂರಿನ ಇಲವಾಲದ ಹತ್ತಿರ ಹುಲಿಗಳು ಪ್ರತ್ಯಕ್ಷವಾಗಿ ಜನರಲ್ಲಿ ಆತಂಕ ಮೂಡಿದೆ ಎಂಬ ಸುದ್ದಿ.

ಮೂರನೆಯದು: ಬಂಡೀಪುರ ಹುಲಿ ಯೋಜನೆಯ ಹತ್ತಿರವಿರುವ ಕುಂದುಕೆರೆ ಗ್ರಾಮದ ಬಳಿಯಿರುವ ಪುಟ್ಟ ಗುಡ್ಡದಲ್ಲಿ ಇತ್ತೀಚೆಗೆ ಎರಡು ಹುಲಿಗಳು ಕಾಣಿಸಿಕೊಂಡು, ಅವುಗಳಲ್ಲಿ ಒಂದು ಹುಲಿ ಇನ್ನೊಂದು ಹುಲಿಯಿಂದ ಗಾಯಗೊಂಡು ನಿತ್ರಾಣಗೊಂಡಿರುವ ಸುದ್ದಿ.

ನಾಲ್ಕನೆಯದು: ಬಂಡೀಪುರದ ಬಳಿಯಿರುವ ಬೊಮ್ಮಲಾಪುರ ಎಂಬ ಹಳ್ಳಿಯಲ್ಲಿ ಗ್ರಾಮಸ್ಥರು ಹುಲಿ ಸಂಘರ್ಷದಿಂದ ಬೇಸತ್ತು, ಹುಲಿಯನ್ನು ಹಿಡಿಯಲು ಇಟ್ಟಿದ್ದ ಬೋನಿನಲ್ಲಿ ಅರಣ್ಯ ಇಲಾಖೆಯ ನೌಕರರನ್ನೇ ಕೂಡಿ ಹಾಕಿದ ಘಟನೆ.

ಈ ನಾಲ್ಕೂ ಘಟನೆಗಳು ಸ್ವತಂತ್ರವೆನಿಸಿದರೂ, ಅವುಗಳಿಗೆ ಮತ್ತು ವನ್ಯಜೀವಿ ಸಂರಕ್ಷಣೆಯ ವಿಧಾನಗಳಿಗೆ ಕೊಂಡಿಗಳಿವೆ. ನಿಸರ್ಗದಲ್ಲಿ ಹುಲಿಯನ್ನು ಭಕ್ಷಿಸುವ ಇತರ ಪ್ರಾಣಿಗಳು ಇಲ್ಲವಾದುದರಿಂದ ಅದು ಪಾರಿಸರಿಕ ಗೋಪುರದ ತುದಿಯಲ್ಲಿರುವ ವನ್ಯಜೀವಿ. ಹಾಗಾಗಿ, ಹುಲಿಗಳಿಗೆ ಉತ್ತಮ ರಕ್ಷಣೆ ಸಿಕ್ಕರೆ ಅವುಗಳ ಸಂಖ್ಯೆ ಹೆಚ್ಚುತ್ತದೆ. ಆವಾಸಸ್ಥಾನದ ವ್ಯಾಪ್ತಿ, ಆ ಪ್ರದೇಶದಲ್ಲಿರುವ ಬಲಿಪ್ರಾಣಿಗಳ ಸಾಂದ್ರತೆಗೆ ಅನುಗುಣವಾಗಿ ಅವುಗಳ ಸಂಖ್ಯೆಯನ್ನು ನೈಸರ್ಗಿಕ ಕಾರಣಗಳು ನಿಯಂತ್ರಿಸುತ್ತವೆ. ಹುಲಿಗಳ ನೈಸರ್ಗಿಕ ಮರಣ ಪ್ರಮಾಣಕ್ಕೆ ಮುಖ್ಯ ಕಾರಣಗಳು: ನೆಲಹರವಿಗಾಗಿ ಹುಲಿಗಳ ಕಾದಾಟ, ನೈಸರ್ಗಿಕ ಕಾರಣಗಳಿಂದ ಆಗುವ ಗಾಯಗಳು, ರೋಗ, ಆಹಾರ ಅಥವಾ ನೀರಿನ ಕೊರತೆ. ಇವುಗಳಲ್ಲಿ ಕೊನೆಯದು ಅಪರೂಪ.

ಏಕೆಂದರೆ, ಆಹಾರ ಮತ್ತು ನೀರಿನ ಕೊರತೆಯಿದ್ದರೆ ಹುಲಿಗಳ ಸಂಖ್ಯೆ ನೈಸರ್ಗಿಕವಾಗಿ ಕಡಿಮೆಯಿದ್ದು, ಅವುಗಳ ಸಂಖ್ಯೆ ಹೆಚ್ಚುವುದಿಲ್ಲ. ಇದನ್ನು ಮಲೆಮಹದೇಶ್ವರಬೆಟ್ಟ, ಕಾವೇರಿ ವನ್ಯಜೀವಿಧಾಮ ಮತ್ತಿತರ ಪ್ರದೇಶಗಳಲ್ಲಿ ನಿರ್ದಿಷ್ಟವಾಗಿ ಕಾಣಬಹುದು. ಮಹದೇಶ್ವರಬೆಟ್ಟ, ಕಾವೇರಿ ವನ್ಯಜೀವಿ ಧಾಮದಲ್ಲಿ ನಡೆಸಿರುವ ಅಧ್ಯಯನಗಳ ಪ್ರಕಾರ, ಈ ಎರಡು ವನ್ಯಜೀವಿಧಾಮಗಳಲ್ಲಿ 12–15 ಹುಲಿಗಳಿವೆ. ಒಂದಕ್ಕೊಂದು ಹೊಂದಿಕೊಂಡಿರುವ ಈ ವನ್ಯಜೀವಿಧಾಮಗಳ ಒಟ್ಟು ಭೂ ವಿಸ್ತೀರ್ಣ 1,991 ಚ.ಕಿ.ಮೀ. (ಸುಮಾರು 4,91,987 ಎಕರೆ).

ಮಲೆಮಹದೇಶ್ವರ ಮತ್ತು ಕಾವೇರಿ ವನ್ಯಜೀವಿಧಾಮಗಳಂತೆಯೇ ಭೌಗೋಳಿಕವಾಗಿ ಕೂಡಿಕೊಂಡಿರುವ ಬಂಡೀಪುರ ಮತ್ತು ನಾಗರಹೊಳೆ ಹುಲಿ ಯೋಜನಾ ಪ್ರದೇಶಗಳ ಒಟ್ಟು ವಿಸ್ತೀರ್ಣ 1,771 ಚ.ಕಿ.ಮೀ. (ಸುಮಾರು 4,37,624 ಎಕರೆ). ಇತ್ತೀಚಿನ ವರದಿಗಳ ಪ್ರಕಾರ, ಇಲ್ಲಿರುವ ಹುಲಿಗಳ ಸಂಖ್ಯೆ 288. ಅಂದರೆ, ಮಲೆಮಹದೇಶ್ವರ ಹಾಗೂ ಕಾವೇರಿ ವನ್ಯಜೀವಿಧಾಮಗಳಿಗಿಂತ 200 ಚ.ಕಿ.ಮೀ. ಕಡಿಮೆ ಇರುವ ಪ್ರದೇಶಕ್ಕಿಂತ ಸುಮಾರು 20 ಪಟ್ಟು ಹೆಚ್ಚು ಹುಲಿಗಳು ಬಂಡೀಪುರ-ನಾಗರಹೊಳೆಯಲ್ಲಿವೆ. ಇಲ್ಲಿ ಹಲವು ದಶಕಗಳಿಂದ ಆಗಿರುವ ರಕ್ಷಣಾ ಕಾರ್ಯಗಳು ಮತ್ತು ಹುಲಿಗಳ ಆವಾಸಸ್ಥಾನಗಳ ನಿರ್ವಹಣೆಯಿಂದ ಈ ಪ್ರದೇಶದಲ್ಲಿ ಹುಲಿಗಳ ಸಂಖ್ಯೆ ಪಾರಿಸರಿಕ ಸಮತೋಲನದ ಮಟ್ಟ ತಲುಪಿವೆ ಅಥವಾ ಅದಕ್ಕಿಂತ ಹೆಚ್ಚಾಗಿವೆ. ಇದರ ಪರಿಣಾಮವಾಗಿ ಪ್ರಾಯದ ಹುಲಿಗಳು ಚಾಮರಾಜನಗರ, ಮೈಸೂರು ಮತ್ತು ಕೊಡಗು ಜಿಲ್ಲೆಯ ಸಣ್ಣಪುಟ್ಟ ಕಾಡುಗಳು ಅಥವಾ ಕೃಷಿ ಪ್ರದೇಶಗಳಿಗೆ ವಲಸೆ ಹೋಗುತ್ತಿವೆ. ಈ ಸಣ್ಣಪುಟ್ಟ ಕಾಡುಗಳು ಅಥವಾ ಕೃಷಿ ಪ್ರದೇಶ ಹುಲಿಗಳಿಗೆ ಪಾರಿಸರಿಕ ಮತ್ತು ಸಾಮಾಜಿಕವಾಗಿ ಸೂಕ್ತ ಪ್ರದೇಶಗಳಲ್ಲ. ಅಲ್ಲಿ ಅವುಗಳಿಗೆ ಬೇಕಿರುವಷ್ಟು ನೈಸರ್ಗಿಕ ಆಹಾರ ಸಿಗದಿರುವುದರಿಂದ, ಅವು ಹೆಚ್ಚಾಗಿ ಜಾನುವಾರುಗಳ ಮೇಲೆ ಅವಲಂಬಿತವಾಗಿವೆ. ಇದು ಸ್ಥಳೀಯರನ್ನು ತೊಂದರೆಗೆ ಸಿಲುಕಿಸಿದೆ ಮತ್ತು ಕೃಷಿ ಪ್ರದೇಶಗಳಲ್ಲಿ ಹುಲಿಗಳಿರುವುದು ಜನರನ್ನು ಆತಂಕಕ್ಕೀಡು ಮಾಡಿದೆ.

ನಾವು ಪಾರಿಸರಿಕ ಮತ್ತು ಸಾಮಾಜಿಕ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಬಂಡೀಪುರ-ನಾಗರಹೊಳೆಯಲ್ಲಿ ಹುಲಿಗಳ ಸಂಖ್ಯೆಯನ್ನು ಕೃತಕವಾಗಿ ಹೆಚ್ಚಿಸುವ ಕಾರ್ಯ ವಿಧಾನಗಳನ್ನು ಅಳವಡಿಸಿಕೊಂಡಿದ್ದೇವೆ. ಸಾಮಾಜಿಕ ಮಾಧ್ಯಮಗಳ ಒತ್ತಡಕ್ಕೆ ಮಣಿದು ಅವುಗಳಿಗೆ ಚಿಕಿತ್ಸೆ ನೀಡಿ, ಅವುಗಳ ನೈಸರ್ಗಿಕ ಮರಣ ಪ್ರಮಾಣಕ್ಕೆ ಅವಕಾಶ ಕೊಡದೆ ಸಂಖ್ಯೆಯನ್ನು ಅನೈಸರ್ಗಿಕವಾಗಿ ಹೆಚ್ಚಿಸುತ್ತಿದ್ದೇವೆ. ಸಾಕುಪ್ರಾಣಿಗಳು ಮತ್ತು ವನ್ಯಜೀವಿಗಳ ಬಗ್ಗೆ ಇರುವ ವ್ಯತ್ಯಾಸಗಳನ್ನು ಅರಿತುಕೊಳ್ಳದೆ, ಹುಲಿಗಳನ್ನು ಸಾಕುಪ್ರಾಣಿಗಳ ದೃಷ್ಟಿಕೋನದಿಂದ ನೋಡಲು ಪ್ರಾರಂಭಿಸಿದ್ದೇವೆ.

ಬಂಡೀಪುರದಲ್ಲಿ ಗಾಯಗೊಂಡು ಪತ್ತೆಯಾದ ಹೆಣ್ಣು ಹುಲಿಗೆ ನಾಲ್ಕು ಮರಿಗಳಿವೆ. ಈ ತಾಯಿ ಮತ್ತು ಮರಿಗಳು ಉಳಿಯುವುದು ಬಹು ಮುಖ್ಯವಾದರೂ, ಅವುಗಳು ನೈಸರ್ಗಿಕವಾಗಿ ಉಳಿಯಬೇಕೇ ಹೊರತು ಅವುಗಳನ್ನು ಕೃತಕವಾಗಿ ಬದುಕಿಸಿಕೊಳ್ಳುವ ಪ್ರಯತ್ನ ಮಾಡಿದರೆ, ಹುಲಿಗಳ ಸಂಖ್ಯೆಯನ್ನು ಅಸಹಜವಾಗಿ ಹೆಚ್ಚಿಸಿದಂತಾಗುತ್ತದೆ. ವೈಜ್ಞಾನಿಕ ಅಧ್ಯಯನಗಳ ಪ್ರಕಾರ ಹುಲಿಗಳು ಅಧಿಕವಾಗಿರುವ ಬಂಡೀಪುರ-ನಾಗರಹೊಳೆಯಂತಹ ಪ್ರದೇಶಗಳಲ್ಲಿ ವಾರ್ಷಿಕವಾಗಿ ಹುಲಿಗಳಲ್ಲಿ ಶೇ 25ರಷ್ಟು ನೈಸರ್ಗಿಕ ಮರಣ ಪ್ರಮಾಣವಿರುತ್ತದೆ. ಇದನ್ನು ತಡೆದರೆ, ಹುಲಿಗಳ ಸಂಖ್ಯೆ ಅವುಗಳಿಗಿರುವ ಆವಾಸಸ್ಥಾನಕ್ಕಿಂತ ಹೆಚ್ಚಾಗಿ ಜನವಸತಿ ಪ್ರದೇಶಗಳಿಗೆ ವಲಸೆ ಹೋಗಿ ತಮ್ಮ ವಸಾಹತು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತವೆ. ಇದು ಮಾನವ-ಹುಲಿ ಸಂಘರ್ಷದಂತಹ ಗಂಭೀರ ಸಮಸ್ಯೆಗೆ ಎಡೆ ಮಾಡಿಕೊಡುತ್ತದೆ.

ಇನ್ನೊಂದು ಗಂಭೀರ ಸಮಸ್ಯೆ, ಹುಲಿಗಳ ಆವಾಸಸ್ಥಾನಗಳ ಅವೈಜ್ಞಾನಿಕ ನಿರ್ವಹಣೆ. ವರ್ಷಪೂರ್ತಿ ವನ್ಯಜೀವಿಗಳಿಗೆ ನೀರು ಸಿಗುವ ಹಾಗೆ ಮಾಡಲು ಹೊಸ ಕೆರೆಗಳ ನಿರ್ಮಾಣ, ಕೊಳವೆಬಾವಿಗಳನ್ನು ತೋಡುವುದು ಮಾಡುತ್ತಿದ್ದೇವೆ. ವರ್ಷಪೂರ್ತಿ ನೀರು ಸಿಗುವು ದರಿಂದ ಹುಲಿಗಳಿಗೆ ಅವಶ್ಯಕವಾದ ಸಾರಂಗ ಗಳಂತಹ ಪ್ರಾಣಿಗಳು ಅಸ್ವಾಭಾವಿಕವಾಗಿ ವೃದ್ಧಿಸುತ್ತದೆ. ಋತುಮಾನಕ್ಕೆ ಅನುಗುಣವಾಗಿ ನೀರಿದ್ದರೆ, ದೈಹಿಕವಾಗಿ ಸಮರ್ಥ ಪ್ರಾಣಿಗಳು ಮಾತ್ರ ಬದುಕಿ, ಇನ್ನುಳಿದವು ಅಸುನೀಗಿ ಅವುಗಳ ಸಂಖ್ಯೆಯನ್ನು ನಿಸರ್ಗ ಪಾರಿಸರಿಕ ಮಟ್ಟದಲ್ಲಿ ಕಾಯ್ದುಕೊಳ್ಳುತ್ತದೆ.

ಸಾರಂಗಗಳ ಸಂಖ್ಯೆ ಹೆಚ್ಚಾದಾಗ ಹುಲಿಗಳ ಸಂಖ್ಯೆಯೂ ಹೆಚ್ಚುತ್ತದೆ. ಆದರೆ, ಅವುಗಳ ಆವಾಸಸ್ಥಾನದ ವ್ಯಾಪ್ತಿ ಹೆಚ್ಚಾಗುವುದಿಲ್ಲ. 5 ಜನರಿಗೆ ಸರಿಹೊಂದುವಂತೆ ಕಟ್ಟಿದ ಮನೆಯಲ್ಲಿ 15–20 ಜನರನ್ನು ತುರುಕಿದ ಹಾಗೆ ಆಗುತ್ತದೆ. ಇದರ ಪರಿಣಾಮವಾಗಿ ಹುಲಿಗಳು ಹೊಸ ವ್ಯಾಪ್ತಿಯನ್ನು ಹುಡುಕಿಕೊಂಡು, ತಾವು ಹುಟ್ಟಿರುವ ಪ್ರದೇಶವನ್ನು ಬಿಟ್ಟು ಕೃಷಿ ಪ್ರದೇಶಗಳಿಗೆ ಮತ್ತು ಚಿಕ್ಕಪುಟ್ಟ ಕಾಡುಗಳತ್ತ ವಲಸೆ ಹೋಗುವುದು ಪ್ರಾರಂಭವಾಗಿದೆ. ಹೀಗೆಯೇ ಮುಂದುವರಿದರೆ, ಈಗ ಮೈಸೂರು, ಮಡಿಕೇರಿ ತಲುಪಿರುವ ಹುಲಿಗಳು ಬೇರೆ ಬೇರೆ ಪ್ರದೇಶಗಳಿಗೆ ಹಬ್ಬುವ ಸಾಧ್ಯತೆಯಿದೆ. ವನ್ಯಜೀವಿ ಸಂರಕ್ಷಣಾ ದೃಷ್ಟಿಕೋನದಿಂದಷ್ಟೇ ನೋಡಿದರೆ ಇದು ಸಂಭ್ರಮಿಸುವ ವಿಚಾರವಾದರೂ, ಹೆಚ್ಚುತ್ತಿರುವ ಮಾನವ-ವನ್ಯಜೀವಿ ಸಂಘರ್ಷ, ಮತ್ತು ಅದನ್ನು ಸರಿಯಾಗಿ ನಿರ್ವಹಿಸದ ಹಿನ್ನೆಲೆಯಲ್ಲಿ ಅಧಿಕವಾಗುತ್ತಿರುವ ಹುಲಿಗಳನ್ನು ಸೂಕ್ತವಲ್ಲದ ಪ್ರದೇಶಗಳಲ್ಲಿ ತುರುಕಲು ಪ್ರಯತ್ನಿಸುವುದು ಪಾರಿಸರಿಕ ದೃಷ್ಟಿಕೋನದಿಂದಾಗಲೀ ಅಥವಾ ಸಾಮಾಜಿಕ ದೃಷ್ಟಿಕೋನದಿಂದಾಗಲೀ ಸರಿಯಲ್ಲ. ಈ ತರಹದ ಪ್ರದೇಶಗಳಲ್ಲಿ ಹುಲಿಗಳ ಇರುವಿಕೆಯಿಂದ ಹುಲಿಗಳಿಗೆ ಕೂಡ ತೊಂದರೆಯೇ. ಸಂಘರ್ಷ ಹೆಚ್ಚಾದಂತೆ ಹುಲಿಗಳ ಬಗ್ಗೆ ಸಮಾಜಕ್ಕಿದ್ದ ತಾಳಿಕೆಯ ಸೌಹಾರ್ದ ಕಡಿಮೆಯಾಗಿ, ಅದರ ವಿರುದ್ಧದ ಮನಃಸ್ಥಿತಿ ಮತ್ತು ನಡವಳಿಕೆ ಹೆಚ್ಚುತ್ತದೆ.

ಬೊಮ್ಮಲಾಪುರದ ಗ್ರಾಮಸ್ಥರು ತೆಗೆದುಕೊಂಡ ನಿಲುವು ಬಹುಶಃ ಹಲವು ವರ್ಷಗಳಿಂದ ಮಾನವ-ವನ್ಯಜೀವಿ ಸಂಘರ್ಷದ ಬಗ್ಗೆ ಅಂತರಂಗದೊಳಗೆ ಹುದುಗಿದ್ದ ಅಸಹಾಯಕ ಮನೋವೃತ್ತಿಯನ್ನು ತೋರಿಸುತ್ತಿರಬಹುದು. ಈಗಲಾದರೂ ಸಾಮಾಜಿಕ ಮಾಧ್ಯಮಗಳಲ್ಲಿ ತರುವ ಒತ್ತಡಕ್ಕೆ ಮಣಿಯದೆ, ವನ್ಯಜೀವಿಯ ಆವಾಸಸ್ಥಾನಗಳ ಅವೈಜ್ಞಾನಿಕ ನಿರ್ವಹಣೆಯನ್ನು ತಪ್ಪಿಸಬೇಕಾಗಿದೆ. ಬಹು ಮುಖ್ಯವಾಗಿ, ಆರ್ಥಿಕ ಕಾರಣಗಳಿಗೆ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ನಿಲ್ಲಿಸದಿದ್ದರೆ ಹುಲಿಗಳಿಗಾಗಲೀ ಸಮಾಜಕ್ಕಾಗಲೀ ಒಳಿತಾಗದು.

ಈಗಿನ ಸಂಘರ್ಷದ ಪರಿಸ್ಥಿತಿಗೆ ವನ್ಯಜೀವಿ ಆವಾಸಗಳ ಅವೈಜ್ಞಾನಿಕ ನಿರ್ವಹಣೆಯೂ ಕಾರಣ. ಈ ಧೋರಣೆ ಬದಲಾಯಿಸಿಕೊಂಡರೆ, ಮುಂಬರುವ ದಿನಗಳಲ್ಲಿ ಸಂಘರ್ಷಕ್ಕೊಳಗಾಗುವ ವನ್ಯಜೀವಿಗಳ ಸಂಖ್ಯೆಯಲ್ಲಿ ಸಮತೋಲನ ಕಾಣಬಹುದು. ಇದರಿಂದ ಇಲವಾಲ, ಬೊಮ್ಮಲಾಪುರ, ಇನ್ನಿತರ ಪ್ರದೇಶಗಳಿಗೆ ಹುಲಿಗಳು ಹೋಗುವುದು ಕಡಿಮೆಯಾಗಿ ಸಂಘರ್ಷ ತಗ್ಗುವ ದಿನಗಳನ್ನು ಕಾಣಬಹುದು. ಇಲ್ಲವಾದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗುವುದು, ಅದರ, ಮತ್ತು ಅರಣ್ಯ ಇಲಾಖೆಯ ವಿರುದ್ಧ ಸ್ಥಳೀಯ ಜನರ ಆಕ್ರೋಶ ಇನ್ನೂ ಹೆಚ್ಚಲಿದೆ.

ವಾಚಕರ ವಾಣಿ

'ಕಾನೂನು ಕ್ಲಿನಿಕ್' ಕ್ರಾಂತಿಕಾರಿ ನಡೆ

ಮೈಸೂರಿನ ಜಿಲ್ಲಾ ಸೈನಿಕ ಭವನದಲ್ಲಿ ವೀರ್ ಪರಿವಾರ್ ಸಹಾಯತಾ ಯೋಜನೆಯಡಿ 'ಉಚಿತ ಕಾನೂನು ಸೇವೆಗಳ ಕ್ಲಿನಿಕ್' ಪ್ರಾರಂಭಿಸಲಾಗಿದೆ. ಸೈನಿಕರ ನೆಮ್ಮದಿಯ ಜೀವನಕ್ಕಾಗಿ ಹಾಗೂ ಅವರ ಕುಟುಂಬದ ಸದಸ್ಯರ ಕಾನೂನಾತ್ಮಕ ಸಮಸ್ಯೆಗಳ ನಿವಾರಣೆಗಾಗಿ ಈ ಕ್ಲಿನಿಕ್ ಕಾರ್ಯ ನಿರ್ವಹಿಸಲಿದೆ. ರಾಜ್ಯ ಸರ್ಕಾರವು ರಾಜ್ಯದಾದ್ಯಂತ 'ನಮ್ಮ ಕ್ಲಿನಿಕ್' ಹೆಸರಿನಡಿ ಉಚಿತ ಆರೋಗ್ಯ ಸೇವೆ ನೀಡುತ್ತಿದೆ. ಇದೀಗ 'ಕಾನೂನು ಕ್ಲಿನಿಕ್' ಮೂಲಕ ಮತ್ತೊಂದು ಕ್ರಾಂತಿಕಾರಿ ಹೆಜ್ಜೆ ಇಟ್ಟಿದೆ.

ಕೆ.ವಿ. ವಾಸು, ಮೈಸೂರು

ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ

ಪ್ರೌಢಶಾಲಾ ಹಂತದಿಂದಲೇ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ ನೀಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿರುವುದು ಉತ್ತಮ ಬೆಳವಣಿಗೆ. ತರಬೇತಿಯ ಜೊತೆಗೆ ಪ್ರತಿ ವಿದ್ಯಾರ್ಥಿಗೆ ಉಪಾಹಾರ, ಪ್ರಯಾಣ ಭತ್ಯೆಯಾಗಿ ₹750 ನೀಡುವುದರಿಂದ ಬಡಮಕ್ಕಳಿಗೆ ಅನುಕೂಲವಾಗಲಿದೆ. ಪೋಷಕರಿಗೆ ಈ ತರಬೇತಿ ಬಗ್ಗೆ ಜಾಗೃತಿ ಮೂಡಿಸಬೇಕು. ಮಕ್ಕಳು ಮುಂದೆ ಓದಿ ಉದ್ಯೋಗವಿಲ್ಲದೆ ಅಲೆದಾಡುವುದಕ್ಕಿಂತ ಶಾಲಾ ಹಂತದಲ್ಲಿಯೇ ಅವರನ್ನು ಸ್ವಯಂ ಉದ್ಯೋಗಕ್ಕೆ ಸಜ್ಜುಗೊಳಿಸುವುದು ಮಹತ್ವದ ಕಾರ್ಯ. ಈ ಯೋಜನೆಯನ್ನು ಪದವಿ ಮಟ್ಟಕ್ಕೂ ವಿಸ್ತರಿಸಬೇಕು.

ಯಲ್ಲಪ್ಪ ಟಿ. ಗಲಗ್ಕರ್, ದೇವದುರ್ಗ

ದಂಡ ಹೊಂಡಕ್ಕೂ ಇಲ್ಲ, ಉಬ್ಬಿಗೂ ಇಲ್ಲ

ಬೆಂಗಳೂರಿನ ಜ್ಞಾನಭಾರತಿ ಆವರಣದ ಕೂಡುರಸ್ತೆ ಬಳಿ ಸ್ವರೂಪ್ ಹೆಸರಿನ ಬೈಕ್ ಸವಾರ ಹೆಲ್ಮೆಟ್ ಧರಿಸಿದ್ದರೂ ಅಸುನೀಗಿದ್ದು ಜಾಗೃತ ಸಮಾಜವೇ ತಗ್ಗಿಸಬೇಕಾದ ಸುದ್ದಿಯಾಗಿದೆ (ಪ್ರ.ವಾ., ಸೆಪ್ಟೆಂಬರ್ 15). ಈ ಅಪಘಾತಕ್ಕೆ ಕಾರಣರಾದವರೆಂದರೆ: ವೇಗ ತಡೆಗೆಂದು ಉಬ್ಬುರಸ್ತೆ ನಿರ್ಮಿಸಿ ಬಣ್ಣ ಬಳಿಯದೇ ಬಿಟ್ಟು ಹೋದ ಎಂಜಿನಿಯರ್ ಮತ್ತು ಮೇಲ್ವಿಚಾರಕ ಅಧಿಕಾರಿ; ಉಬ್ಬುಗಳು ಕಣ್ಣೆದುರೇ ಇದ್ದರೂ ಕ್ರಮಕೈಗೊಳ್ಳದ ಜ್ಞಾನಭಾರತಿ ಠಾಣೆಯ ಅಧಿಕಾರಿ ವರ್ಗ; ಉಬ್ಬುಗಳು ಕ್ಯಾಂಪಸ್‌ನಲ್ಲೇ ನೂರಾರಿದ್ದರೂ ಬಣ್ಣ ಬಳಿಯಲು ಒತ್ತಾಯಿಸದೆ ಓಡಾಡುವ ವಿದ್ಯಾವಂತರ ಸಮೂಹ; ನಜ್ಜುಗುಜ್ಜಾಗಬಲ್ಲ ಅಗ್ಗದ ಹೆಲ್ಮೆಟ್‌ಗಳ ಮಾರಾಟ, ಬಳಕೆಗೆ ಅನುಮತಿ ನೀಡುವ ರಸ್ತೆ ಸುರಕ್ಷಾ ಸಿಬ್ಬಂದಿ; ಕೊನೆಯದಾಗಿ ಈ ಸಾವಿಗೆ ಯಾರೂ ದಂಡ ತೆರದೆ, ಶಿಕ್ಷೆ ಅನುಭವಿಸದೆ, ಪಾಠವನ್ನೂ ಕಲಿಯದೆ ನುಣುಚಿಕೊಳ್ಳಬಹುದಾದ ನ್ಯಾಯ ವ್ಯವಸ್ಥೆ. ನಮ್ಮಲ್ಲಿ ಅವೈಜ್ಞಾನಿಕ ರಸ್ತೆ ಉಬ್ಬುಗಳಿಂದಾಗಿ ಜೀವ ತೆರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಹೊಂಡಗಳಿಗಂತೂ ಯಾರದೂ ತಲೆದಂಡವಿಲ್ಲ. ಉಬ್ಬಿಗೂ ಇಲ್ಲವೆ?

ನಾಗೇಶ ಹೆಗಡೆ, ಕೆಂಗೇರಿ

ಇಸ್ರೇಲ್ ದಾಳಿ ಕ್ಷಮೆಗೆ ಅರ್ಹವಲ್ಲ

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ಸಂಧಾನದಲ್ಲಿ ಕತಾರ್ ನೇತೃತ್ವ ಪ್ರಮುಖವಾಗಿದೆ. ಈ ಹೊತ್ತಿನಲ್ಲೇ ಕತಾರ್‌ನ ದೋಹಾ ಮೇಲೆ ಹಗಲು ಹೊತ್ತಿನಲ್ಲಿ ಇಸ್ರೇಲ್ ಸೇನೆಯು ನಡೆಸಿರುವ ದಾಳಿಯು ಕ್ಷಮೆಗೆ ಅರ್ಹವಲ್ಲ. ವಿಶ್ವದಲ್ಲಿ ಶಾಂತಿ ನೆಲೆಸಲಿ ಎಂಬುದೇ ಎಲ್ಲರ ಆಶಯ.

ಪರಮೇಶ್ವರ ಜೆ.ಎಂ., ಸಂಡೂರು

ಕಸಾಪ: ಎಲ್ಲ ಸ್ಥಾನಕ್ಕೂ ಚುನಾವಣೆ

ಕನ್ನಡ ಸಾಹಿತ್ಯ ಪರಿಷತ್ತಿಗೆ ಚುನಾವಣೆ ನಡೆಯುವಾಗ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಮತ್ತು ಎಲ್ಲಾ ಜಿಲ್ಲಾ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯುತ್ತಾ ಬಂದಿದೆ. ಆದರೆ, ತಾಲ್ಲೂಕು ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯುವುದಿಲ್ಲ. ಆಯ್ಕೆಯಾದ ಅಧ್ಯಕ್ಷರು ತಮಗೆ ಚುನಾವಣೆಯಲ್ಲಿ ಸಹಾಯ ಮಾಡಿದವರನ್ನು ತಾಲ್ಲೂಕು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ. ಹಾಗೆಯೇ ರಾಜ್ಯ ಅಧ್ಯಕ್ಷರು ತಮಗೆ ಬೇಕಾದವರನ್ನೇ ಕೇಂದ್ರ ಕಾರ್ಯದರ್ಶಿಯಾಗಿ ನೇಮಿಸಿಕೊಳ್ಳುತ್ತಾರೆ. ಪ್ರತಿ ಜಿಲ್ಲೆಯಲ್ಲೂ ಇದೇ ಪ್ರಕ್ರಿಯೆ ನಡೆದು ಕಾರ್ಯದರ್ಶಿ, ಪದಾಧಿಕಾರಿಗಳನ್ನು ನೇಮಿಸಿಕೊಳ್ಳುತ್ತಾರೆ. ಇದರ ಬದಲಿಗೆ, ಅಧ್ಯಕ್ಷರು ಸೇರಿದಂತೆ ಪ್ರತಿ ಪದಾಧಿಕಾರಿಯನ್ನು ಚುನಾವಣೆ ಮೂಲಕವೇ ಆಯ್ಕೆ ಮಾಡಬೇಕಿದೆ.

ನಂದೀಶ್ವರ ದಂಡೆ, ಹೊಸಪೇಟೆ

ಬಡಜನರ ಜಿಎಸ್‌ಟಿ ವಾಪಸ್ ನೀಡಿ

ಕೇಂದ್ರ ಸರ್ಕಾರವು ಜಿಎಸ್‌ಟಿ ತೆರಿಗೆ ಹಂತಗಳನ್ನು ಪರಿಷ್ಕರಿಸಿರುವುದು ಸ್ವಾಗತಾರ್ಹ. ಇದರಿಂದ ಬಡ ಮತ್ತು ಮಧ್ಯಮವರ್ಗದವರಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗಲಿದೆ. ದೇಶದಲ್ಲಿ 2017ರ ಜುಲೈನಿಂದ ಜಿಎಸ್‌ಟಿ ಜಾರಿಗೊಂಡಿದೆ. ಕೊರೊನಾ ಸಮಯದಲ್ಲಿ ಜನರು ಹೆಚ್ಚಿನ ಆರ್ಥಿಕ ಸಂಕಷ್ಟ ಅನುಭವಿಸಿದ್ದಾರೆ. ಸದ್ಯ ತೆರಿಗೆ ಹಂತಗಳ ಪರಿಷ್ಕರಣೆಯಾಗಿದೆ. ಹಾಗಾಗಿ, ಬಡಜನರಿಂದ ಹೆಚ್ಚಿನ ರೂಪದಲ್ಲಿ ಪಡೆದಿರುವ ಜಿಎಸ್‌ಟಿ ಹಣವನ್ನು ಕೇಂದ್ರ ಸರ್ಕಾರ ಯಾವುದಾದರೂ ರೂಪದಲ್ಲಿ ವಾಪಸ್ ನೀಡಲಿ.

ನರಸಿಂಹಮೂರ್ತಿ, ಚಂದಾಪುರ

ಅರ್ಹರಿಗೆ ಮೀಸಲಾತಿ ಲಭಿಸಲಿ

ಬಿ.ಆರ್. ಅಂಬೇಡ್ಕರ್ ಅವರ ಮೀಸಲಾತಿ ಪರಿಕಲ್ಪನೆಯು ಹಿಂದುಳಿದವರನ್ನು ಸಮಾಜಮುಖಿಯಾಗಿ ಮೇಲುಸ್ತರಕ್ಕೆ ತಂದು ಎಲ್ಲರಂತೆ ಬದುಕಲು ಅವಕಾಶ ನೀಡುವುದಾಗಿದೆ. ಆದರೆ, ಸಮಾಜದಲ್ಲಿ ತಮ್ಮದೇ ಛಾಪು ಮೂಡಿಸಿದರೂ ಮೀಸಲಾತಿಗೆ ಜೋತು ಬಿದ್ದು ಎಲ್ಲಾ ಆಯಾಮದಲ್ಲೂ ಹಿಂದುಳಿದವರನ್ನು ಕಡೆಗಣಿಸುತ್ತಲೇ ಬಂದಿರುವುದು ವಿಷಾದನೀಯ. ಈ ನಡುವೆ ಬೇರೆ ಧರ್ಮಕ್ಕೆ ಮತಾಂತರಗೊಂಡರೂ ಮೂಲ ಜಾತಿ ಹೆಸರಿನಡಿ ಸೌಲಭ್ಯ ಪಡೆಯಲು ಹವಣಿಸುವುದು ಅಕ್ಷಮ್ಯ.

ಆಕಾಶ್ ನವಲಗಣ್ಣ, ಬಾಗಲಕೋಟೆ

ಚುರುಮುರಿ

ಪ್ರಜಾ ಫಜೀತಿ

• ಮಣ್ಣೆ ರಾಜು

'ಗುರೂಜಿ, ಸುಖ, ಶಾಂತಿ, ನೆಮ್ಮದಿ ಇಲ್ಲ...' ಸುಮಿ ಸಂಕಟ ಹೇಳಿಕೊಂಡಳು.

'ಯಾಕಮ್ಮಾ, ಗಂಡ-ಹೆಂಡ್ತಿ ನಡುವೆ ಹೊಂದಾಣಿಕೆ ಇಲ್ವೇ?' ಗುರೂಜಿ ಕೇಳಿದರು.

'ಹೊಂದಾಣಿಕೆಯ ಸಮಸ್ಯೆ ನಮ್ಮದಲ್ಲ ಗುರೂಜಿ, ನಮ್ಮನ್ನಾಳುವ ಆಡಳಿತ ಪಕ್ಷ, ವಿಪಕ್ಷದವರ ನಡುವೆ ಹೊಂದಾಣಿಕೆ, ವಿಶ್ವಾಸವಿಲ್ಲ. ದಿನಬೆಳಗಾದರೆ ಬೈದಾಟ, ಕಿತ್ತಾಟ, ಜಗಳ, ರಗಳೆ ಮಾಡಿಕೊಂಡು ನೆಮ್ಮದಿ ಕೆಡಿಸಿಕೊಂಡಿದ್ದಾರೆ. ಪ್ರಭುಗಳು ಕ್ಷೇಮವಾಗಿದ್ದರಲ್ಲವೆ ಪ್ರಜೆಗಳು ಸೌಖ್ಯದಿಂದಿರಲು ಸಾಧ್ಯ?' ಅಂದ ಶಂಕ್ರಿ.

'ಅಪ್ಪ-ಅಮ್ಮನ ಜಗಳದಲ್ಲಿ ಕೂಸು ಬಡವಾದಂತೆ ಆಳುವ, ಕೇಳುವ ಪಕ್ಷಗಳ ಜಗಳದಲ್ಲಿ ಪ್ರಜೆಗಳು ಫಜೀತಿ ಪಡುತ್ತಿದ್ದಾರೆ'.

'ಧರ್ಮಸ್ಥಳದ ಕೇಸು, ದಸರಾ ವಿವಾದ, ಗಣೇಶೋತ್ಸವ ಗಲಾಟೆ ಮುಂದಿಟ್ಟುಕೊಂಡು ರಗಳೆ ಮಾಡ್ತಿದ್ದಾರೆ. ಇವು ಮುಗಿದ ಮೇಲೆ ಇನ್ನೊಂದು ಇಶ್ಯೂ ಹಿಡಿದು ಜಗಳಕ್ಕಿಳಿಯುತ್ತಾರೆ. ಪ್ರಜೆಗಳ ಕಷ್ಟ ಕೇಳೋದನ್ನೇ ಮರೆತಿದ್ದಾರೆ'.

'ತೆರಿಗೆ, ದಂಡ ಹಾಕೋದನ್ನು ಮಾತ್ರ ಮರೆತಿಲ್ಲ. ಟ್ರಾಫಿಕ್ ರೂಲ್ಸ್ ಉಲ್ಲಂಘನೆ ಮಾಡಿದರೆ ನಮಗೆ ದಂಡ ಹಾಕುವಂತೆ, ರಸ್ತೆ ಗುಂಡಿ ಮುಚ್ಚದ ಸರ್ಕಾರಕ್ಕೂ ದಂಡ ಹಾಕಬೇಕಲ್ವೆ ಗುರೂಜಿ?'

'ದೊರೆ ಮಾಡುವುದಕ್ಕೆ ದಂಡ ಇಲ್ಲ' ನಕ್ಕರು ಗುರೂಜಿ.

'ಸಾಮಾನ್ಯ ಪ್ರಜೆಗಳು ಜೀವನ ನಡೆಸೋದು ಕಷ್ಟವಾಗಿದೆ. ಬೆಲೆ ಏರಿಕೆ ಬರೆ, ತೆರಿಗೆ ಹೊರೆ ನಿಭಾಯಿಸಲಾಗದೆ ಪ್ರಜೆಗಳು ಕಣ್ಣು-ಬಾಯಿ ಬಿಡುತ್ತಿದ್ದಾರೆ'.

'ಪ್ರಜೆಗಳ ಕಷ್ಟ ಪರಿಹಾರದ ಕಡೆ ಪ್ರಭುಗಳು ಗಮನ ಹರಿಸಬೇಕು. ಆಡಳಿತ, ವಿಪಕ್ಷದವರು ಶಾಂತಿ, ಸಹನೆ, ಸಹಿಷ್ಣುತೆಯಿಂದ ಬಾಳಲು ನಾವು ಯಾವುದಾದರೂ ಪೂಜೆ, ಹೋಮ ಮಾಡಿಸಬೇಕಾ?'

'ಆಡಳಿತ, ವಿಪಕ್ಷಗಳು ಅತ್ತೆ-ಸೊಸೆ ಇದ್ದಂತೆ. ಅವು ಜಗಳ ಆಡಿಕೊಂಡೇ ಇರಬೇಕು... ಅವರು ಹೊಂದಾಣಿಕೆ ಮಾಡಿಕೊಂಡರೆ ಪ್ರಜೆಗಳಿಗೆ ಪ್ರಾಬ್ಲಂ ಜಾಸ್ತಿ!'

'ಹಾಗಾದ್ರೆ ನಾವು ಏನು ಮಾಡಬೇಕು?'

'ಸರ್ಕಾರ ನಂಬಿಕೊಳ್ಳದೆ ಸಂಸಾರ ನಡೆಸುವ ಜಾಣತನ ಕಲಿಯಬೇಕು...' ಗುರೂಜಿ ಇನ್ನೊಮ್ಮೆ ನಕ್ಕರು.

ಸಂಗತ

ಹೆಸರಾಯಿತು ಕಲ್ಯಾಣ; ಅಭಿವೃದ್ಧಿ ನಿತ್ರಾಣ

ಹೈದರಾಬಾದ್ ಕರ್ನಾಟಕ ಪ್ರದೇಶ 'ಕಲ್ಯಾಣ' ಎನ್ನುವ ಹೆಸರನ್ನು ತನ್ನೊಂದಿಗೆ ಸೇರಿಸಿಕೊಂಡಿದೆ. ಆದರೆ, ನಿಜವಾದ 'ಕಲ್ಯಾಣ' ಮರೀಚಿಕೆಯಾಗಿಯೇ ಉಳಿದಿದೆ.

• ಮಲ್ಲಿಕಾರ್ಜುನ ಕಡಕೋಳ

ದೇಶೀಯ ಆಳರಸ ಹೈದರಾಬಾದ್ ನಿಜಾಮನಿಂದ 1948ರ ಸೆ. 17ರಂದು ವಿಮೋಚನೆ ಪಡೆದ ಕನ್ನಡದ ಪ್ರದೇಶಗಳನ್ನು 'ಹೈದರಾಬಾದ್ ಕರ್ನಾಟಕ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಈ ಪರಕೀಯ ಹೆಸರು ವಚನಕಲ್ಯಾಣ ನೆಲದ ಭಾವಪ್ರಜ್ಞೆಗೆ ಉಚಿತ ಎನಿಸುತ್ತಿರಲಿಲ್ಲ. ಹಾಗಾಗಿ, 2019ರ 'ಹೈದರಾಬಾದ್ ಕರ್ನಾಟಕದ ವಿಮೋಚನಾ ದಿನ'ದ ಸಂದರ್ಭದಲ್ಲಿ, ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, 'ಕಲ್ಯಾಣ ಕರ್ನಾಟಕ' ಎಂದು ಮರು ನಾಮಕರಣ ಮಾಡಿದರು. ಅದು ಹೆಸರಿನ ಬದಲಾವಣೆ ಆಯಿತಷ್ಟೇ; ಸ್ಥಿತಿಗತಿಯಲ್ಲಿ ಯಾವ ಕಲ್ಯಾಣವೂ ಆಗಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಲ್ಯಾಣ ಕರ್ನಾಟಕದ ಕಲ್ಯಾಣಕ್ಕಾಗಿ ಆಯವ್ಯಯದಲ್ಲಿ ವಾರ್ಷಿಕ ₹5,000 ಕೋಟಿ ಅನುದಾನ ಘೋಷಣೆ ಮಾಡಿದ್ದಾರೆ. ಹಣವೇನೋ ಯಥೇಚ್ಛ. ಆದರೆ, ಯೋಜನೆಗಳ ಅನುಷ್ಠಾನದಲ್ಲಿನ ವೈಫಲ್ಯದಿಂದ 'ಗ್ರಾಮೀಣ ಕಲ್ಯಾಣ ಕರ್ನಾಟಕ' ಅಭಿವೃದ್ಧಿಯಲ್ಲಿ ಹಿನ್ನಡೆ ಕಾಣುತ್ತಲೇ ಇದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಂತೂ ಇಲ್ಲಿಯ ಜಿಲ್ಲೆಗಳಿಗೆ ಶೋಚನೀಯ ಸ್ಥಾನ.

ನೆನಪಿರಲಿ; ಕಲ್ಯಾಣ ಕರ್ನಾಟಕ ಇಬ್ಬರು ಮುಖ್ಯಮಂತ್ರಿಗಳನ್ನು ಕಂಡಿದೆ. ವೀರೇಂದ್ರ ಪಾಟೀಲರು ಎರಡು ಬಾರಿ ಮತ್ತು ಧರ್ಮಸಿಂಗ್ ಅವರು ಒಮ್ಮೆ ಮುಖ್ಯಮಂತ್ರಿ ಆಗಿದ್ದರು. ಧರ್ಮಸಿಂಗ್, ಜೇವರ್ಗಿ ವಿಧಾನಸಭಾ ಕ್ಷೇತ್ರವನ್ನು ಎಂಟು ಬಾರಿ ಪ್ರತಿನಿಧಿಸಿದ್ದರು, ದೀರ್ಘ ಅವಧಿಗೆ ಮಂತ್ರಿಯೂ ಆಗಿದ್ದರು. ಅವರು ಮುಖ್ಯಮಂತ್ರಿಯಾದ ಅವಧಿಯಲ್ಲಿ ತಾವು ಹುಟ್ಟಿ ಬೆಳೆದ ಮಣ್ಣಿನ ಋಣ ತೀರಿಸಲಾದರೂ ಜೇವರ್ಗಿ ಮತಕ್ಷೇತ್ರವನ್ನು 'ನಂದನವನ' ಮಾಡಬಹುದಿತ್ತು. ಕಡೆಯಪಕ್ಷ ಹತ್ತಾರು ಕೈಗಾರಿಕೆಗಳನ್ನು ಕ್ಷೇತ್ರಕ್ಕೆ ತರಬಹುದಿತ್ತು. 'ಮಲ್ಲಾಬಾದಿ ಏತ ನೀರಾವರಿ ಯೋಜನೆ' ಇಂದಿಗೂ ಪೂರ್ಣಗೊಂಡಿಲ್ಲ.

ಧರ್ಮಸಿಂಗ್ ತರುವಾಯ ಅವರ ಮಗ ಡಾ. ಅಜಯಸಿಂಗ್ ನಿರಂತರ ಮೂರನೇ ಬಾರಿ ಜೇವರ್ಗಿ ಕ್ಷೇತ್ರದ ಶಾಸಕರಾಗಿದ್ದಾರೆ. ಏಳು ಜಿಲ್ಲೆಗಳ ವ್ಯಾಪ್ತಿಯ 'ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ'ಯ ಅಧ್ಯಕ್ಷರೂ ಆಗಿದ್ದಾರೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿಯ ಸಿಂಹಪಾಲು ಅಧಿಕಾರ, ಮಂಡಳಿ ಅಧ್ಯಕ್ಷರ ಕೈಯಲ್ಲೇ ಇರುತ್ತದೆ. ಮೇಲಾಗಿ, ಪಂಚಾಯತ್‌ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಕಲಬುರ್ಗಿಯವರು. ಆದಾಗ್ಯೂ, ಸಕಾರಾತ್ಮಕ ಫಲಿತಾಂಶಗಳು ಏಕೆ ಫಲಿಸುತ್ತಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ.

ಜೇವರ್ಗಿ ಕ್ಷೇತ್ರಕ್ಕೆ ಸೇರಿದ ನನ್ನೂರು ಕಡಕೋಳದ ಪರಿಸ್ಥಿತಿಯನ್ನೇ ನೋಡಿ. ಗ್ರಾಮ ಪಂಚಾಯಿತಿ ಕೇಂದ್ರವಾಗಿರುವ ನಮ್ಮೂರಲ್ಲಿ ಸರ್ಕಾರಿ ಪ್ರೌಢಶಾಲೆ ಇದೆ. ಅದು ಸ್ಥಾಪನೆಯಾಗಿ ಹದಿನೆಂಟು ವರ್ಷ ಕಳೆದರೂ ವಿದ್ಯುತ್ತಿನ ಬೆಳಕನ್ನು ಕಂಡಿಲ್ಲ. ವಿದ್ಯುತ್ ಸಂಪರ್ಕ ಇಲ್ಲದ ಕಾರಣಕ್ಕೆ 'ಸ್ಮಾರ್ಟ್ ಕ್ಲಾಸ್' ಸೇರಿದಂತೆ ಅನೇಕ ಮಹತ್ವದ ಅವಕಾಶಗಳಿಂದಲೂ ಶಾಲೆ ವಂಚಿತ. ಸಾರಿಗೆ ಸೌಕರ್ಯ ಇಲ್ಲದ ಕಾರಣ, ಐದಾರು ಹಳ್ಳಿಗಳಿಂದ ಮಕ್ಕಳು ಕಾಲ್ನಡಿಗೆಯಲ್ಲೇ ಶಾಲೆಗೆ ಬರುತ್ತಾರೆ.

ಗ್ರಾಮೀಣ ಜನಾರೋಗ್ಯದ ಜೀವಾಳವೇ ಆಗಬೇಕಿರುವ 'ಆರೋಗ್ಯ ಉಪಕೇಂದ್ರ'ದ ಕಟ್ಟಡವೇನೋ ಇದೆ. ಆದರೆ, ಮಹಿಳಾ ಸಿಬ್ಬಂದಿ ವಾಸಿಸಲು ಮೂಲ ಸೌಕರ್ಯಗಳಿಲ್ಲದೇ ಅದು ಹುಟ್ಟಿದಾಗಿಂದಲೂ ಸಿಬ್ಬಂದಿ ವಾಸವಾಗಿಲ್ಲ. ಕಟ್ಟಡದ ಸುತ್ತಲಿನ ಪರಿಸರ ತಿಪ್ಪೇಗುಂಡಿ, ಹಂದಿಗಳ ಆವಾಸಸ್ಥಾನ. ಜಡ್ಡುಜಾಪತ್ರೆಗೆ ದೀಡು ಹರದಾರಿ ದೂರದ ಯಡ್ರಾಮಿಯ ಖಾಸಗಿ ದವಾಖಾನೆಗಳೇ ನಮ್ಮೆಲ್ಲ ಹಳ್ಳಿಗಳಿಗೆ ಗತಿ.

ನಮ್ಮೂರ ಹೆಣ್ಣುಮಕ್ಕಳು ದೇಹಬಾಧೆ ತೀರಿಸಿಕೊಳ್ಳಲು ಇವತ್ತಿಗೂ ಕತ್ತಲೆಗಾಗಿ ಕಾಯುತ್ತಾರೆ. ಊರ ಮುಂದೆಯೇ ಹಿರೇಹಳ್ಳ ತುಂಬಿ ಹರಿಯುತ್ತಿದ್ದರೂ ಪರಿಶುದ್ಧ ಕುಡಿಯುವ ನೀರಿನ ಬವಣೆ ತೀರಿಲ್ಲ. ಈ ಬಾರಿಯ ರಣಮಳೆಯಿಂದಾಗಿ ಬೆಳೆಗಳು ಕೊಳೆತಿವೆ. ನಮಗೆ ಅನಾವೃಷ್ಟಿಯ ಒಣ 'ಬರ'ದಂತೆ ಅತಿವೃಷ್ಟಿಯ ಹಸೀ 'ಬರ'ವೂ ಘೋರವೇ. ಇವು ಕೇವಲ ನನ್ನೂರಿನ ಕಥೆಗಳು ಮಾತ್ರವಲ್ಲ, ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಯ ಹಳ್ಳಿಗಳ ವ್ಯಥೆಗಳೂ ಹೌದು. ಕೆಲವು ಊರುಗಳಲ್ಲಿ ಪರಿಸ್ಥಿತಿ ಮತ್ತಷ್ಟು ದಾರುಣ.

ಕಲ್ಯಾಣ ಕರ್ನಾಟಕ ಭಾಗದ ಸವಾಲುಗಳನ್ನು ಎದುರಿಸಲು ಪ್ರತ್ಯೇಕ 'ಕಲ್ಯಾಣ ಕರ್ನಾಟಕ ಗ್ರಾಮಾಭಿವೃದ್ಧಿ ನೀತಿ' ರಚನೆಯ ಅಗತ್ಯವಿದೆ. ತನ್ಮೂಲಕವಾದರೂ ನಮ್ಮ ನೆಲದ ಸಂವೇದನಾಶೀಲ ಅನನ್ಯತೆ ಮತ್ತು ಸಂಕಟಗಳನ್ನು ಗುರುತಿಸುವಂತಾಗಬೇಕಿದೆ.

ಕಲ್ಯಾಣ ಕರ್ನಾಟಕ ಭಾಗದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಅವಕಾಶ ಕಲ್ಪಿಸುವ ಆರ್ಟಿಕಲ್ 371 (ಜೆ) ಕಾರಣದಿಂದಾಗಿ ಒಂದಷ್ಟು ಅನುಕೂಲವಾಗಿದೆ. ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಸೀಟುಗಳ ಹಂಚಿಕೆ, ಉದ್ಯೋಗಗಳಲ್ಲಿ ಅವಕಾಶಗಳು ಸಿಗುತ್ತಿವೆ. ಆದರೆ, ಈ ಭಾಗದ ಗ್ರಾಮೀಣರು ಗುಳೆ ಹೋಗುವುದನ್ನು ಯಾವ ಸರ್ಕಾರದಿಂದಲೂ ತಡೆಯಲಾಗಿಲ್ಲ. ಕಾರ್ಪೊರೇಟ್ ಮಾದರಿಯ ವಿಶ್ವವಿದ್ಯಾಲಯ, ವಿಮಾನ ನಿಲ್ದಾಣ ಮೊದಲಾದ ನಗರಮುಖಿ ಅಭಿವೃದ್ಧಿ ಯೋಜನೆಗಳ ಅಬ್ಬರ ಒಂದೆಡೆಯಾದರೆ, ಇನ್ನೊಂದೆಡೆ ಕಲ್ಯಾಣ ಕರ್ನಾಟಕದ ಗ್ರಾಮಗಳು ಬಡತನ ಮತ್ತು ಪತನದ ಹಾದಿಯಲ್ಲಿವೆ.

ಕಣ್ಣಿಗೆ ನೆದರಾಗುವಷ್ಟು ರಾಜಕೀಯ ಅವಕಾಶಗಳು ಕಲ್ಯಾಣ ಕರ್ನಾಟಕಕ್ಕೆ ದೊರೆತಿವೆ. ಅದರಿಂದ, ರಾಜಕಾರಣಿ ಹಾಗೂ ಅಧಿಕಾರಿ ವರ್ಗದ ಕುಟುಂಬಗಳ ಕಲ್ಯಾಣವಾಗಿದೆ ಅಷ್ಟೇ. ನಿಜವಾದ ಕಲ್ಯಾಣ ಆಗುವುದೆಂದು?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

1,275 ರಾಜ್ಯದಲ್ಲಿರುವ ಪ್ರವಾಸಿ ಸ್ಥಳಗಳ ಸಂಖ್ಯೆ

ಪಟ್ಟಿಯಲ್ಲಿಲ್ಲ ಹಲವು ಪ್ರಸಿದ್ಧ ತಾಣಗಳು

ಪ್ರಜಾವಾಣಿ ವಾರ್ತೆ



ಆಧಾರ: ಪ್ರವಾಸೋದ್ಯಮ ನೀತಿ, ಸದನದಲ್ಲಿ ಸಚಿವರ ಉತ್ತರ, ಸರ್ಕಾರಿ ಆದೇಶಗಳು

ರಾಜ್ಯ ಸರ್ಕಾರವು ಕಳೆದ ವರ್ಷದ ನವೆಂಬರ್‌ನಲ್ಲಿ ಜಾರಿಗೆ ತಂದಿರುವ ನೂತನ ಪ್ರವಾಸೋದ್ಯಮ ನೀತಿ 2024-29ರ ಅಡಿಯಲ್ಲಿ ರಾಜ್ಯದಲ್ಲಿ ಒಟ್ಟು 1,275 ಪ್ರವಾಸಿ ತಾಣಗಳನ್ನು ಗುರುತಿಸಿದೆ. ಪ್ರವಾಸೋದ್ಯಮ ಇಲಾಖೆಯು ಆಗಸ್ಟ್ 7ರಂದು ಈ ಸಂಬಂಧ ಆದೇಶ ಹೊರಡಿಸಿದ್ದು, ಜಿಲ್ಲಾವಾರು ಪ್ರವಾಸಿ ತಾಣಗಳ ಸಂಖ್ಯೆಗಳನ್ನು ಪಟ್ಟಿ ಮಾಡಿದೆ.

2020–26ರ ಪರಿಷ್ಕೃತ ನೀತಿಯಲ್ಲಿ 810 ತಾಣಗಳಿಗೆ ಮಾತ್ರವೇ ಸ್ಥಾನ ಸಿಕ್ಕಿತ್ತು. ಆದರೆ, ಹೊಸ ನೀತಿಯಲ್ಲಿ 465 ಹೆಚ್ಚು ಸ್ಥಳಗಳಿಗೆ ಮನ್ನಣೆ ಸಿಕ್ಕಿದೆ. ಜಿಲ್ಲಾವಾರು ಪಟ್ಟಿಯ ಪ್ರಕಾರ ಪ್ರಕಾರ, ಚಾಮರಾಜನಗರ ಜಿಲ್ಲೆಯು ಅತ್ಯಂತ ಕಡಿಮೆ, ಐದು ತಾಣಗಳನ್ನು ಹೊಂದಿದ್ದರೆ, ಮಂಡ್ಯ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು, 106 ಪ್ರವಾಸಿ ಸ್ಥಳಗಳನ್ನು ಗುರುತಿಸಲಾಗಿದೆ. ರಾಜಧಾನಿ ಬೆಂಗಳೂರಿನಲ್ಲಿ 27 ತಾಣಗಳಿವೆ.

ಅಚ್ಚರಿಯ ಸಂಗತಿ ಎಂದರೆ, ಕೆಲವು ಜಿಲ್ಲೆಗಳ ಪಟ್ಟಿಯಲ್ಲಿ ಈಗಾಗಲೇ ಪ್ರಸಿದ್ಧಿಗೆ ಬಂದಿರುವ ಪ್ರವಾಸಿ ತಾಣಗಳ ಹೆಸರು ಇಲ್ಲ. ಉದಾಹರಣೆಗೆ, ಮೈಸೂರು ಜಿಲ್ಲೆಯಲ್ಲಿ 13 ಪ್ರವಾಸಿ ತಾಣಗಳು ಇವೆ ಎಂದು ಹೊಸ ಪಟ್ಟಿಯಲ್ಲಿ ಹೇಳಲಾಗಿದೆ. ತಾಣಗಳ ವಿವರದಲ್ಲಿ ಮೈಸೂರು ಅರಮನೆ, ಚಾಮುಂಡಿ ಬೆಟ್ಟ, ಮೃಗಾಲಯ ಸೇರಿದಂತೆ ಹೆಚ್ಚಿನ ಜನರನ್ನು ಸೆಳೆಯುವ ಪ್ರವಾಸಿ ತಾಣಗಳ ಹೆಸರುಗಳಿಲ್ಲ. ನೆರೆಯ ಚಾಮರಾಜನಗರ ಜಿಲ್ಲೆಯ ವಿಷಯದಲ್ಲೂ ಅದೇ ರೀತಿ ಇದೆ. ವಾರ್ಷಿಕವಾಗಿ ಲಕ್ಷಾಂತರ ಪ್ರವಾಸಿಗರನ್ನು ಸೆಳೆಯುವ ಬಂಡೀಪುರ, ಬಿಳಿಗಿರಿರಂಗನಾಥಸ್ವಾಮಿ ದೇವಾಲಯ, ಮಹದೇಶ್ವರ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಮುಂತಾದ ಪ್ರಸಿದ್ಧ ತಾಣಗಳ ಹೆಸರುಗಳಿಲ್ಲ.

'ಹೊಸದಾಗಿ ಸೇರ್ಪಡೆಯಾಗಿರುವ ಪ್ರವಾಸಿ ತಾಣಗಳ ಹೆಸರುಗಳನ್ನು ಮಾತ್ರ ಪಟ್ಟಿಯಲ್ಲಿ ಬರೆಯಲಾಗಿದೆ. ಹಳೆಯ ತಾಣಗಳ ಹೆಸರುಗಳನ್ನು ಉಲ್ಲೇಖಿಸಿಲ್ಲ' ಎಂದು ಸ್ಥಳೀಯ ಅಧಿಕಾರಿಗಳು ಹೇಳುತ್ತಿದ್ದಾರೆ.

ಆದರೆ, ಬೇರೆ ಜಿಲ್ಲೆಗಳ ತಾಣಗಳ ಪಟ್ಟಿಯಲ್ಲಿ ಈಗಾಗಲೇ ಪ್ರಸಿದ್ಧಿ ಪಡೆದಿರುವ ಸ್ಥಳಗಳ ಹೆಸರುಗಳೂ ಇವೆ. ಉದಾಹರಣೆಗೆ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನಾಥಸ್ವಾಮಿ ದೇವಾಲಯ, ಬೃಂದಾವನ, ರಂಗನತಿಟ್ಟು, ಟಿಪ್ಪು ಬೇಸಿಗೆ ಅರಮನೆ ಮುಂತಾದ ತಾಣಗಳೂ ಪಟ್ಟಿಯಲ್ಲಿವೆ. ಪ್ರವಾಸಿಗರ ನೆಚ್ಚಿನ ಕೊಡಗು ಜಿಲ್ಲೆಯ ತಾಣಗಳ ಪಟ್ಟಿಯಲ್ಲಿ ಹೊಸ ತಾಣಗಳೊಂದಿಗೆ ಹಳೆಯ ಸ್ಥಳಗಳ ಹೆಸರುಗಳೂ ಇವೆ. ಉತ್ತರ ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲೂ ಈಗಾಗಲೇ ಗುರುತಿಸಿರುವ ಪ್ರವಾಸಿ ತಾಣಗಳೂ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ವಿಶ್ವವಿಖ್ಯಾತ ಹಂಪಿ ಇರುವ ವಿಜಯನಗರ ಜಿಲ್ಲೆಯಲ್ಲಿ ಹಿಂದಿನ 13 ಸ್ಥಳಗಳ ಜೊತೆಗೆ 29 ತಾಣಗಳನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ.

ಪ್ರವಾಸೋದ್ಯಮ ಇಲಾಖೆಯು ಆಗಸ್ಟ್ 7ರಂದು ಹೊರಡಿಸಿರುವ ಆದೇಶದಲ್ಲಿ 'ರಾಜ್ಯದ ಒಟ್ಟು 1,275 ಪ್ರವಾಸಿ ತಾಣಗಳು' ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಮಂಡಲ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸುವಾಗ, ಈ ಆದೇಶದೊಂದಿಗೆ ಜಿಲ್ಲಾವಾರು ಪ್ರವಾಸಿ ತಾಣಗಳ ವಿವರಗಳನ್ನು ಪ್ರವಾಸೋದ್ಯಮ ಸಚಿವ ಎಚ್‌.ಕೆ.ಪಾಟೀಲ ಅವರು ನೀಡಿದ್ದಾರೆ.



ಸಿಗುವುದೇ ಪ್ರವಾಸೋದ್ಯಮಕ್ಕೆ ಹೊಸ ರೂಪ?

ರಾಜ್ಯದ ಪ್ರವಾಸೋದ್ಯಮಕ್ಕೆ ಹೊಸ ರೂಪ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ 2024ರ ನವೆಂಬರ್‌ನಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ 2024–29 ಜಾರಿಗೆ ತಂದಿದೆ.

ದೇಶೀಯ, ಜಾಗತಿಕ ಪ್ರವಾಸಿಗರನ್ನು ಸೆಳೆಯುವುದು, ಪ್ರವಾಸೋದ್ಯಮ ಆಧಾರಿತ ಉದ್ಯೋಗ ಸೃಷ್ಟಿಸುವುದು, ಆರ್ಥಿಕ ಬೆಳವಣಿಗೆ, ಉದ್ಯಮಶೀಲತೆಗೆ ಚೈತನ್ಯ ತುಂಬುವುದು, ಪ್ರಾದೇಶಿಕ–ಪ್ರವಾಸೋದ್ಯಮ ಹೂಡಿಕೆ, ಕೌಶಲ ಅಭಿವೃದ್ಧಿ, ಪರಿಚಿತವಲ್ಲದ ಪ್ರೇಕ್ಷಣೀಯ ಸ್ಥಳಗಳನ್ನು ಹೊರಜಗತ್ತಿಗೆ ಪರಿಚಯಿಸುವುದು, ಪ್ರವಾಸಿ ಮಾರ್ಗದರ್ಶಕರನ್ನು ಪ್ರೋತ್ಸಾಹಿಸುವುದು, ಸ್ಥಳೀಯ–ಸಾಂಪ್ರದಾಯಿಕ ಕರಕುಶಲತೆ, ಪಾಕ ಪದ್ಧತಿ, ಸಂಸ್ಕೃತಿಗೆ ಪ್ರಚಾರ ನೀಡುವುದು ನೀತಿಯ ಪ್ರಮುಖ ಗುರಿ. 2029ರ ವೇಳೆಗೆ ಕರ್ನಾಟಕವನ್ನು ದೇಶಿಯ ಪ್ರವಾಸಿಗರು ಭೇಟಿ ನೀಡುವ ಅಗ್ರ ಮೂರು ರಾಜ್ಯಗಳಲ್ಲಿ ಒಂದು ಮತ್ತು ಹೆಚ್ಚು ವಿದೇಶಿ ಪ್ರವಾಸಿಗರು ಭೇಟಿ ನೀಡುವ ಮೊದಲ ಐದು ರಾಜ್ಯಗಳಲ್ಲಿ ಒಂದಾಗಿ ರೂಪಿಸುವ ಉದ್ದೇಶವನ್ನೂ ಇದು ಹೊಂದಿದೆ.

'ಒಂದು ಜಿಲ್ಲೆ, ಒಂದು ತಾಣ' ಎಂಬ ಕಲ್ಪನೆಯ ಅಡಿಯಲ್ಲಿ ಜಿಲ್ಲೆಗೊಂದು ಪ್ರವಾಸಿ ತಾಣವನ್ನು ಅಭಿವೃದ್ಧಿ ಪಡಿಸುವ ಮಹತ್ವಾಕಾಂಕ್ಷೆಯೂ ನೀತಿಯಲ್ಲಿದೆ.

ಹಿಂದಿನ ಪ್ರವಾಸೋದ್ಯಮ ನೀತಿಯು 18 ಪ್ರವಾಸೋದ್ಯಮ ಪರಿಕಲ್ಪನೆಗಳನ್ನು ಮುಂದಿಟ್ಟಿತ್ತು. ಹೊಸ ನೀತಿಯು ಇದಕ್ಕೆ ಏಳು ಹೊಸ ಪರಿಕಲ್ಪನೆಗಳನ್ನು ಸೇರ್ಪಡೆಗೊಳಿಸಿದ್ದು, ಒಟ್ಟು 25 ಪರಿಕಲ್ಪನೆಗಳನ್ನು ಪಟ್ಟಿ ಮಾಡಿದೆ. ಬುಡಕಟ್ಟು ಪ್ರವಾಸೋದ್ಯಮ, ವೈವಾಹಿಕ, ಪ್ರವಾಸೋದ್ಯಮ, ವಾರಾಂತ್ಯದ ಪ್ರವಾಸೋದ್ಯಮ, ಗಾಲ್ಫ್ ಪ್ರವಾಸೋದ್ಯಮ, ವೈದ್ಯಕೀಯ ಪ್ರವಾಸೋದ್ಯಮ, ಸಾಹಿತ್ಯ ಪ್ರವಾಸೋದ್ಯಮ ಮತ್ತು ಗ್ರಾಮೀಣ ಪ್ರವಾಸೋದ್ಯಮ ಹೊಸ ಪರಿಕಲ್ಪನೆಗಳು.

ಹೊಸ ನೀತಿಯು ಕರಾವಳಿ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡಿದ್ದು, ರಾಜ್ಯದ 320 ಕಿ.ಮೀ. ಉದ್ದದ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ. ಕರಾವಳಿ ಕರ್ನಾಟಕದ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ನೀಡಲು ವಿಶೇಷ ಆರ್ಥಿಕ ಪ್ಯಾಕೇಜ್ ರಚಿಸಲಾಗುವುದು ಎಂದೂ ಅದು ಹೇಳಿದೆ.

ಕರ್ನಾಟಕದ ಎಲ್ಲಾ ಹೆಲಿ ಟೂರಿಸಂ ಸ್ಥಳಗಳಿಗೆ ರೋಪ್‌ವೇ, ಕೇಬಲ್ ಕಾರ್‌ಗಳನ್ನು ಒದಗಿಸಲು ನಿರ್ಧರಿಸಲಾಗಿದೆ. ರೋಪ್ ವೇಗಳ ಸ್ಥಾಪನೆ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಅನುಕೂಲವಾಗುವಂತೆ ರೋಪ್‌ವೇ ಕಾಯ್ದೆಯನ್ನು ಜಾರಿಗೊಳಿಸುವ ಬಗ್ಗೆಯೂ ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ.

ಭೇಟಿ ನೀಡಿದ ಪ್ರವಾಸಿಗರು

	2023	2024
ದೇಶಿ	28.35 ಕೋಟಿ	30.46 ಕೋಟಿ
ವಿದೇಶಿ	4.01 ಲಕ್ಷ	4.85 ಲಕ್ಷ

1.5 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ

ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಪ್ರಸ್ತಾಪಿಸಲಾಗಿರುವ ಪ್ರೋತ್ಸಾಹ, ಸಹಾಯಧನ ಮತ್ತು ರಿಯಾಯಿತಿಗಳನ್ನು ನೀಡುವುದಕ್ಕಾಗಿ ₹1,350 ಕೋಟಿ ಅನುದಾನ ಬಿಡುಗಡೆಗೆ ಸರ್ಕಾರ ಅನುಮೋದನೆ ನೀಡಿದೆ. ₹8,000 ಕೋಟಿಗಳ ನೇರ ಹೂಡಿಕೆಯನ್ನು ಆಕರ್ಷಿಸುವ ಹಾಗೂ 1.5 ಲಕ್ಷ ಉದ್ಯೋಗವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ನೀತಿ ಹೊಂದಿದೆ.

ಮೂಲಸೌಕರ್ಯ: ಅದೇ ಸ್ಥಿತಿ, ಅದೇ ಗತಿ

ರಾಜ್ಯದಲ್ಲಿ ವೈವಿಧ್ಯಮಯವಾದ ಪ್ರವಾಸಿ ತಾಣಗಳಿವೆ. ಆದರೆ, ಬೆಂಗಳೂರು ಹೊರತುಪಡಿಸಿದರೆ, ಇತರ ಅನೇಕ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯಗಳ ಕೊರತೆ ಇದೆ ಎನ್ನುವ ದೂರು ವ್ಯಾಪಕವಾಗಿದೆ. ಅನೇಕ ಪ್ರವಾಸಿ ತಾಣಗಳಿಗೆ ಹೋಗಲು ಸೂಕ್ತ ರಸ್ತೆ ಸೌಕರ್ಯವೇ ಇಲ್ಲ. ಪ್ರವಾಸಿ ತಾಣಗಳಿಗೆ ಹೋದರೆ, ಉತ್ತಮ ಹೋಟೆಲ್, ಶೌಚಾಲಯ, ಕುಡಿಯುವ ನೀರು ದೊರೆಯುವುದೇ ಕಷ್ಟವಾಗಿದೆ. ಕೊರತೆ ಇರುವ ವ್ಯವಸ್ಥೆಗೇ ಅತಿ ಹೆಚ್ಚಿನ ಹಣವನ್ನು ವಸೂಲಿ ಮಾಡಲಾಗುತ್ತಿದೆ ಎನ್ನುವ ದೂರುಗಳೂ ಇವೆ.

ಮೂಲಸೌಕರ್ಯಗಳನ್ನು ಕಲ್ಪಿಸಲು ಸರ್ಕಾರವು ಹೆಚ್ಚಿನ ಹಣ ವಿನಿಯೋಗಿಸಬೇಕಿದೆ. ಕೆಲವೆಡೆ, ಹಣ ಖರ್ಚು ಮಾಡಿ ಒಂದಿಷ್ಟು ಸೌಲಭ್ಯಗಳನ್ನು ಒದಗಿಸಿದ್ದರೂ, ನಿರ್ವಹಣೆಯ ಸಮಸ್ಯೆ ಇದೆ. ಕೆಲವು ಪ್ರವಾಸಿ ತಾಣಗಳಲ್ಲಿ ಭ್ರಷ್ಟಾಚಾರವೂ ನಡೆಯುತ್ತಿದೆ.

'ಒಂದು ರಾಜ್ಯ, ಹಲವು ಜಗತ್ತು' ಎನ್ನುವುದು ರಾಜ್ಯದ ಪ್ರವಾಸೋದ್ಯಮ ಇಲಾಖೆಯ ಘೋಷವಾಕ್ಯ. ಅದಕ್ಕೆ ತಕ್ಕಂಥ ಪ್ರವಾಸಿ ತಾಣಗಳು ರಾಜ್ಯದಲ್ಲಿವೆ. ಆದರೆ, ಅವುಗಳನ್ನು ಗುರುತಿಸುವಲ್ಲಿ ಇಲಾಖೆ ಸೋತಿದೆ. ಪ್ರವಾಸೋದ್ಯಮ ಉತ್ತೇಜನಕ್ಕೆ ಅನೇಕ ಅವಕಾಶಗಳಿದ್ದರೂ, ಅವುಗಳನ್ನು ಸದ್ಬಳಕೆ ಮಾಡಿಕೊಂಡಿಲ್ಲ ಎನ್ನುವ ಅಭಿಪ್ರಾಯವಿದೆ. ರಾಮಾಯಣ ಸರ್ಕಿಟ್‌ನಂಥ ವ್ಯವಸ್ಥೆ ರೂಪಿಸಲು ಅವಕಾಶವಿದೆ.

ಪಾರಂಪರಿಕ ತಾಣವಾದ ಹಂಪಿಗೆ ಹೆಚ್ಚು ಒತ್ತು ಸಿಗುತ್ತಿದ್ದು, ಬೇಲೂರು, ಹಳೇಬೀಡು, ಪಟ್ಟದಕಲ್ಲು, ಐಹೊಳೆಗೆ ಅಷ್ಟು ಪ್ರಾಮುಖ್ಯ ಸಿಗುತ್ತಿಲ್ಲ ಎಂಬಂತಹ ದೂರು ರಾಜ್ಯದಾದ್ಯಂತ ಇರುವ ಪ್ರವಾಸಿ ತಾಣಗಳಿಗೆ ಸಂಬಂಧಿಸಿದಂತೆ ಕೇಳಿ ಬರುತ್ತಿದೆ.

ಐದು ವರ್ಷಕ್ಕೊಮ್ಮೆ ಪ್ರವಾಸೋದ್ಯಮ ನೀತಿ ಬದಲಾಗುತ್ತಿದ್ದರೂ, ಪ್ರವಾಸಿ ತಾಣಗಳು, ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದ್ದರೂ, ಮೂಲಸೌಕರ್ಯಗಳ ಕೊರತೆ ಮಾತ್ರ ನೀಗಿಲ್ಲ ಎನ್ನುವುದು ಉದ್ಯಮ ನಿರತರು, ಪ್ರವಾಸಿಗರ ದೂರು.

ರಾಷ್ಟ್ರೀಯ

'ಮದ್ಯ ಹಗರಣ: ಚೈತನ್ಯ ಬಘೇಲ್ ನೇರ ಭಾಗಿ'

ರಾಯಪುರ (ಪಿಟಿಐ): 'ಛತ್ತೀಸಗಢದಲ್ಲಿ ನಡೆದಿದೆ ಎನ್ನಲಾದ ಮದ್ಯ ಹಗರಣದಲ್ಲಿ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಮಗ ಚೈತನ್ಯ ಬಘೇಲ್ ನೇರವಾಗಿ ಭಾಗಿಯಾಗಿದ್ದು, ಹಗರಣದ ಮೂಲಕ ಬಂದ ₹1,000 ಕೋಟಿ ಹಣವನ್ನು ವೈಯಕ್ತಿವಾಗಿ ನಿರ್ವಹಿಸಿದ್ದಾರೆ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಿಸಿದೆ.

ಚೈತನ್ಯ ಅವರು ಈ ಜಾಲದ ಇತರ ಸದಸ್ಯರ ಜತೆಗೂಡಿ ಪಿತೂರಿ ನಡೆಸಿದ್ದಾರೆ ಮತ್ತು ಅಪರಾಧವನ್ನು ಮುಚ್ಚಿಹಾಕುವ ಪ್ರಯತ್ನಿಸಿದ್ದಾರೆ ಎಂದು ಹೇಳಿದೆ. ಜಿಲ್ಲಾ ಮತ್ತು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಿಗೆ ಸೋಮವಾರ ಸಲ್ಲಿಸಿದ ನಾಲ್ಕನೇ ಪೂರಕ ಪ್ರಾಸಿಕ್ಯೂಷನ್ ದೂರಿನಲ್ಲಿ ಇ.ಡಿ ಈ ಅಂಶಗಳನ್ನು ಉಲ್ಲೇಖಿಸಿದೆ.

ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಜುಲೈ 18ರಂದು ದುರ್ಗ್ ಜಿಲ್ಲೆಯ ಭಿಲಾಯ್ ಪಟ್ಟಣದಲ್ಲಿ ಚೈತನ್ಯ ಅವರನ್ನು ಬಂಧಿಸಿದ್ದರು. ಅದಕ್ಕೂ ಮೊದಲು ಅವರ ಮನೆಯಲ್ಲಿ ಶೋಧ ನಡೆಸಿದ್ದರು.

ಭೂಪೇಶ್ ಬಘೇಲ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದ (2019ರಿಂದ 2022) ಅವಧಿಯಲ್ಲಿ ₹2,500 ಕೋಟಿ ಮೊತ್ತದ ಮದ್ಯ ಹಗರಣ ನಡೆದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಇದುವರೆಗೆ ಒಂದು ಪ್ರಾಸಿಕ್ಯೂಷನ್ ದೂರು ಅಲ್ಲದೆ, ನಾಲ್ಕು ಹೆಚ್ಚುವರಿ ದೂರುಗಳನ್ನು ಸಲ್ಲಿಸಿದೆ. 'ಈ ಹಗರಣದಿಂದಾಗಿ ರಾಜ್ಯದ ಬೊಕ್ಕಸಕ್ಕೆ ತೀವ್ರ ನಷ್ಟವಾಗಿದೆ' ಎಂದು ಹೇಳಿದೆ.

ಉತ್ತಪ್ಪ, ಯುವರಾಜ್ ಸಿಂಗ್, ಸೋನು ಸೂದ್‌ಗೆ ಇ.ಡಿ ಸಮನ್ಸ್


ರಾಬಿನ್ ಉತ್ತಪ್ಪ

ಯುವರಾಜ್ ಸಿಂಗ್

ನವದೆಹಲಿ (ಪಿಟಿಐ): ಕಾನೂನುಬಾಹಿರ ಆನ್‌ಲೈನ್ ಬೆಟ್ಟಿಂಗ್ ಸಂಬಂಧ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಕ್ರಿಕೆಟಿಗರಾದ ರಾಬಿನ್ ಉತ್ತಪ್ಪ, ಯುವರಾಜ್ ಸಿಂಗ್ ಹಾಗೂ ನಟ ಸೋನು ಸೂದ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದೆ.

ಸೋನು ಸೂದ್

1xಬೆಟ್ ಆ್ಯಪ್‌ಗೆ ಸಂಬಂಧಿಸಿದಂತೆ ದೆಹಲಿಯ ಇ.ಡಿ ಕೇಂದ್ರ ಕಚೇರಿಯಲ್ಲಿ ಸೆ.22ರಂದು ಉತ್ತಪ್ಪ, 23ರಂದು ಯುವರಾಜ್ ಸಿಂಗ್, 24ರಂದು ಸೋನು ಸೂದ್ ಅವರ ವಿಚಾರಣೆ ನಡೆಸಲಾಗುತ್ತದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಹೇಳಿಕೆ ದಾಖಲಿಸಿಕೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇ.ಡಿ.ಯು ಈಗಾಗಲೇ ಕ್ರಿಕೆಟಿಗರಾದ ಸುರೇಶ್ ರೈನಾ, ಶಿಖರ್ ಧವನ್, ಟಿಎಂಸಿ ಮಾಜಿ ಸಂಸದೆ ಮಿಮಿ ಚಕ್ರವರ್ತಿ ಅವರ ವಿಚಾರಣೆ ನಡೆಸಿದೆ. ಬಂಗಾಳಿ ನಟ ಅಂಕುಶ್ ಹಜ್ರಾ (36) ಮಂಗಳವಾರ ಇ.ಡಿ. ಎದುರು ವಿಚಾರಣೆಗೆ ಹಾಜರಾಗಿದ್ದರು. ಆದರೆ, ನಟಿ ಊರ್ವಶಿ ರೌಟೇಲ (31) ವಿಚಾರಣೆಗೆ ಇನ್ನೂ ಹಾಜರಾಗಿಲ್ಲ ಎಂದು ಹೇಳಿದ್ದಾರೆ.

'ಒಂದೇ ವಿಳಾಸ: 4,271 ಮತದಾರರು'

ಲಖನೌ (ಪಿಟಿಐ): ಉತ್ತರ ಪ್ರದೇಶದ ಮತದಾರರ ಪಟ್ಟಿಯಲ್ಲಿ ದೊಡ್ಡ ಪ್ರಮಾಣದ ಲೋಪ ಇದೆ ಎಂದು ಆರೋಪಿಸಿರುವ ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ಮಹೋಬಾ ಜಿಲ್ಲೆಯ ಒಂದೇ ಮನೆಯ ವಿಳಾಸದಲ್ಲಿ 4,271 ಮತದಾರರು ನೋಂದಣಿಯಾಗಿದ್ದಾರೆ ಎಂದಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಹೋಬಾ ಜಿಲ್ಲೆಯ ಎರಡು ಮನೆಗಳ ವಿಳಾಸದಲ್ಲಿ ತಲಾ 243 ಮತ್ತು 185 ಮತದಾರರು ನೋಂದಣಿಯಾಗಿರುವುದು ಕಂಡುಬಂದಿದೆ ಎಂದು ಕಳೆದ ದಿನ ಹೇಳಿದ್ದೆ. ಇದೀಗ ಒಂದೇ ಮನೆಯ ವಿಳಾಸದಲ್ಲಿ 4,271 ಮತದಾರರು ನೋಂದಣಿಯಾಗಿರುವುದನ್ನು ಪತ್ತೆ ಮಾಡಿದ್ದೇನೆ' ಎಂದು ಹೇಳಿದ್ದಾರೆ.

ಬಿಜೆಪಿ ಮತ್ತು ಚುನಾವಣಾ ಆಯೋಗವು ಶಾಮೀಲಾಗಿರುವುದರಿಂದ ಉತ್ತರ ಪ್ರದೇಶದಲ್ಲಿ 'ಮತ ಕಳ್ಳತನ' ಆರಂಭವಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮೈಸೂರಿನ ಬಿ.ಎಂ. ಹ್ಯಾಬಿಟ್ಯಾಟ್ ಮಾಲ್‌ಗೆ ಸಂಬಂಧಿಸಿದ್ದು ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಮಾಲ್‌ನಲ್ಲಿದ್ದ ಹಲವು ಎಸ್ಕಲೇಟರ್‌ಗಳು ಏಕಕಾಲಕ್ಕೆ ಕುಸಿಯುವುದು ವಿಡಿಯೊದಲ್ಲಿದೆ. ಅವಘಡದಲ್ಲಿ ಅನೇಕರು ಮೃತಪಟ್ಟಿದ್ದಾರೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ ಇದೇ ವಿಡಿಯೊ ಅನ್ನು ಹಲವರು ಇಂತಹ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು; ಜತೆಗೆ, 'ಡಿಸಾಸ್ಟರ್ ಸ್ಟ್ರಕ್ಸ್' ಎನ್ನುವ ಯೂಟ್ಯೂಬ್ ಚಾನೆಲ್‌ನಲ್ಲಿ ಇದೇ ಜೂನ್ 10ರಂದು ಅಪ್‌ಲೋಡ್ ಮಾಡಲಾಗಿರುವ ವಿಡಿಯೊಗೆ ಸಂಪರ್ಕ ನೀಡಿತು. ಎರಡೂ ವಿಡಿಯೊಗಳು ಒಂದೇ ಆಗಿರುವುದು ದೃಢಪಟ್ಟಿತು. ವಿಡಿಯೊದ ಅಡಿಬರಹದಲ್ಲಿ ಯೂಟ್ಯೂಬ್ ಕ್ರಿಯೇಟರ್, 'ಈ ವಿಡಿಯೊ ಅನ್ನು ನಾನು ಎಐ ತಾಂತ್ರಿಕತೆಯ ನೆರವಿನಿಂದ ರೂಪಿಸಿದ್ದೇನೆ' ಎಂದು ಉಲ್ಲೇಖಿಸಿದ್ದಾರೆ. ಎಐ ಪತ್ತೆ ಸಾಧನವಾದ 'ಹೈವ್ ಮಾಡರೇಷನ್' ಮೂಲಕ ಪರಿಶೀಲಿಸಿದಾಗಲೂ ಇದು ಎಐ ನಿರ್ಮಿತ ವಿಡಿಯೊ ಎನ್ನುವುದು ಖಚಿತವಾಯಿತು. ಜತೆಗೆ, ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಮೈಸೂರಿನಲ್ಲಿ ಇಂಥ ಘಟನೆ ನಡೆದಿರುವ ಬಗ್ಗೆ ಯಾವ ಮಾಧ್ಯಮದಲ್ಲಿಯೂ ವರದಿಯಾಗಿಲ್ಲ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನೆಲಮುಗಿಲಿನ ಮಧ್ಯೆ

ನುಡಿ ಬೆಳಗು

ವಾಸುದೇವ ನಾಡಿಗ್

ಹದ್ದುಗಳ ನಡತೆಯೇ ಭಿನ್ನ. ಅವು ಗಿಳಿ, ಗುಬ್ಬಿ, ಕಾಗೆಗಳ ಹಾಗೆ ವಟ ವಟ ಗುಟ್ಟುವುದಿಲ್ಲ; ಸಾಧನೆಗೆ ಕೂತ ಮೌನ ತಪಸ್ವಿಯ ಹಾಗೆ ಅಥವಾ ಸಾಧಕರ ಹಾಗೆ ಕಾಣುತ್ತವೆ. ಲೋಕದ ಗದ್ದಲ ಎಲ್ಲ ಗೊತ್ತು. ಆದರೂ ಆಕಾಶದ ಸಖ್ಯ; ನೀರವ ಮತ್ತು ಎತ್ತರದ ಯಾನ. ಸಂತೆಯ ಜೊತೆಗೆ ಅಂಟಿಕೊಂಡಿದ್ದರೂ ಸಂತತನದ ಧ್ಯಾನ. ಬಾಳು ಮತ್ತು ಸಂಬಂಧಗಳನ್ನು ಒಂದಿಷ್ಟು ಅಂತರಗಳಲ್ಲಿ ಇಟ್ಟು ಪರಿಭಾವಿಸುವಂತೆ ಕಾಣುತ್ತದೆ ಹದ್ದಿನ ನಡೆ. ಎಷ್ಟು ಎತ್ತರ ಹಾರಿದರೂ ಊಟಕ್ಕೆ, ಹಸಿವಿಗೆ ನೆಲಕ್ಕೆ ಬರಲೇಬೇಕು; ಡೌನ್ ಟು ಅರ್ಥ್ ಅಂತೀವಲ್ಲ ಹಾಗೆ. ಸಾಮಾನ್ಯ ಜೀವನದ ನೆಲೆಗೆ ತಲೆಬಾಗಿದ ಹಾಗೆ. ಎಲ್ಲಕ್ಕೂ ಅದರದ್ದೇ ಒಂದು ವಿಶೇಷತೆ ಇದೆ. ಮೀನು ಅಕಾಶದಲ್ಲಿ ಹಾರಲಾರದು, ಹದ್ದು ನೀರಿನಲ್ಲಿ ಈಜಲಾರದು. ಪ್ರತಿ ಜೀವಕ್ಕೂ ಒಂದು ಗೌರವ, ಘನತೆ ಮತ್ತು ಅರ್ಥವಿದೆ. ಕುವೆಂಪು ಇದನ್ನೇ 'ಗೌರವಿಸು ಜೀವನವ ಗೌರವಿಸು ಚೇತನವ' ಅಂತ ಹೇಳಿದ್ದು. ಮರದಲ್ಲಿ ನೆಲ್ಲಿಕಾಯಿ, ಬಳ್ಳಿಯಲಿ ಕುಂಬಳಕಾಯಿ ಇರುವುದು. ಮರದಲ್ಲಿ ಕುಂಬಳಕಾಯಿ ಇದ್ದಿದ್ದರೆ ನಮ್ಮ ತಲೆಯ ಪಾಡೇನು? ಹದ್ದಿನ ಬಾಳಿನ ಹದ್ದೇ ವಿಸ್ತಾರವಾದದ್ದು ನೆಲ ಮತ್ತು ಮುಗಿಲಿನ ಮಧ್ಯದ ಪರ್ಯಟನ ಅದು.

ನಮ್ಮ ಬಾಳೂ ಕೂಡಾ ಹೀಗೆ; ಸಾಧ್ಯತೆಗಳನ್ನು ಅವಲಂಬಿಸಿದೆ. ಕನಸುಗಳನ್ನು ಸಲಹಬಲ್ಲುದೇ ವಿನಾ ಎಲ್ಲವೂ ನನಸಾಗದು. ಪ್ರಯತ್ನವಂತೂ ಸದಾ ಜಾರಿಯಲ್ಲೇ ಇರಬೇಕು. ಜೀವ ಮತ್ತು ಶಕ್ತಿಗೆ ತಕ್ಕ ಹಾಗೆ ಸಾಧ್ಯತೆಗಳು. ನಮ್ಮ ನಮ್ಮ ಪರಿಮಿತಿಗಳನ್ನು ಕರಾರುವಾಕ್ಕಾಗಿ ಅರಿಯುವುದೂ ಕೂಡಾ ವಿವೇಕವೇ ಅನಿಸುತ್ತದೆ. ಆದರೆ, ಹದ್ದಿನ ಮಾತೇ ಬೇರೆ. ಏರು ಮತ್ತು ಇಳಿ ವ್ಯಾಪಕವಾದುದು. ಸದಾ ಸುರಕ್ಷಿತ ವಲಯವನ್ನು ಧಿಕ್ಕರಿಸುವ ಹದ್ದುಗಳು ತಮ್ಮ ಮರಿಗಳಿಗೂ ಮುಳ್ಳು ಬೆಣಚು ಕಲ್ಲುಗಳ ಮೇಲೆ ನಿಲ್ಲಿಸಿ ಹಾರಲು ಕಲಿಸುತ್ತವೆ. ಸುರಕ್ಷಿತ ವಲಯದಿಂದ ಹೊರಬಂದರೆ ಮಾತ್ರ ಸಾಧನೆ ಸಾಧ್ಯ ಎಂಬ ಮಾತಿಗೆ.

ಆ ಮರಿಗಳು ಕುಪ್ಪಳಿಸಿ ಕುಪ್ಪಳಿಸಿ ಹಾರುತ್ತವೆ; ವಿಸ್ತಾರವಾದ ಕಣಿವೆ ಕಂದಕ ಬೆಟ್ಟ ತಪ್ಪಲು ಕಾಡುಗಳ ಮೇಲೆ ದಣಿವಿರದೆ ನಿರಂತರ. ಬಿದ್ದಲ್ಲೇ ಹಾಸಿಗೆ ಮೇಲೇ ಬಿದ್ದಿದ್ದರೆ ಈ ಎತ್ತರ ಸಾಧ್ಯವೇ ಇಲ್ಲ

ಹದ್ದುಗಳು ಕೂಡಾ ದಣಿಯುತ್ತವೆ, ಹಣ್ಣಾಗುತ್ತವೆ; ಹಾಗಂತ ಕುಸಿಯುವುದಿಲ್ಲ. ಬಾಳಿನ ಸಾಧ್ಯತೆಗಳನ್ನು ಮೊಟಕು ಗೊಳಿಸುವುದಿಲ್ಲ. ವಯಸ್ಸಾದಾಗ ಭಾರವಾದ ಮತ್ತು ಅಶಕ್ತ ರೆಕ್ಕೆಗಳನ್ನು ತಾವೇ ಕಿತ್ತು ಎಸೆಯುತ್ತವೆ. ಕೊಕ್ಕನ್ನು ಬಂಡೆಗಲ್ಲಿಗೆ ಉಜ್ಜಿ ಮೊನಚುಗೊಳಿಸಿಕೊಳ್ಳುತ್ತವೆ. ಪಾದ ಉಗುರುಗಳನ್ನು ಮಸೆದುಕೊಳ್ಳುತ್ತವೆ. ಮತ್ತೆ ಹಗುರಾಗಿ ಹೊಸದಾಗಿ ಹಾರಲು ಅಣಿಯಾಗುತ್ತವೆ. ಬದುಕು ಮುಗಿಯುವುದಿಲ್ಲ, ನಾವು ಮುಗಿಸಿಕೊಳ್ಳುತ್ತೇವೆ ಅಷ್ಟೇ. ಆದರೆ ಹದ್ದುಗಳು ಬಾಳನ್ನು ಮುಗಿಯಗೊಡಲು ಬಿಡದೆ ವಿಸ್ತರಿಸಿಕೊಳ್ಳುತ್ತವೆ. ನಿರುತ್ಸಾಹ, ವಿಷಾದ, ವೃದ್ಧಾಪ್ಯ, ಅಶಕ್ತತೆ, ಅಸಾಧ್ಯತೆ ಎಂದೆಲ್ಲ ಗೊಣಗುವ ನಮಗೆ ಹದ್ದಿನ ಈ ಹದ್ದು ಬಹುದೊಡ್ಡ ಪಾಠ.

ಗುಂಡಣ್ಣ

ಪದಬಂಧ 6167

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತೆನಾಲಿ ರಾಮನಿಗಿದ್ದ ಬಿರುದು (5)
4.ಈತ ಪಂಡಿತನಲ್ಲ! ಸಂಪ್ರದಾಯ ವಿರೋಧಿ! (3)
5.ಅವಸರವನ್ನು ಹೀಗೆ ಹೇಳಿ (3)
6.ಕೊನೆಗೆ ಪಣವಿಟ್ಟು ಮಾಡಿದ ಮೋಸ (3)
8.ಅವನ ಜೊತೆಯಲ್ಲಿ ನೋಡಿರುವ ಸಮುದ್ರ (3)
9.ಒಂದೇ ಜಾತಿಗೆ ಸೇರಿದ್ದು (3)
11.ಓಬವ್ವನ ಆಯುಧ (3)
15.ಲಂಗ ಧರಿಸಿದಳನ್ನು ಬೆನ್ನಟ್ಟಿದ ದುರಾಚಾರಿ (3)
16.ಏರು ತಗ್ಗಿಲ್ಲದೆ ಸಮನಾಗಿರುವುದು (3)
17.ಕಳಿಸಿದರೂ ಹೀಗೆ ಮರಳಿ ಸಂಭವಿಸು! (5)

ಮೇಲಿಂದ ಕೆಳಕ್ಕೆ

1.ಪಾಂಡಿತ್ಯವನ್ನು ಹೊಂದಿದವಳು (3)
2.ಮೋಸಗಾರಿಕೆಯಿದು (4)
3.ವಿಧಿಯನ್ನು ಬರೆಯುವಾತ (3)
4.ಪಾಕದಲ್ಲಿರುವ ದೋಷ ಕಾಣಿಸಿತೇ? (3)
7.ಪದವಿಯನ್ನು ಕಳೆದುಕೊಳ್ಳುವಿಕೆ (4)
8.ವನದಲ್ಲಿರುವ ತೀರ್ಥಂಕರ (4)
10.ಜಗತ್ತಿಗೆ ಸಂಬಂಧಿಸಿದ್ದು (4)
12.ಕೆಲವರು ಮಾಡುವ ಕಾರ್ಯ (3)
13.ಮಗನಿಗೆ ಕಾಣಿಸುತ್ತಿರುವ ವೇದ (3)
14.ಯತಿಗೆ ಬಂದಿರುವ ಕೋಪ! (3)



6166ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶಪಥ 6.ಪ್ರಾಪ್ತವಯಸ್ಕ 7.ವಿದ್ರುಮ 8.ಸಮೀಕರಣ 13.ಕಾರ್ತೀಕ 14.ನಾಮಕರಣ 15.ಕರಾರು

ಮೇಲಿಂದ ಕೆಳಕ್ಕೆ:
2.ಪರಮಹಂಸ 3.ಬೆವರು 4.ತಸ್ಕರ 5.ನವಿರೆಳೆ 6.ಪ್ರಾಥಮಿಕಶಿಕ್ಷಣ 9.ಣರಕಾಜರಾ 10.ಕಟಕಟೆ 11.ಬಾನಾಡಿ 12.ತಾಕತ್ತು

ಸುಡೊಕು 6551

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8	3		6		2		4	
6		2				8		
			3		9		1	
4		8			5		2	
				1		4		7
2		5	4				6	
	5		8		3		9	
7		3				6		5
	8		7		6		3	

6550 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಸೆಪ್ಟೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಏಕಾದಶಿ ಗಂ. 23-40 **ನಕ್ಷತ್ರ:** ಪುನರ್ವಸು ಗಂ. 6-26 **ಯೋಗ:** ಪರಿಘಾ ಗಂ. 22-55 **ಕರಣ:** ಬವ ಗಂ. 11-58 ಸಿಂಹ ಮಾಸದ 33 ನೇ ದಿನ. **ಮಳೆ ನಕ್ಷತ್ರ :** ಉತ್ತರ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30 **ಸೂರ್ಯೋದಯ :** 06-23 **ಸೂರ್ಯಾಸ್ತ :** 06-27, **ಮುಸ್ಲಿಂ ದಿನಾಂಕ :** 24 ರಬಿಉಲ್ಲಾವಲ್, **ಅದೃಷ್ಟ ಸಂಖ್ಯೆ :** 5, 7

ಮೇಷ: ಕನಸುಗಳು ಕೈಗೂಡುವ ದಿನ ಇದಾಗಿದೆ. ಆಸ್ತಿ ವ್ಯವಹಾರಗಳಿಂದ ಉತ್ತಮ ಲಾಭ ಹಾಗೂ ವೃತ್ತಿ ಕ್ಷೇತ್ರದಲ್ಲಿ ನಿಷ್ಠೆ, ಪ್ರಾಮಾಣಿಕತೆಗೆ ಗೌರವ ಆದರಗಳು ಸಿಗಲಿವೆ. ಕಾರ್ಮಿಕ ವರ್ಗದವರ ಬೇಡಿಕೆಗಳು ಈಡೇರಲಿವೆ.

ವೃಷಭ: ವೃತ್ತಿ ಮಾಡುವ ಸ್ಥಳದಲ್ಲಿ ವಾದ ವಿವಾದಗಳು ನಡೆದರೂ, ಕಾರ್ಯ ಸಾಧನೆಗೆ ಅಡ್ಡಿಯಾಗದು. ಯಶಸ್ಸಿನ ಹೊಸ ಮಾರ್ಗಗಳು ಗೋಚರಿಸಲಿವೆ. ಸಾಂಸಾರಿಕವಾಗಿ ಅಥವಾ ವೈಯಕ್ತಿಕವಾಗಿ ನಿರ್ಧಾರ ಕೈಗೊಳ್ಳುವಿರಿ.

ಮಿಥುನ: ಸೃಜನಶೀಲ ಬರವಣಿಗೆಗಳಿಂದ ಖ್ಯಾತಿ ಮತ್ತು ಹಣ ಗಳಿಸುವಲ್ಲಿ ಯಶಸ್ವಿಯಾಗುವಿರಿ. ಮನೆಯಲ್ಲಿ ವಿವಾಹಕ್ಕೆ ಸಂಬಂಧ ಮಾತುಕತೆಗಳು ಹಿರಿಯರಲ್ಲಿ ಚರ್ಚೆಗೆ ಬರಲಿವೆ.

ಕರ್ಕಾಟಕ: ಬಣ್ಣ ಮಾರಾಟಗಾರರಿಗೆ ಹೆಚ್ಚಿನ ಲಾಭ ಬರಲಿದೆ. ಸಹೋದ್ಯೋಗಿಯ ನೆರವಿನಿಂದ ಕೆಲಸ ಕಾರ್ಯಗಳು ಶೀಘ್ರವಾಗಿ ಮತ್ತು ಅಚ್ಚುಕಟ್ಟಾಗಿ ಪೂರ್ಣಗೊಳ್ಳಲಿವೆ.

ಸಿಂಹ: ಸಂಸ್ಥೆಯ ಹೊಸ ಯೋಜನೆಯು ಬಹಳ ಸುಲಭವೆನಿಸಲಿದೆ. ಹಿಡಿತ ಸಾಧಿಸುವಲ್ಲಿ ಸಫಲರಾಗುವಿರಿ. ಆಕಸ್ಮಿಕ ಪ್ರಯಾಣ ಬೆಳೆಸಬೇಕಾಗಬಹುದು. ಯೋಗಾಭ್ಯಾಸದಿಂದ ಆರೋಗ್ಯವು ಚೆನ್ನಾಗಿರುವುದು.

ಕನ್ಯಾ: ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಅಗತ್ಯವಾಗಿ ಚರ್ಚೆ ನಡೆಸಿ ದಿನನಿತ್ಯದ ಆಗುಹೋಗುಗಳ ಬಗ್ಗೆ ಗಮನಹರಿಸಿ. ತೆರಿಗೆ ಇಲಾಖೆ ಸಿಬ್ಬಂದಿಗೆ ಕೆಲಸವಿರುವುದು. ನೆಮ್ಮದಿಯು ಪ್ರಾಪ್ತಿಯಾಗಲಿದೆ.

ತುಲಾ: ಸವಾಲನ್ನು ಎದುರಿಸುವ ಶಕ್ತಿ ಮತ್ತು ಸಾಮರ್ಥ್ಯ ಅಭಿವೃದ್ಧಿಯಾಗುವುದು. ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವ ನಿಮ್ಮಲ್ಲಿದೆ. ಕೀರ್ತಿ ಅರಸಿ ಬರುವುದು, ಆದರೂ ಬದುಕಿನಲ್ಲಿ ಸ್ಥಿರತೆಯ ಅಭಾವ ಕಾಣಲಿದೆ.

ವೃಶ್ಚಿಕ: ವ್ಯಾಪಾರ ಸುಧಾರಣೆಗೆ ಸಾಕಷ್ಟು ಅಡೆತಡೆಗಳು ಒದಗಿ ಬರುವುವು. ಉದ್ಯೋಗ ನಿಮಿತ್ತ ಪ್ರವಾಸ ಕೈಗೊಳ್ಳುವಿರಿ. ಆಸ್ತಿ ಕೈ ಸೇರಲಿದೆ. ನಿರ್ವಿಘ್ನವಾಗಿ ಕೆಲಸ ನೆರವೇರಲು ಮಹಾಗಣಪತಿಯನ್ನು ಆರಾಧಿಸಿ.

ಧನು: ದಂತ ವೈದ್ಯರಿಗೆ ಅನುಕೂಲಗಳಾಗುವುವು. ಮನೆಯ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಿ, ಕೆಲಸಗಳನ್ನು ಸಂಪೂರ್ಣಗೊಳಿಸಿಕೊಳ್ಳುವಿರಿ. ಪತ್ರಿಕೆಯವರ ಸಹಕಾರದಿಂದ ಪ್ರಚಾರ ಪಡೆದುಕೊಳ್ಳುವಿರಿ.

ಮಕರ: ಅಧಿಕಾರಿಗಳೊಂದಿಗೆ ಹೊಂದಿಕೊಳ್ಳುವ ಗುಣ, ಬುದ್ಧಿವಂತಿಕೆಯ ಸಾಮರ್ಥ್ಯ ಏಳಿಗೆಯಲ್ಲಿ ಮುಖ್ಯ ಪಾತ್ರವಹಿಸುವುದು. ಆಲೋಚನಾ ಸರಣಿಯನ್ನು ಜನರು ಇಷ್ಟಪಡುತ್ತಾರೆ. ಮಕ್ಕಳ ಓದಿನತ್ತ ಗಮನ ಹರಿಸಿ.

ಕುಂಭ: ನ್ಯಾಯವಾದಿಗಳಿಗೆ ಉತ್ತಮ ದಿನ. ಗುರುಹಿರಿಯರ ಆಶೀರ್ವಾದ ಪಡೆದು ಹೊಸ ಯೋಜನೆಗಳಿಗೆ ಚಾಲನೆ ನೀಡಬಹುದು. ಔಷಧಿಯ ವಸ್ತುಗಳಿಂದ ಆದಾಯ ಹೆಚ್ಚಿಸಿಕೊಳ್ಳುವಿರಿ.

ಮೀನ: ವ್ಯಾಪಾರದ ವ್ಯಾಪ್ತಿ ವಿಸ್ತರಿಸಿಕೊಳ್ಳಲು ಹಾಗೂ ಹೊಸ ಅವಕಾಶಗಳನ್ನು ಸಾಧಿಸಿಕೊಳ್ಳಲು ಉತ್ತಮ ಸಮಯ. ವಿದ್ಯಾರ್ಥಿಗಳು ಓದಿನ ಬಗ್ಗೆ ಗಮನ ವಹಿಸಬೇಕಾಗುವುದು. ನಿರೀಕ್ಷೆಗೂ ಮೀರಿದ ಫಲಿತಾಂಶವನ್ನು ಕಾಣುವಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,069
ಇಂದಿನ ಅಂತ್ಯ:	25,239
ದಿನದ ಗರಿಷ್ಠ:	25,261
	169

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹585

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹449-672
ದ್ವಿತಳಿ (ಬಿ.ವಿ)	₹325-819

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1350 (1350)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1420 (1420)
ಪಾಮೋಲಿನ್	₹1280 (1275)

ಅಡಿಕೆ ಧಾರಣೆ

ಸಾಗರ		ಸಿದ್ದಾಪುರ		ಯಲ್ಲಾಪುರ	
ಬಿಳಿಗೋಟು	18899-30370	ಬಿಳಿಗೋಟು	25311-33200	ಬಿಳಿಗೋಟು	14899-31099
ಚಾಲಿ	33419-39899	ಚಾಲಿ	36169-43500	ಚಾಲಿ	31299-44599
ಕೋಕ	24699-24699	ಕೋಕ	20199-28679	ಕೋಕ	10010-19601
ಕೆಂಪುಗೋಟು	33299-33299	ಕೆಂಪುಗೋಟು	26290-26788	ಕೆಂಪುಗೋಟು	24016-28899
ರಾಶಿ	45299-58129	ರಾಶಿ	42899-49229	ರಾಶಿ	44666-55869
ಸಿಪ್ಪೆಗೋಟು	19699-21099	ತಟ್ಟಿಬೆಟ್ಟೆ	32099-48699	ತಟ್ಟಿಬೆಟ್ಟೆ	30725-39009
ಶಿವಮೊಗ್ಗ		**ಶಿರಸಿ**		**ಸುಳ್ಯ**	
ಬೆಟ್ಟೆ	55309-66200	ಬೆಟ್ಟೆ	31699-46989	ಹೊಸತು	20000-37000
ಗೊರಬಲು	21009-38099	ಬಿಳಿಗೋಟು	26109-36599	ಹಳತು	49500-52500
ಹೊಸತು	53199-56006	ಚಾಲಿ	39009-44350		
ರಾಶಿ	48319-60389				
ಸರಕು	60109-91100	ಕೆಂಪುಗೋಟು	23400-28119		
		ರಾಶಿ	44989-50709		

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1500
ಮಧ್ಯಮ	₹600-1000
ಸಣ್ಣ	₹200-600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ದಾವಣಗೆರೆ	₹15000-15324
ತುರುವೇಕೆರೆ	₹26500-28000

‘ಮಾತುಕತೆ ಸಕಾರಾತ್ಮಕ’

ಹೆಚ್ಚುವರಿ ತೆರಿಗೆ ರದ್ದುಪಡಿಸಲು ಅಮೆರಿಕಕ್ಕೆ ಭಾರತ ಒತ್ತಾಯ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ವಿಚಾರವಾಗಿ ಅಮೆರಿಕದ ನಿಯೋಗದ ಜೊತೆಗಿನ ಮಾತುಕತೆಯು ಸಕಾರಾತ್ಮಕವಾಗಿ ಇತ್ತು ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಹೇಳಿದೆ.

ಇಬ್ಬರಿಗೂ ಅನುಕೂಲ ಆಗುವ ಒಪ್ಪಂದವೊಂದನ್ನು ಆದಷ್ಟು ಬೇಗ ಅಂತಿಮ ರೂಪ ನೀಡಲು ಎರಡೂ ದೇಶಗಳು ಒಪ್ಪಿವೆ ಎಂದು ಕೂಡ ಸಚಿವಾಲಯವು ಹೇಳಿದೆ.

‘ಎರಡೂ ಕಡೆಯವರಿಗೆ ಪ್ರಯೋಜನಕಾರಿ ಆಗುವಂತಹ ವ್ಯಾಪಾರ ಒಪ್ಪಂದವನ್ನು ಬೇಗನೆ ಸಾಧ್ಯವಾಗಿಸುವ ಪ್ರಯತ್ನಕ್ಕೆ ಇನ್ನಷ್ಟು ಚುರುಕು ನೀಡಲು ತೀರ್ಮಾನಿಸಲಾಗಿದೆ’ ಎಂದು ಸಚಿವಾಲಯವು ಹೇಳಿದೆ. ಎರಡೂ ದೇಶಗಳ ಪ್ರತಿನಿಧಿಗಳ ನಡುವೆ ಮಂಗಳವಾರ ಇಡೀ ದಿನ ಮಾತುಕತೆ ನಡೆದಿದೆ.

ಭಾರತಕ್ಕೆ ಭೇಟಿ ನೀಡಿರುವ ಅಮೆರಿಕದ ಮುಖ್ಯ ಸಂಧಾನಕಾರ ಬ್ರೆಂಡನ್ ಲಿಂಚ್ ಅವರ ಜೊತೆ ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತಾದ ಮಾತುಕತೆಗಳು ಸಕಾರಾತ್ಮಕವಾಗಿದ್ದವು ಎಂದು ಸಚಿವಾಲಯವು ಹೇಳಿದೆ.

ಲಿಂಚ್ ಅವರು ಸೋಮವಾರ ಸಂಜೆ ನವದೆಹಲಿಗೆ ಬಂದಿದ್ದಾರೆ. ಮಾತುಕತೆ ವೇಳೆ ಭಾರತದ ಪ್ರತಿನಿಧಿಗಳ ನೇತೃತ್ವವನ್ನು ವಾಣಿಜ್ಯ ಇಲಾಖೆಯ ವಿಶೇಷ ಕಾರ್ಯದರ್ಶಿ ರಾಜೇಶ್ ಅಗರ್‌ವಾಲ್ ಅವರು ವಹಿಸಿದ್ದರು.

ಎರಡೂ ದೇಶಗಳು ವರ್ಚುವಲ್ ವೇದಿಕೆಯ ಮೂಲಕ ಮಾತುಕತೆ ಮುಂದುವರಿಸಲಿವೆ. ಅಲ್ಲದೆ, ಮುಂದಿನ ಭೌತಿಕ ಸಭೆಗೆ ಸೂಕ್ತ ದಿನಾಂಕ ನಿಗದಿಪಡಿಸಲಿವೆ ಎಂದು ಮೂಲವೊಂದು ತಿಳಿಸಿದೆ.

ಅಮೆರಿಕವು ಭಾರತದ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ವಿಧಿಸಿದೆ. ಪ್ರತಿಸುಂಕದ ರೂಪದಲ್ಲಿ ಶೇ 25ರಷ್ಟು ತೆರಿಗೆ ಹಾಗೂ ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವುದಕ್ಕಾಗಿ ಶೇ 25ರಷ್ಟು ಹೆಚ್ಚುವರಿ ತೆರಿಗೆ ವಿಧಿಸಲಾಗಿದೆ. ಈ ತೆರಿಗೆ ಕ್ರಮಗಳು ಜಾರಿಗೆ ಬಂದ ನಂತರದಲ್ಲಿ ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ವ್ಯಾಪಾರ ಒಪ್ಪಂದದ ಮಾತುಕತೆಗೆ ಭಾರತಕ್ಕೆ ಭೇಟಿ ನೀಡಿರುವುದು ಇದೇ ಮೊದಲು. ಶೇ 50ರಷ್ಟು ತೆರಿಗೆ ವಿಧಿಸುವ ಕ್ರಮವನ್ನು ಭಾರತವು ‘ಅನ್ಯಾಯ’ ಎಂದು ಹೇಳಿದೆ.

ಮಾತುಕತೆ ಮುಂದುವರಿಯಬೇಕು ಎಂದಾದರೆ ಭಾರತದ ಮೇಲೆ ಹೇರಿರುವ ಹೆಚ್ಚುವರಿ ಶೇ 25ರಷ್ಟು ಸುಂಕವನ್ನು ರದ್ದುಪಡಿಸಬೇಕು ಎಂದು ಭಾರತದ ಅಧಿಕಾರಿಗಳು ಒತ್ತಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಮಾತುಕತೆಯಲ್ಲಿ ಪ್ರಗತಿಯು, ಕಚ್ಚಾ ತೈಲ ಖರೀದಿಗೆ ಸಂಬಂಧಿಸಿದ ಶೇ 25ರಷ್ಟು ತೆರಿಗೆಯನ್ನು ಅಮೆರಿಕವು ಹಿಂಪಡೆಯುವುದನ್ನು ಅವಲಂಬಿಸಿದೆ. ಅದು ಸಾಧ್ಯವಾಗದೆ ಇದ್ದರೆ ರಾಜಕೀಯವಾಗಿ ಅಥವಾ ಆರ್ಥಿಕ ದೃಷ್ಟಿಯಿಂದ ಯಾವುದೇ ಮಹತ್ವದ ಒಪ್ಪಂದ ಏರ್ಪಡುವುದಿಲ್ಲ’ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಸಂಸ್ಥೆಯ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

‘ಮಸೂದ್ ಕುಟುಂಬ ಛಿದ್ರ’

ಭಾರತ ದಾಳಿ: ಜೈಷ್–ಎ–ಮೊಹಮ್ಮದ್ ಕಮಾಂಡರ್ ಹೇಳಿಕೆ

ಲಾಹೋರ್ (ಪಿಟಿಐ): ‘ಬಹಾವಲ್ಪುರದಲ್ಲಿರುವ ಸಂಘಟನೆಯ ಕೇಂದ್ರ ಕಚೇರಿ ಮೇಲೆ ಭಾರತ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಜೈಷ್–ಎ–ಮೊಹಮ್ಮದ್ (ಜೆಇಎಂ) ಮುಖ್ಯಸ್ಥ ಮೌಲಾನಾ ಮಸೂದ್ ಅಜರ್ ಕುಟುಂಬದ ಸದಸ್ಯರ ದೇಹಗಳು ಛಿದ್ರ ಛಿದ್ರಗೊಂಡಿದ್ದವು’ ಎಂದು ಸಂಘಟನೆಯ ಕಮಾಂಡರ್ ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದಾನೆ.

ಯುಟ್ಯೂಬ್ ಚಾನೆಲ್‌ಗಳಲ್ಲಿ ಅಪ್‌ಲೋಡ್ ಮಾಡಲಾದ ವಿಡಿಯೊದಲ್ಲಿ ಜೆಇಎಂ ಕಮಾಂಡರ್ ಇಲ್ಯಾಸ್ ಕಾಶ್ಮೀರಿ ಮಾತನಾಡುತ್ತಿರುವುದು ಕಂಡುಬಂದಿದೆ.

ಸೆ.6ರಂದು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ‘ಮಿಷನ್ ಮುಸ್ತಾಫಾ’ ಕಾರ್ಯಾಗಾರದಲ್ಲಿ ಉರ್ದು ಭಾಷೆಯಲ್ಲಿ ಮಾತನಾಡಿರುವ ಇಲ್ಯಾಸ್, ಅಜರ್ ಕುಟುಂಬಸ್ಥರನ್ನು ಹತ್ಯೆಯಾಗಿರುವ ಕುರಿತು ಆಕ್ರೋಶ ಹೊರಹಾಕಿದ್ದಾನೆ.

ಮಸೂದ್ ಅಜರ್

ಹಲವಾರು ಬಂದೂಕುಧಾರಿಗಳ ಮಧ್ಯೆ ನಿಂತು ಭಾಷಣ ಮಾಡುತ್ತಿರುವ ಆತ, ‘ದೇಶದ ಭೌಗೋಳಿಕ ಮತ್ತು ಸೈದ್ಧಾಂತಿಕ ಗಡಿಗಳನ್ನು ರಕ್ಷಿಸಲು ನಾವು ಭಯೋತ್ಪಾದನೆಯನ್ನು ಅಪ್ಪಿಕೊಂಡಿದ್ದೇವೆ. ದೆಹಲಿ, ಕಾಬೂಲ್ ಹಾಗೂ ಕಂದಹಾರ್‌ನ ಮೇಲೆ ಜಿಹಾದ್ ದಾಳಿ ನಡೆಸಿದ್ದೇವೆ. ಎಲ್ಲ ತ್ಯಾಗ ಮಾಡಿದ ನಂತರವೂ, ಮೇ 7ರಂದು ಬಹಾವಲ್ಪುರದಲ್ಲಿರುವ ಸಂಘಟನೆಯ ಕೇಂದ್ರ ಕಚೇರಿ ಮೇಲೆ ಭಾರತವು ಕ್ಷಿಪಣಿ ದಾಳಿ ನಡೆಸಿದ್ದರಿಂದ ಮಸೂದ್ ಅಜರ್‌ನ ಕುಟುಂಬದ ಸದಸ್ಯರು ಛಿದ್ರ ಛಿದ್ರಗೊಂಡಿದ್ದರು’ ಎಂದು ಒಪ್ಪಿಕೊಂಡಿದ್ದಾನೆ.

‘ಬಹಾವಲ್ಪುರದಲ್ಲಿರುವ ಸುಭಾನ್ ಅಲ್ಲಾ ಜಾಮಿಯಾ ಮಸೀದಿ ಮೇಲೆ ನಡೆದ ದಾಳಿಯಲ್ಲಿ ಮಸೂದ್ ಅಜರ್‌ನ ಅಕ್ಕ, ಭಾವ, ಸೋದರ ಸಂಬಂಧಿ ಹಾಗೂ ಅವನ ಪತ್ನಿ, ಮತ್ತೊಬ್ಬ ಸೋದರ ಸಂಬಂಧಿ ಹಾಗೂ ಐವರು ಮಕ್ಕಳು ಮೃತಪಟ್ಟಿದ್ದರು. ಅಜರ್‌ನ ಸಹಚರ, ಆತನ ತಾಯಿ ಹಾಗೂ ಇತರ ಇಬ್ಬರು ಆಪ್ತರು ಕೂಡ ಈ ದಾಳಿಯಲ್ಲಿ ಅಸುನೀಗಿದ್ದರು’ ಎಂದು ಈ ಹಿಂದೆ ಪ್ರಕಟಣೆಯಲ್ಲಿ ಹೇಳಲಾಗಿತ್ತು.

1999ರಲ್ಲಿ ಅಪಹರಣಕ್ಕೆ ಒಳಗಾಗಿದ್ದ ‘ಇಂಡಿಯನ್ ಏರ್‌ಲೈನ್ಸ್ ವಿಮಾನದಲ್ಲಿದ್ದ (ಐಸಿ–814) ಪ್ರಯಾಣಿಕರನ್ನು ರಕ್ಷಿಸುವುದಕ್ಕೆ ಪ್ರತಿಯಾಗಿ ಮಸೂದ್ ಅಜರ್‌ನನ್ನು ಭಾರತ ಸರ್ಕಾರ ಬಿಡುಗಡೆ ಮಾಡಿತ್ತು. ನಂತರ, ಬಹಾವಲ್ಪುರವು ಜೆಇಎಂ ಸಂಘಟನೆ ಚಟುವಟಿಕೆಗಳ ಕೇಂದ್ರವಾಗಿದೆ.

ಟೈಫನ್ ಕ್ಷಿಪಣಿ ಹಿಂತೆಗೆದುಕೊಳ್ಳಲು ಚೀನಾ ಆಗ್ರಹ

ಬೀಜಿಂಗ್ (ಪಿಟಿಐ): ಜಪಾನ್‌ನಲ್ಲಿ ನಿಯೋಜಿಸಿರುವ ಮಧ್ಯಮ ಶ್ರೇಣಿಯ ಟೈಫನ್ ಕ್ಷಿಪಣಿಯನ್ನು ಹಿಂತೆಗೆದುಕೊಳ್ಳುವಂತೆ ಅಮೆರಿಕವನ್ನು ಚೀನಾ ಒತ್ತಾಯಿಸಿದೆ.

‘ಟೈಫನ್ ಕ್ಷಿಪಣಿಯು ಪ್ರಾದೇಶಿಕ ಕಾರ್ಯತಂತ್ರದ ಭದ್ರತೆಗೆ ಕಾಯಂ ಬೆದರಿಕೆಯಾಗಿದೆ. ಜಂಟಿ ಸಮರಾಭ್ಯಾಸದ ನೆಪದಲ್ಲಿ ಅಮೆರಿಕವು ಜಪಾನ್‌ನಲ್ಲಿ ಈ ಕ್ಷಿಪಣಿಯನ್ನು ನಿಯೋಜಿಸಿದೆ. ಇದನ್ನು ಹಿಂತೆಗೆದುಕೊಳ್ಳಬೇಕು’ ಎಂದು ಚೀನಾದ ವಿದೇಶಾಂಗ ವ್ಯವಹಾರಗಳ ವಕ್ತಾರ ಲಿನ್ ಜಿಯಾನ್ ಒತ್ತಾಯಿಸಿದ್ದಾರೆ.

ಈ ಮೊದಲು ಫಿಲಿಪ್ಪೀನ್ಸ್‌ನಲ್ಲಿ ‘ಟೈಫನ್’ ಕ್ಷಿಪಣಿ ನಿಯೋಜನೆಗೆ ಚೀನಾ ವಿರೋಧ ವ್ಯಕ್ತಪಡಿಸಿತ್ತು. ಇದರ ಬೆನ್ನಲ್ಲೇ, ಫಿಲಿಪ್ಪೀನ್ಸ್ ಭಾರತದಿಂದ ಬ್ರಹ್ಮೋಸ್ ಕ್ಷಿಪಣಿ ಖರೀದಿಸಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀ ಗುಡ್ಡಪ್ಪ ಹೆಗಪ್ಪ ಐರಣಿ
ನಿ. ಶಿಕ್ಷಕರು, ಅರೇಮಲ್ಲಾಪುರ, ರಾಣಿಬೆನ್ನೂರು ತಾ.
ಜನನ: 03-06-1929 ಮರಣ: 17-09-2023
ಶ್ರೀಮತಿ ಗಂಗಮ್ಮ ಉರ್ಫ್ ತಿಪ್ಪವ್ವ
ಜನನ: 10-03-1935 ಮರಣ: 16-09-2017
ನಿಮ್ಮ ಆದರ್ಶಗಳು ನಮಗೆ ಯಾವಾಗಲೂ ಸ್ಮರಣೀಯ
ಮಕ್ಕಳಾದ: ಶ್ರೀ ಮಲ್ಲಿಕಾರ್ಜುನ ಗು ಐರಣಿ,
ಶ್ರೀ ಶಿವಾನಂದ ಜಿ.ಎ.
ಹಾಗೂ ಕುಟುಂಬ ವರ್ಗ, ಮೊಮ್ಮಕ್ಕಳು

9TH YEAR OF REMEMBRANCE

LATE PROF. DR B T LAKSHMAN
08-06-1934 - 16-09-2016
FOUNDER CHAIRMAN,
BTL Educational Trust for Rural Development, Bengaluru
BTL Foundation for International Services, Delaware, USA
APOORVA LAKSHMAN, Daughter,
Life Time Trustee, BTL Educational Trust for Rural Development, Bangalore and Chairman, BTL Vidyavahini School and BTL Composite PU College, Kesare, Mysore

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಮಕೃಷ್ಣ, ಊರು ತಿಳಿಸಿಲ್ಲ

- **ಪ್ರಶ್ನೆ: ನಾನು ಕೇಂದ್ರ ಸರ್ಕಾರದ ನಿವೃತ್ತ ಉದ್ಯೋಗಿ. ನನಗೆ ಪ್ರತಿ ತಿಂಗಳು ₹40,000 ಪಿಂಚಣಿ ಬರುತ್ತಿದೆ. ನಮ್ಮ ತಂದೆ ಕೃಷಿಕರಾಗಿದ್ದು, ಅವರ ಹೆಸರಿನಲ್ಲಿ ಅವಿಭಕ್ತ ಕುಟುಂಬದ ಆಸ್ತಿ ಇತ್ತು. ಈಗ ಆ ಆಸ್ತಿಯಲ್ಲಿ ಪ್ರತಿಯೊಬ್ಬರೂ ತಮ್ಮ ಹಕ್ಕು ಕೇಳುತ್ತಿದ್ದಾರೆ. ಆ ಕಾರಣದಿಂದ ಸ್ವಲ್ಪ ತೋಟವನ್ನು ಮಾರಾಟ ಮಾಡುವ ನಿರ್ಧಾರ ಕೈಗೊಂಡಿದ್ದೇವೆ. ಮಾರಾಟ ಮಾಡಿದರೆ ಒಟ್ಟು ಸುಮಾರು ₹40 ಲಕ್ಷ ದೊರೆಯುವ ನಿರೀಕ್ಷೆಯಿದೆ. ಅದರಲ್ಲಿ ನನಗೆ, ನನ್ನ ತಮ್ಮನಿಗೆ ಮತ್ತು ನನ್ನ ಅತ್ತಿಗೆಗೆ (ಅಣ್ಣ ಏಳು ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ) ಹಂಚಿಕೆ ಬರಲಿದೆ. ನನಗೆ ಬರುವ ಹಂಚಿಕೆಯು ಸುಮಾರು ₹13 ಲಕ್ಷವಾಗಬಹುದು. ನಾನು ಕಳೆದ 15 ವರ್ಷಗಳಿಂದ ನಿಯಮಿತವಾಗಿ ಆದಾಯ ತೆರಿಗೆ ಕಟ್ಟುತ್ತಿದ್ದೇನೆ. ಈ ಕೃಷಿ ತೋಟ ಮಾರಾಟದ ಹಣದ ಮೇಲೆ ನಾನು ಎಷ್ಟು ಆದಾಯ ತೆರಿಗೆ ಕಟ್ಟಬೇಕಾಗುತ್ತದೆ?**

ಉತ್ತರ: ಮೊದಲಿಗೆ ಗಮನಿಸಬೇಕಾದ ಅಂಶವೆಂದರೆ, ಮಾರಾಟವಾಗುತ್ತಿರುವ ಆಸ್ತಿ ಗ್ರಾಮೀಣ ಪ್ರದೇಶದಲ್ಲಿದೆಯೇ ಅಥವಾ ನಗರ/ನಗರಸಭೆ ವ್ಯಾಪ್ತಿಯೊಳಗೆ ಇದೆಯೇ ಎಂಬುದು. ಆದಾಯ ತೆರಿಗೆ ಕಾಯ್ದೆಯ ಪ್ರಕಾರ, ಗ್ರಾಮೀಣ ಪ್ರದೇಶದಲ್ಲಿರುವ ಕೃಷಿ ಜಮೀನು ಮಾರಾಟದಿಂದ ಬರುವ ಹಣಕ್ಕೆ ಬಂಡವಾಳ ಲಾಭ (ಕ್ಯಾಪಿಟಲ್ ಗೈನ್ಸ್) ತೆರಿಗೆ ವಿಧಿಸುವುದಿಲ್ಲ. ಆದರೆ, ಜಮೀನು ನಗರ ಅಥವಾ ಅದರ ಸುತ್ತಮುತ್ತ 8 ಕಿ.ಮೀ ವ್ಯಾಪ್ತಿಯೊಳಗೆ ಇದ್ದರೆ, ಅದನ್ನು ಬಂಡವಾಳ ಆಸ್ತಿ ಎಂದು ಪರಿಗಣಿಸಲಾಗುತ್ತದೆ ಮತ್ತು ಮಾರಾಟದಿಂದ ಲಭಿಸುವ ಲಾಭಕ್ಕೆ ಬಂಡವಾಳ ಲಾಭ ತೆರಿಗೆ ವಿಧಿಸಲಾಗುತ್ತದೆ.

ತೋಟದ ಮಾರಾಟದಿಂದ ಸಿಗುವ ಹಣದಲ್ಲಿ ₹13 ಲಕ್ಷ ನಿಮ್ಮ ಪಾಲಿಗೆ ಬರಲಿದೆ. ನಿಮ್ಮ ಕೃಷಿ ಜಮೀನು ನಗರದ ವ್ಯಾಪ್ತಿಯಲ್ಲಿದ್ದರೆ, ನೀವು ಮಾರಾಟ ಮೌಲ್ಯವನ್ನು ಮೂಲ ಖರೀದಿ ಬೆಲೆಯ ಜೊತೆ ಹೋಲಿಸಿ ದೀರ್ಘಾವಧಿ ಲಾಭ ಎಂದು ನಿರ್ಧರಿಸಬೇಕಾಗುತ್ತದೆ. ದೀರ್ಘಾವಧಿ ಲಾಭಕ್ಕೆ ಶೇ 20 ತೆರಿಗೆ (ಇಂಡೆಕ್ಸೇಷನ್ ಪ್ರಯೋಜನದೊಂದಿಗೆ) ವಿಧಿಸಲಾಗುತ್ತದೆ. ಪರ್ಯಾಯವಾಗಿ ಈ ಪ್ರಯೋಜನ ಪಡೆಯದೆ, ನಿವ್ವಳ ಲಾಭದ ಶೇಕಡಾ 12.5ರ ಮೇಲೂ ತೆರಿಗೆ ಅಂದಾಜಿಸಬಹುದು. ಇವೆರಡರಲ್ಲಿ ಲಾಭದಾಯಕ ಆಯ್ಕೆ ಯಾವುದೋ ಅದನ್ನು ನೀಡುವ ಪಡೆಯಬಹುದು. ಆದರೆ ಕೃಷಿ ಜಮೀನು ಗ್ರಾಮೀಣ ಭಾಗದ್ದಾದರೆ, ಆ ಲಾಭ ಸಂಪೂರ್ಣವಾಗಿ ತೆರಿಗೆಯಿಂದ ವಿನಾಯಿತಿ ಪಡೆಯುತ್ತದೆ.

ಮತ್ತೊಂದು ಮುಖ್ಯ ಅಂಶವೆಂದರೆ, ಮಾರಾಟದಿಂದ ಬಂದ ಮೊತ್ತ ತೆರಿಗೆಗೆ ಒಳಪಡದ ಸಂದರ್ಭದಲ್ಲಿ, ಆ ಮೊತ್ತವನ್ನು ನೀವು ಆದಾಯ ತೆರಿಗೆ ವಿವರದಲ್ಲಿ ‘ವಿನಾಯಿತಿಗೊಳಪಟ್ಟ ಆದಾಯ’ ವಿಭಾಗದಲ್ಲಿ ಘೋಷಣೆ ಮಾಡುವುದು ಸೂಕ್ತ. ಇದು ಭವಿಷ್ಯದ ಯಾವುದೇ ವಿಚಾರಣೆ ಸಂದರ್ಭದಲ್ಲಿ ಪಾರದರ್ಶಕತೆಯನ್ನು ಖಚಿತ ಪಡಿಸುತ್ತದೆ. ನಿಮ್ಮ ಸಂಬಂಧಿಗಳೊಡನೆ ಹಂಚಿಕೆಯಾದ ಆಸ್ತಿ ಆದ್ದರಿಂದ, ನಿಮ್ಮ ಪಾಲಿಗೆ ಬಂದ ಮೊತ್ತದ ವಿವರವನ್ನು ಕುಟುಂಬ ಹಕ್ಕು ಹಂಚಿಕೆ ದಾಖಲೆಗಳೊಂದಿಗೆ ಸೇರಿಸಿ ಘೋಷಣೆ ಮಾಡುವುದು ಉತ್ತಮ.

ಆದ್ದರಿಂದ, ಮೊದಲು ಆಸ್ತಿಯ ನಿಖರ ಸ್ಥಳವನ್ನು ಸ್ಪಷ್ಟಪಡಿಸಿ. ಅದು ಗ್ರಾಮೀಣ ಕೃಷಿ ಜಮೀನು ಆಗಿದ್ದರೆ ತೆರಿಗೆ ಹೊಣೆ ಇರದು, ಆದರೆ ನಗರ ವ್ಯಾಪ್ತಿಯೊಳಗೆ ಇದ್ದರೆ ತೆರಿಗೆ ಲೆಕ್ಕಾಚಾರ ಮಾಡಿ ತೆರಿಗೆ ಕಟ್ಟಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ಮಾರ್ಗದರ್ಶನ ಪಡೆದುಕೊಳ್ಳಿ.

ಬಾಳಪ್ಪ ಉಮಚಗಿ, ಹೊಸಪೇಟೆ

- **ಪ್ರಶ್ನೆ: ನನಗೆ ಪ್ರತಿ ತಿಂಗಳು ₹29,000 ಸಂಬಳ ಬರುತ್ತದೆ. ಅದರಲ್ಲಿ ಸುಮಾರು ₹16,000 ಉಳಿತಾಯ ಮಾಡುತ್ತಿದ್ದೇನೆ. ನನ್ನ ಸಂಬಳ ಖಾತೆ ಸಮೀಪದ ಬ್ಯಾಂಕ್ ಒಂದರಲ್ಲಿದೆ. ಅಲ್ಲಿ ರೆಗ್ಯುಲರ್ ಮ್ಯೂಚುವಲ್ ಫಂಡ್‌ಗಳನ್ನು ಮಾಡಿಸಲು ಅವಕಾಶವಿಲ್ಲವೆಂದು ಬ್ಯಾಂಕಿನ ಸಿಬ್ಬಂದಿಯಿಂದ ತಿಳಿಯಿತು. ನಾನು ಪ್ರತಿ ತಿಂಗಳು ₹15,000 ಮೊತ್ತವನ್ನು ರೆಗ್ಯುಲರ್ ಮ್ಯೂಚುವಲ್ ಫಂಡ್‌ಗೆ ಹೂಡಿಕೆ ಮಾಡಲು ಬಯಸುತ್ತೇನೆ. ಈ ಬಗ್ಗೆ ಯಾವ ಬ್ಯಾಂಕ್ ಅಥವಾ ಸಂಸ್ಥೆಯ ಮೂಲಕ ಹೂಡಿಕೆ ಮಾಡುವುದು ಉತ್ತಮ? ಹಾಗೆಯೇ ಯಾವ ರೀತಿಯ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವುದು ಸೂಕ್ತ?**

ಉತ್ತರ: ನೀವು ಪ್ರತಿ ತಿಂಗಳು ಗಳಿಸುವ ಹಣದಲ್ಲಿ ಸುಮಾರು ಅರ್ಧದಷ್ಟು ಮೊತ್ತವನ್ನು ಉಳಿತಾಯ ಮಾಡುತ್ತಿರುವುದು ಆರ್ಥಿಕ ಶಿಸ್ತಿಗೆ ಉತ್ತಮ ನಿದರ್ಶನ. ಇದರಲ್ಲಿ ₹15,000ವನ್ನು ನಿಯಮಿತವಾಗಿ ಮ್ಯೂಚುವಲ್ ಫಂಡ್‌ಗೆ ಹೂಡಿಕೆ ಮಾಡುವ ಆಲೋಚನೆ ನಿಮ್ಮದು. ಮ್ಯೂಚುಯಲ್ ಫಂಡ್ ಹೂಡಿಕೆಗಳನ್ನು ನಿರ್ದಿಷ್ಟ ಬ್ಯಾಂಕ್ ಮುಖಾಂತರವೇ ಮಾಡುವ ಅಗತ್ಯವಿಲ್ಲ; ಬದಲಾಗಿ ನಿಮ್ಮ ಆಯ್ಕೆಯ ಬ್ಯಾಂಕ್ ಖಾತೆಯಿಂದ ನೇರವಾಗಿ ತಿಂಗಳ ಕಂತು ಪಾವತಿ ಆಗುವಂತೆ ವ್ಯವಸ್ಥೆ ಮಾಡಬೇಕಾಗುತ್ತದೆ. ಇದಕ್ಕೆ ನೆಟ್ ಬ್ಯಾಂಕಿಂಗ್ ಸೌಲಭ್ಯ ಪಡೆದುಕೊಳ್ಳಿ. ಖಾತೆಯನ್ನು ನಿಮ್ಮ ಆಯ್ಕೆಯ ಸೆಬಿ ನೋಂದಾಯಿತ ಮ್ಯೂಚುವಲ್ ಫಂಡ್ ಸಂಸ್ಥೆಗಳ ವೆಬ್‌ಸೈಟ್ ಮೂಲಕ ನೇರವಾಗಿ ಅಥವಾ ನಿಮ್ಮ ಆಯ್ಕೆಯ ಸೆಬಿ ನೋಂದಾಯಿತ ಬ್ರೋಕರ್ ಮೂಲಕ, ಅವರ ಆ್ಯಪ್‌ಗಳ ಮೂಲಕ ನೋಂದಾಯಿಸಿ ಹೂಡಿಕೆ ಮಾಡಬಹುದು. ಡೈರೆಕ್ಟ್ ಪ್ಲ್ಯಾನ್ ಆಯ್ಕೆ ಮಾಡಿದರೆ ವಿತರಕರ ಶುಲ್ಕ ಕಡಿಮೆಯಾಗುತ್ತದೆ.

ಹೂಡಿಕೆಗೆ ಮೊದಲು ನಿಮ್ಮ ಆರ್ಥಿಕ ಗುರಿಗಳನ್ನು ಸ್ಪಷ್ಟಗೊಳಿಸುವುದು ಮುಖ್ಯ. ದೀರ್ಘಾವಧಿಯ ಗುರಿಗಳಿಗೆ (ಅಂದರೆ ನಿವೃತ್ತಿ ಅಥವಾ ಮಕ್ಕಳ ಶಿಕ್ಷಣ) ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಅಥವಾ ಇಂಡೆಕ್ಸ್ ಫಂಡ್‌ಗಳು ಸೂಕ್ತ. ಏಕೆಂದರೆ ಅವು ಮಾರುಕಟ್ಟೆಯ ಏರಿಳಿತಗಳ ನಡುವೆಯೂ ದೀರ್ಘಾವಧಿಯಲ್ಲಿ ಉತ್ತಮ ಲಾಭ ನೀಡುತ್ತವೆ. ಮಧ್ಯಮಾವಧಿ ಗುರಿಗಳಿಗೆ (ಮೂರರಿಂದ ಐದು ವರ್ಷ) ಹೈಬ್ರಿಡ್ ಅಥವಾ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್‌ಗಳನ್ನು ಪರಿಗಣಿಸಬಹುದು. ತಕ್ಷಣದ ಅಥವಾ ಅಲ್ಪಾವಧಿಯ ಗುರಿಗಳಿಗೆ ಡೆಟ್ ಫಂಡ್‌ಗಳು ಅಥವಾ ಶಾರ್ಟ್ ಟರ್ಮ್ ಬಾಂಡ್ ಫಂಡ್‌ಗಳು ಹೆಚ್ಚು ಸುರಕ್ಷಿತ. ಹೂಡಿಕೆ ಮಾಡುವಾಗ ನಿಮ್ಮ ವಯಸ್ಸು, ಅಪಾಯ ತಾಳಿಕೊಳ್ಳುವ ಶಕ್ತಿ ಮತ್ತು ಭವಿಷ್ಯದ ಖರ್ಚುಗಳನ್ನು ಗಮನದಲ್ಲಿಟ್ಟುಕೊಂಡು ಹಣವನ್ನು ವಿವಿಧ ವರ್ಗಕ್ಕೆ ಸೇರಿದ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸೂಕ್ತ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ–ಮೇಲ್: businessdesk@prajavani.co.in

ಜಿಎಸ್‌ಟಿ ಇಳಿಕೆ ಕುರಿತು ಮಾಹಿತಿ ನೀಡಲು ಸೂಚನೆ

ನವದೆಹಲಿ (ಪಿಟಿಐ): ಭೌತಿಕ ಮಳಿಗೆಗಳ ಮೂಲಕ ರಿಟೇಲ್ ಮಾರಾಟದಲ್ಲಿ ತೊಡಗಿರುವವರು ಜಿಎಸ್‌ಟಿ ದರ ಇಳಿಕೆಯಿಂದಾಗಿ ಉತ್ಪನ್ನಗಳ ಬೆಲೆಯಲ್ಲಿ ಆಗುವ ಇಳಿಕೆಯನ್ನು ಗ್ರಾಹಕರಿಗೆ ಗೊತ್ತಾಗುವ ರೀತಿಯಲ್ಲಿ ಪ್ರದರ್ಶಿಸಬೇಕು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಸೂಚಿಸಿದೆ.

ರಿಟೇಲ್ ವಹಿವಾಟಿನಲ್ಲಿ ತೊಡಗಿರುವವರ ಸಂಘಕ್ಕೆ ಸೂಚನೆಯೊಂದನ್ನು ರವಾನಿಸಿರುವ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನಾ ಇಲಾಖೆಯು (ಡಿಪಿಐಐಟಿ), ರಿಟೇಲ್ ವಹಿವಾಟಿನಲ್ಲಿ ತೊಡಗಿರುವವರು ಜಿಎಸ್‌ಟಿಯಲ್ಲಿ ಆಗಿರುವ ಇಳಿಕೆಯನ್ನು ರಸೀದಿಯಲ್ಲಿ ‘ಜಿಎಸ್‌ಟಿ ರಿಯಾಯಿತಿ’ ಎಂಬುದಾಗಿ ನಮೂದಿಸಬೇಕು ಎಂದು ಹೇಳಿದೆ.

‘ಜಿಎಸ್‌ಟಿಯಿಂದಾಗಿನ ರಿಯಾಯಿತಿಯನ್ನು ಪ್ರಮುಖವಾಗಿ ತೋರಿಸಬೇಕು. ಉದಾಹರಣೆಗೆ, ಪೋಸ್ಟರ್‌ಗಳು, ಫ್ಲೈಯರ್‌ಗಳು ಹಾಗೂ ಜಾಹೀರಾತುಗಳ ಮೂಲಕ (ಟಿ.ವಿ., ಮುದ್ರಣ ಮತ್ತು ಆನ್‌ಲೈನ್ ಮಾಧ್ಯಮ) ತಿಳಿಸಬೇಕು’ ಎಂದು ಅದು ಸೂಚಿಸಿದೆ.

‘ಜಿಎಸ್‌ಟಿ ಇಳಿಕೆ ಲಾಭ ಗ್ರಾಹಕರಿಗೆ’

ನವದೆಹಲಿ (ಪಿಟಿಐ): ಜಿಎಸ್‌ಟಿ ದರದಲ್ಲಿನ ಪರಿಷ್ಕರಣೆಯ ಪೂರ್ಣ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಲಾಗುತ್ತದೆ ಎಂದು ಮದರ್ ಡೈರಿ ಮಂಗಳವಾರ ಹೇಳಿದೆ. ಹಾಲಿನ ಮೌಲ್ಯವರ್ಧಿತ ಉತ್ಪನ್ನಗಳು, ಸಂಸ್ಕರಿತ ಆಹಾರ ಸೇರಿದಂತೆ ತನ್ನ ಬಹುತೇಕ ಉತ್ಪನ್ನಗಳ ಬೆಲೆಯು ಸೆಪ್ಟೆಂಬರ್ 22ರಿಂದ ಕಡಿಮೆ ಆಗಲಿದೆ ಎಂದು ಅದು ಹೇಳಿದೆ.

ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ (ಎನ್‌ಡಿಡಿಬಿ) ಅಂಗಸಂಸ್ಥೆ ಮದರ್ ಡೈರಿ. 200 ಗ್ರಾಂ ಪನೀರ್ ಬೆಲೆಯು ₹95 ಇರುವುದು ₹92ಕ್ಕೆ, 1 ಲೀಟರ್ ತುಪ್ಪದ ಬೆಲೆಯು ₹675 ಇರುವುದು ₹645ಕ್ಕೆ 100 ಗ್ರಾಂ ಬೆಣ್ಣೆಯ ಬೆಲೆಯು ₹62 ಇರುವುದು ₹58ಕ್ಕೆ ಇಳಿಕೆ ಕಾಣಲಿದೆ ಎಂದು ಹೇಳಿದೆ.

ವಾಯುಪ್ರದೇಶ ರಕ್ಷಣಾ ವ್ಯವಸ್ಥೆ ಅಗತ್ಯ: ಝೆಲೆನ್‌ಸ್ಕಿ

ಕೀವ್(ಎಪಿ): ‘ವಾಯುಪ್ರದೇಶ ರಕ್ಷಣಾ ವ್ಯವಸ್ಥೆ ಅಭಿವೃದ್ಧಿಪಡಿಸುವ ಮೂಲಕ ಇಡೀ ಯುರೋಪ್ ಖಂಡವನ್ನು ಸುರಕ್ಷಿತ ಪ್ರದೇಶವನ್ನಾಗಿ ರೂಪಿಸಬೇಕು’ ಎಂದು ಐರೋಪ್ಯ ರಾಷ್ಟ್ರಗಳ ಮುಖಂಡರನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಒತ್ತಾಯಿಸಿದ್ದಾರೆ.

ಝಪೋರಿಝಿಯಾ ನಗರದ ಮೇಲೆ ರಷ್ಯಾ ಪಡೆಗಳು ರಾತ್ರೋರಾತ್ರಿ ನಡೆಸಿದ ವೈಮಾನಿಕ ದಾಳಿಗಳಲ್ಲಿ 13 ಜನರು ಗಾಯಗೊಂಡ ಬೆನ್ನಲ್ಲೇ, ಝೆಲೆನ್‌ಸ್ಕಿ ಅವರಿಂದ ಈ ಒತ್ತಾಯ ಕೇಳಿಬಂದಿದೆ.

ಮುಂಬೈ ಧಾರಣೆ (ಶೇಂಗಾ)

16-09-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1360 (1360)
ಒಂದು ವಾರದ ಡೆಲಿವರಿ	1355 (1355)
ಪಾಮ್ ವಾರದ ಡೆಲಿವರಿ	1278 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1340)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,10,200 (1,09,200)
ಬೆಳ್ಳಿ ಕೆ.ಜಿಗೆ	1,29,400 (1,27,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Accounts & Finance

REQUIRED
Accounts Manager
Manufacturing Pvt. Ltd.
Peenya, Bengaluru
Looking for an Accounts Manager to handle all statutory compliances for a manufacturing company in Peenya.
Responsibilities: Direct & Indirect taxes: GST, Income Tax, TDS/TCS, returns, audits Manage statutory/tax audits, assessments, and departmental notices, Monthly closings, reconciliations, and MIS reports
Strengthen internal controls and compliance systems
Requirements:
CA Inter preferred, 15+ yrs experience in manufacturing finance/ taxation. Strong knowledge of GST, Income Tax, statutory audits. ERP (Tally/others) proficiency, hands-on reconciliations
Exposure to costing/ inventory compliance a plus
Location: On-site, Peenya.
Apply: Send resume with current CTC details to
acctsblr25@gmail.com

Engg/ Production Technical

REQUIRED
Quality Assurance Manager & Engineers
Manufacturing Pvt. Ltd.
Peenya, Bengaluru
Hiring Quality Assurance Manager to lead QA systems, ISO/statutory compliance, audits, supplier quality, and documentation. Required: Graduate/Diploma Engineering, 15+ Yrs QA exp in manufacturing, strong ISO/QA knowledge.
Also hiring Quality Assurance Engineers – Fresh Diploma (minimum) with interest in QA processes.
Location: On-site, Peenya.
Apply: Send resume with current CTC details to
workwithus50@gmail.com

Marketing & Sales

WANTED A Operation Executive for a Transport Co. in Bengaluru. Send CV at sgupta@kalayatancargo.com

Drivers

ಚಾಲಕರು ಬೇಕಾಗಿದ್ದಾರೆ
ಕಾಲೇಜು ಬಸ್ಸಿಗೆ ಪುರುಷ ಚಾಲಕರು ಬೇಕಾಗಿದ್ದಾರೆ.
ವಯಸ್ಸು: 35ರಿಂದ 50ವರ್ಷ.
ಅರ್ಹತೆ: ಮಾನ್ಯವಾದ ಭಾರೀ ವಾಹನ ಚಾಲನಾ ಪರವಾನಗಿ (HVL) ಕಡ್ಡಾಯ.
ಸಂಪರ್ಕಿಸಿ: 6364544814

General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

ಮನೆಯಿಂದಲೇ ಕೆಲಸ. ಕಂಪನಿಗಳಿಗೆ ಬೇಕಾಗಿದ್ದಾರೆ. ವಿದ್ಯಾರ್ಥಿಗಳಿಗೆ, ಪುರುಷರಿಗೆ, ಮಹಿಳೆಯರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) 18,200 ರಿಂದ 35,000. ಕೊರಿಯರ್ ಸೌಲಭ್ಯವಿದೆ. 9916065497

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನೇಪಾಳ: ಸರ್ಕಾರಿ ಗೌರವದೊಂದಿಗೆ ಹುತಾತ್ಮರ ಅಂತ್ಯಕ್ರಿಯೆ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ‘ಜೆನ್-ಝಿ’ ಗುಂಪು ಸಂಘಟಿಸಿದ್ದ ಪ್ರತಿಭಟನೆಯಲ್ಲಿ ಮೃತಪಟ್ಟ ಕೆಲವರ ಅಂತ್ಯಕ್ರಿಯೆಯನ್ನು ಕಠ್ಮಂಡುವಿನಲ್ಲಿ ಸರ್ಕಾರಿ ಗೌರವಗಳೊಂದಿಗೆ ಮಂಗಳವಾರ ನೆರವೇರಿಸಲಾಯಿತು.

ಮಹಾರಾಜ್‌ಗುಂಜ್‌ನಲ್ಲಿರುವ ತ್ರಿಭುವನ್ ವಿಶ್ವವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ, ನಾಲ್ವರ ಮೃತದೇಹಗಳನ್ನು ಮೆರವಣಿಗೆ ಮೂಲಕ ಪಶುಪತಿಗೆ ಕೊಂಡೊಯ್ಯಲಾಯಿತು. ಆರು ಶವಗಳನ್ನು ವಿವಿಧ ಜಿಲ್ಲೆಗಳಿಗೆ ಕೊಂಡೊಯ್ಯಲಾಯಿತು. ಪಶುಪತಿ ಆರ್ಯಘಾಟ್‌ನಲ್ಲಿ ನಡೆದ ಮೃತರ ಅಂತಿಮ ವಿಧಿವಿಧಾನಗಳಲ್ಲಿ ಇಂಧನ ಮತ್ತು ಮೂಲಸೌಕರ್ಯ ಸಚಿವ ಕುಲ್ಮನ್ ಘೀಸಿಂಗ್ ಮತ್ತು ಗೃಹ ಸಚಿವ ಓಂ ಪ್ರಕಾಶ್ ಆರ್ಯಲ್ ಭಾಗವಹಿಸಿದ್ದರು. ಹುತಾತ್ಮರಿಗೆ ಸಾವಿರಾರು ಜನರು ಗೌರವ ಸಲ್ಲಿಸಿದರು.

ಸೆಪ್ಟೆಂಬರ್ 8 ಮತ್ತು 9ರಂದು ನಡೆಸಿದ್ದ ಪ್ರತಿಭಟನೆಯಲ್ಲಿ ಮೃತಪಟ್ಟವರನ್ನು ‘ಹುತಾತ್ಮರು’ ಎಂದು ಪ್ರಧಾನಿ ಸುಶೀಲಾ ಕಾರ್ಕಿ ಭಾನುವಾರ ಘೋಷಿಸಿದ್ದರು.

ಚೀನಾ- ಫಿಲಿಪ್ಪೀನ್ಸ್ ಹಡಗು ಡಿಕ್ಕಿ

ಬೀಜಿಂಗ್ (ಎಪಿ): ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ ಮತ್ತು ಫಿಲಿಪ್ಪೀನ್ಸ್ ಎರಡೂ ದೇಶಗಳು ಹಕ್ಕು ಸಾಧಿಸಲು ಪ್ರಯತ್ನಿಸುತ್ತಿರುವ ವಿವಾದಿತ ದ್ವೀಪ ಸಮೂಹ ‘ಸ್ಕಾರ್ಬರೊ ಶೋಲ್’ನಲ್ಲಿ, ಫಿಲಿಪ್ಪೀನ್ಸ್‌ನ ಹಡಗು, ಉದ್ದೇಶಪೂರ್ವಕವಾಗಿ ತನ್ನ ಹಡಗಿಗೆ ಡಿಕ್ಕಿ ಹೊಡೆದಿದೆ ಎಂದು ಚೀನಾದ ಕರಾವಳಿ ಕಾವಲು ಪಡೆ ಆರೋಪಿಸಿದೆ.

‘ಫಿಲಿಪ್ಪೀನ್ಸ್‌ಗೆ ಸೇರಿದ 10ಕ್ಕೂ ಹೆಚ್ಚು ಹಡಗುಗಳು ಏಕಕಾಲದಲ್ಲಿ ವಿವಿಧ ದಿಕ್ಕುಗಳಿಂದ ‘ಹುವಾಂಗ್ಯಾನ್ ದ್ವೀಪ’ದತ್ತ (ಸ್ಕಾರ್ಬರೊ ಶೋಲ್) ನುಗ್ಗಿಬಂದವು. ಈ ಹಡಗುಗಳ ಮೇಲೆ ಜಲಫಿರಂಗಿ ಬಳಸಲಾಯಿತು’ ಎಂದು ಚೀನಾದ ಕರಾವಳಿ ಕಾವಲು ಪಡೆಯ(ಸಿಸಿಜಿ) ವಕ್ತಾರ ಗಾನ್ ಯೂ ಹೇಳಿದ್ದಾರೆ.

‘ಸ್ಕಾರ್ಬರೊ ಶೋಲ್’ನ ಒಂದು ಭಾಗವನ್ನು ‘ರಾಷ್ಟ್ರೀಯ ಪ್ರಕೃತಿ ಮೀಸಲು ಪ್ರದೇಶ’ ಎಂದು ಚೀನಾ ಘೋಷಿಸಿ 6 ದಿನಗಳು ಕಳೆದಿದ್ದು, ಇದರ ಬೆನ್ನಲ್ಲೇ ಫಿಲಿಪ್ಪೀನ್ಸ್‌ನಿಂದ ಈ ವಿರೋಧ ವ್ಯಕ್ತವಾಗಿದೆ. ಆದರೆ, ಹಡಗು ಡಿಕ್ಕಿ ಘಟನೆಗೆ ಸಂಬಂಧಿಸಿದಂತೆ ಫಿಲಿಪ್ಪೀನ್ಸ್ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ. ಸ್ಕಾರ್ಬರೊ ಶೋಲ್‌ನ ಒಂದು ಭಾಗವನ್ನು ಚೀನಾ ‘ಪ್ರಕೃತಿ ಮೀಸಲು ಪ್ರದೇಶ’ವಾಗಿ ಘೋಷಿಸುವುದರ ವಿರುದ್ಧ ರಾಜತಾಂತ್ರಿಕ ಪ್ರತಿಭಟನೆ ನಡೆಸುವುದಾಗಿ ಫಿಲಿಪ್ಪೀನ್ಸ್ ಹೇಳಿತ್ತು.

ಎರಡು ದೇಶಗಳ ನಡುವಿನ ಜಲ ಗಡಿ ಮತ್ತು ಪ್ರಮುಖ ಮೀನುಗಾರಿಕಾ ತಾಣವೂ ಆಗಿರುವ ಈ ದ್ವೀಪದ ಮೇಲೆ ಹಕ್ಕು ಸಾಧಿಸಲು ಚೀನಾ–ಫಿಲಿಪ್ಪೀನ್ಸ್ ನಡುವೆ ನಿರಂತರವಾಗಿ ಸಂಘರ್ಷ ಮುಂದುವರಿದಿದೆ. ಫಿಲಿಪ್ಪೀನ್ಸ್, ವಿಯೆಟ್ನಾಂ, ಮಲೇಷ್ಯಾ, ಬ್ರೂನೈ ಮತ್ತು ತೈವಾನ್ ದೇಶಗಳು ಚೀನಾದ ಈ ಪ್ರಯತ್ನವನ್ನು ವಿರೋಧಿಸುತ್ತಿವೆ.

ವಿಮಾನವಾಹಕ ನೌಕೆ ನಿಯೋಜನೆ: ದಕ್ಷಿಣ ಚೀನಾ ಸಮುದ್ರದಲ್ಲಿ ಉದ್ವಿಗ್ನತೆ ಮುಂದುವರಿದ ಬೆನ್ನಲ್ಲೇ, ಚೀನಾವು ತನ್ನ ಹೊಸ ವಿಮಾನವಾಹಕ ನೌಕೆಯನ್ನು ತೀರದಲ್ಲಿ ಸನ್ನದ್ಧವಾಗಿರಿಸಿದೆ.

‘ಫ್ಯುಜಿಯಾನ್’ ಚೀನಾ ನೌಕಾಪಡೆಯ ಮೂರನೆಯ ವಿಮಾನವಾಹಕ ನೌಕೆಯಾಗಿದೆ. ಈ ನೌಕೆ ಇನ್ನೂ ಅಧಿಕೃತವಾಗಿ ಕಾರ್ಯಾಚರಣೆ ಆರಂಭಿಸಿಲ್ಲ. ತರಬೇತಿ ಉದ್ದೇಶಕ್ಕಾಗಿ ದಕ್ಷಿಣ ಚೀನಾ ಸಮುದ್ರದಲ್ಲಿ ಕಾರ್ಯಾಚರಿಸುತ್ತಿತ್ತು. ಫ್ಯುಜಿಯಾನ್ ನಿಯೋಜನೆ ಬೆನ್ನಲ್ಲೇ, ಮೂರು ಅತ್ಯಾಧುನಿಕ ವಿಮಾನವಾಹಕಗಳು ಚೀನಾದ ಕರಾವಳಿ ಪಡೆಗೆ ಸೇರ್ಪಡೆಯಾದಂತಾಗಿವೆ.

ಬ್ರಿಟನ್ ಕಳವಳ

ಚೀನಾ– ಫಿಲಿಪ್ಪೀನ್ಸ್ ಹಡಗು ಡಿಕ್ಕಿ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ದಕ್ಷಿಣ ಚೀನಾ ಸಮುದ್ರದಲ್ಲಿನ ಉದ್ವಿಗ್ನತೆ ಕುರಿತು ನಡೆಯುತ್ತಿರುವ ಚರ್ಚೆ ಕುರಿತು ಗ್ರೇಟ್ ಬ್ರಿಟನ್ ಮತ್ತು ಆಸ್ಟ್ರೇಲಿಯಾ ಕಳವಳ ವ್ಯಕ್ತಪಡಿಸಿವೆ. ‘ಪ್ರಕೃತಿ ಸಂರಕ್ಷಣೆ ಹೆಸರಿನಲ್ಲಿ ಚೀನಾವು ‘ಸ್ಕಾರ್ಬರೊ ಶೋಲ್’ ಮೇಲೆ ಹಕ್ಕು ಸ್ಥಾಪಿಸಲು ನಡೆಸುತ್ತಿರುವ ಪ್ರಯತ್ನವನ್ನು ನಾವು ವಿರೋಧಿಸುತ್ತೇವೆ’ ಎಂದು ಫಿಲಿಪ್ಪೀನ್ಸ್‌ನಲ್ಲಿರುವ ಕೆನಡಾದ ರಾಯಭಾರ ಕಚೇರಿ ಹೇಳಿದೆ.

> ದಕ್ಷಿಣ ಚೀನಾ ಸಮುದ್ರದಲ್ಲಿ ತನ್ನ ಹಕ್ಕು ಸ್ಥಾಪಿಸಲು ಚೀನಾ ಅನುಸರಿಸಿರುವ ಮತ್ತೊಂದು ಬಲವಂತದ ಕ್ರಮ ಇದು
>
> **ಮಾರ್ಕೊ ರುಬಿಯೊ,** ಅಮೆರಿಕ ವಿದೇಶಾಂಗ ಕಾರ್ಯದರ್ಶಿ

‘ಗಾಜಾ ಹೊತ್ತಿ ಉರಿಯುತ್ತಿದೆ’: ರಕ್ಷಣಾ ಸಚಿವ ಕಾಟ್ಜ್ ಹೇಳಿಕೆ

ಇಸ್ರೇಲ್‌ನಿಂದ ಮುಂದುವರಿದ ದಾಳಿ

ಜೆರುಸಲೇಂ (ಎಪಿ): ಗಾಜಾ ನಗರದ ಮೇಲೆ ಸೋಮವಾರ ರಾತ್ರಿಯಿಡೀ ಭಾರಿ ದಾಳಿ ನಡೆಸಿರುವ ಇಸ್ರೇಲ್ ಸೇನೆ, ‘ಹಮಾಸ್ ಸಂಪೂರ್ಣ ನಾಶ’ವಾಗುವ ವರೆಗೆ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ಹೇಳಿದೆ.

ಗಾಜಾ ನಗರದ ದಕ್ಷಿಣ ಭಾಗಕ್ಕೆ ತೆರಳುವಂತೆ ನಿವಾಸಿಗಳಿಗೆ ಸೇನೆಯು ಮಂಗಳವಾರ ಎಚ್ಚರಿಕೆ ನೀಡಿದೆ. ಸೋಮವಾರ ರಾತ್ರಿ ನಡೆಸಿದ ದಾಳಿಯಿಂದ ‘ಗಾಜಾ ಹೊತ್ತಿ ಉರಿಯುತ್ತಿದೆ’ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ‘ಹಮಾಸ್‌ನ ಮಿಲಿಟರಿ ಮೂಲಸೌಕರ್ಯ’ ನಾಶ ಮಾಡಲು ವಿಸ್ತೃತ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಇಸ್ರೇಲ್ ಸೇನೆಯ ವಕ್ತಾರ ಅವಿಹಾಯ್ ಅಡ್ರೇಯಿ ಘೋಷಿಸಿದ್ದಾರೆ.

ಕಳೆದ ಒಂದು ತಿಂಗಳಲ್ಲಿ ಸುಮಾರು 2.20 ಲಕ್ಷ ಪ್ಯಾಲೆಸ್ಟೀನಿಯನ್ನರು ಉತ್ತರ ಗಾಜಾವನ್ನು ತೊರೆದಿದ್ದಾರೆ ಎಂದು ವಿಶ್ವಸಂಸ್ಥೆ ಅಂದಾಜು ಮಾಡಿದೆ. ಇಸ್ರೇಲ್ ಸೇನೆಯು ಗಾಜಾ ನಗರ ತೊರೆಯುವಂತೆ ನಿವಾಸಿಗಳಿಗೆ ಎಚ್ಚರಿಕೆ ನೀಡಿದ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ಸುಮಾರು 10 ಲಕ್ಷ ಮಂದಿ ನೆಲಸಿದ್ದರು.

ಇಸ್ರೇಲ್ ಸೇನೆಯ ದಾಳಿಯಿಂದ ಗಾಜಾ ನಗರದಲ್ಲಿ ಧ್ವಂಸಗೊಂಡ ಕಟ್ಟಡದ ಅವಶೇಷಗಳಡಿ ಸ್ಥಳೀಯರು ಹುಡುಕಾಟ ನಡೆಸಿದರು —ಎಎಫ್‌ಪಿ ಚಿತ್ರ

ಸೋಮವಾರ ರಾತ್ರಿಯಿಂದೀಚೆ ಗಾಜಾದಲ್ಲಿ 20 ಮಂದಿ ಮೃತಪಟ್ಟಿದ್ದಾರೆ. ಗಾಜಾದ ಪಶ್ಚಿಮ ಭಾಗದ ಜನವಸತಿ ಪ್ರದೇಶದ ಮೇಲೆ ನಡೆದ ದಾಳಿಯಲ್ಲಿ ಮೃತಪಟ್ಟ 20 ಮಂದಿಯ ಮೃತದೇಹಗಳನ್ನು ತರಲಾಗಿದೆ ಎಂದು ಶಿಫಾ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ. ಬಾಂಬ್ ದಾಳಿಯಲ್ಲಿ 90 ಮಂದಿ ಗಾಯಗೊಂಡಿದ್ದಾರೆ.

‘ಗಾಜಾದ ಜನರಿಗೆ ಸೋಮವಾರ ರಾತ್ರಿ ದುರಂತಮಯವಾಗಿತ್ತು. ಒಂದೇ ಒಂದು ಕ್ಷಣ ಬಿಡುವು ನೀಡದೆ ಬಾಂಬ್ ದಾಳಿ ನಡೆಸಲಾಗಿದೆ. ಕಟ್ಟಡಗಳ ಅವಶೇಷಗಳಡಿ ಹಲವು ಮೃತದೇಹಗಳು ಇವೆ’ ಎಂದು ಶಿಫಾ ಆಸ್ಪತ್ರೆಯ ನಿರ್ದೇಶಕ ಡಾ.ಮೊಹಮ್ಮದ್ ಅಬು ಸೆಲ್ಮಿಯಾ ತಿಳಿಸಿದ್ದಾರೆ.

ಈಜಿಪ್ಟ್ ಕಿಡಿ

ಇಸ್ರೇಲ್ ಜೊತೆ ದಶಕಗಳ ಹಿಂದೆಯೇ ಶಾಂತಿ ಒಪ್ಪಂದ ಮಾಡಿಕೊಂಡಿರುವ ಮತ್ತು ಗಾಜಾ ಯುದ್ಧ ನಿಲ್ಲಿಸಲು ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿರುವ ಈಜಿಪ್ಟ್ ಇದೀಗ ಇಸ್ರೇಲ್ ಜೊತೆ ತಾಳ್ಮೆ ಕಳೆದುಕೊಂಡಂತೆ ಕಾಣುತ್ತಿದೆ.

ಕತಾರ್‌ನಲ್ಲಿ ಸೋಮವಾರ ನಡೆದ ಅರಬ್ ರಾಷ್ಟ್ರಗಳ ಶೃಂಗಸಭೆಯಲ್ಲಿ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತಾಹ್ ಅಲ್ ಸಿಸಿ ಅವರು ಇಸ್ರೇಲ್ ಅನ್ನು ‘ಶತ್ರು’ ಎಂದು ಕರೆದಿದ್ದಾರೆ. 1979ರಲ್ಲಿ ಎರಡೂ ದೇಶಗಳ ಮಧ್ಯೆ ರಾಜತಾಂತ್ರಿಕ ಸಂಬಂಧ ಆರಂಭವಾದ ನಂತರ ಈಜಿಪ್ಟ್ ನಾಯಕರೊಬ್ಬರು ಈ ಪದವನ್ನು ಬಳಸಿದ್ದು ಇದೇ ಮೊದಲು ಎಂದು ಈಜಿಪ್ಟ್ ಸರ್ಕಾರದ ಮಾಹಿತಿ ವಿಭಾಗದ ಮುಖ್ಯಸ್ಥರಾದ ದಿಯಾ ರಶ್ವಾನ್ ಹೇಳಿದ್ದಾರೆ.

ನ್ಯೂಯಾರ್ಕ್ ಟೈಮ್ಸ್ ವಿರುದ್ಧ ಟ್ರಂಪ್ ದಾವೆ

ನ್ಯೂಯಾರ್ಕ್ (ಎಪಿ): ದಿ ನ್ಯೂಯಾರ್ಕ್ ಟೈಮ್ಸ್ ಹಾಗೂ ಅದರ ನಾಲ್ವರು ಪತ್ರಕರ್ತರ ವಿರುದ್ಧ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 15 ಬಿಲಿಯನ್ ಡಾಲರ್ (₹1.32 ಲಕ್ಷ ಕೋಟಿ) ಮೊತ್ತದ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ಫ್ಲೋರಿಡಾದ ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಿಸಿರುವ ದಾವೆಯಲ್ಲಿ, 2024ರ ಚುನಾವಣೆಗೂ ಮುನ್ನ ಟ್ರಂಪ್ ವಿರುದ್ಧ ಬರೆದ ಕೆಲ ಲೇಖನಗಳು ಹಾಗೂ ನ್ಯೂಯಾರ್ಕ್ ಟೈಮ್ಸ್‌ನ ಇಬ್ಬರು ಪತ್ರಕರ್ತರು ಬರೆದ ಒಂದು ಪುಸ್ತಕವನ್ನು ಹೆಸರಿಸಲಾಗಿದೆ.

‘ನ್ಯೂಯಾರ್ಕ್ ಟೈಮ್ಸ್ ನನ್ನ ವಿರುದ್ಧ ಸುಳ್ಳು ಸುದ್ದಿ ಪ್ರಕಟಿಸುವ ಮೂಲಕ ಮಾನಹಾನಿ ಉಂಟು ಮಾಡಿದೆ. ಇದು ಎಡಪಂಥೀಯ ಡೆಮಾಕ್ರಟಿಕ್ ಪಕ್ಷದ ಮುಖವಾಣಿಯಾಗಿದೆ’ ಎಂದು ಟ್ರಂಪ್ ‘ಟ್ರೂಥ್’ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಡೊನಾಲ್ಡ್ ಟ್ರಂಪ್

ಈ ಕುರಿತು ನ್ಯೂಯಾರ್ಕ್ ಟೈಮ್ಸ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

‘ಉದ್ಯಮಿ ಜೆಫ್ರಿ ಎಪ್‌ಸ್ಟೀನ್ ಅವರೊಂದಿಗೆ ಟ್ರಂಪ್ ಅವರಿಗೆ ಸಂಪರ್ಕ ಇತ್ತು’ ಎಂದು ವರದಿ ಪ್ರಕಟಿಸಿದ್ದ ‘ದಿ ವಾಲ್ ಸ್ಟ್ರೀಟ್ ಜರ್ನಲ್’ ಹಾಗೂ ಮಾಧ್ಯಮ ಕ್ಷೇತ್ರದ ದೈತ್ಯ ರೂಪರ್ಟ್ ಮುರ್ಡೋಕ್ ವಿರುದ್ಧ ಟ್ರಂಪ್ ಅವರು ಕಳೆದ ಜುಲೈನಲ್ಲಿ 10 ಬಿಲಿಯನ್ ಡಾಲರ್ (ಸುಮಾರು ₹86,187 ಕೋಟಿ) ಮೊತ್ತದ ಮಾನನಷ್ಟ ಮೊಕದ್ದಮೆ ಹೂಡಿದ್ದರು.

'ಸಿಂಗ್ಲಿ'ಯಾದ 'ಅಯ್ಯಂಗಾರಿ'

ಬಲರಾಮನ ದಿನಗಳು

ಆದಿತ್ಯ

• ಅಭಿಲಾಷ್ ಪಿ.ಎಸ್.

'ಆ ದಿನಗಳು' ಸಿನಿಮಾ ಖ್ಯಾತಿಯ ನಿರ್ದೇಶಕ ಕೆ.ಎಂ. ಚೈತನ್ಯ ಆ್ಯಕ್ಷನ್ ಕಟ್ ಹೇಳಿರುವ 'ಬಲರಾಮನ ದಿನಗಳು' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ವಿನೋದ್ ಪ್ರಭಾಕರ್ ಅವರ 25ನೇ ಸಿನಿಮಾವಾದ ಇದರಲ್ಲಿ ಆಶಿಶ್ ವಿದ್ಯಾರ್ಥಿ, ಅತುಲ್ ಕುಲಕರ್ಣಿ, ಅವಿನಾಶ್, ಡ್ರ್ಯಾಗನ್ ಮಂಜು, 'ಬಿಗ್‌ಬಾಸ್' ಖ್ಯಾತಿಯ ವಿನಯ್ ಗೌಡ ಹೀಗೆ ಖ್ಯಾತ ಕಲಾವಿದರ ದಂಡೇ ಇದೆ. ಇವರ ಜೊತೆ ತೆರೆ ಹಂಚಿಕೊಂಡಿದ್ದಾರೆ 'ಡೇರ್‌ಡೆವಿಲ್ ಮುಸ್ತಾಫಾ' ಖ್ಯಾತಿಯ ಆದಿತ್ಯ ಆಶ್ರೀ. 'ರಾಮಾನುಜ ಅಯ್ಯಂಗಾರಿ'ಯಾಗಿ ಮಿಂಚಿದ್ದ ಆದಿತ್ಯ ಇದೀಗ 1980ರ ಕಾಲಘಟ್ಟದ ಭೂಗತಲೋಕದ ಕಥೆಯಲ್ಲಿ 'ಸಿಂಗ್ಲಿ' ಎಂಬ ಮಾಸ್ ಪಾತ್ರದ ಮುಖಾಂತರ ಪ್ರೇಕ್ಷಕರೆದುರಿಗೆ ಬರಲಿದ್ದಾರೆ.

ಈ ಕುರಿತು ಮಾತಿಗಿಳಿದ ಆದಿತ್ಯ, '2012ರಿಂದ ರಂಗಭೂಮಿಯಲ್ಲಿರುವ ನಾನು 2018ರಲ್ಲಿ ಚಿತ್ರರಂಗಕ್ಕೆ ಹೆಜ್ಜೆ ಇಟ್ಟೆ. 'ಡೇರ್‌ಡೆವಿಲ್ ಮುಸ್ತಾಫಾ' ರಿಲೀಸ್ ಆದ ಬಳಿಕ ನನ್ನ ಪಾತ್ರಕ್ಕೆ ಒಳ್ಳೆಯ ಪ್ರಶಂಸೆ ದೊರೆಯಿತು. ಈ ಸಿನಿಮಾ ಕಮರ್ಷಿಯಲ್ ದೃಷ್ಟಿಯಿಂದಲೂ ಗೆದ್ದಿತ್ತು. ಈ ಪಾತ್ರದ ಮುಖಾಂತರ ಕನ್ನಡ ಚಿತ್ರರಂಗ ಹಾಗೂ ಪ್ರೇಕ್ಷಕರು ನನ್ನನ್ನು ಗುರುತಿಸಿದರು. ಈ ಸಿನಿಮಾ ಬಳಿಕ ಮುಂದಿನ ಚಿತ್ರದ ಆಯ್ಕೆಯ ಸಂದರ್ಭದಲ್ಲಿ ಸಣ್ಣ ಅಳುಕಿತ್ತು. ಹಲವು ಸಿನಿಮಾಗಳ ಆಫರ್‌ಗಳು ಬಂದರೂ ಅವುಗಳಲ್ಲಿನ ಪಾತ್ರಕ್ಕೆ ಸತ್ವ ಇರಲಿಲ್ಲ, ಅವು ನನ್ನನ್ನು ಸೆಳೆಯಲಿಲ್ಲ. ನನ್ನ ವೃತ್ತಿಯೇ ನಟನೆಯಾಗಿರುವ ಕಾರಣ ಎರಡನೇ ಹೆಜ್ಜೆಯನ್ನು ಜಾಗರೂಕತೆಯಿಂದ ಇಡಬೇಕಿತ್ತು. ಈ ಸಂದರ್ಭದಲ್ಲಿ ಕೆ.ಎಂ.ಚೈತನ್ಯ ಅವರು ಕರೆ ಮಾಡಿ 'ಬಲರಾಮನ ದಿನಗಳು' ಕಥೆಯೊಳಗಿರುವ 24–25 ವರ್ಷದ ಯುವಕನಾದ 'ಸಿಂಗ್ಲಿ'ಯೆಂಬ ಪಾತ್ರದ ವಿವರಣೆ ನೀಡಿದ್ದರು. ಈ ಪಾತ್ರದ ಮೇಲೆ ನಂಬಿಕೆ ಮೂಡಿದ ಕಾರಣ ಒಪ್ಪಿಕೊಂಡೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಡಬ್ಬಿಂಗ್ ಕೂಡಾ ಮುಗಿಸಿದ್ದೇನೆ' ಎಂದರು.

ಪಾತ್ರದ ಬಗ್ಗೆ ವಿವರಣೆ ನೀಡುತ್ತಾ, 'ಇದು ಅಯ್ಯಂಗಾರಿ ಪಾತ್ರಕ್ಕೆ ಸಂಪೂರ್ಣ ತದ್ವಿರುದ್ಧವಾದ ಪಾತ್ರ. ಈ ಪಾತ್ರ ಸಿನಿಮಾದ ಹೀರೊ, ಖಳನಾಯಕ ಅಲ್ಲ. ಬದಲಾಗಿ ಅವನ ಜೀವನದಲ್ಲಿ ಅವನು ಹೀರೊ. ಪಿಕ್ ಪಾಕೆಟ್ ಮಾಡುತ್ತಿದ್ದ ಹುಡುಗನೊಬ್ಬ ತನಗಾದ ಅವಮಾನ, ಹತಾಶೆಯಿಂದ ಭೂಗತಲೋಕದ ದಿಗ್ಗಜರನ್ನು ಎದುರುಹಾಕಿಕೊಂಡು ಅವರ ಮಟ್ಟಕ್ಕೆ ಬೆಳೆಯುವ ಹಟ ಇಟ್ಟುಕೊಂಡಿರುತ್ತಾನೆ. ಈ ಪಾತ್ರದ ತಯಾರಿಗಾಗಿ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂದರ್ಶನಗಳನ್ನು ನೋಡಿದ್ದೆ, ಪಾತ್ರದ ಮಾತಿನ ಶೈಲಿ, ಹಾವಭಾವದ ಬಗ್ಗೆ ತಿಳಿದುಕೊಂಡೆ. 'ಡೇರ್‌ಡೆವಿಲ್ ಮುಸ್ತಾಫಾ' ನನಗೆ ಕ್ಲಾಸ್ ಲುಕ್ ನೀಡಿತ್ತು. ಇದು ಪೂರ್ಣವಾದ ಮಾಸ್ ಅವತಾರ ನೀಡಿದೆ. ಈ ಪಾತ್ರ ಪ್ರೇಕ್ಷಕರೆದುರಿಗೆ ಬಂದ ನಂತರ ಹೆಚ್ಚಿನ ಅವಕಾಶಗಳು ತೆರೆದುಕೊಳ್ಳುವ ಭರವಸೆ ನನಗಿದೆ' ಎನ್ನುತ್ತಾರೆ ಆದಿತ್ಯ.

ಆ್ಯಕ್ಷನ್ ಮಾಸ್ಟರ್ ವಿನೋದ್!

'ಸಣ್ಣ ವಯಸ್ಸಿನಲ್ಲೇ ನನಗೆ ದಿಗ್ಗಜರ ಜೊತೆ ತೆರೆಹಂಚಿಕೊಳ್ಳುವ ಅವಕಾಶ ಈ ಸಿನಿಮಾ ಮೂಲಕ ದೊರಕಿದೆ. ನಟನೆಯ ರುಚಿ ಗೊತ್ತಿದ್ದ ನನಗೆ ಆ್ಯಕ್ಷನ್ ಹೊಸ ಲೋಕವಾಗಿತ್ತು. ಸಾಹಸ ದೃಶ್ಯಗಳ ಚಿತ್ರೀಕರಣದ ಸಂದರ್ಭದಲ್ಲಿ ವಿನೋದ್ ಪ್ರಭಾಕರ್ ಅವರೇ ನನಗೆ ತರಬೇತಿ, ಸಲಹೆ, ಸೂಚನೆ ನೀಡುತ್ತಿದ್ದರು. ನನ್ನ ಮೂಲಕ ನಿರ್ದೇಶಕರು 'ಸಿಂಗ್ಲಿ' ಪಾತ್ರಕ್ಕೆ ಜೀವ ತುಂಬಿದ್ದರು. ಕೆ.ಎಂ. ಚೈತನ್ಯ ಅವರು ನನ್ನೊಳಗಿನ ನಟನೆಯನ್ನು ಗುರುತಿಸಿದ ಖುಷಿ ನನಗಿತ್ತು. ನನ್ನಲ್ಲೂ ಮಾಸ್ ಎಲಿಮೆಂಟ್ ಇದೆ ಎನ್ನುವುದನ್ನು ಅವರು ಕಂಡಿದ್ದರು. ಇದು 'ಸಿಂಗ್ಲಿ' ಎಂಬ ಪಾತ್ರದ ಮುಖಾಂತರ ಹೊರಬಿದ್ದಾಗ ನಾನೇ ಆಶ್ಚರ್ಯಪಟ್ಟಿದ್ದೆ. ಚೈತನ್ಯ ಅವರ ಬರವಣಿಗೆ ಕುತೂಹಲಕಾರಿಯಾಗಿದ್ದು, ಪ್ರೇಕ್ಷಕರನ್ನು ಸೀಟಿನಂಚಿಗೆ ತಂದು ಕೂರಿಸಲಿದೆ' ಎಂದರು ಆದಿತ್ಯ.

'ಹೊಸ ಕಥೆಗಳನ್ನು ಕೇಳುತ್ತಿದ್ದೇನೆ. ಇಷ್ಟವಾಗುವ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳಲಿದ್ದೇನೆ' ಎನ್ನುತ್ತಾ ಆದಿತ್ಯ ಮಾತಿಗೆ ವಿರಾಮವಿತ್ತರು. ❖

ಹೊರಬಂತು 'ಬ್ರ್ಯಾಟ್' ಹೊಸ ಹಾಡು

ಶಶಾಂಕ್ ನಿರ್ದೇಶನದಲ್ಲಿ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿರುವ 'ಬ್ರ್ಯಾಟ್' ಚಿತ್ರದ 'ಗಂಗಿ ಗಂಗಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಬಾಲು ಬೆಳಗುಂದಿ ಸಾಹಿತ್ಯ ಬರೆದು ಹಾಡಿದ್ದಾರೆ. ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. 'ಕುರಿಗಾಹಿಯಾಗಿದ್ದ ನಾನು, ಜನಪದ ಶೈಲಿಯ ಅನೇಕ ಗೀತೆಗಳನ್ನು ರಚಿಸಿ ಹಾಡುತ್ತಿದ್ದೆ. ಆನಂತರ ರಿಯಾಲಿಟಿ ಶೋದಲ್ಲಿ ಭಾಗಿಯಾದೆ. ಆಗ ಅರ್ಜುನ್ ಜನ್ಯ ಅವರು ಸಿನಿಮಾವೊಂದರಲ್ಲಿ ಹಾಡಿಸುತ್ತೇನೆ ಎಂದಿದ್ದರು. ಈ ಚಿತ್ರದಲ್ಲಿ ಅವಕಾಶ ನೀಡಿದ್ದಾರೆ' ಎಂದರು ಬಾಲು ಬೆಳಗುಂದಿ.

ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಮೂಡಿಬರುತ್ತಿರುವ ಚಿತ್ರಕ್ಕೆ ಮಂಜುನಾಥ್ ಕಂದಕೂರ್ ಬಂಡವಾಳ ಹೂಡಿದ್ದಾರೆ. 'ಬ್ರ್ಯಾಟ್' ಎಂದರೆ ತರ್ಲೆ ಹುಡುಗ ಹಾಗೂ ದಾರಿ ತಪ್ಪಿದ ಮಗ ಎನ್ನಬಹುದು. ನಮ್ಮ ಚಿತ್ರ ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿದ್ದರೂ, ಅಪ್ಪ-ಮಗನ ಬಾಂಧವ್ಯ ಸಾರುತ್ತದೆ. ಸಿದ್ ಶ್ರೀರಾಮ್ ಹಾಡಿರುವ 'ನಾನೇ ನೀನಂತೆ' ಹಾಡಿಗೆ ಪ್ರೇಕ್ಷಕರಿಂದ ದೊಡ್ಡ ಮಟ್ಟದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ. ಈ ಹಾಡಿಗೂ ಅದೇ ರೀತಿ ಪ್ರೀತಿ ನೀಡಿ. ನವೆಂಬರ್ 14 ರಂದು ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕ ಶಶಾಂಕ್. ❖

ಡಾರ್ಲಿಂಗ್ ಕೃಷ್ಣ

'ರೋಣ' ಟೀಸರ್ ಬಿಡುಗಡೆ

ಪ್ರಕೃತಿ ಪ್ರಸಾದ್

ಬಹುತೇಕ ರಂಗಭೂಮಿ ಹಿನ್ನೆಲೆಯುಳ್ಳವರೇ ಸೇರಿ ನಿರ್ಮಿಸಿರುವ 'ರೋಣ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸತೀಶ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಬಿ.ಕೆ.ಆರ್ ಪ್ರೊಡಕ್ಷನ್ಸ್ ನಿರ್ಮಾಣದ ಚಿತ್ರವನ್ನು ಕನ್ನಡ ಪಿಚ್ಚರ್ ಅರ್ಪಿಸುತ್ತಿದೆ.

'ಒಂಬತ್ತು ವರ್ಷಗಳಿಂದ ಸಿನಿಮಾರಂಗದಲ್ಲಿರುವೆ. ಇದು ನನ್ನ ನಿರ್ದೇಶನದ ಮೊದಲ ಸಿನಿಮಾ. ಎರಡು ವರ್ಷಗಳ ಹಿಂದೆ ಕಥೆ ಮಾಡಿಕೊಂಡು ನಾಯಕನನ್ನು ಹುಡುಕುತ್ತಿದ್ದೆ. ಆಗ ನಾಯಕ ರಘು ಸಿಕ್ಕರು. ನಾವೆಲ್ಲ 'ಕೆರೆಬೇಟೆ' ಚಿತ್ರದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೆವು. 'ರೋಣ' ಒಂದು ಕ್ಷೇತ್ರದ ದೇವಿಯ ಕುರಿತಾದ ಕಥೆ. ರಾಜಕೀಯ, ಧಾರ್ಮಿಕ, ವಿಜ್ಞಾನ ಮುಂತಾದ ಅಂಶಗಳ ಸುತ್ತ ಕಥೆ ಸಾಗುತ್ತದೆ. ಹೊಸಕೋಟೆ ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ' ಎಂದರು ನಿರ್ದೇಶಕರು.

ರಘು ರಾಜನಂದಗೆ ಪ್ರಕೃತಿ ಪ್ರಸಾದ್ ಜೋಡಿಯಾಗಿದ್ದಾರೆ. ಶರತ್ ಲೋಹಿತಾಶ್ವ ತಂದೆಯ ಪಾತ್ರದಲ್ಲಿದ್ದು, ಮಾಲೂರು ವಿಜಯ್, ಚಿಲ್ಲರ್ ಮಂಜು, ಬಲ ರಾಜವಾಡಿ, ಸಂಗೀತ ಅನೀಲ್ ಪ್ರಮುಖ ಪಾತ್ರಗಳನ್ನು ನಿಭಾಯಿಸಿದ್ದಾರೆ.

ಗಗನ್ ಬದೇರಿಯ ಸಂಗೀತ, ಅರುಣ್ ಕುಮಾರ್ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ ಮಠದ್ ಸಂಕಲನವಿದೆ. ❖

'ಜೊತೆಯಾಗಿ ಹಿತವಾಗಿ' ಎಂದ ಹೊಸಬರು

ಬಹುತೇಕ ಹೊಸ ಬರಿಂದಲೇ ಕೂಡಿರುವ 'ಜೊತೆಯಾಗಿ ಹಿತವಾಗಿ' ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಎ.ಆರ್.ಕೃಷ್ಣ ಕಥೆ ಬರೆದು ನಿರ್ದೇಶಿಸಿದ್ದಾರೆ.

'ಪ್ರೇಮ ಕಥೆ ಹೊಂದಿರುವ ಚಿತ್ರವಿದು. ಮನೆಯಲ್ಲಿ ಅತಿಯಾದ ಸ್ವತಂತ್ರ ಇದ್ದರೆ ಅಥವಾ ತುಂಬ ಕಡಿವಾಣ ಹಾಕಿದರೆ ಮಕ್ಕಳು ಏನಾಗುತ್ತಾರೆ ಎಂಬುದನ್ನು ತೋರಿಸಿದ್ದೇವೆ. ನಮ್ಮ ಚಿತ್ರದ ನಾಯಕ ರಾಜ್‌ಕುಮಾರ್ ಕುಟುಂಬದ ಅಭಿಮಾನಿ. ಹೀಗಾಗಿ ಶಿವರಾಜ್‌ಕುಮಾರ್ ಅವರ 'ಆನಂದ್' ಸಿನಿಮಾದ ಹಾಡಿನಲ್ಲಿರುವ ಸಾಲನ್ನೇ ಶೀರ್ಷಿಕೆಯಾಗಿಸಿದ್ದೇವೆ' ಎಂದರು ನಿರ್ದೇಶಕರು.

ಅಗಸ್ತ್ಯ ಚಿತ್ರದ ನಾಯಕ. ಸುವಾರ್ತಾ ನಾಯಕಿ. ಆನಂದ್ ನೀನಾಸಂ, ಚೇತನ್ ದುರ್ಗಾ, ಬಳ್ಳಾರಿ ಅರ್ಜುನ್, ಸಲೋಮಿ ಡಿಸೋಜ, ಭೂಮಿಕಾ ದೇಶಪಾಂಡೆ ಮುಂತಾದವರು ಚಿತ್ರದಲ್ಲಿದ್ದಾರೆ. ❖

ಅಗಸ್ತ್ಯ

ಪಿ.ವಿ. ಸಿಂಧು ಅವರ ಆಟದ ವೈಖರಿ ಚಿತ್ರ: ಬ್ಯಾಡ್ಮಿಂಟನ್ ಫೋಟೊ

ಚೀನಾ ಮಾಸ್ಟರ್ಸ್: ಸಿಂಧು ಮುನ್ನಡೆ, ಆಯುಷ್ ಶೆಟ್ಟಿ ನಿರ್ಗಮನ

ಶೆಂಝೆನ್ (ಚೀನಾ) (ಪಿಟಿಐ): ಭಾರತದ ಅಗ್ರ ಆಟಗಾರ್ತಿ ಪಿ.ವಿ.ಸಿಂಧು ಅವರು ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ಜೂಲಿ ದವಲ್ ಜಾಕೋಬ್ಸನ್ ಅವರನ್ನು ಮಂಗಳವಾರ ನೇರ ಗೇಮ್‌ಗಳಿಂದ ಹಿಮ್ಮೆಟ್ಟಿಸಿದರು. ಆದರೆ ಯುವ ತಾರೆ ಆಯುಷ್ ಶೆಟ್ಟಿ ಮೊದಲ ಸುತ್ತಿನಲ್ಲೇ ಹೊರಬಿದ್ದರು.

20 ವರ್ಷ ವಯಸ್ಸಿನ ಆಯುಷ್ ತೀವ್ರ ಹೋರಾಟದ ನಂತರ ವಿಶ್ವದ ಐದನೇ ಕ್ರಮಾಂಕದ ಆಟಗಾರ ಚೌ ಟಿಯೆನ್ ಚೆನ್ ಅವರಿಗೆ 19–21, 21–12, 16–21ರಲ್ಲಿ ಮಣಿದರು.

68 ನಿಮಿಷ ನಡೆದ ಪಂದ್ಯದ ನಿರ್ಣಾಯಕ ಗೇಮ್‌ನಲ್ಲಿ ಒಂದು ಹಂತದಲ್ಲಿ ಸ್ಕೋರ್ 13–13 ಸಮನಾಗಿತ್ತು. ಈ ಹಂತದಲ್ಲಿ ಆಟದ ಮಟ್ಟ ಸಾಕಷ್ಟು ಸುಧಾರಿಸಿದ ಚೀನಾ ತೈಪೆಯ ಆಟಗಾರ ಗೆಲುವನ್ನು ತಮ್ಮದಾಗಿಸಿಕೊಂಡರು.

ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಸಿಂಧು ಕೇವಲ 27 ನಿಮಿಷಗಳಲ್ಲಿ ಜಾಕೋಬ್ಸನ್ ಅವರನ್ನು 21–4, 21–10ರಿಂದ ಮಣಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ರುತ್ವಿಕಾ ಗದ್ದೆ–ರೋಹನ್ ಕಪೂರ್ ಜೋಡಿ ಜಪಾನ್‌ನ ಯುಇಚಿ ಶಿಮೊಗಾಮಿ– ಸಯಾಕಾ ಹೊಬಾರ ಎದುರು ಸೋತರು.

ಸತತ ನಾಲ್ಕನೇ ಸಲ ಚಿನ್ನಗೆದ್ದ ಕಿಪ್ಯೆಗಾನ್

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: 1500 ಮೀ. ಓಟದಲ್ಲಿ ಕೆನ್ಯಾ ಅಥ್ಲೀಟ್ ದಾಖಲೆ

ಟೋಕಿಯೊ (ಎಎಫ್‌ಪಿ): ಫೇತ್ ಕಿಪ್ಯೆಗಾನ್ ಎಂದಿನಂತೆ ಕೊನೆಯ ಲ್ಯಾಪ್‌ನಲ್ಲಿ ಅತ್ಯಮೋಘ ವೇಗ ಸಾಧಿಸಿ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ 1500 ಮೀ. ಓಟದಲ್ಲಿ ಅಭೂತಪೂರ್ವ ನಾಲ್ಕನೇ ಸಲ ಚಿನ್ನ ಗೆದ್ದುಕೊಂಡರು.

ಮೂರು ಬಾರಿ ಒಲಿಂಪಿಕ್ ಚಾಂಪಿಯನ್ ಸಹ ಆಗಿರುವ ಕಿಪ್ಯೆಗಾನ್ ಮಂಗಳವಾರ 3ನಿ.52.15 ಸೆ.ಗಳಲ್ಲಿ ಓಟವನ್ನು ಪೂರೈಸಿ ಸಂಭ್ರಮಿಸಿದರು. ಆ ಹಾದಿಯಲ್ಲಿ ವಿಶ್ವದ ಅತಿ ಶ್ರೇಷ್ಠ ಮಧ್ಯಮ ದೂರದ ಓಟಗಾರ್ತಿ ಎಂಬ ಹಿರಿಮೆಗೂ ಪಾತ್ರರಾದರು.

ಇದೇ ದೇಶದ ದೋರ್ಕಸ್ ಇವೊಯಿ 3ನಿ.54.02 ಸೆ.ಗಳಲ್ಲಿ ಗುರಿತಲುಪಿ ಬೆಳ್ಳಿ ಗೆದ್ದರೆ, ಆಸ್ಟ್ರೇಲಿಯಾದ ಜೆಸಿಕಾ ಹಲ್ (3:55.16) ಕಂಚಿನ ಪದಕ ತಮ್ಮದಾಗಿಸಿಕೊಂಡರು.

31 ವರ್ಷ ವಯಸ್ಸಿನ ಕಿಪ್ಯೆಗಾನ್ ನಾಲ್ಕು ಪದಕಗಳನ್ನು ಪಡೆಯುವ ಮೂಲಕ, ಪುರುಷರ ವಿಭಾಗದಲ್ಲಿ ಮೊರಾಕೊದ ಹಿಶಮ್ ಎಲ್ ಗೆರೂಝ್ ಅವರು 1997–2003ರ ಅವಧಿಯಲ್ಲಿ ಗೆದ್ದ ಪದಕಗಳ ಸಾಧನೆ ಸರಿಗಟ್ಟಿದರು.

ಕಾರ್ಡೆಲ್‌ಗೆ ಚಿನ್ನ: ಈ ಋತುವಿನಲ್ಲಿ ಉತ್ತಮ ಲಯದಲ್ಲಿರುವ ಅಮೆರಿಕದ ಕಾರ್ಡೆಲ್ ಟಿಂಚ್ ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದರು. ಜಮೈಕಾದ ಇಬ್ಬರು ಓಟಗಾರರ ಪೈಪೋಟಿ ಎದುರಿಸಿದ ಅವರು 12.99 ಸೆ.ಗಳಲ್ಲಿ ದೂರ ಕ್ರಮಿಸಿ ಮೊದಲಿಗರಾದರು.

ಒರ್ಲಾಂಡೊ ಬೆನೆಟ್ (13.08 ಸೆ) ಮತ್ತು ಟೈಲರ್ ಮ್ಯಾಸನ್ (13.12 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ನಾಲ್ಕನೇ ಬಾರಿ ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದ ಅಮೆರಿಕದ ಗ್ರಾಂಟ್ ಹೊಲೊವೆ ವರ ಕನಸು ನುಚ್ಚುನೂರಾಯಿತು.

ಒಲಿಂಪಿಕ್ ಚಾಂಪಿಯನ್ ಸಹ ಆಗಿರುವ 27 ವರ್ಷ ವಯಸ್ಸಿನ ಗ್ರಾಂಟ್ ಸೆಮಿಫೈನಲ್‌ನಲ್ಲಿ ಆರನೇ ಸ್ಥಾನಕ್ಕೆ ಸರಿದು ನಿರಾಶರಾದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಬಾರಿ ಚಿನ್ನ ಗೆದ್ದ ಕೆನ್ಯಾದ ಫೇತ್ ಕಿಪ್ಯೆಗಾನ್ ಅವರ ಸಂಭ್ರಮ (ಎಡ) ಮಹಿಳೆಯರ 400 ಮೀ. ಓಟದಲ್ಲಿ ನೂತನ ವಿಶ್ವದಾಖಲೆ ಬರೆದ ಅಮೆರಿಕದ ಮೆಕ್‌ಲಾಗ್ಲಿನ್–ಲೆವ್ರೋನ್ ಎಎಫ್‌ಪಿ ಚಿತ್ರ

ಮಹಿಳೆಯರ 400 ಮೀ. ಓಟ: ಮೆಕ್‌ಲಾಗ್ಲಿನ್ ವಿಶ್ವದಾಖಲೆ

ಅಮೆರಿಕದ ಮೆಕ್‌ಲಾಗ್ಲಿನ್–ಲೆವ್ರೋನ್ ಅವರು ಮಂಗಳವಾರ ನಡೆದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ 400 ಮೀ. ಓಟದಲ್ಲಿ ನೂತನ ವಿಶ್ವದಾಖಲೆ ಬರೆದರು.

400 ಮೀ. ಹರ್ಡಲ್ಸ್‌ನಲ್ಲಿ ವಿಶ್ವದಾಖಲೆ ಹೊಂದಿರುವ 26 ವರ್ಷ ವಯಸ್ಸಿನ ಮೆಕ್‌ಲಾಗ್ಲಿನ್ ಟೋಕಿಯೊದಲ್ಲಿ ಹರ್ಡಲ್ಸ್ ಬದಲು ಬರೇ 400 ಮೀ. ಓಟದಲ್ಲಿ ಭಾಗವಹಿಸಲು ನಿರ್ಧರಿಸಿದ್ದರು. ಅವರು 48.29 ಸೆ.ಗಳಲ್ಲಿ ಗುರಿತಲುಪಿದರು. ಇದರಿಂದಾಗಿ 2006ರಷ್ಟು ಹಿಂದೆ ಸಾನ್ಯಾ ರಿಚರ್ಡ್ಸ್–ರಾಸ್ ಹೆಸರಿನಲ್ಲಿದ್ದ ಹಳೆಯ ದಾಖಲೆ (48.70 ಸೆ.) ಭಗ್ನಗೊಂಡಿತು.

ಮೆಕ್‌ಲಾಗ್ಲಿನ್ ಅವರು ಗುರುವಾರ ನಡೆಯುವ ಫೈನಲ್‌ನಲ್ಲಿ ಚಿನ್ನ ಗೆಲ್ಲುವ ನೆಚ್ಚಿನ ಅಥ್ಲೀಟ್ ಆಗಿದ್ದಾರೆ. 2021ರ ಕೋವಿಡ್ ವೇಳೆ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು 400 ಮೀ. ಹರ್ಡಲ್ಸ್ ಓಟವನ್ನು 51.46 ಸೆ.ಗಳಲ್ಲಿ ಕ್ರಮಿಸಿ ವಿಶ್ವದಾಖಲೆ ಸ್ಥಾಪಿಸಿದ್ದರು.

ಕುಸ್ತಿ: ಭಾರತಕ್ಕೆ ನಿರಾಶೆ

ಝಾಗ್ರೆಬ್ (ಕ್ರೊವೇಷ್ಯಾ) (ಪಿಟಿಐ): ಭಾರತದ ಕುಸ್ತಿಪಟುಗಳು ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ದಿನವೂ ನಿರಾಶಾದಾಯಕ ಪ್ರದರ್ಶನ ಮುಂದುವರಿಸಿದರು.

ಯುವ ಕುಸ್ತಿಪಟು ಅಂಕುಶ್ ಅವರು ಮಹಿಳೆಯರ 50 ಕೆ.ಜಿ. ವಿಭಾಗದ ಕ್ವಾಲಿಫಿಕೇಶನ್ ಸುತ್ತಿನಲ್ಲಿ 5–6ರಿಂದ ಬೆಲರೂಸ್‌ನ ನಶಾಲಿಯಾ ವರಕಿನಾ ಎದುರು ವೀರೋಚಿತ ಸೋಲು ಕಂಡರು. ತಪಸ್ಯಾ 2–4ರಿಂದ ಮೆಕ್ಸಿಕೊದ ಬೆರ್ತಾ ರೋಜಸ್ ಚಾವೆಝ್ ಅವರಿಗೆ ಮಣಿದರು.

ಪುರುಷರ 65 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಕಣಕ್ಕಿಳಿದಿರುವ ಸುಜೀತ್ ಕಲ್ಕಲ್ ಅವರು 5–7ರಿಂದ ಅಮೆರಿಕದ ರಿಯಲ್ ಮಾರ್ಷಲ್ ರೇ ವುಡ್ಸ್ ಎದುರು ಸೋತು ಅಭಿಯಾನ ಮುಗಿಸಿದರು. 97 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ವಿಕ್ಕಿ ಅವರು ಬಲ್ಗೇರಿಯಾದ ಅಖ್ಮದ್ ಮಗಮೇವ್ ವಿರುದ್ಧ ಪರಾಭವಗೊಂಡರು.

ವೈಷ್ಣವಿ ಪಾಟೀಲ (65 ಕೆ.ಜಿ.) ಹಾಗೂ ಪ್ರಿಯಾ ಮಲಿಕ್ (76 ಕೆ.ಜಿ.) ಅವರು ಮಂಗಳವಾರ ತಡರಾತ್ರಿ ನಡೆಯಲಿರುವ ಪಂದ್ಯಗಳಲ್ಲಿ ಅದೃಷ್ಟ ಪರೀಕ್ಷೆಗೆ ಇಳಿಯಲಿದ್ದಾರೆ.

ವ್ಹೀಲ್‌ಚೇರ್ ಟೆನಿಸ್ ಟೂರ್ನಿ ಇಂದು

ಬೆಂಗಳೂರು: ರಾಜ್ಯ ವ್ಹೀಲ್‌ಚೇರ್ ಟೆನಿಸ್ ಅಸೋಸಿಯೇಷನ್ ಆಶ್ರಯದಲ್ಲಿ ಮೊದಲ ಬಾರಿಗೆ ರಾಷ್ಟ್ರ ಮಟ್ಟದ ವ್ಹೀಲ್‌ಚೇರ್ ಟೆನಿಸ್ ಟೂರ್ನಿ ಬುಧವಾರ ನಡೆಯಲಿವೆ.

ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಬೆಳಿಗ್ಗೆ 9 ಗಂಟೆಗೆ ಪಂದ್ಯಗಳು ಆರಂಭವಾಗಲಿವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಆಯುಕ್ತ ಮಹೇಶ್ವರ ರಾವ್ ಹಾಗೂ ಕ್ರೀಡಾ ಮತ್ತು ಯುವ ವ್ಯವಹಾರಗಳ ಆಯುಕ್ತ ಚೇತನ್ ಸ್ಪರ್ಧೆಗಳನ್ನು ಉದ್ಘಾಟಿಸಲಿದ್ದಾರೆ ಎಂದು ಕೆಎಸ್‌ಎಲ್‌ಟಿಎ ಅಧ್ಯಕ್ಷ ಬಿ.ಆರ್. ಚಂದ್ರಕಾಂತ್ ತಿಳಿಸಿದ್ದಾರೆ.

ಹರ್ಷಿಲ್-ಅನೀಶ್ವರ್ ಶತಕದ ಜತೆಯಾಟ

ಕ್ಯಾ. ತಿಮ್ಮಪ್ಪಯ್ಯ ಸ್ಮಾರಕ ಟೂರ್ನಿ: ಶಿಖರ್ ಶೆಟ್ಟಿಗೆ 7 ವಿಕೆಟ್

ಪ್ರಜಾವಾಣಿ ವಾರ್ತೆ

ಮೈಸೂರು: ವಿಕೆಟ್ ಕೀಪರ್ ಹರ್ಷಿಲ್ ಧರ್ಮಾನಿ (ಔಟಾಗದೇ 94) ಮತ್ತು ನಾಯಕ ಅನೀಶ್ವರ್ ಗೌತಮ್ (ಔಟಾಗದೇ 73) ಅಜೇಯ ಶತಕದ ಜೊತೆಯಾಟದ (131) ನೆರವಿನಿಂದ ಕೆಎಸ್‌ಸಿಎ ಕೋಲ್ಟ್ಸ್ ತಂಡವು ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬರೋಡ ಕ್ರಿಕೆಟ್ ಸಂಸ್ಥೆ ವಿರುದ್ಧದ ಪಂದ್ಯದಲ್ಲಿ ಸುಸ್ಥಿತಿಯಲ್ಲಿದೆ.

ಕ್ಯಾ. ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದ ಎರಡನೇ ದಿನವಾದ ಮಂಗಳವಾರ 25 ರನ್‌ಗಳ ಅಲ್ಪ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಕೋಲ್ಟ್ಸ್ ಪರ ಆರಂಭಿಕರಾದ ಪ್ರಖರ್ ಚತುರ್ವೇದಿ (76) ಹಾಗೂ ಎಸ್. ತೌಫಿಕ್ (50) ಮೊದಲ ವಿಕೆಟ್‌ಗೆ 103 ರನ್‌ಗಳ ಜೊತೆಯಾಟವಾಡಿ ಭದ್ರ ಬುನಾದಿ ಹಾಕಿದರು. ಮೂರನೇ ವಿಕೆಟ್‌ಗೆ ಜೊತೆಯಾದ ಹರ್ಷಿಲ್ ಹಾಗೂ ಅನೀಶ್ವರ್ ಗೌತಮ್ ಎದುರಾಳಿಗಳನ್ನು ಕಾಡಿದರು. ತಂಡವು ದಿನದಂತ್ಯಕ್ಕೆ 2 ವಿಕೆಟ್‌ಗೆ 298 ರನ್ ಕಲೆಹಾಕಿತು.

ಇದಕ್ಕೂ ಮುನ್ನ, ಬರೋಡ ತಂಡವನ್ನು ಕೋಲ್ಟ್ಸ್‌ನ ಬೌಲರ್ ಶಿಖರ್ ಶೆಟ್ಟಿ 86 ರನ್ನಿಗೆ ಏಳು ವಿಕೆಟ್ ಪಡೆದು ಮಿಂಚಿದರು. ಬರೋಡ 209 ರನ್‌ಗೆ ಆಲೌಟ್ ಆದರೂ ಅಲ್ಪ ಮುನ್ನಡೆ ಪಡೆಯುವಲ್ಲಿ ಯಶಸ್ವಿ ಆಯಿತು.

ಕೆಎಸ್‌ಸಿಎ ಕೋಲ್ಟ್ಸ್ ಪರ 7 ವಿಕೆಟ್ ಪಡೆದ ಶಿಖರ್ ಶೆಟ್ಟಿ ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸ್ಕೋರ್: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 47.3 ಓವರ್‌ಗಳಲ್ಲಿ 184; ಬರೋಡ ಕ್ರಿಕೆಟ್ ಸಂಸ್ಥೆ: 59 ಓವರ್‌ಗಳಲ್ಲಿ 209 (ಭಾರ್ಗವ್ ಭಟ್ 35. ಶಿಖರ್ ಶೆಟ್ಟಿ 86ಕ್ಕೆ7, ಮೊಹ್ಸಿನ್ ಖಾನ್ 60ಕ್ಕೆ2); ಎರಡನೇ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 69 ಓವರ್‌ಗಳಲ್ಲಿ 2 ವಿಕೆಟ್‌ಗೆ 298 (ಹರ್ಷಿಲ್ ಧರ್ಮಾನಿ ಔಟಾಗದೇ 94, ಅನೀಶ್ವರ್ ಗೌತಮ್ ಔಟಾಗದೇ 73, ಪ್ರಖರ್ ಚತುರ್ವೇದಿ 76, ಎಸ್.ತೌಫಿಕ್ 50).

ಎಸ್‌ಜೆಸಿಇ ಕ್ರೀಡಾಂಗಣ, ಮೈಸೂರು: ಮೊದಲ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 23.2 ಓವರ್‌ಗಳಲ್ಲಿ 87; ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 105.1 ಓವರ್‌ಗಳಲ್ಲಿ 455 (ಏಕಾಂತ್ ಸೇನ್ 178, ನವೀನ್ ಕನ್ವರ್ 45. ಎಂ. ಆಂಜನೇಯುಲು 143ಕ್ಕೆ7; ಎರಡನೇ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 43 ಓವರ್‌ಗಳಲ್ಲಿ 1 ವಿಕೆಟ್‌ಗೆ 198 (ಅಭಿಷೇಕ್ ರೆಡ್ಡಿ ಔಟಾಗದೇ 98, ಸಿ.ಆರ್. ಜ್ಞಾನೇಶ್ವರ್ 50, ಎಂ. ಹೇಮಂತ್ ರೆಡ್ಡಿ ಔಟಾಗದೇ 40).

ಬಜಾಜ್‌ಗೆ 5 ವಿಕೆಟ್: ಮಾಧವ್ ಬಜಾಜ್ ಅವರ ಐದು ವಿಕೆಟ್‌ಗಳ ನೆರವಿನಿಂದ ಕೆಎಸ್‌ಸಿಎ ಸೆಕ್ರೆಟರಿ ಇಲೆವನ್ ತಂಡ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಇನ್ನೊಂದು ಪಂದ್ಯದಲ್ಲಿ ಮುಂಬೈ ತಂಡದ ವಿರುದ್ಧ 98 ರನ್‌ಗಳ ಮುನ್ನಡೆ ಗಳಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಸೆಕ್ರೆಟರಿ ಇಲೆವನ್: 280; ಮುಂಬೈ ಕ್ರಿಕೆಟ್ ಸಂಸ್ಥೆ: 48.2 ಓವರುಗಳಲ್ಲಿ 182 (ಅಜಿಂಕ್ಯ ರಹಾನೆ 26, ಶಾರ್ದೂಲ್ ಠಾಕೂರ್ 77; ಮಾಧವ ಪಿ.ಬಜಾಜ್ 61ಕ್ಕೆ5); ಎರಡನೆ ಇನಿಂಗ್ಸ್: ಕೆಎಸ್‌ಸಿಎ ಸೆಕ್ರೆಟರಿ ಇಲೆವೆನ್: 30 ಓವರುಗಳಲ್ಲಿ 3ಕ್ಕೆ88 (ಲೋಚನ್ ಗೌಡ 25, ಫೈರೋಝ್ ಖಾನ್ ಔಟಾಗದೇ 42)

ಆಲೂರು 2: ಮೊದಲ ಇನಿಂಗ್ಸ್: ಕೆಎಸ್‌ಸಿಎ ಇಲೆವನ್: 80.5 ಓವರುಗಳಲ್ಲಿ 270; ತ್ರಿಪುರ ಕ್ರಿಕೆಟ್ ಸಂಸ್ಥೆ: 92 ಓವರುಗಳಲ್ಲಿ 6 ವಿಕೆಟ್‌ಗೆ 246 (ವಿಕ್ರಮ್ ಕುಮಾರ್ ದಾಸ್ 51, ಋತುರಾಜ್ ಘೋಷ್ 42, ಸೆಂತು ಸರ್ಕಾರ್ ಔಟಾಗದೇ 39; ವಿದ್ವತ್ ಕಾವೇರಪ್ಪ 18ಕ್ಕೆ2)

ಆಲೂರು 3: ಮೊದಲ ಇನಿಂಗ್ಸ್: ಗೋವಾ ಕ್ರಿಕೆಟ್ ಸಂಸ್ಥೆ: 165; ಕೆಎಸ್‌ಸಿಎ ಅಧ್ಯಕ್ಷರ ಇಲೆವನ್: 46.3 ಓವರುಗಳಲ್ಲಿ 97 (ದರ್ಶನ್ ಮಿಶಾಲ್ 29ಕ್ಕೆ4, ಮೋಹಿತ್ ರೆಡ್ಕರ್ 21ಕ್ಕೆ3); ಎರಡನೇ ಇನಿಂಗ್ಸ್: ಗೋವಾ: 68 ಓವರುಗಳಲ್ಲಿ 7ಕ್ಕೆ198 (ಮಂತನ್ ಕುತ್ಕರ್ 60, ಲಲಿತ್ ಯಾದವ್ ಔಟಾಗದೇ 42; ಶ್ರೀಶ ಆಚಾರ್ 58ಕ್ಕೆ4, ನಿಶ್ಚಿತ್ ರಾವ್ 26ಕ್ಕೆ2).

ಪರಿಕ್ರಮ ಎಫ್‌ಸಿ ತಂಡದ ಮಂಗೌಗಿನ್ ಸಮ್ಟೆ (ಎಡ) ಅವರು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸಿದರು ಚಿತ್ರ: ಬಿ.ಕೆ. ಜನಾರ್ದನ

ಫುಟ್‌ಬಾಲ್: ಕಿಕ್‌ಸ್ಟಾರ್ಟ್ ಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್. ರಾಕೇಶ್ ಸಿಂಗ್ (54ನೇ ನಿ., 56ನೇ ನಿ. ಹಾಗೂ 90 + 2ನೇ ನಿ.) ಅವರು ಗಳಿಸಿದ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–0 ಗೋಲುಗಳಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಉಭಯ ತಂಡಗಳಿಗೆ ಮೊದಲಾರ್ಧದಲ್ಲಿ ಗೋಲು ಗಳಿಸಲು ಸಾಧ್ಯವಾಗಿರಲಿಲ್ಲ. ದ್ವಿತೀಯಾರ್ಧದಲ್ಲಿ ಲಯ ಕಂಡುಕೊಂಡ ಕಿಕ್‌ಸ್ಟಾರ್ಟ್‌ನ ರಾಕೇಶ್ ಹ್ಯಾಟ್ರಿಕ್ ಗೋಲಿನೊಂದಿಗೆ ಪಾರಮ್ಯ ಮೆರೆದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ಹಾಗೂ ಪರಿಕ್ರಮ ಎಫ್‌ಸಿ ತಂಡಗಳು 1–1ರಿಂದ ಸಮಬಲ ಸಾಧಿಸಿದವು. ಅಗ್ನಿಪುತ್ರ ತಂಡದ ಶ್ಲೋಕ್ ತಿವಾರಿ (57ನೇ ನಿ.) ಮತ್ತು ಪರಿಕ್ರಮ ತಂಡದ ಮಂಗ್ಲೆನ್ ಥಾಂಗ್ ಸಿಂಗ್ (50ನೇ ನಿ.) ತಲಾ ಒಂದು ಗೋಲು ದಾಖಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಸಿಟಿ ಎಫ್‌ಸಿ ಹಾಗೂ ಬಿಎಫ್‌ಸಿ ತಂಡಗಳು ಗೋಲುರಹಿತ ಡ್ರಾ ಮಾಡಿಕೊಂಡವು.

ಪ್ರೊ ಕಬಡ್ಡಿ ಲೀಗ್: ತಮಿಳು ತಲೈವಾಸ್ ಗೆಲುವಿನಲ್ಲಿ ಮಿಂಚಿದ ಅರ್ಜುನ್

ಬೆಂಗಳೂರು ಬುಲ್ಸ್ ಯಶಸ್ಸಿನ ಓಟಕ್ಕೆ ತಡೆ

• ಪ್ರದೀಶ್ ಎಚ್.ಮರೋಡಿ

ಜೈಪುರ: ಬೆಂಗಳೂರು ಬುಲ್ಸ್ ತಂಡದ ಗೆಲುವಿನ ಓಟಕ್ಕೆ ತಮಿಳು ತಲೈವಾಸ್ ತಂಡವು ಮಂಗಳವಾರ ತಡೆಯೊಡ್ಡಿತು. ಬುಲ್ಸ್ ತಂಡವು 12ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನಲ್ಲಿ ಸತತ ನಾಲ್ಕನೇ ಗೆಲುವಿನ ನಂತರ ಆರು ಅಂಕಗಳಿಂದ ಸೋಲನುಭವಿಸಿತು.

ಸವಾಯಿ ಮಾನ್ ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರೈವಲ್ರಿ ವಾರದ ದಕ್ಷಿಣ ಡರ್ಬಿಯ ಮುಖಾಮುಖಿಯಲ್ಲಿ ತಲೈವಾಸ್ ತಂಡ 35–29ರಿಂದ ಬುಲ್ಸ್ ತಂಡವನ್ನು ಮಣಿಸಿ, ಈ ಆವೃತ್ತಿಯಲ್ಲಿ ಮೂರನೇ ಗೆಲುವು ದಾಖಲಿಸಿತು.

ಮೊದಲಾರ್ಧದಲ್ಲಿ ರೇಡಿಂಗ್ ಮತ್ತು ಟ್ಯಾಕಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಬುಲ್ಸ್ ತಂಡವು ಆರು ಅಂಕಗಳಿಂದ(20–14) ಮುನ್ನಡೆ ಸಾಧಿಸಿತ್ತು. ಆದರೆ, ಬುಲ್ಸ್ ರಕ್ಷಣಾ ಕೋಟೆಯನ್ನು ಭೇದಿಸಿದ ತಲೈವಾಸ್‌ನ ಅನುಭವಿ ರೇಡರ್ ಅರ್ಜುನ್ ದೇಶ್ವಾಲ್ (13 ಅಂಕ) ತಮ್ಮ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ತಮಿಳು ತಲೈವಾಸ್ ತಂಡದ ಅರ್ಜುನ್ ದೇಶ್ವಾಲ್ ರೇಡಿಂಗ್ ವೈಖರಿ

ಪಂದ್ಯದ ಬಹುತೇಕ ಅವಧಿಯಲ್ಲಿ ಹಿಡಿತ ಸಾಧಿಸಿದ್ದ ಬುಲ್ಸ್ ತಂಡವನ್ನು 30ನೇ ನಿಮಿಷದಲ್ಲಿ ಎದುರಾಳಿ ಆಟಗಾರರು ಆಲೌಟ್ ಬಲೆಗೆ ಕೆಡವಿ, ಮಹತ್ವದ ಮುನ್ನಡೆ (23–26) ಗಳಿಸಿದರು. ನಂತರದಲ್ಲೂ ಆಕ್ರಮಣಕಾರಿ ಆಟಕ್ಕೆ ಇಳಿದ ತಲೈವಾಸ್ ತಂಡವು ಅಂತರವನ್ನು ಹಿಗ್ಗಿಸುತ್ತಾ ಸಾಗಿತು. ಈ ಹಿಂದಿನ ಪಂದ್ಯಗಳಲ್ಲಿ ಗೆಲುವಿಗೆ ಉಪಯುಕ್ತ ಕೊಡುಗೆ ನೀಡಿದ್ದ ಬುಲ್ಸ್‌ನ ಡಿಫೆಂಡರ್‌ಗಳು ಪದೇ ಪದೇ ಎಡವಿದರು.

ಬುಲ್ಸ್ ಪರ ಅಲಿರೇಜಾ ಮಿರ್ಜೈಯನ್ (10) ಈ ಆವೃತ್ತಿಯಲ್ಲಿ ಐದನೇ ಬಾರಿ ಸೂಪರ್ ಟೆನ್ ಸಾಧನೆ ಮಾಡಿದರು. ಅವರಿಗೆ ಉಳಿದ ಆಟಗಾರರಿಂದ ನಿರೀಕ್ಷಿತ ಬೆಂಬಲ ಸಿಗಲಿಲ್ಲ. ಕನ್ನಡಿಗ ಗಣೇಶ ಹಣಮಂತಗೋಳ 4 ಅಂಕ ಗಳಿಸಲಷ್ಟೇ ಶಕ್ತವಾದರು. ಬುಲ್ಸ್ ತಂಡವು ಎಂಟು ಪಂದ್ಯಗಳಲ್ಲಿ ತಲಾ ನಾಲ್ಕು ಜಯ ಹಾಗೂ ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ದಿನದ ಮೊದಲ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡವು ನಾಯಕ ದೇವಾಂಕ್ ದಲಾಲ್ (17 ಅಂಕ) ಅವರ ಆಟದ ಬಲದಿಂದ 41–37 ಅಂಕಗಳಿಂದ ಯು.ಪಿ ಯೋಧಾಸ್ ವಿರುದ್ಧ ಗೆಲುವು ಸಾಧಿಸಿತು.

ಇಂದಿನ ಪಂದ್ಯಗಳು:

ತೆಲುಗು ಟೈಟನ್ಸ್- ದಬಾಂಗ್ ಡೆಲ್ಲಿ (ರಾತ್ರಿ 8)

ಹರಿಯಾಣ ಸ್ಟೀಲರ್ಸ್-ಪಟ್ನಾ ಪೈರೇಟ್ಸ್ (ರಾತ್ರಿ 9)

ಅಗ್ರಸ್ಥಾನಕ್ಕೆ ಮರಳಿದ ಮಂದಾನ

ದುಬೈ (ಪಿಟಿಐ): ಭಾರತದ ಅಗ್ರ ಕ್ರಮಾಂಕದ ಬ್ಯಾಟರ್ ಸ್ಮೃತಿ ಮಂದಾನ ಅವರು ಮಂಗಳವಾರ ಪ್ರಕಟವಾದ ಮಹಿಳಾ ಐಸಿಸಿ ಏಕದಿನ ರ್‍ಯಾಂಕಿಂಗ್‌ನ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಮರಳಿದ್ದಾರೆ.

ಮಂದಾನ ಅವರು ಭಾನುವಾರ ಆಸ್ಟ್ರೇಲಿಯಾ ವಿರುದ್ಧ ಅರ್ಧ ಶತಕ (58, 63ಎ) ಬಾರಿಸಿದ್ದರೂ, ಭಾರತ ತಂಡವು ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಪಂದ್ಯ ಸೋತಿತ್ತು.

ಸೆ. 30ರಂದು ಆರಂಭವಾಗುವ ಮಹಿಳಾ ಏಕದಿನ ವಿಶ್ವಕಪ್‌ಗೆ ಮೊದಲು ಅಗ್ರಸ್ಥಾನ ಪಡೆದಿರುವುದು ಮಂದಾನ ಅವರ ವಿಶ್ವಾಸ ಹೆಚ್ಚಿಸಲಿದೆ. 2019ರಲ್ಲಿ ಮೊದಲ ಬಾರಿ ಅಗ್ರಸ್ಥಾನಕ್ಕೇರಿದ್ದ ಅವರು, ಈ ವರ್ಷ ಎರಡು ಸಲ ಅಲ್ಪಾವಧಿಗೆ ಈ ಸ್ಥಾನ ಉಳಿಸಿಕೊಂಡಿದ್ದರು.

ಮಂದಾನ 735 ರೇಟಿಂಗ್ ಪಾಯಿಂಟ್ ಪಡೆದಿದ್ದರೆ, ಇಂಗ್ಲೆಂಡ್‌ನ ನಾಟ್ ಶಿವರ್–ಬ್ರಂಟ್ 731 ಪಾಯಿಂಟ್ಸ್ ಹೊಂದಿದ್ದಾರೆ.

ಭಾರತ ತಂಡದ ಆರಂಭ ಆಟಗಾರ್ತಿ ಪ್ರತಿಕಾ ರಾವಲ್ ನಾಲ್ಕು ಸ್ಥಾನ ಬಡ್ತಿ ಪಡೆದು 42ನೇ ಸ್ಥಾನದಲ್ಲಿದ್ದಾರೆ.

ಮುಲ್ಲನಪುರ ಪಂದ್ಯದಲ್ಲಿ ಅಜೇಯ 77 ರನ್ ಹೊಡೆದಿದ್ದ ಆಸ್ಟ್ರೇಲಿಯಾದ ಎಡಗೈ ಆಟಗಾರ್ತಿ ಬೆತ್ ಮೂನಿ ಮೂರು ಸ್ಥಾನ ಬಡ್ತಿ ಪಡೆದು ಐದನೇ ಸ್ಥಾನಕ್ಕೇರಿದ್ದಾರೆ.

ಭಾರತದ ಸ್ಪಿನ್ನರ್ ಸ್ನೇಹ ರಾಣಾ ಐದು ಸ್ಥಾನ ಬಡ್ತಿ ಪಡೆದು 13ನೇ ಸ್ಥಾನಕ್ಕೇರಿದ್ದಾರೆ. ಇಂಗ್ಲೆಂಡ್‌ನ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.

ಬಾಂಗ್ಲಾಗೆ ರೋಚಕ ಗೆಲುವು

ಏಷ್ಯಾ ಕಪ್ ಕ್ರಿಕೆಟ್: ಆಲ್‌ರೌಂಡ್ ಆಟ ಆಡಿದ ಲಿಟನ್ ದಾಸ್ ಪಡೆ

ಅಬುಧಾಬಿ (ಪಿಟಿಐ): ಅಂತಿಮ ಓವರ್‌ವರೆಗೂ ತೀವ್ರ ಪೈಪೋಟಿ ಕಂಡ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವು 8 ರನ್‌ಗಳಿಂದ ಅಫ್ಗಾನಿಸ್ತಾನ ವಿರುದ್ಧ ಮಂಗಳವಾರ ಗೆಲುವು ಸಾಧಿಸಿತು.

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶ ನೀಡಿದ್ದ 155 ರನ್‌ಗಳ ಸವಾಲಿನ ಗುರಿ ಬೆನ್ನಟ್ಟಿದ ಅಫ್ಗಾನಿಸ್ತಾನ, ಎಡಗೈ ವೇಗಿ ಮುಸ್ತಫಿಜುರ್ ರೆಹಮಾನ್ (28ಕ್ಕೆ3) ಹಾಗೂ ಎಡಗೈ ಸ್ಪಿನ್ನರ್ ನಸುಮ್ ಅಹಮದ್ (11ಕ್ಕೆ2) ಅವರ ಬೌಲಿಂಗ್ ಎದುರು 20 ಓವರ್‌ಗಳಲ್ಲಿ 146 ರನ್‌ಗಳಿಗೆ ಆಲೌಟ್ ಆಯಿತು.

77 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಅಫ್ಗನ್ ತಂಡಕ್ಕೆ ಅಜ್ಮತ್‌ವುಲ್ಲಾ ಒಮರ್‌ಝೈ (30; 16ಎ) ಗೆಲುವಿನ ಆಸೆ ಚಿಗುರಿಸಿದರಾದರೂ, ನಿಯಮಿತವಾಗಿ ವಿಕೆಟ್ ಕಳೆದುಕೊಂಡು ಸೋಲಿನ ಹಾದಿ ಹಿಡಿಯಿತು.

ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ಬಾಂಗ್ಲಾದ ಆರಂಭ ಆಟಗಾರರಾದ ತಂಜಿದ್ ಹಸನ್ (52, 31ಎಸೆತ) ಮತ್ತು ಸೈಫ್ ಹಸನ್ (30) ಅವರು 6.3 ಓವರುಗಳಲ್ಲೇ 63 ರನ್ ಸೇರಿಸಿ ಮಿಂಚಿನ ಆರಂಭ ಒದಗಿಸಿದ್ದರು. 10 ಓವರುಗಳ ನಂತರ 1 ವಿಕೆಟ್‌ಗೆ 87 ರನ್ ಸೇರಿಸಿ ಉತ್ತಮ ಸ್ಥಿತಿಯಲ್ಲಿತ್ತು.

ಈ ವೇಳೆ, ನಾಯಕ ರಶೀದ್ ಖಾನ್ (26ಕ್ಕೆ2) ಮತ್ತು ಸ್ಪಿನ್ ಜೊತೆಗಾರ ನೂರ್ ಅಹ್ಮದ್ (23ಕ್ಕೆ2) ಅವರು ನಿಖರ ಮತ್ತು ವೈವಿಧ್ಯಮಯ ದಾಳಿಯಿಂದ ಬಾಂಗ್ಲಾ ಬ್ಯಾಟರ್‌ಗಳ ಮೇಲೆ ಒತ್ತಡ ಹೇರಿದರು. ಕೊನೆಯ 10 ಓವರುಗಳಲ್ಲಿ 67 ರನ್‌ಗಳನ್ನಷ್ಟೇ ಕೊಟ್ಟರು.

ಏಷ್ಯಾ ಕಪ್ 2025

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರುಗಳಲ್ಲಿ 5ಕ್ಕೆ154 (ಸೈಫ್ ಹಸನ್ 30, ತಂಜಿದ್ ಹಸನ್ 52; ಅಜ್ಮತ್‌ವುಲ್ಲಾ ಒಮರ್‌ಝೈ 19ಕ್ಕೆ1, ರಶೀದ್ ಖಾನ್ 26ಕ್ಕೆ2, ನೂರ್ ಅಹ್ಮದ್ 23ಕ್ಕೆ2) **ಅಫ್ಗಾನಿಸ್ತಾನ:** 20 ಓವರ್‌ಗಳಲ್ಲಿ 146 (ರೆಹ್ಮನುಲ್ಲಾ ಗುರ್ಬಜ್ 35, ಅಜ್ಮತ್ ವುಲ್ಲಾ ಒಮರ್‌ಝೈ 30, ಮುಸ್ತಫಿಜುರ್ ರೆಹಮಾನ್ 28ಕ್ಕೆ3, ನಸುಮ್ ಅಹಮದ್ 11ಕ್ಕೆ2)
ಪಂದ್ಯದ ಆಟಗಾರ: ನಸುಮ್ ಅಹಮದ್

ಬಾಂಗ್ಲಾದೇಶದ ಆರಂಭಿಕ ಆಟಗಾರರಾದ ಸೈಫ್ ಹಸನ್ ಮತ್ತು ತಂಜಿದ್ ಹಸನ್ ಅವರು ರನ್‌ಗಾಗಿ ಓಡಿದರು ಎಎಫ್‌ಪಿ ಚಿತ್ರ

ಪೈಕ್ರಾಫ್ಟ್ ವಜಾ: ಪಿಸಿಬಿ ಮನವಿ ತಳ್ಳಿಹಾಕಿದ ಐಸಿಸಿ

ದುಬೈ (ಪಿಟಿಐ): ಹಾಲಿ ಏಷ್ಯಾ ಕಪ್‌ನ ಅಧಿಕಾರಿಗಳ ಪ್ಯಾನಲ್‌ನಿಂದ ಮ್ಯಾಚ್ ರೆಫ್ರಿ ಆ್ಯಂಡಿ ಪೈಕ್ರಾಫ್ಟ್ ಅವರನ್ನು ಕಿತ್ತುಹಾಕಬೇಕೆಂಬ ಪಾಕಿಸ್ತಾನದ ಬೇಡಿಕೆಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಮಂಗಳವಾರ ತಳ್ಳಿಹಾಕಿದೆ.

ಭಾನುವಾರ ನಡೆದ ಪಂದ್ಯದ ಟಾಸ್ ವೇಳೆ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಜೊತೆ ಹಸ್ತಲಾಘವ ಮಾಡದಂತೆ ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಅಲಿ ಆಘಾ ಅವರಿಗೆ ಮ್ಯಾಚ್ ರೆಫ್ರಿಯಾಗಿದ್ದ ಪೈಕ್ರಾಫ್ಟ್ ಅವರು ಸೂಚಿಸಿದ್ದರು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಐಸಿಸಿಗೆ ಸಲ್ಲಿಸಿದ್ದ ದೂರಿನಲ್ಲಿ ತಿಳಿಸಿತ್ತು.

ಟೂರ್ನಿ ಬಹಿಷ್ಕರಿಸುವುದಾಗಿ ಪಾಕ್ ಬೆದರಿಕೆಯೊಡ್ಡಿದೆ ಎನ್ನುವ ವರದಿಗಳ ನಡುವೆಯೇ ಐಸಿಸಿ ಈ ನಿಲುವು ತಳೆದಿದೆ.

'ಪೈಕ್ರಾಫ್ಟ್ ಅವರನ್ನು ತೆಗೆದುಹಾಕುವುದಿಲ್ಲ. ಮನವಿ ತಿರಸ್ಕರಿಸಲಾಗಿದೆ ಎಂದು ಐಸಿಸಿ ಪಾಕಿಸ್ತಾನಕ್ಕೆ ಸೋಮವಾರ ರಾತ್ರಿ ಉತ್ತರಿಸಿದೆ' ಎಂದು ಐಸಿಸಿ ಮೂಲ ಪಿಟಿಐಗೆ ತಿಳಿಸಿದೆ.

695 ಅಂತರರಾಷ್ಟ್ರೀಯ ಪಂದ್ಯಗಳನ್ನು ನಿರ್ವಹಿಸಿರುವ ಪೈಕ್ರಾಫ್ಟ್ ಐಸಿಸಿಯ ಅತಿ ಹಿರಿಯ ರೆಫ್ರಿಯಾಗಿದ್ದಾರೆ.

ಪೈಕ್ರಾಫ್ಟ್ ಸೂಚನೆಯಂತೆ ಉಭಯ ನಾಯಕರು ಸಾಂಪ್ರದಾಯಿಕ ಹಸ್ತಲಾಘವ ಮಾಡಿರಲಿಲ್ಲ ಎಂದು ಪಾಕ್ ತಂಡದ ಮ್ಯಾನೇಜರ್ ನವೆದ್ ಚೀಮಾ ಅವರು ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ಗೆ ದೂರು ನೀಡಿದ್ದರು. ಟೂರ್ನಿಯ ವೇಳೆ ಅನುಸರಿಸಬೇಕಾದ ನೀತಿ–ನಿಯಮಗಳ ಬಗ್ಗೆ ಸ್ವತಃ ತಮ್ಮ ತಂಡದ ನಾಯಕನಿಗೆ ಮಾಹಿತಿ ನೀಡದ ಪಿಸಿಬಿ ಕ್ರಿಕೆಟ್ ವ್ಯವಹಾರಗಳ ನಿರ್ದೇಶಕ ಉಸ್ಮಾನ್ ವಾಲ್ಹಾ ಅವರ ವಿರುದ್ಧ ಮಂಡಳಿ ಅಧ್ಯಕ್ಷ ಉಸ್ಮಾನ್ ನಕ್ವಿ ಸಿಡಿಮಿಡಿಗೊಂಡಿದ್ದಾರೆ. ಅವರನ್ನು ಕಿತ್ತುಹಾಕುವಂತೆ ಸೋಮವಾರ ಆದೇಶಿಸಿದ್ದಾರೆ ಎನ್ನಲಾಗಿದೆ.

ಒಮಾನ್ ಪಂದ್ಯಕ್ಕೆ ಬೂಮ್ರಾಗೆ ವಿಶ್ರಾಂತಿ?

ದುಬೈ (ಪಿಟಿಐ): ಭಾರತ ತಂಡಕ್ಕೆ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿ 'ಎ' ಗುಂಪಿನ ಕೊನೆಯ ಪಂದ್ಯ ಮಹತ್ವದ್ದೇನೂ ಅಲ್ಲ. ಆದರೆ ಶುಕ್ರವಾರ ನಡೆಯಲಿರುವ ಈ ಪಂದ್ಯಕ್ಕೆ ಭಾರತ ಒಂದು ಬದಲಾವಣೆ ಮಾಡುವ ಸಾಧ್ಯತೆಯಿದೆ. ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ವಿಶ್ರಾಂತಿ ನೀಡುವ ನಿರೀಕ್ಷೆಯಿದೆ.

ಸೂಪರ್ ಫೋರ್ ಹಂತದಲ್ಲಿ ಭಾರತ ಸೆ. 21, 24 ಮತ್ತು 26ರಂದು ಆಡಲಿದೆ. ಸೆ. 28ರಂದು ಫೈನಲ್ ತಲುಪುವ ಸಾಧ್ಯತೆಯೂ ನಿಚ್ಚಳವಾಗಿದೆ. ಏಳು ದಿನಗಳಲ್ಲಿ ನಾಲ್ಕು ಪಂದ್ಯಗಳನ್ನು ಆಡಬೇಕಿದೆ. ಹೀಗಾಗಿ ಚಿಂತಕರ ಚಾವಡಿಯು ಪ್ರಮುಖ ವೇಗದ ಬೌಲರ್ ಬೂಮ್ರಾ ಅವರಿಗೆ ವಿಶ್ರಾಂತಿ ನೀಡುವ ಸಾಧ್ಯತೆ ಹೆಚ್ಚಾಗಿದೆ. ಅವರಿಗೆ ವಿಶ್ರಾಂತಿ ನೀಡಿದರೆ, ಅರ್ಷದೀಪ್ ಸಿಂಗ್ ಅಥವಾ ಹರ್ಷಿತ್ ರಾಣಾ ಅವರಲ್ಲಿ ಒಬ್ಬರಿಗೆ ಅವಕಾಶವಾಗಬಹುದು.

ಸ್ಯಾಫ್ ಫುಟ್‌ಬಾಲ್: ಭಾರತದ ಶುಭಾರಂಭ

ಕೊಲಂಬೊ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ, 17 ವರ್ಷ-ದೊಳಗಿನವರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಿ ಗುಂಪಿನ ಪಂದ್ಯದಲ್ಲಿ ಮಾಲ್ಡೀವ್ಸ್ ತಂಡವನ್ನು ಮಂಗಳವಾರ 6–0 ಗೋಲುಗಳಿಂದ ಸೋಲಿಸಿ ಭರ್ಜರಿ ಆರಂಭ ಮಾಡಿತು.

ದಲ್ಲಾಲಮುವೊನ್ ಗಂಗ್ಟೆ (12, 68ನೇ ನಿ.), ಹೃಷಿಕೇಶ್ ಚರಣ್ (29ನೇ), ಕಮ್ಗುಹಾವೊ ಡಂಜೆಲ್ (49ನೇ), ವಾಂಗ್‌ಕಿರಾಕ್‌ಪಮ್ ಗನ್ಲಿಬಾ (58ನೇ) ಮತ್ತು ಆಝಿಮ್ ಪರ್ವೀಝ್ ನಜರ್ (86ನೇ ನಿ.) ಗೋಲುಗಳನ್ನು ಗಳಿಸಿದರು.



ನಮ್ಮ ಹೆಮ್ಮೆಯ ಪ್ರಧಾನಮಂತ್ರಿಗಳಿಗೆ 75 ನೇ ಜನ್ಮದಿನದ ಶುಭಾಶಯಗಳು!

ಭಾರತ ಕ್ರಿಕೆಟ್ ತಂಡಕ್ಕೆ ಅಪೊಲೊ ಟೈರ್ಸ್ ಪ್ರಾಯೋಜಕತ್ವ

ನವದೆಹಲಿ (ಪಿಟಿಐ): ಅಪೋಲೊ ಟೈರ್ಸ್ ಕಂಪನಿಯು ಮುಂದಿನ ಎರಡೂವರೆ ವರ್ಷಗಳ ಅವಧಿಗೆ ಭಾರತ ಕ್ರಿಕೆಟ್ ತಂಡದ ಪ್ರಧಾನ ಪ್ರಾಯೋಜಕತ್ವ ವಹಿಸಿಕೊಂಡಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಂಗಳವಾರ ಪ್ರಕಟಿಸಿದೆ.

ಈ ಹಿಂದೆ ಆನ್‌ಲೈನ್ ಗೇಮಿಂಗ್ ವೇದಿಕೆಯಾದ ಡ್ರೀಮ್ ಇಲೆವೆನ್ ಪ್ರಧಾನ ಪ್ರಾಯೋಜಕತ್ವ ವಹಿಸಿತ್ತು. ಕೇಂದ್ರ ಸರ್ಕಾರ ಹೊಸ ಕಾನೂನಿನಡಿ ಆನ್‌ಲೈನ್ ಗೇಮಿಂಗ್ (ಆನ್‌ಲೈನ್‌ನಲ್ಲಿ ಹಣಪಣಕ್ಕಿಟ್ಟು ಆಟದಲ್ಲಿ ತೊಡಗಿಸುವ ವೇದಿಕೆ) ಪ್ಲಾಟ್‌ಫಾರ್ಮ್‌ಗಳಿಗೆ ನಿಷೇಧ ಹೇರಿತ್ತು. ಹೀಗಾಗಿ ಬಿಸಿಸಿಐ ಹೊಸ ಪ್ರಾಯೋಜಕರ ಅನ್ವೇಷಣೆಯಲ್ಲಿತ್ತು.

ಭಾರತ ತಂಡ, ದುಬೈನಲ್ಲಿ ಹಾಲಿ ನಡೆಯುತ್ತಿರುವ ಏಷ್ಯಾ ಕಪ್‌ನಲ್ಲಿ ಪ್ರಧಾನ ಪ್ರಾಯೋಜಕರಿಲ್ಲದೇ ಆಟವಾಡುತ್ತಿದೆ.

ಜಾಗತಿಕ ಮಟ್ಟದ ಟೈರ್ ದಿಗ್ಗಜ ಕಂಪನಿಯಾದ ಅಪೋಲೊ ಇದೇ ಮೊದಲ ಬಾರಿ ಕ್ರಿಕೆಟ್ ಕ್ಷೇತ್ರಕ್ಕೆ ಕಾಲಿಟ್ಟಿದ್ದು, ₹579 ಕೋಟಿಗೆ ಒಪ್ಪಂದ ಮಾಡಿಕೊಂಡಿದೆ. 2028ರ ಮಾರ್ಚ್‌ವರೆಗೆ ಅಪೋಲೊ ಜೊತೆ ಒಪ್ಪಂದ ಇರಲಿದೆ. ಡ್ರೀಮ್ ಇಲೆವೆನ್ ₹358 ಕೋಟಿಗೆ ಒಪ್ಪಂದ ಮಾಡಿಕೊಂಡಿತ್ತು.

ಈ ಅವಧಿಯಲ್ಲಿ ಭಾರತ 121 ದ್ವಿಪಕ್ಷೀಯ ಸರಣಿಯ ಪಂದ್ಯಗಳನ್ನು ಆಡಲಿದೆ. ಐಸಿಸಿ ಟೂರ್ನಿಯ 21 ಪಂದ್ಯಗಳನ್ನೂ ಆಡಲಿದೆ.

ಭಾರತ ಪುರುಷರ ಮತ್ತು ಮಹಿಳಾ ತಂಡದ ಪೋಷಾಕಿನಲ್ಲಿ ಇನ್ನು ಮುಂದೆ ಅಪೊಲೊ ಟೈರ್ಸ್ ಲೋಗೊ ಕಾಣಿಸಿಕೊಳ್ಳಲಿದೆ.

ಬಹುರಾಷ್ಟ್ರೀಯ ಕಂಪನಿಯಾದ ಅಪೊಲೊ ಟೈರ್ಸ್ ಗುರುಗ್ರಾಮದಲ್ಲಿ ಕೇಂದ್ರ ಕಚೇರಿ ಹೊಂದಿದೆ. ಭಾರತ ಮತ್ತು ಯುರೋಪ್ ಸೇರಿದಂತೆ ಹೊರದೇಶಗಳಲ್ಲಿ ತನ್ನ ಉತ್ಪಾದನಾ ಘಟಕಗಳನ್ನು ಹೊಂದಿದೆ.

ಭಾರತ ವನಿತಾ ತಂಡಕ್ಕೆ ಸ್ಪಿನ್, ಫೀಲ್ಡಿಂಗ್ ಸುಧಾರಿಸುವ ಗುರಿ

ಮುಲ್ಲನಪುರ (ಪಂಜಾಬ್) (ಪಿಟಿಐ): ಮೊದಲ ಪಂದ್ಯ ಸೋತಿರುವ ಆತಿಥೇಯ ಭಾರತ ತಂಡ, ಮಹಿಳೆಯರ ಎರಡನೇ ಏಕದಿನ ಪಂದ್ಯದಲ್ಲಿ ಬುಧವಾರ ಅಲಿಸಾ ಹೀಲಿ ನೇತೃತ್ವದ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಬೌಲಿಂಗ್ ಮತ್ತು ಫೀಲ್ಡಿಂಗ್ ವಿಭಾಗದಲ್ಲಿ ಸುಧಾರಿತ ಪ್ರದರ್ಶನ ನೀಡುವ ಗುರಿಯಲ್ಲಿದೆ.

ಭಾನುವಾರ ನಡೆದ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಪಡೆ ಬ್ಯಾಟಿಂಗ್ ವಿಭಾಗದಲ್ಲಿ ಉತ್ತಮ ಆಟ ಪ್ರದರ್ಶಿಸಿತ್ತು. ಪ್ರತಿಕಾ ರಾವಲ್, ಸ್ಮೃತಿ ಮಂದಾನ, ಹರ್ಲೀನ್ ಡಿಯೊಲ್ ಅರ್ಧಶತಕಗಳನ್ನು ಬಾರಿಸಿದ್ದರು. ಆದರೆ ಕಳಪೆ ಫಿಲ್ಡಿಂಗ್ ದುಬಾರಿಯಾಯಿತು.

ಆತಿಥೇಯ ಫೀಲ್ಡರ್‌ಗಳು ನಾಲ್ಕು ಕ್ಯಾಚ್‌ಗಳನ್ನು ನೆಲಕ್ಕೆ ಹಾಕಿದ್ದ ಪರಿಣಾಮ ಆಸ್ಟ್ರೇಲಿಯಾ ಭಾರತದ ನಿಗದಿಪಡಿಸಿದ ದೊಡ್ಡ ಗುರಿಯನ್ನು ಸುಲಭವಾಗಿ ತಲುಪಿತು. ಭಾರತ ತಂಡದ ಸ್ಪಿನ್ ಬೌಲಿಂಗ್ ಕೂಡ ಸುಧಾರಿಸಬೇಕಾಗಿದೆ. ಕಣಕ್ಕಿಳಿದ ನಾಲ್ವರು ಸ್ಪಿನ್ನರ್‌ಗಳಲ್ಲಿ ಸ್ನೇಹ ರಾಣ ಮಾತ್ರ ವಿಕೆಟ್ ಪಡೆದಿದ್ದರು. ಈ ಸೋಲು ಭಾರತಕ್ಕೆ ಎಚ್ಚರಿಕೆಯ ಗಂಟೆಯಾಗಿದೆ.

ಇನ್ನೊಂದು ಕಡೆ ಆಸ್ಟ್ರೇಲಿಯಾ, ಭಾರತದಲ್ಲಿ ನಡೆಯುವ ವಿಶ್ವಕಪ್‌ಗೆ ಉತ್ತಮ ರೀತಿಯಲ್ಲಿ ಸಿದ್ಧತೆ ಆರಂಭಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ಆಸ್ಟ್ರೇಲಿಯಾ ಎ ನೆರವಿಗೆ ಕೊನ್ಸ್ಟಾಸ್

ಲಖನೌ (ಪಿಟಿಐ): ಸ್ಯಾಮ್ ಕೊನ್ಸ್ಟಾಸ್ ಬಿರುಸಿನ 109 ರನ್ ಬಾರಿಸಿ ಆಸ್ಟ್ರೇಲಿಯಾ ಎ ತಂಡ, ಮಂಗಳವಾರ ಆರಂಭವಾದ ಮೊದಲ 'ಟೆಸ್ಟ್' ಪಂದ್ಯದಲ್ಲಿ 5 ವಿಕೆಟ್‌ಗೆ 337 ರನ್‌ಗಳ ಉತ್ತಮ ಮೊತ್ತ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಒಂದು ಹಂತದಲ್ಲಿ ಭಾರಿ ಮೊತ್ತದತ್ತ ದಾಪುಗಾಲಿಟ್ಟಿದ್ದ ಪ್ರವಾಸಿ ತಂಡಕ್ಕೆ ಭಾರತ ಎ ತಂಡದ ಸ್ಪಿನ್ನರ್ ಹರ್ಷ ದುಬೆ ಮೂರು ವಿಕೆಟ್ ಪಡೆದು ಕಡಿವಾಣ ಹಾಕಿದರು.

ಕಳೆದ ವರ್ಷದ ಕೊನೆಯಲ್ಲಿ ಭಾರತ ವಿರುದ್ಧ ಸರಣಿಯ ವೇಳೆ ಪದಾರ್ಪಣೆ ಮಾಡಿದ್ದ, 19 ವರ್ಷ ವಯಸ್ಸಿನ ಯುವತಾರೆ ಕೊನ್ಸ್ಟಾಸ್ 144 ಎಸೆತಗಳ ಆಟದಲ್ಲಿ ಹತ್ತು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಸಿಡಿಸಿದರು. ಮೊದಲ ವಿಕೆಟ್‌ಗೆ ಅವರು ಕ್ಯಾಂಪ್‌ಬೆಲ್ ಕೆಲ್ಲವೆ (88, 97ಎ) ಜೊತೆ ಕೇವಲ 37.1 ಓವರುಗಳಲ್ಲಿ 198 ರನ್ ಸೇರಿಸಿದ್ದರು. ಆದರೆ ಆರಂಭ ಆಟಗಾರರು ಸೇರಿದಂತೆ ನಾಲ್ವರು ಮುಂದಿನ 26 ರನ್ ಅಂತರದಲ್ಲಿ ನಿರ್ಗಮಿಸಿದ್ದರಿಂದ ಭಾರತ ನಿಟ್ಟುಸಿರುಬಿಟ್ಟಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 73 ಓವರುಗಳಲ್ಲಿ 5ಕ್ಕೆ337 (ಸ್ಯಾಮ್ ಕೊನ್ಸ್ಟಾಸ್ 109, ಕ್ಯಾಂಪ್‌ಬೆಲ್ ಕೆಲ್ಲವೆ 88, ಕೂಪರ್ ಕಾನೊಲಿ 70, ಲಿಯಾಮ್ ಸ್ಕಾಟ್ ಔಟಾಗದೇ 47; ಹರ್ಷ ದುಬೆ 88ಕ್ಕೆ3, ಖಲೀಲ್ ಅಹ್ಮದ್ 46ಕ್ಕೆ1, ಗುರ್ನೂರ್ ಬ್ರಾರ್ 47ಕ್ಕೆ1) ವಿರುದ್ಧ ಭಾರತ ಎ

SIDDHANTH MOTORS: GARVEBHAVIPAYLA, ANEKAL, ATTIBELE, HOSKOTE, BANGARPET, YESHWANTHPUR, PEENYA, DABASPET - 8448481362, **ANANT CARS AUTO PVT LTD.**: MYSORE ROAD, K R PURAM, RAMNAGAR, MALUR, H CROSS, HUNASAMARANAHALLI - 9900077177, **PPS MOTORS**: BANASHANKARI, KOLAR, KANAKAPURA TOWN, DEVANAHALLI, CHINTAMANI, HBR LAYOUT, NELMANGALA, TAVAREKERE - 6309555517, **INDIA GARAGE BANGALORE**: LALBAGH ROAD, MAGADI ROAD, SAMETHANAHALLI, CHIKKABALLAPURA, PEENYA, NELAMANGALA - 9785513333, **HONNASIRI MOTORS**: TUMKUR - 9513353928, CHITRADURGA - 9513353928.



ಮಾಡೆಲ್‌ಗಳು	ಎಕ್ಸ್–ಶೋರೂಂ ಹಳೆಯ ಬೆಲೆ	GST ಕಡಿತ^	ಎಕ್ಸ್–ಶೋರೂಂ ಹೊಸ ಬೆಲೆ*
VENUE	₹7 94 100	₹67 719	₹7 26 381
EXTER	₹6 20 990	₹52 957	₹5 68 033
i20	₹7 50 900	₹64 035	₹6 86 865
AURA	₹6 54 100	₹55 780	₹5 98 320
Grand i10 NIOS	₹5 98 300	₹51 022	₹5 47 278
CRETA	₹11 10 900	₹38 311	₹10 72 589

+

ಹೆಚ್ಚುವರಿ ಕೊಡುಗೆಗಳು

VENUE	EXTER	i20	Grand i10 NIOS	AURA
₹70 000* ವರೆಗೆ ಲಾಭ	₹55 000* ವರೆಗೆ ಲಾಭ	₹55 000* ವರೆಗೆ ಲಾಭ	₹60 000* ವರೆಗೆ ಲಾಭ	₹40 000* ವರೆಗೆ ಲಾಭ

ಪ್ರತಿ ಲಕ್ಷಕ್ಕೆ ₹999 ಅತಿ ಕಡಿಮೆ ಮಾಸಿಕ ಕಂತಿನಿಂದ ಆರಂಭ#

HYUNDAI

CSD ಮತ್ತು KPKB ಗ್ರಾಹಕರಿಗೆ ಹೆಚ್ಚುವರಿ ಲಾಭಗಳು##. ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ನೀಡಿದರೆ ಹೆಚ್ಚುವರಿ ಸ್ಕ್ರ್ಯಾಪೇಜ್ ಬೋನಸ್ ಸಿಗಲಿದೆ~~.

For Information Contact: Toll Free: 1800114645 Bangalore: **Advaith Hyundai,** Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Koramangala, Ph: 9606076455 Avalahalli, Ph: 9606076456, Sarjapura Ph: 9606076458, Bilekahalli, Ph: 9606076457, **Lakshmi Hyundai,** Hebbal Ph: 9900037900, Kalyan Nagar, Ph: 8494913303, HBR Layout, Ph: 8884441111, Whitefield, Ph: 8884497700, Devanahalli, Ph: 8884499037, **Pavan Hyundai,** Kanakpura Road, Ph: 7337882522, Electronic City, Ph: 7337882522, **Dhruvdesh Hyundai,** Banashankari, Ph: 9205770577, **Blue Hyundai,** Mysore Road, Ph: 9591100001, Rajajinagar, Ph: 9591200001, Magadi Road, Ph: 9513200033, New Bel Road, Ph: 9513000800, Basavanagudi, Ph: 9591211118, Hesserghatta Main Road, Ph: 9916208888 **Trident Hyundai,** Sankey Road, Ph: 7353762526, K R Puram, Ph: 9844266873, Hosur Road, Ph: 9743786716, Indiranagar, Ph: 9743107927, Yelahanka, Ph: 7353750677, Yeshwanthpur, Ph: 9844701452, Mangalore: **Kanchana Hyundai,** Ph: 9900144113, **Advaith Hyundai,** Ph: 7760962815 Udupi: **Kanchana Hyundai,** Ph: 9972440758 Mysore: **Advaith Hyundai,** Belavadi, Ph: 9620257012 JLB Road, Ph: 9606938831, **KPR Hyundai,** Mysore Ph: 9606470291 Hassan: **Advaith Hyundai,** Ph: 9538971132 Shimoga: **Rahul Hyundai,** Ph: 6364465441, Hubli: **Bellad Hyundai,** Ph: 9900553490, **Raam Hyundai,** Ph: 7337785999, Kanakpura: **Pavan Hyundai,** Ph: 7892718572, Belgaum: **Nagshanti Hyundai,** Ph: 9844890456, 9844890459 Bijapur: **Narayan Hyundai,** Ph: 9742272157, 9742272153 Bagalkot: **Narayan Hyundai,** Ph: 9742253245 Jamkhandi: **Narayan Hyundai,** Ph: 9742272179, Davanagere: **K J Hyundai,** Ph: 7022001201, Chitradurga: **K J Hyundai,** Ph: 7022898488, Channagiri: **K J Hyundai,** Ph: 9945059764, Ranebennur: **K J Hyundai,** Ph: 7022992350, Gulbarga: **Shah Hyundai,** Ph: 9108049250 Tumkur: **Pavan Hyundai,** Ph: 7337882522 Bellari: **Anika Hyundai,** Ph: 8884484020, Ramanagara: **Advaith Hyundai,** Ph: 9620594433 Kolar: **Advaith Hyundai,** Ph: 9620229885, Chintamani: Ph: 8147994737, Mandya: **Advaith Hyundai,** Ph: 9740060075, Coorg: **Advaith Hyundai,** Madikeri, Ph: 9538971151 Gonikoppal, Ph: 9945774088 Kushalnagar, Ph: 9538971149 Tiptur: **Advaith Hyundai,** Ph: 7619577050 Chikodi: **Nagshanti Hyundai,** Ph: 8951947001 Gokak: **Nagshanti Hyundai,** Ph: 8147978240 Savadatti: **Nagshanti Hyundai,** Ph: 8007228679 Athani: **Nagshanti Hyundai,** Ph: 9620341451, Belthangady: **Advaith Hyundai,** Ph: 7760962819, Sullia: **Advaith Hyundai,** Ph: 7760962813 Dharwad: **Bellad Hyundai,** Ph: 6364333461, Hunsur: **KPR Hyundai,** Ph: 9538879235 Channarayapatna: **KPR Hyundai,** Ph: 9538879238 Kollegala: **KPR Hyundai,** Ph: 9606478215, Sakleshpura: **KPR Hyundai,** Ph: 9035708716 Raichur: **Shah Hyundai,** Ph: 9108049252 Bidar: **Shah Hyundai,** Ph: 7625093556 Yadgir: **Shah Hyundai,** Ph: 9108049262 Sindhanur: **Shah Hyundai,** Ph: 9071411136/9513897444 Basavakalyan: **Shah Hyundai,** Ph: 7353307776 Madikeri: **Advaith Hyundai,** Ph: 9538971151 Kushalnagar: **Advaith Hyundai,** Ph: 9538971149 Gonikoppa: **Advaith Hyundai,** Ph: 9945774088 Belthangady: **Advaith Hyundai,** Ph: 77609 62819 Sullia: **Advaith Hyundai,** Ph: 7760962813 Chikmagalur: **Rahul Hyundai,** Ph: 7795800038 Sagara: **Rahul Hyundai,** Ph: 7625080180 Thirthahalli: **Rahul Hyundai,** Ph: 7625080183 Shikaripura: **Rahul Hyundai,** Ph: 9108843230 Kadur: **Rahul Hyundai,** Ph: 9844261050 Puttur: **Kanchana Hyundai,** Ph: 9740873450 Surathkal: **Kanchana Hyundai,** Ph: 9482574530 Karkala: **Kanchana Hyundai,** Ph: 8762464853, Kundapura: **Kanchana Hyundai,** Ph: 9900145948 Kumta: **Kanchana Hyundai,** Ph: 9535855966 Sirsi: **Kanchana Hyundai,** Ph: 9731856300 Karwara: **Kanchana Hyundai,** Ph: 6364860518, Hospet: **Anika Hyundai,** Ph: 8884484018 Ballari: **Anika Hyundai,** Ph: 8884484020 Koppal: **Anika Hyundai,** Ph: 8884484031

Hyundai Click to Buy Scan here | my Hyundai app | Hyundai Promise Certified Pre-Owned Car

*Terms & conditions apply. ^Benefits of GST reduction to be effective from 22nd September 2025. Ex-Showroom price mentioned is for base variant. Delivery timeline may vary and is dependent upon various factors including model, variant, colour, stock availability, etc. *Offer valid till 30th September, 2025. HMIL reserves the right to alter or discontinue the deals, benefits or offers at its sole discretion at any time. For more details, visit your nearest Hyundai showroom. Offers mentioned include cash, corporate, either exchange or scrappage benefits as applicable. Offers may vary from variant to variant. Offers may vary from city to city. #EMI may differ basis the bank interest, tenure, customer profile, etc. Finance at the sole discretion of the financier. ~~Scrappage bonus will be applicable against a valid certificate of deposit (issued by government approved and operational scrappage center) and exchange of old car. In case the customer is giving certificate of deposit but not physically exchanging his old car and buying a new car – then only scrappage bonus of ₹5 000 will be paid. This advertisement and car shown here is for creative representation purposes only and the depictions are for illustrative purposes. Features and specifications shown may or may not be part of standard fitment and are subject to change without prior notice. Hyundai Motor India Limited reserves the right to change specifications, colour, equipment and schemes at any time without prior notice. The black shade on glass are due to lighting effect. Size and colour may appear to vary due to lighting and position effect. Shield of Trust & Super are on payable basis. For more details on warranty, please refer owner's manual. ##CSD: Canteen Stores Department, KPKB: Kendriya Police Kalyan Bhandar.

INNOCEAN–047/25 KAN